ತಿರುಚಿ ಸ್ವಾಮಿಗಳ ಬದುಕು - ಬೆಳಕು

ಪ್ರೊ॥ ಸಾ. ಕೃ. ರಾಮಚಂದ್ರರಾವ್

ಶ್ರೀ ಜ್ಞಾನಾಕ್ಷಿ ರಾಜರಾಜೇಶ್ವರಿ

ಶ್ರೀ ತಿರುಚೆ ಸ್ವಾಮಿಗಳ

ಬದುಕು ಬೆಳಕು

ಶ್ರೀ ತಿರುಚಿ ಸ್ವಾಮಿಗಳ

ಬದುಕು ಬೆಳಕು

ವಿದ್ಯಾಲಂಕಾರ ಶಾಸ್ತ್ರಚೂಡಾಮಣಿ ವೇದಾಂತನಿಧಿ ಸಂಗೀತಕಲಾರತ್ನ

ಪ್ರೊಫೆಸರ್ ಸಾ.ಕೃ. ರಾಮಚಂದ್ರರಾವ್

ಶ್ರೀ ಕೈಲಾಸ ಆಶ್ರಮ ಮಹಾಸಂಸ್ಥಾನ

ಶ್ರೀ ರಾಜೇಶ್ವರಿ ನಗರ, ಬೆಂಗಳೂರು - 560 039.

ಶ್ರೀ ತಿರುಚಿ ಸ್ವಾಮಿಗಳ ಬದುಕು ಬೆಳಕು

ಭಗವತಿಯ ವರಪುತ್ರ ಶ್ರೀ ತಿರುಚಿ ಸ್ವಾಮಿಗಳ
ಆಧ್ಯಾತ್ಮಿಕ ವಿಕಾಸ
ಬರೆದವರು ಪ್ರೊಫೆಸರ್ ಸಾ.ಕೃ. ರಾಮಚಂದ್ರರಾವ್

ಪ್ರಕಾಶಕರು :
ಶ್ರೀ ಕೈಲಾಸ ಆಶ್ರಮ ಮಹಾಸಂಸ್ಥಾನ,
ಶ್ರೀ ರಾಜೇಶ್ವರಿ ನಗರ
ಬೆಂಗಳೂರು - 560 039

© ಶ್ರೀ ಕೈಲಾಸ ಆಶ್ರಮ ಮಹಾಸಂಸ್ಥಾನ

ಮೊದಲ ಮುದ್ರಣ - 1994 (ವಿಜಯದಶಮಿ)

ಮುದ್ರಕರು :

ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
3/3, ಮೊದಲನೇ ಮುಖ್ಯ ರಸ್ತೆ,
ಹೊಸ ತರಗುಪೇಟೆ, ಬೆಂಗಳೂರು - 560 002.
ಫೋನ್ : 60 90 26, 60 81 86

ಶ್ರೀ ತಿರುಚಿಸ್ವಾಮಿಗಳ ಬಾಳು ಬದುಕು

ವಿಷಯಾನುಕ್ರಮ ಪುಟ

ಪ್ರಥಮ ಪುಷ್ಪ: ಶ್ರೀ ತಿರುಚಿಸ್ವಾಮಿಗಳ ಬದುಕು ಬೆಳಕು . . . 1

ದ್ವಿತೀಯ ಪುಷ್ಪ: ಅರುಣೋದಯದಲ್ಲಿ 7

ಅರುಣೋದಯದಲ್ಲಿ 9

ಮುಂಜಾನೆಯ ಮಬ್ಬಿನಲ್ಲಿ 14

ಪ್ರಾರಂಭದ ಪ್ರಭಾವಗಳು 18

ಮಣ್ಣಿನಿಂದ ಮೂರ್ತಿ 26

ಅಲೆದಾಟ ಆರಂಭ 32

ದೈವಾನುಗ್ರಹದ ಮುನ್ಸೂಚನೆ 46

ತೃತೀಯ ಪುಷ್ಪ: ತಿರುಚಿಸ್ವಾಮಿಯಾದದ್ದು 51

ಚೆಟ್ಟಿನಾಡಿನ ಕರೆ 53

ದೇಗುಲ ಸಂಸ್ಕೃತಿ 59

ದರ್ಶನ - ಮಾರ್ಗದರ್ಶನ 67

ಉತ್ತರಾಪಥಯಾತ್ರೆ 76

ಗುರುಯಾತ್ರೆ 85

ಶ್ರೀ ಶಿವರತ್ನಪುರಿಗಳಾದದ್ದು 92

ಚತುರ್ಥ ಪುಷ್ಪ: ಸ್ವಾಮಿ ಮತ್ತು ದೈವನಿಯಮಿತ ಕಾರ್ಯ . . 101
ಕೈಲಾಸಯಾತ್ರೆ 103
ಕೈಲಾಸಾಶ್ರಮ ಮಹಾಸಂಸ್ಥಾನ 111
ಶ್ರೀ ಜ್ಞಾನಾಕ್ಷೀ ರಾಜರಾಜೇಶ್ವರಿ ಆಲಯ 130
ಸಂಪ್ರದಾಯ ಪರಿರಕ್ಷಣೆ 145

ಪಂಚಮ ಪುಷ್ಪ: ಶ್ರೀ ತಿರುಚಿಸ್ವಾಮಿಗಳು 159
ಮತ್ತಿತರ ಸ್ವಾಮಿಗಳು ಮತ್ತು ಮಹಿಮಾನ್ವಿತರು

ಷಷ್ಠ ಪುಷ್ಪ: ಶ್ರೀ ತಿರುಚಿಸ್ವಾಮಿಗಳ ಶಾಂತಿಯ ಸಂದೇಶ . . . 175

ಸಪ್ತಮ ಪುಷ್ಪ: ಭಾರತದಲ್ಲಿ ಧರ್ಮಸಮನ್ವಯ 189

ನಮ್ಮ ಮಾತು

ಶ್ರೀ ತಿರುಚಿಸ್ವಾಮಿಗಳು
ಬ್ರಹ್ಮಜ್ಞಾನಿಗಳೆಂದು ಪೂಜಿತರು,
ವ್ಯಕ್ತಿಯಲ್ಲ ಶಕ್ತಿಯೆಂದು ಪರಿಗಣಿತರು,
ಉದ್ಧಾರಕರು ಎಂದು ನಮಸ್ಕೃತರು,
ಪ್ರಜ್ಞಾವಂತರು ಎಂದು ಸನ್ಮಾನಿತರು - ಗೌರವಾನ್ವಿತರು.

ಶ್ರೀ ತಿರುಚಿಸ್ವಾಮಿಗಳ ಜೀವನಯಾತ್ರೆಯಲ್ಲಿ—
ದೈವಿಕ ಸ್ವರೂಪದ ಕ್ರಮಿಕ ವಿಕಾಸವನ್ನು,
ಮಾನವ ಪ್ರಜ್ಞೆ ದೈವೀಪ್ರಜ್ಞೆಯಾಗುವುದನ್ನು,
ಪರಿಪೂರ್ಣವಿಕಾಸವನ್ನು, ಆನಂದಲಹರಿಯನ್ನು,
ಜೀವನದ ನಿಜವಾದ ಮೌಲ್ಯಗಳ ಸಮತೋಲನವನ್ನು,
ನಾವು ಕಾಣುತ್ತೇವೆ.

ಶ್ರೀ ತಿರುಚಿಸ್ವಾಮಿಗಳ ಬಾಳು ಬದುಕಿನಲ್ಲಿ —
ವ್ಯಷ್ಟಿಭಾವವು ಸಮಷ್ಟಿಭಾವವಾಗುವುದನ್ನು,
ಕರ್ಮವು ಸೇವಾಧರ್ಮವಾಗುವುದನ್ನು,
ದೈವಾರ್ಚನೆಯು ಪ್ರೇಮಸ್ವರೂಪವಾಗುವುದನ್ನು,
ಮಾನವತ್ವವು ದೇವತ್ವಕ್ಕೆ ಏರುವುದನ್ನು,
ಸಮರಸಭಾವನೆಯನ್ನು, ವಿಶ್ವಭ್ರಾತೃತ್ವವನ್ನು,
ಐಹಿಕಭೋಗ ಭಾವನೆಯ ಹಿನ್ನೆಲೆಯಲ್ಲಿ
ದೇವೀನಂಬಿಕೆಯ ಬಿಳಲು-ಬೇರು ಬಿಡುವುದನ್ನು,
— ನಾವು ಆರಾಧಿಸುತ್ತೇವೆ.

ಶ್ರೀ ತಿರುಚಿಸ್ವಾಮಿಗಳ ಬಾಳು-ಬದುಕಿನ
ಅಧಿಕೃತವಾದ ಒಂದು ನುಡಿ ಚಿತ್ರವು ಮೂಡಿಬರಬೇಕೆಂಬ
ಭಾರತ ಮತ್ತು ವಿದೇಶಗಳ ಅವರ ನೆಚ್ಚಿನ ಭಕ್ತರ
ಅನೇಕ ವರ್ಷಗಳ ಬಯಕೆಯು
ಇಂದು ಮೂರ್ತಸ್ವರೂಪವನ್ನು ಪಡೆದಿದೆ.

ಶ್ರೀ ಸಾ.ಕೃ. ರಾಮಚಂದ್ರರಾಯರು
ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ,
ಸಂಗೀತಕಲಾರತ್ನ, ವೇದಾಂತನಿಧಿ ಎಂದು ಪುರಸ್ಕೃತರು.
ಮಹಾವಿದ್ವಾಂಸರು. ಪ್ರಾಚಾರ್ಯರು.
ವಿಶ್ವಮಾನವತಾ ಭಾವನೆಯನ್ನು ಮೈಗೂಡಿಸಿ ಕೊಂಡಿರುವವರು.
ನಮ್ಮ ಸಂಸ್ಕೃತಿಯ ಭದ್ರಬುನಾದಿಯ ಮೇಲೆ
ನವೀನ ಹಾಗೂ ಆಧುನಿಕ ವಿಚಾರಗಳನ್ನು ಬೆಳೆಯಿಸಿಕೊಂಡವರು.
ಇವರು, ಜಗುದ್ಗುರು ಶ್ರೀ ಶ್ರೀ ಶ್ರೀ
ಶಿವರತ್ನಪುರಿ ಭಗವತ್ಪಾದಾಚಾರ್ಯ ತಿರುಚಿಸ್ವಾಮಿಗಳ
ಜೀವನ ಪ್ರಗಾಥೆಯನ್ನು ನುಡಿಗಟ್ಟಿನಲ್ಲಿ ಸೆರೆಹಿಡಿದಿರುವುದು
ನಮ್ಮ ಪುಣ್ಯ.
ನಮ್ಮ ಮಾರ್ಗದರ್ಶನಕ್ಕಾಗಿ, ಪೂಜ್ಯ ಸ್ವಾಮೀಜಿಯವರ
ಪವಿತ್ರ ಚರಿತ್ರೆಯ ಮುಖ್ಯ ಮೈಲಿಕಲ್ಲುಗಳನ್ನು
ಸೂಕ್ಷ್ಮವಾಗಿ ಹಂದರಹಂದರವಾಗಿ ಗುರುತಿಸಿರುವುದು
ನಮ್ಮ ಭಾಗ್ಯ.

ಶ್ರೀ ಜ್ಞಾನಾಕ್ಷಿ ರಾಜರಾಜೇಶ್ವರಿಯ ವರಪುತ್ರನು
ಶ್ರೀ ಜ್ಞಾನಾಕ್ಷಿ ರಾಜರಾಜೇಶ್ವರಿಯಲ್ಲಿ ಇಟ್ಟಿರುವ
ಅನನ್ಯಭಕ್ತಿಯನ್ನು ಹಾಗೂ ಆಧ್ಯಾತ್ಮಿಕ ನೈತಿಕ ನೆಲಗಟ್ಟನ್ನು
ಸರ್ವಾಂಗಸುಂದರವಾಗಿ ಮೂಡಿಸಿದ್ದಾರೆ
ಶ್ರೀ ಸಾ.ಕೃ. ರಾಮಚಂದ್ರರಾಯರು.

ಇದರಿಂದ, ಪ್ರತಿ ಅಧ್ಯಾತ್ಮಿಕ ಸಾಧಕನು
ತನ್ನ ಅಧ್ಯಾತ್ಮಿಕ ಸ್ತರಗಳಲ್ಲಿ ಮುಂದುವರೆಯುವಾಗ
ದೈವೀ ಭಕ್ತಿಯನ್ನು ಬೆಳೆಯಿಸಿಕೊಳ್ಳಲು ಸಾಧ್ಯ—
ಎಂದು ತೋರಿಸಿಕೊಟ್ಟಿದ್ದಾರೆ.
ಇಂತಹ ಧೀಮಂತರ ವೈದುಷ್ಯವು
ಮಾನವನನ್ನು ಉನ್ನತಭಾವನೆಗಳತ್ತ
ಮುಂದುವರೆಸಲು ಅನುಕೂಲವಾಗಲಿ ಎಂದು
ಭಗವತಿಯಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀ ತಿರುಚಿಸ್ವಾಮಿಗಳ ಕೃಪಾಶೀರ್ವಾದವು
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್‌ನ
ಶ್ರೀ ವೆಂಕಟೇಶ ಬಾಬು ಮತ್ತು ಶ್ರೀ ನಾಗೇಂದ್ರ,
ಸುಂದರವಿನ್ಯಾಸಕಾರ ಕಲಾವಿದ ಶ್ರೀ ಚಂದ್ರಶೇಖರ ಗುಬ್ಬಿ,
ರೇಖಾಚಿತ್ರಕಾರ ಶ್ರೀ ಏಳುಮಲೈ - ರವರ
ಮೇಲಿರಲೆಂದು ಹಾರೈಸುತ್ತೇವೆ.

ಈ ಕನ್ನಡದ ಅವತರಣಿಕೆಯನ್ನು
ಶ್ರೀ ಭಾವನಾಮ ಸಂವತ್ಸರದ ವಿಜಯದಶಮಿಯಂದು
ಶ್ರೀ ತಿರುಚಿಸ್ವಾಮಿಗಳ ಅಡಿದಾವರೆಗಳಲ್ಲಿ
ಸಮರ್ಪಿಸುತ್ತಿದ್ದೇವೆ.

ಶ್ರೀ ಕೈಲಾಸಾಶ್ರಮ ಮಹಾಸಂಸ್ಥಾನದ ಟ್ರಸ್ಟಿಗಳು

ಮೊದಲ ಮಾತು

ನನಗೆ ತೀರ ಪರಿಚಿತರೂ ಹಿರಿಯರೂ ಆಗಿದ್ದ ಶ್ರೀ ಎಸ್.ವೈ. ಕೃಷ್ಣಸ್ವಾಮಿ ಐ.ಸಿ.ಎಸ್. ಅವರು ತಮ್ಮ ಕಡೆಗಾಲವನ್ನು ಬೆಂಗಳೂರಿನ ಕೈಲಾಸಾಶ್ರಮದಲ್ಲಿ ಕಳೆಯುವ ಏರ್ಪಾಡು ಮಾಡಿಕೊಂಡರು. ಆಗ, ಎಂದರೆ 1984ರ ಸುಮಾರಿಗೆ, ಅವರನ್ನು ಕಾಣಲು ನಾನು ಕೈಲಾಸಾಶ್ರಮಕ್ಕೆ ಹೋಗಿಬರುತ್ತಿದ್ದೆ. ಅಲ್ಲಿಗೆ ಹೋದಾಗ ಕೆಲವೊಮ್ಮೆ ನನ್ನನ್ನು ಆಶ್ರಮದ ಅಧ್ಯಕ್ಷರಾದ ಶ್ರೀ ತಿರುಚಿಸ್ವಾಮಿಗಳನ್ನು ಕಾಣಲು ಕರೆದುಕೊಂಡು ಹೋಗುತ್ತಿದ್ದರು. ಮುಂದೆ ತಿರುಚಿಸ್ವಾಮಿಗಳನ್ನು ಕುರಿತು ಅವರೊಂದು ಪುಸ್ತಕವನ್ನು ಬರೆದು ನನ್ನ ಮುನ್ನುಡಿಯನ್ನು ಅಪೇಕ್ಷಿಸಿದರು. ಆಗ ಕೈಲಾಸಾಶ್ರಮದ ವಿವರಗಳನ್ನೂ ಶ್ರೀ ಸ್ವಾಮಿಗಳ ಜೀವಿತವನ್ನೂ ಅರಿತುಕೊಳ್ಳುವುದಾಯಿತು. ಹೀಗೆ ಮೊದಲಾಯಿತು ಕೈಲಾಸಾಶ್ರಮದೊಂದಿಗೆ ನನ್ನ ನಂಟು.

ನಾನು ಕೃಷ್ಣಸ್ವಾಮಿಯವರೊಂದಿಗೆ ಶ್ರೀ ತಿರುಚಿಸ್ವಾಮಿಗಳನ್ನು ಕಂಡಾಗಲೆಲ್ಲ ನನಗೆ ಅವರಲ್ಲಿ ಗೌರವಬುದ್ಧಿ ಬೆಳೆಯಿತು. ಅವರ ಮುಂದೆ ನಿಂತಾಗ, ಕೂತಾಗ ಮನಸ್ಸಿಗೆ ನೆಮ್ಮದಿ ಒದಗುತ್ತಿದ್ದಿತು; ಅವರ ನಡೆ-ನುಡಿ, ಮಾತುಕತೆ ನನಗೆ ತುಂಬಾ ಹಿಡಿಸಿತು. ಸರಳತೆಯೇ ಮೈವೆತ್ತುಬಂದಂತೆ ಇರುವರು; ಆಡಂಬರದ ಗಾಳಿಗಂಧವೂ ಇರದು. ಮಗುವಿನಂಥ ತಿಳಿಮನಸ್ಸು; ಅಮಾಯಕವಾದ, ಪ್ರಾಮಾಣಿಕವಾದ ಹೃದಯ. ಪ್ರಾಚೀನಕಾಲದ ಋಷಿಗಳ ಕಲ್ಪನೆ ನನಗಿದ್ದಿತು; ಆದರೆ ಅದಕ್ಕೆ ನಿದರ್ಶನವಾಗಿ ಬಹುಜನರನ್ನು ಕಂಡಿರಲಿಲ್ಲ. ಈಗ ತಿರುಚಿಸ್ವಾಮಿಗಳು ಈ ಗೋತ್ರಕ್ಕೇ

ಸೇರಿದವರೆಂಬುದು ಸ್ಪಷ್ಟವಾಯಿತು. ಅವರು ನಕ್ಕರೆಂದರೆ ಇಡೀ ಕೋಣೆಯಲ್ಲೇ ಬೆಳಕು ಮೂಡಿಕೊಳ್ಳುತ್ತಿದ್ದಿತು; ಮಾತು ಮೃದು, ಹಿತ, ಮಿತ. ನಡವಳಿಕೆಯಲ್ಲಿ ಆದರ, ಅಕ್ಕರೆ.

ಮತ್ತೆ ಕೃಷ್ಣಸ್ವಾಮಿಗಳ ಬದುಕಿನ ರೀತಿನೀತಿಗಳನ್ನು ಸುಮಾರಿಗೆ ಅರಿತಿದ್ದ ನನಗೆ ಈ ಪರಿವರ್ತನೆಯನ್ನು ಕಂಡು ಅಚ್ಚರಿಯಾಯಿತು. ಅಂಥವರು ಹೀಗೆ ವಿರಕ್ತರಾದುದು ಹೇಗೆಂದು ಕುತೂಹಲವೂ ಕಾಣಿಸಿಕೊಂಡಿತು. ತಮ್ಮ ಆಧ್ಯಾತ್ಮ ಪ್ರಸಕ್ತಿಗೆ ತಿರುಚಿಸ್ವಾಮಿಗಳೇ ಕಾರಣರಾದರೆಂದು ಕೃಷ್ಣಸ್ವಾಮಿಗಳೇ ಹೇಳಿದಾಗ ಸ್ವಾಮಿಗಳನ್ನು ಕುರಿತಾಗಿ ನನಗೆ ಆಸಕ್ತಿ ಒದಗಿಬಂದುದು ಸಹಜವೇ. ಕೃಷ್ಣಸ್ವಾಮಿಯವರು ತೀರಿಕೊಂಡಮೇಲೂ ಕೈಲಾಸಾಶ್ರಮದೊಂದಿಗೆ ನನ್ನ ನಂಟು ಹೇಗೋ ಮುಂದುವರೆಯಿತು. ಅದು ಹೇಗೆಂದು ನನಗೀಗ ನೆನಪಿಲ್ಲ.

ಆದರೆ ಮತ್ತೆ ಮತ್ತೆ ನಾನು ಆಶ್ರಮಕ್ಕೆ ಹೋಗಿಬರುತ್ತಿದ್ದೆ. ಸ್ವಾಮಿಗಳನ್ನು ಕಾಣುತ್ತ, ಕಾಣುತ್ತ ಅವರಮೇಲಿದ್ದ ಗೌರವಬುದ್ಧಿ ಹೆಚ್ಚಿತು. ಮೊದಲ ಅನಿಸಿಕೆಗಳೆಲ್ಲ ಊರ್ಜಿತವಾದುವು; ಭಕ್ತಿಭಾವವೂ ಬೆಳೆದುಬಂದಿತು. ನನ್ನ ವಿಚಾರವಾಗಿಯೂ ಅವರ ವಿಶ್ವಾಸ ಹೆಚ್ಚಿದಂತೆ ತೋರುತ್ತದೆ. ನಾನು ಹೋದಾಗ ತಮ್ಮ ಹಿಂದಿನ ಅನುಭವಗಳನ್ನೆಲ್ಲ ತಿಳಿಸುವರು; ತಮ್ಮ ಆಧ್ಯಾತ್ಮಿಕ ಬೆಳವಣಿಗೆಯ ಹಂತಗಳನ್ನು ವಿವರಿಸುವರು. ಅವರ ಸೌಜನ್ಯ, ವಾತ್ಸಲ್ಯ, ಪ್ರೀತಿಗಳಿಗೆ ನಾನು ಮಾರುಹೋದೆ. ಲೋಕ ವಾಡಿಕೆಯಲ್ಲಿ ನಾನೇನು ಅವರ ಶಿಷ್ಯನಲ್ಲದಿದ್ದರೂ ಯಾವ ರೀತಿಯಲ್ಲೂ ಕೈಲಾಸಾಶ್ರಮಕ್ಕೆ ಸೇರಿದವನಲ್ಲವಾದರೂ ಅವರು ಮಹಾಪುರುಷರು, ಮಹರ್ಷಿಗಳು ಎಂಬುದು ನನಗೆ ಸ್ಪಷ್ಟವಾಗಿದೆ.

ಈ ಸಂದರ್ಭದಲ್ಲಿ ಆಶ್ರಮಕ್ಕೆ ಸೇರಿದ ಮೂವರು ಮಹನೀಯರ ಪರಿಚಯವೂ ಆಯಿತು. (ತಮ್ಮ ಹೆಸರನ್ನು ಪ್ರಕಟಪಡಿಸಬಾರದೆಂದು ಆಗ್ರಹ). ಇವರಲ್ಲಿ ಒಬ್ಬರು ಗೌರವಭಾಜನರಾದ ಸಂನ್ಯಾಸಿಗಳು; ಸ್ವಾಮಿಗಳ ಶಿಷ್ಯರು. ಅವರ ಚೇತನ ಉದಾತ್ತವಾದುದು; ಕವಿಗಳು, ಭಾವುಕರು, ಸಾಧಕರು. ಆಶ್ರಮದ ಆಡಳಿತ ಬಹುಮಟ್ಟಿಗೆ ಅವರ ಹೆಗಲಮೇಲೇ ಇದ್ದರೂ, ಅದರ ಗೊಂದಲಕ್ಕೆ ಸಿಲುಕದೆ

ನಿರ್ಲಿಪ್ತರಾಗಿಯೇ ಉಳಿದಿರುವ ಸಮರ್ಥರು. ಇವರ ವಿಚಾರವಾಗಿಯೂ ನನಗೆ ತುಂಬ ಗೌರವಬುದ್ಧಿ ಬೆಳೆದುಬಂದಿತು; ಅವರ ಆದೇಶಕ್ಕೆ ಪ್ರತಿಹೇಳುವುದು ನನ್ನಿಂದಾಗದು.

ಇನ್ನಿಬ್ಬರು ಗೃಹಸ್ಥರು. ಆಶ್ರಮಕ್ಕೆ ಅನೇಕವಿಧಾವಾಗಿ ಸೇವೆ ಸಲ್ಲಿಸುತ್ತಿದ್ದರೂ ಆಶ್ರಮದಿಂದ ಹೊರಗೇ ಇರುವವರು. ಸ್ವಂತಪ್ರಯೋಜನದ ಬಯಕೆಯನ್ನು ಕನಸಿನಲ್ಲಿಯೂ ಕಾಣದವರು. ಒಬ್ಬರು ಭಾರತ ಸರ್ಕಾರದ ಉನ್ನತ ಅಧಿಕಾರಗಳನ್ನು ನಿರ್ವಹಿಸಿ ವಿಶ್ರಾಂತರಾಗಿ ಬೆಂಗಳೂರಲ್ಲಿ ವಾಸಮಾಡುತ್ತಿರುವವರು. ಅವರ ಆಧ್ಯಾತ್ಮಿಕ ಒಲವು ದೃಢವಾದುದು, ಲೌಕಿಕ ಅನುಭವವೂ ವ್ಯಾಪಕವಾದುದು. ಸ್ನೇಹಪರರು, ಔಚಿತ್ಯವನ್ನು ಬಲ್ಲವರು, ಹಿರಿಯ ಚೇತನ. ಇನ್ನೊಬ್ಬರು ವೃತ್ತಿಯಲ್ಲಿ ವಕೀಲರು, ಪ್ರವೃತ್ತಿಯಲ್ಲಿ ವೇದಾಂತಿಗಳು. ಅವರು ಹಲವು ಕ್ಷೇತ್ರಗಳಲ್ಲಿ ಪರಿಣತರು; ನಿಷ್ಠೆಯ ಸಾಧಕರು. ಅವರಿಗೂ ಆಧ್ಯಾತ್ಮ, ಲೋಕಾನುಭವ ಎರಡರಲ್ಲೂ ಸಮನಾದ ಸಾಮರ್ಥ್ಯವೇ. ಇಬ್ಬರಿಗೂ ನನ್ನನ್ನೂ ಕಂಡರೆ ಪ್ರೀತಿವಿಶ್ವಾಸಗಳು.

ಈ ಮೂವರು ಮಹನೀಯರ ಪ್ರೇರಣೆ. ಒತ್ತಾಸೆ, ನೆರವುಗಳಿಂದ ಈ ಪುಸ್ತಕ ಹೊರಬಂದಿದೆ. ನಿರ್ವ್ಯಾಜವಾಗಿ, ಸ್ವಾರ್ಥದ ತುಣುಕೂ ಇರದೆ, ನನ್ನಲ್ಲಿ ಪ್ರೀತಿವಿಶ್ವಾಸಗಳನ್ನು ತೋರಿಸಿ ಇವರು ನನ್ನಿಂದ ಈ ಕೆಲಸವನ್ನು ಮಾಡಿಸಿದ್ದಾರೆ. ಅದಕ್ಕೆ ಬೇಕಾದ ಸಾಮಗ್ರಿಯನ್ನೆಲ್ಲ ಒದಗಿಸಿದ್ದಾರೆ, ಸಹಾಯವನ್ನೆಲ್ಲ ಮಾಡಿದ್ದಾರೆ. ಅವರಿಗೆ ನಾನು ಋಣಿಯೆಂದು ಮತ್ತೆ ಹೇಳಬೇಕೆ? ಈ ಮೂರು ಮಂದಿಯ ಒಡನಾಟ ನನಗೆ ಲಭಿಸಿರುವುದೇ ದೊಡ್ಡಮಾತು.

ಇನ್ನು ಪುಸ್ತಕ ಸಿದ್ಧವಾಗುತ್ತಿದ್ದಾಗ ವಿವರಗಳನ್ನು ಪಡೆದುಕೊಳ್ಳಲು, ಸಂಶಯಗಳನ್ನು ಪರಿಹರಿಸಿಕೊಳ್ಳಲು ನಾನು ಶ್ರೀ ತಿರುಚಿಸ್ವಾಮಿಗಳನ್ನೇ ಹಲವಾರು ಬಾರಿ ಸಂಧಿಸಿದೆ. ಇದರಿಂದ ಪುಸ್ತಕದ ವಿಚಾರ ಹಾಗಿರಲಿ, ನನ್ನ ಅಂತರಂಗದ ಹರವು ಹೆಚ್ಚಿತು, ಆಧ್ಯಾತ್ಮದ ಹೊನಲು ಹಿಗ್ಗಿತು. ಇದಕ್ಕೆ ಕೃತಜ್ಞತೆಯನ್ನು ಸೂಚಿಸುವುದೊಂದನ್ನು ಬಿಟ್ಟು, ನಾನೇನು ಹೇಳಿಯೇನು? ಇಂಥ ಧೀರೋದಾತ್ತಚೇತನರಿಗೆ ನಾವು ಮಾಡಬಹುದಾದುದು ಪ್ರಣಾಮವಷ್ಟೇ. "ಅಂಜಲಿಃ ಪರಮಾ ಮುದ್ರಾ".

ಈ ಪುಸ್ತಕದ ಮುದ್ರಣಕಾಲದಲ್ಲಿ ನನಗೆ ಪ್ರೀತಿಯಿಂದ ನೆರವಾದವರು ಮೇಲೆ ಕಾಣಿಸಿದ ಇಬ್ಬರು ಸದ್ಗೃಹಸ್ಥರು; ಕರಡಚ್ಚುತಿದ್ದುವುದು, ಮುದ್ರಕರೊಂದಿಗೆ ವ್ಯವಹರಿಸುವುದು, ಚಿತ್ರಗಳನ್ನೊದಗಿಸುವುದು ಮುದ್ರಣದ ವಿನ್ಯಾಸವನ್ನು ನಿರ್ಧರಿಸುವುದು ಇವೆಲ್ಲವೂ ಇವರಿಂದಲೇ ನಡೆದದ್ದು. ನಾನೊಂದು ನಿಮಿತ್ತ ಅಷ್ಟೆ. ಅತ್ಯಲ್ಪ ಕಾಲದಲ್ಲಿ ಇಷ್ಟು ಅಚ್ಚುಕಟ್ಟಾಗಿ ಪುಸ್ತಕವನ್ನು ಮುದ್ರಿಸಿ ಹೊರತಂದು ಉಪಕರಿಸಿರುವ ಓಂಕಾರ್ ಆಫ್‌ಸೆಟ್ ಮುದ್ರಣಾಲಯದ ಒಡೆಯರು ಶ್ರೀ ವೆಂಕಟೇಶ ಬಾಬು ಅವರನ್ನು ಕುರಿತು ಮೆಚ್ಚುಗೆಯನ್ನು ಸೂಚಿಸದಿದ್ದರೆ ಲೋಪವಾದೀತು.

ಸಾ.ಕೃ. ರಾಮಚಂದ್ರರಾವ್

19, ಜುಲೈ 1994
ಪ್ರಥಮೇಕಾದಶಿ

ಪ್ರಥಮ ಪುಷ್ಪ

ಶ್ರೀ ತಿರುಚಿಸ್ವಾಮಿಗಳ ಬದುಕು-ಬೆಳಕು



ಶ್ರೀ ಜ್ಞಾನಾಕ್ಷಿ ರಾಜರಾಜೇಶ್ವರೀ
ದೇವಿಯ ವರ್ಣಚಿತ್ರ

ರಾಜರಾಜೇಶ್ವರೀ ದೇವಸ್ಥಾನದಲ್ಲಿ ಶ್ರೀ ಜ್ಞಾನಾಕ್ಷಿ
ರಾಜರಾಜೇಶ್ವರೀ ದೇವಿಯ ಮೂಲವಿಗ್ರಹ



ಶ್ರೀ ಶಿವ-ಪುರಿ ಬಾಬಾರವರು

ಶ್ರೀ ತಿರುಚಿ ಸ್ವಾಮಿ

ಶ್ರೀ ತಿರುಚಿ ಸ್ವಾಮಿಗಳ ಬದುಕು-ಬೆಳಕು

ಮಹಾಪುರುಷರು ಅವತಾರಮಾಡುವ ಎಡೆಗಳಿಗೂ ಒಂದು ವೈಶಿಷ್ಟ್ಯವಿರುತ್ತದೆ. ಅವತಾರಕ್ಕೆ ಒತ್ತಾಸೆಯಾಗಿ ಯುಗಧರ್ಮ ಮಾತ್ರವಲ್ಲದೆ ಕ್ಷೇತ್ರಮಾಹಾತ್ಮೆಯೂ ಒದಗಿಬರುತ್ತದೆ. ಸ್ವಾಮಿಗಳು ಹುಟ್ಟಿ ಬೆಳೆದದ್ದು ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯಲ್ಲಿ. ತಮಿಳುನಾಡು ಭಾರತೀಯ ಸಂಸ್ಕೃತಿಯಲ್ಲಿ ತುಂಬ ಪಳಮೆಯುಳ್ಳ ಪ್ರದೇಶವೆಂಬುದನ್ನು ಯಾರರಿಯರು? ಈ ಪ್ರದೇಶದ ಭೌತಿಕ ಚೌಕಟ್ಟೂ ವಿಲಕ್ಷಣವಾದುದು; ಪೂರ್ವಕ್ಕೆ ಸಮುದ್ರ, ಪಶ್ಚಿಮಕ್ಕೆ ಪರ್ವತ. ಒಂದು ಹರವಿಗೆ, ಇನ್ನೊಂದು ಎತ್ತರಕ್ಕೆ ಸಂಕೇತವಲ್ಲವೇ? ಆಧ್ಯಾತ್ಮಿಕತೆಯಲ್ಲಿ ಇವೆರಡೂ ಲಕ್ಷಣಗಳಿವೆ. ಮತ್ತೆ ಈ ಭೂಭಾಗದಲ್ಲಿ ತೋರಿಕೊಂಡು ಹರಿದಾಡುತ್ತ ಜನರಿಗೆ ನೆರವಾಗುವ ತೊರೆಗಳೂ, ನದಿಗಳೂ ಬಹು ಸಂಖ್ಯೆಯಲ್ಲೇ ಇವೆ. ಇವುಗಳಲ್ಲಿ ಮುಖ್ಯವಾದುದು ಪ್ರಸಿದ್ಧವಾದ ತಾಮ್ರಪರ್ಣಿ. ಈ ನದಿಯ ದಡದಲ್ಲಿ ಧರ್ಮ ಬೇರೂರಿಕೊಂಡು ಬೆಳೆದುದು ಆಶ್ಚರ್ಯವೇನಲ್ಲ. ನದಿಗೆ ಪುರಾಣ ಪ್ರಸಿದ್ಧಿಯಿದೆ; ಇತಿಹಾಸ ಶುದ್ಧಿಯೂ ಇದೆ.

ಇಲ್ಲಿ ಶೈವ-ವೈಷ್ಣವ ಎರಡೂ ಸಂಪ್ರದಾಯಗಳು ಬೆಳೆದು ಬಂದುದಕ್ಕೆ ಕುರುಹಾಗಿ ಹಲವಾರು ಸೊಗಸಾದ ಗುಡಿಗಳಿವೆ. ತಿರುನೆಲ್ವೇಲಿ, ಪಾಪನಾಶಂ, ತೆಂಕಾಸಿ, ತಿರುಕ್ಕುಟ್ರಾಲಂ ಮೊದಲಾದ ಊರುಗಳಲ್ಲಿರುವ ಶಿವಾಲಯಗಳು; ವೈಗುಂಡಂ, ಆಳ್ವಾರ್ ತಿರುನಗರಿ, ನಾಂಗುನೇರಿ ಮೊದಲಾದ ಊರುಗಳಲ್ಲಿರುವ ವಿಷ್ಣು ಮಂದಿರಗಳು ಭವ್ಯವಾಗಿವೆ. ಆರು ಸುಬ್ರಹ್ಮಣ್ಯ ಕ್ಷೇತ್ರಗಳಲ್ಲಿ ಒಂದಾದ

ತಿರುಚ್ಚೆಂದೂರು ಈ ಜಿಲ್ಲೆಗೇ ಸೇರಿದ್ದು. ಹೀಗಿರುವಾಗ ಜನರಲ್ಲಿ ಧರ್ಮ ಪ್ರವೃತ್ತಿ, ಆಧ್ಯಾತ್ಮಿಕತೆಯಲ್ಲಿ ಆದರ, ಸದಾಚಾರ, ಶ್ರದ್ಧೆ ಇವು ಇರದೇ ಹೋಗುವುವೆ?

ನಮ್ಮ ಧರ್ಮವಿರಲಿ, ಹೊರಗಿನಿಂದ ಇಲ್ಲಿಗೆ ವಲಸೆ ಬಂದ ಕ್ರೈಸ್ತ ಮತ್ತು ಮುಸಲ್ಮಾನ ಧರ್ಮಗಳಿಗೂ ಇಲ್ಲಿನವರು ಆಸರೆಯನ್ನೊದಗಿಸಿದರು. ಈ ಕಡೆ 1532ರಷ್ಟು ಹಿಂದೆಯೇ ಕ್ರೈಸ್ತ ಮತ ಪ್ರಚಾರಕರು ಪ್ರಬಲರಾಗಿದ್ದ ದಾಖಲೆಯಿದೆ. ಇಲ್ಲಿನ ಎಷ್ಟೋ ಊರುಗಳಲ್ಲಿ ಚರ್ಚುಗಳನ್ನು ಕಾಣಬಹುದು. ಹಾಗೆಯೇ ಮುಸಲ್ಮಾನ ಮತೀಯರೂ ಇನ್ನೂ ಹಿಂದೆ ಇಲ್ಲಿ ನೆಲೆಸಿದ್ದುದು ತಿಳಿದುಬರುತ್ತದೆ. ಅವರ ಹಲವಾರು ಮಸೀದಿಗಳು ಇಂದಿಗೂ ಉಳಿದಿವೆ; ಉಪಯೋಗದಲ್ಲೂ ಇವೆ. 1634ರ ಸುಮಾರಿಗೆ ಪೊಟ್ಟಲ್‌ಪುದೂರು ಎಂಬೂರಿನಲ್ಲಿ ಕಟ್ಟಿದ ಮಸೀದಿಯೊಂದು ಸ್ವಾರಸ್ಯವಾಗಿದೆ. ಹಿಂದೂಗುಡಿಗಳ ವಾಸ್ತುಶಿಲ್ಪದ ವಿವರಗಳನ್ನು ಧಾರಾಳವಾಗಿ ಬಳಸಿಕೊಂಡಿರುವ ಕಟ್ಟಡ ಇದು.

ಜಿಲ್ಲೆಯ ಪ್ರಮುಖ ಊರು ತಿರುನೆಲ್ವೇಲಿ; ತಾಮ್ರಪರ್ಣಿ ನದಿಯ ಪಶ್ಚಿಮ ದಂಡೆಯ ಮೇಲಿರುವ ಈ ಊರಿನಲ್ಲೇ ನಮ್ಮ ತಿರುಚ್ಚಿಸ್ವಾಮಿಗಳ ಪೂರ್ವಿಕರು ನೆಲೆಸಿದ್ದುದು. ಈ ಊರಿನಲ್ಲೊಂದು ಶಿವಾಲಯವಿದೆ; ನೆಲ್ಲೈಯಪ್ಪರ್ ಎಂಬ ಹೆಸರಿನದು. ಅದು ಭವ್ಯವಾದ, ಕಲಾತ್ಮಕವಾದ, ಸಂಪ್ರದಾಯ ಶುದ್ಧವಾದ ಆಲಯ. ತುಂಬ ಹಳೆಯದು; ಪಾಂಡ್ಯ ಅರಸರ, ಮಧುರೆನಾಯಕರ ಕಾಲದಲ್ಲಿ ಇದರ ಗೋಪುರ ಮತ್ತು ಮಂಟಪಗಳು ಸಿದ್ಧವಾದುವು. ಈ ಊರಿನ ಗುಡಿಗೆ ಊರ ಹಿರಿಯರಲ್ಲಿ ಕೆಲವರು ಧರ್ಮದರ್ಶಿಗಳಾಗಿದ್ದುಕೊಂಡು ಗುಡಿಯ ಸ್ಥಿತಿ-ಗತಿಗಳನ್ನು ನೋಡಿಕೊಳ್ಳುವುದು ವಾಡಿಕೆಯಾಗಿದ್ದಿತು. ನಮ್ಮ ಸ್ವಾಮಿಗಳ ಅಜ್ಜ (ತಾಯಿಯ ತಂದೆ) ಕೃಷ್ಣಸ್ವಾಮಿ ನಾಯಕರೆಂಬುವರು ಈ ನೆಲ್ಲೈಯಪ್ಪರ್ ಆಲಯಕ್ಕೆ ಧರ್ಮದರ್ಶಿಯಾಗಿದ್ದರು. ಗುಡಿಗೆ ಸೇರಿದಂತೆ ಕೊಳವೊಂದನ್ನು ಇವರೇ ಏರ್ಪಡಿಸಿದರು; ನಾಯನಕೊಳವೆಂಬ ಇದು ಸುಮಾರು ಒಂದುಸಾವಿರ ಎಕರೆ ವಿಸ್ತಾರದ ಭೂಮಿಯಲ್ಲಿ ಬೇಸಾಯಕ್ಕೆ ನೆರವಾಗುತ್ತಿದ್ದಿತಂತೆ. ಗುಡಿಯಲ್ಲಿ ಉತ್ಸವಕ್ಕೊಂದು ಬೆಳ್ಳಿಯ ತೇರೊಂದನ್ನೂ ಇವರೇ ಮಾಡಿಸಿಕೊಟ್ಟಿದ್ದರು.

ಕೃಷ್ಣಸ್ವಾಮಿ ನಾಯಕರು ತಮ್ಮ ಕುಲಾಚಾರದಲ್ಲಿ ವೈಷ್ಣವರು. ಆದರೆ ಅವರ ಸೇವ ಸಂದುದು ಈ ಶಿವಾಲಯಕ್ಕೆ. ಮತಧರ್ಮಗಳಲ್ಲಿ ಸೌಹಾರ್ದ ಬರಿಯ ಬಾಯಿಮಾತಿನದಾಗಿರಲಿಲ್ಲ. ದಿನನಿತ್ಯದ ಬದುಕಿನಲ್ಲಿ ಊರವರೆಲ್ಲರ ಉಸಿರಾಗಿದ್ದುದು ಕಾಣುತ್ತಿದ್ದಿತು. ಕೃಷ್ಣಸ್ವಾಮಿ ನಾಯಕರು ಮೂಲತಃ ಆ ಊರಿನವರಲ್ಲ. ವಿಜಯನಗರದ ಅರಸರ ಬಳಿ ಉದ್ಯೋಗದಲ್ಲಿದ್ದವರು. ಜಾತಿಯಲ್ಲಿ ಕ್ಷತ್ರಿಯರು, ವೃತ್ತಿಯಲ್ಲಿ ಸೇನೆಗೆ ಸೇರಿದ್ದವರು. ಅವರ ಹೆಸರಿನೊಂದಿಗೆ 'ನಾಯಕ'ರೆಂಬ ಉಪಾಧಿ ಸೇರಿಕೊಂಡುದು ಈ ಕಾರಣದಿಂದಲೇ. ಅವರಲ್ಲಿ ಕೆಲವರು ರಾಜಾಸ್ಥಾನದಲ್ಲಿಯೂ ಇದ್ದವರು. ಅರಸರ ಆದರವನ್ನು ಪಡೆದುಕೊಂಡಿದ್ದವರು.

ಆದರೆ 1565ರಲ್ಲಿ ತಾಳಿಕೋಟೆ ಕದನದಲ್ಲಿ ವಿಜಯನಗರ ಸಾಮ್ರಾಜ್ಯ ಕೊನೆಗಂಡಂದು ಈ ನಾಯಕ ಮನೆತನದವರು ಉದ್ಯೋಗವನ್ನು, ಆಶ್ರಯವನ್ನು ಅರಸುತ್ತಾ ನೆರೆನಾಡುಗಳಲ್ಲಿ ಹರಡಿಕೊಂಡರು. ದಕ್ಷಿಣ ದೇಶದಲ್ಲಿ ಆಂಧ್ರ ಪ್ರದೇಶ, ತಮಿಳು ನಾಡು, ಕರ್ನಾಟಕಗಳಲ್ಲಿ ನೆಲೆಸಿದರು. ನಮ್ಮ ಸ್ವಾಮಿಗಳ ಹಿರಿಯರು ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯಲ್ಲಿ ಸಾತ್ತಾನ್‌ಕುಳಂ ಎಂಬ ಹಳ್ಳಿಗೆ ಬಂದು ಅಲ್ಲೇ ನೆಲೆಸಿದರು. ತಮ್ಮ ಶ್ರಮದಿಂದಲೂ, ಪ್ರತಿಭೆಯಿಂದಲೂ ಊರ ಹಿರಿಯರಾದರು.

ಅವರಲ್ಲಿ ಒಬ್ಬರು ಪ್ರಸನ್ನ ಲಕ್ಷ್ಮಣಸ್ವಾಮಿ ನಾಯಕರೆಂಬುವರು ಸುಸ್ಥಿತಿಯಲ್ಲಿರುತ್ತ, ಮಿರಾಸಿದಾರರೆಂದು ಹೆಸರಾದರು. ಆ ಊರಿನಲ್ಲೂ ನೆರೆಯೂರುಗಳಲ್ಲೂ ಇವರ ಔದಾರ್ಯ, ಧರ್ಮಶ್ರದ್ಧೆ, ವ್ಯವಹಾರ ಕೌಶಲ ಇವನ್ನು ಜನರು ಬಹುಕಾಲ ನೆನೆಸಿಕೊಳ್ಳುತ್ತಿದ್ದರು. ಮೇಲೆ ಹೇಳಿದಂತೆ ಈ ನಾಯಕ ಮನೆತನದವರು ವೈಷ್ಣವ ಸಂಪ್ರದಾಯದವರು. ಶ್ರೀವೈಷ್ಣವ ಗುರುಗಳಿಗೆ ನಡೆದುಕೊಳ್ಳುತ್ತಿದ್ದವರು. ಮನೆಮಾತು ತೆಲುಗು; ಆದರೂ ತಮಿಳು ಪಾಶುರಗಳನ್ನು ಆಸ್ಥೆಯಿಂದ ಅನುಸಂಧಾನ ಮಾಡುತ್ತಿದ್ದವರು. ಪ್ರಸನ್ನ ಲಕ್ಷ್ಮಣಸ್ವಾಮಿ ನಾಯಕರು ನೆರೆಯ ಗ್ರಾಮವೊಂದರ ಮಿರಾಸಿದಾರರಾಗಿದ್ದವರ ಮಗಳನ್ನು ಮದುವೆಯಾಗಿದ್ದರು. ಆಕೆಯ ಹೆಸರು ಕೋದೈವಲ್ಲಿ- ತಾಯಾರು. ಆಕೆಯ ಮನೆಯವರೂ ನಾಯಕರೇ, ವೈಷ್ಣವ ಸಂಪ್ರದಾಯದವರೇ. ಆಕೆಯ ಊರು ರವಣಸಮುದ್ರವೆಂಬುದು. ಈ

ದಂಪತಿಗಳಿಗೆ ಆದಿನಾರಾಯಣ ಸ್ವಾಮಿಯೆಂಬ ಮಗ ಹುಟ್ಟಿ, ಮನೆಗೆ ದೀಪವಾದನು. ಈ ಆದಿನಾರಾಯಣ ಸ್ವಾಮಿಯ ಮಗನೇ ನಮ್ಮ ಸ್ವಾಮಿಗಳು.

ತಿರುನೆಲ್ವೇಲಿ ಜಿಲ್ಲೆ ವೈಷ್ಣವ ಧರ್ಮದ ನೆಲೆವೀಡಾಗಿದ್ದ ಕಾಲ ಅದು. ವಿಜಯನಗರ ಸಾಮ್ರಾಜ್ಯದಲ್ಲಿ ಶ್ರೀವೈಷ್ಣವ ದೀಕ್ಷೆಯನ್ನು ಪಡೆದುಕೊಂಡಿದ್ದರು. ರಾಮಾನುಜಾಚಾರ್ಯರಿಗೆ ಪೂರ್ವಸೂರಿಗಳೆನಿಸಿದ್ದ ಆಳ್ವಾರರೆಂಬ ಸಂತರಲ್ಲಿ ಮುಖ್ಯರಾದವರು ನಮ್ಮಾಳ್ವಾರರು. ಶ್ರೀವೈಷ್ಣವ ಸಮುದಾಯದಲ್ಲಿ ತುಂಬ ಪೂಜ್ಯರೆನಿಸಿದವರು, ಶ್ರೀವೈಷ್ಣವ ಸಂಪ್ರದಾಯದವರು ಅವರನ್ನು 'ಪ್ರಸನ್ನ ಜನ ಕೂಟಸ್ಥ'ರೆಂದು, 'ವೇದಂ ತಮಿಳ್‌ಶೆಯ್ದ ಮಾರನ್' ಎಂದು ಕರೆಯುತ್ತಾರೆ. ಅವರ ರಚನೆಯಾದ'ತಿರುವಾಯ್ಮೊಳಿ'ಯನ್ನು ಶ್ರದ್ಧೆಯಿಂದ ಅನುಸಂಧಾನ ಮಾಡುತ್ತಾರೆ. ತಿರುಕ್ಕುರುಹೂರು ಇರುವುದು ತಾಮ್ರಪರ್ಣೀ ನದಿಯ ದಂಡೆಯ ಮೇಲೆ. ಅಲ್ಲೊಂದು ಪ್ರಾಚೀನ ದೇವಾಲಯ; ಹತ್ತನೆಯ ಶತಮಾನದಲ್ಲೇ ತೋರಿಕೊಂಡದ್ದು. ಈ ದೇವಾಲಯದಲ್ಲಿರುವ ಅರ್ಚಾಮೂರ್ತಿ ಆದಿನಾಥ ಅಥವಾ ಆದಿನಾರಾಯಣಸ್ವಾಮಿ. ಇದೊಂದು ಶ್ರೀವೈಷ್ಣವ ಸಮುದಾಯದ ಕೇಂದ್ರವೇ ಆಗಿದ್ದಿತು. ಈ ದೇವರ ಹೆಸರನ್ನೇ ಪ್ರಸನ್ನ ಕೃಷ್ಣಸ್ವಾಮಿ ನಾಯಕರು ತಮ್ಮ ಮಗನಿಗೆ ಇರಿಸಿದರು.

ತಿರುನೆಲ್ವೇಲಿಯ ಹರವಿನಲ್ಲೇ ಇರುವುದು ವಾನಮಾಮಲೈ (ಶ್ರೀವರಮಂಗೈ) ಕ್ಷೇತ್ರ; ತಿರುನೆಲ್ವೇಲಿಗೆ ಸುಮಾರು ಇಪ್ಪತ್ತು ಮೈಲಿಗಳಷ್ಟು ದೂರದಲ್ಲಿ. ಇದು ಶ್ರೀವೈಷ್ಣವ ಸಮುದಾಯದ ಧರ್ಮಪ್ರಸಾರ ಕಾರ್ಯದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದ್ದ ಮಠ. ಇದರ ಅಧಿಕಾರ ವ್ಯಾಪ್ತಿಯಲ್ಲಿ ಹಲವಾರು ಶ್ರೀವೈಷ್ಣವ ಸಮುದಾಯಗಳಿರುತ್ತಿದ್ದವು. ಅವುಗಳಲ್ಲೊಂದು ವಾನಮಾಮಲೈಯಿಂದ ಹತ್ತು ಮೈಲಿ ಅಂತರದಲ್ಲಿದ್ದ ತಿರುಕ್ಕನಂಗುಡಿಯಲ್ಲಿದ್ದಿತು. ತಿರುಕ್ಕನಂಗುಡಿ ಶ್ರೀವೈಷ್ಣವರ ನೂರೆಂಟು ದಿವ್ಯದೇಶಗಳಲ್ಲೊಂದು. ಇದನ್ನು ಈಗ ನಾಂಗುನೇರಿ ಎಂದು ಕರೆಯುತ್ತಾರೆ. ಪ್ರಸನ್ನ ಕೃಷ್ಣಸ್ವಾಮಿ ನಾಯಕರು-ಸಮಾಶ್ರಯಣ-ಸಂಸ್ಕಾರವನ್ನು ಪಡೆದುಕೊಂಡದ್ದು ಈ ಊರಿನಲ್ಲೇ; ಅಲ್ಲಿನ ಆಚಾರ್ಯಪುರುಷರಿಂದ.

ಈ ಊರಿನ ಒಂದು ವಿಶೇಷ ಸ್ವಾಮಿಗಳ ನಿಲುವಿಗೆ ಹಿನ್ನೆಲೆಯಾಯಿತೆನ್ನಬಹುದು. ಈ ಊರಿನ ಗುಡಿ ವೈಷ್ಣವ ಸಂಪ್ರದಾಯದ್ದೇ; ಅದು ವಿಷ್ಣುವಿನ ಐದುರೂಪಗಳನ್ನು (ಎಂದರೆ ವೈಷ್ಣವನಂಬಿ, ಮೇಲ್ಮಲೈನಂಬಿ, ನಿನ್ರನಂಬಿ, ಇರುಂದನಂಬಿ ಮತ್ತು ತಿರುಪ್ಪಾರ್ ಕಡಲ್ ನಂಬಿ) ಒಳಗೊಂಡು ಪಂಚಕೇತವಿಮಾನವೆನಿಸಿಕೊಂಡಿದೆ. ಆದರೂ ಸನ್ನಿಧಾನದಲ್ಲಿ ವಿಷ್ಣುವಿನೊಂದಿಗೆ ಶಿವನೂ ನಿಂತಿರುವುದನ್ನು ಕಾಣಬಹುದು. ಶೈವ ಸಂಪ್ರದಾಯದವರೂ ಈ ಅರ್ಚಾಮೂರ್ತಿಗೆ ನಡೆದುಕೊಳ್ಳುವುದುಂಟು. ಶಿವ-ವಿಷ್ಣು ಮೂರ್ತಿಗಳಿಗೆ ಸಮನ್ವಯವನ್ನು ಕಲ್ಪಿಸಿರುವುದು ಈ ಕ್ಷೇತ್ರದ ವೈಶಿಷ್ಟ್ಯ. ತಿರುಚಿ ಸ್ವಾಮಿಗಳು ವೈಷ್ಣವ ಸಂಪ್ರದಾಯದವರಾದರೂ ಶೈವ ಧರ್ಮವನ್ನೂ ಅಷ್ಟೇ ಆದರದಿಂದ, ನಿಷ್ಠೆಯಿಂದ ಕಾಣುವುದರ ಹಿನ್ನೆಲೆಯೆನ್ನಬಹುದು.

ಮುಂದೆ ಸ್ವಾಮಿಗಳು ಎಲ್ಲ ಧರ್ಮಗಳನ್ನೂ ಸಮಾನ ಶ್ರದ್ಧೆಯಿಂದ ಗ್ರಹಿಸಿದುದು ಅವರ ಬದುಕಿನಲ್ಲಿ ಸ್ವಾರಸ್ಯವಾದ ಒಂದು ಭಾಗ. ಎಲ್ಲ ಸಂಪ್ರದಾಯದವರೂ ಸ್ವಾಮಿಗಳನ್ನೂ ಗೌರವದಿಂದ ಕಾಣುವುದಕ್ಕೂ ಇದು ಕಾರಣವಾಯಿತು.

ದ್ವಿತೀಯ ಪುಷ್ಪ

ಅರುಣೋದಯದಲ್ಲಿ

ಅರುಣೋದಯದಲ್ಲಿ

ಆದಿನಾರಾಯಣಸ್ವಾಮಿ ನಾಯಕರು ತಮ್ಮ ತಂದೆ ಪ್ರಸನ್ನ ಲಕ್ಷ್ಮಣಸ್ವಾಮಿ ನಾಯಕರಿಗೆ ಒಬ್ಬನೇ ಮಗ. ಪ್ರಸನ್ನ ಲಕ್ಷ್ಮಣಸ್ವಾಮಿ ನಾಯಕರು ಅನುಕೂಲ ಸ್ಥಿತಿಯಲ್ಲಿದ್ದವರು; ಜಮೀನುದಾರರು. ಅವರ ಸೋದರಿಯರೂ ಅನುಕೂಲವಾದ ಮನೆಗಳನ್ನೇ ಸೇರಿದ್ದರು. ಇಬ್ಬರು ಸೋದರಿಯರಿಗೆ ಗಂಡುಮಕ್ಕಳಿರಲಿಲ್ಲ; ಆಸ್ತಿಯಿದ್ದಿತು. ಪ್ರಸನ್ನ ಲಕ್ಷ್ಮಣಸ್ವಾಮಿ ನಾಯಕರು ತೀರಿಕೊಂಡಮೇಲೆ, ಈ ಸೋದರಿಯರಿಬ್ಬರಲ್ಲಿ ಹಿರಿಯರು ಆದಿನಾರಾಯಣಸ್ವಾಮಿಯನ್ನು ಆಸ್ತಿಗೆ ವಾರಸುದಾರರಾಗಿ ದತ್ತು ತೆಗೆದುಕೊಂಡರು. ಆನಂತರ ಕಿರಿಯ ಸೋದರಿಯೂ ಇವರನ್ನೇ ದತ್ತು ತೆಗೆದುಕೊಂಡರು. ಕಾಲಕ್ರಮದಲ್ಲಿ ಆದಿನಾರಾಯಣಸ್ವಾಮಿಯ ತಾಯಿಯ ಸೋದರರೊಬ್ಬರು ಗಂಡು ಸಂತತಿಯಿಲ್ಲದೆ ಇವರನ್ನೇ ದತ್ತುಪುತ್ರನೆಂದು ಸ್ವೀಕರಿಸಿದರು. ಹೀಗಾಗಿ ಇವರ ಆರ್ಥಿಕ ಸ್ಥಿತಿ ತುಂಬ ಸಮೃದ್ಧವಾಯಿತು. ರವಣಸಮುದ್ರದ (ಎಂದರೆ ತಾಯಿಯ ಊರಿನ) ದೊಡ್ಡ ಮಿರಾಸಿದಾರರೆಂದು ಪ್ರಸಿದ್ಧರಾದರು. ತಮ್ಮ ಪತ್ನಿ ರಂಗನಾಯಕಿ ಅಮ್ಮನೊಡನೆ ರವಣಸಮುದ್ರದಲ್ಲಿ ನೆಲೆಸಿದರು.

ತಂದೆಯ ಔದಾರ್ಯಬುದ್ಧಿ, ಧರ್ಮಶ್ರದ್ಧೆಗಳು ಇವರಲ್ಲೂ ಒದಗಿಬಂದಿದ್ದು, ತಮ್ಮ ಹಳ್ಳಿಯಲ್ಲಿ ಎರಡು ಅಗ್ರಹಾರಗಳನ್ನು ಏರ್ಪಡಿಸಿದ್ದರು. ಆಗ್ರಹಾರವೆಂದರೆ ಪಂಡಿತರೂ, ಶ್ರೋತ್ರಿಯರೂ, ಸದಾಚಾರ ನಿಷ್ಠರೂ ಆದ ಬ್ರಾಹ್ಮಣರು ನೆಮ್ಮದಿಯಿಂದ ವಾಸಮಾಡುವ ಮನೆಗಳುಳ್ಳ ಬೀದಿ; ಅವರಿಗೆ ಬೇಕಾದ ವಸತಿಯನ್ನು

ದಾನಿಯೇ ಉಚಿತವಾಗಿ ನೀಡುವುದು ಇಲ್ಲಿನ ಮುಖ್ಯ ಕಲ್ಪನೆ. ಇದಲ್ಲದೆ ಕಾಮಾಕ್ಷಿ ದೇವಿಗೊಂದು ಸೊಗಸಾದ ಗುಡಿಯನ್ನೂ ಅಲ್ಲಿಯೇ ಕಟ್ಟಿಸಿದರು. ತಾವು ಸ್ವಂತ ಸಂಪ್ರದಾಯದಲ್ಲಿ ವೈಷ್ಣವರಾದರೂ ಊರಿನ ಅಗತ್ಯವನ್ನು ಗಮನಿಸಿ ಶೈವಾಗಮದ ಪ್ರಕಾರ ಶಾಕ್ತಾಲಯವೊಂದನ್ನು ನಿರ್ಮಿಸಿದುದು ಅವರ ಹೃದಯ ವೈಶಾಲ್ಯವನ್ನು ತೋರಿಸುತ್ತದೆ.

ಹೀಗಿರುತ್ತಾ ಒಮ್ಮೆ ಶೃಂಗೇರಿ ಸಂಸ್ಥಾನದ ಜಗದ್ಗುರು ಪಟ್ಟದಲ್ಲಿದ್ದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ತಮಿಳುನಾಡಿನಲ್ಲಿ ಪ್ರವಾಸ ಕೈಗೊಂಡು ಸಂಚಾರಕ್ರಮದಿಂದ ರವಣಸಮುದ್ರಕ್ಕೂ ಬಂದರು. ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ದೊಡ್ಡ ತಪಸ್ವಿಗಳು, ಬ್ರಹ್ಮಜ್ಞಾನಿಗಳು, ಜೀವನ್ಮುಕ್ತರು, ಸಿದ್ಧಪುರುಷರು. ವಶಿಷ್ಠ-ವಾಮದೇವಾದಿ ಋಷಿಗಳಂತೆ ಇದ್ದವರು; ನೆರೂರಿನ ಸದಾಶಿವ ಬ್ರಹ್ಮೇಂದ್ರ ಸರಸ್ವತಿಗಳಂತೆ ಅವಧೂತ ವೃತ್ತಿಯನ್ನೂ ಹಿಡಿದಿದ್ದವರು. ಇವರು ರವಣಸಮುದ್ರಕ್ಕೆ ದಯಮಾಡಿಸಿದಾಗ ಆದಿನಾರಾಯಣಸ್ವಾಮಿ ನಾಯಕರು ಊರಿನ ದೊಡ್ಡಕುಳವೆನಿಸಿದ್ದುದರಿಂದ, ಸ್ವಾಮಿಗಳನ್ನು ಎದುರುಗೊಂಡ ಊರಿನ ಹಿರಿಯರಲ್ಲಿ ಸೇರಿದ್ದರು. ಸ್ವಾಮಿಗಳ ವರ್ಚಸ್ಸಿಗೆ ಮಾರುಹೋಗಿ, ಆದಿನಾರಾಯಣಸ್ವಾಮಿ ನಾಯಕರು ಸ್ವಾಮಿಗಳನ್ನು ತಮ್ಮ ಮನೆಗೆ ಕರೆದುಕೊಂಡುಹೋಗಿ ಪಾದಪೂಜೆಯನ್ನು ವೈಭವದಿಂದ ಮಾಡಿದರು.

ಇದಾದ ಕೊಂಚ ಕಾಲದಲ್ಲೇ ಆದಿನಾರಾಯಣಸ್ವಾಮಿ ನಾಯಕರಿಗೆ ಹೆಣ್ಣುಮಗುವೊಂದು ಹುಟ್ಟಿ ಕೆಲವಾರು ವರ್ಷಗಳು ಬೆಳೆದು ದುರ್ದೈವದಿಂದ ತೀರಿಕೊಂಡಿತು. ಆದಿನಾರಾಯಣಸ್ವಾಮಿ ನಾಯಕರಿಗೂ ಅವರ ಧರ್ಮಪತ್ನಿಯಾದ ರಂಗನಾಯಕಿ ಅಮ್ಮನವರಿಗೂ ಇದು ಭರಿಸಲಾಗದ ದುಃಖಕ್ಕೆ ಕಾರಣವಾಯಿತು. ಈ ದುರ್ಭರ ದುಃಖವನ್ನು ಮರೆಯಲು ದಂಪತಿಗಳು ಕ್ಷೇತ್ರಾಟನವನ್ನು ಕೈಗೊಂಡು ದಕ್ಷಿಣ ದೇಶದ ಹಲವಾರು ಹೆಸರಾಂತ ಊರುಗಳಿಗೆ ಹೊರಟರು. ಹಲವಾರು ಊರುಗಳನ್ನು ನೋಡಿಕೊಂಡು ಕನ್ಯಾಕುಮಾರಿಗೆ ಬಂದು ಸಮುದ್ರ ತೀರದಲ್ಲಿ ನಿಂತ ದೇವಿಯ ದರ್ಶನವನ್ನು ಪಡೆದುಕೊಂಡು ಗುಡಿಯಲ್ಲಿ ಸೇವೆ ಸಲ್ಲಿಸುತ್ತಿರುವಾಗ ಅಪರಿಚಿತಳಾದ

ವೃದ್ಧೆಯೊಬ್ಬಳು ಇದ್ದಕ್ಕಿದ್ದಂತೆ ಎದುರಿಗೆ ಕಾಣಿಸಿಕೊಂಡು ಪಳನಿಗೆ ಹೋಗಿ ಅಲ್ಲಿ ಆಂಡವನ (ಎಂದರೆ ಬಾಲಸುಬ್ರಹ್ಮಣ್ಯನ) ಸೇವೆ ಮಾಡುವಂತೆ ಸೂಚಿಸಿ ಕಣ್ಮರೆಯಾದಳು. ಆದಿನಾರಾಯಣಸ್ವಾಮಿಗೂ ಅವರ ಪತ್ನಿಗೂ ಆಶ್ಚರ್ಯವೆನಿಸಿ, ಸೂಚನೆಯಂತೆ ಪಳನಿಗೆ ಹೋಗುವ ಮನಸ್ಸಾಯಿತು.

ಮಧುರೆ ಜಿಲ್ಲೆಯಲ್ಲಿರುವ ಪಳನಿ ಕ್ಷೇತ್ರಕ್ಕೆ ಅವರು ಬಂದುದೂ ಆಯಿತು. ಹಿಡಿಂಬನೆಂಬ ಅಸುರ ಸುಮೇರುವಿನ ಪರ್ವತ ಶಿಖರವೊಂದನ್ನು ತಂದು ಇಲ್ಲಿಟ್ಟಿದುದೇ ಪಳನಿ ಬೆಟ್ಟವೆಂದು ಸ್ಥಳಪುರಾಣ ಹೇಳುತ್ತದೆ. ಇಲ್ಲಿನ ಅರ್ಚಾಮೂರ್ತಿ ದ್ವಿಭುಜನಾದ ಸ್ಕಂದ; ವಟುವಿನಂತೆ ಕೌಪೀನಧಾರಿಯಾಗಿ ನವತಾರುಣ್ಯದಲ್ಲಿರುತ್ತಾ ಒಂದು ಕೈಯಲ್ಲಿ ದಂಡವನ್ನು ಹಿಡಿದು ನಿಂತ ಮೂರ್ತಿ; ಹಾಗೆಂದೇ ಈ ದೈವದ ಹೆಸರು ದಂಡಪಾಣಿ, ಅಥವಾ ದಂಡಾಯುಧಪಾಣಿ. ತುಂಬಾ ಪ್ರಾಚೀನವಾದ ಈ ಮೂರ್ತಿಯನ್ನು ಸಿದ್ಧಪುರುಷರು ನವಪಾಷಾಣವೆಂಬ ಲೋಹದ್ರವ್ಯಸಮುದಾಯದಿಂದ ನಿರ್ಮಿಸಿದ್ದಾರೆಂದು ಪ್ರತೀತಿ. ತುಂಬ ಜಾಗ್ರತವಾದ ಸ್ಥಳ. ಮಂತ್ರಸಾಧಕರೂ, ತಾಂತ್ರಿಕರೂ, ಸಿದ್ಧವೈದ್ಯರೂ ಇಲ್ಲಿ ಉಪಾಸನೆಮಾಡುವ ವಾಡಿಕೆಯಿದೆ. ಹಿಂದೂಗಳು ಮಾತ್ರವಲ್ಲದೆ ಮುಸಲ್ಮಾನರಲ್ಲಿ ಕೆಲವರೂ ಈ ದೇವರಿಗೆ ನಡೆದುಕೊಳ್ಳುವುದುಂಟಂತೆ.

ಕ್ಷೇತ್ರವು ಆದಿನಾರಾಯಣಸ್ವಾಮಿಗೂ ರಂಗನಾಯಕಿ ಅಮ್ಮನವರಿಗೂ ತುಂಬಾ ಹಿಡಿಸಿತು. ಅಲ್ಲಿ ಮಂಡಲ ಪೂಜೆಯನ್ನು ಮಾಡಿ ಸೇವೆ ಸಲ್ಲಿಸುವುದೆಂದು ನಿಶ್ಚಯಿಸಿಕೊಂಡರು. ಮಂಡಲ ಪೂಜೆಯೆಂದರೆ ನಲವತ್ತೆಂಟು ದಿನಗಳ ಕಾಲ ವಿಶೇಷ ನಿಷ್ಠೆಯಿಂದ, ಸಂಯಮದಿಂದ, ವಿಧಿವತ್ತಾಗಿ ಕೈಗೊಳ್ಳುವ ಒಂದು ವ್ರತ. ಈ ಪೂಜೆಯನ್ನು ಯಾವ ಎಡರು-ತೊಡರುಗಳಿಲ್ಲದೆ ಮುಗಿಸಿ ಅವರು ಕಡೆಯದಿನ ದೇವಾಲಯದ ಪ್ರದಕ್ಷಿಣೆ ಮಾಡುತ್ತಿರುವಾಗ ಯೋಗಾಯೋಗದಿಂದ ಶೃಂಗೇರಿ ಮಠದ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳೂ ಗುಡಿಗೆ ಬಂದಿದ್ದು ಪೂಜೆಮುಗಿಸಿ ಹೊರಬರುತ್ತಿದ್ದರು. ಸ್ವಾಮಿಗಳ ಪರಿಚಯ ಆದಿನಾರಾಯಣಸ್ವಾಮಿ ನಾಯಕರಿಗೆ ಮೊದಲೇ ಇದ್ದಿತಷ್ಟೆ. ಅವರು ಹಿಂದಿನ ಸಂಚಾರ ಕಾಲದಲ್ಲಿ ರವಣಸಮುದ್ರಕ್ಕೆ ಬಂದಿದ್ದಾಗ ಆದಿನಾರಾಯಣಸ್ವಾಮಿ ನಾಯಕರ ಮನೆಗೂ ದಯಮಾಡಿಸಿದ್ದು ಪಾದಪೂಜೆಯನ್ನು ಪಡೆದುಕೊಂಡಿದ್ದರು. ಸ್ವಾಮಿಗಳೂ ಆದಿನಾರಾಯಣಸ್ವಾಮಿಯವರ ಗುರುತನ್ನು ಹಿಡಿದು ಕುಶಲವನ್ನು ವಿಚಾರಿಸಿದರು.

ಅಂದು ಆದಿನಾರಾಯಣಸ್ವಾಮಿ ನಾಯಕರು ತಮ್ಮ ಪತ್ನಿ ರಂಗನಾಯಕಿ ಅಮ್ಮನೊಂದಿಗೆ ಸ್ವಾಮಿಗಳು ಬಿಡಾರಬಿಟ್ಟಿದ್ದ ಎಡೆಗೆ ಹೋಗಿ ಅವರ ದರ್ಶನವನ್ನು ಪಡೆದುಕೊಂಡರು; ತಮ್ಮ ದುಃಖವನ್ನು ಗುರುಗಳೆದುರು ತೋಡಿಕೊಂಡರು. ಗುರುಗಳು ಅವರನ್ನು ಸಮಾಧಾನಪಡಿಸಿ ಮಂತ್ರಾಕ್ಷತೆಯನ್ನೂ ಫಲವನ್ನೂ ಬೆಲ್ಲದ ಚೂರುಗಳನ್ನೂ ಆಶೀರ್ವಾದಪೂರ್ವಕವಾಗಿ ಅನುಗ್ರಹಿಸಿದರು; ಕಾಲಕ್ರಮದಲ್ಲಿ ಗಂಡುಮಗನೊಬ್ಬನು ಹುಟ್ಟುವನೆಂದು ಸೂಚಿಸಿದರು. ಸ್ವಾಮಿಗಳಿಗೆ ನಮಸ್ಕಾರಮಾಡಿ ಅವರಿಬ್ಬರೂ ಪ್ರಸನ್ನಚಿತ್ತರಾಗಿ ಪಳನಿಯಿಂದ ಹೊರಹೊರಟರು. ಕನ್ಯಾಕುಮಾರಿಯಲ್ಲಿ ಅನಿರೀಕ್ಷಿತವಾಗಿ ಅಪರಿಚಿತ ವೃದ್ಧೆಯೊಬ್ಬಳು ನೀಡಿದ ಸೂಚನೆ, ಪಳನಿಯಲ್ಲಿ ಅಷ್ಟೇ ಅನಿರೀಕ್ಷಿತವಾಗಿ ಸ್ವಾಮಿಗಳನ್ನು ಕಂಡು ಅವರಿಂದ ಪಡೆದುಕೊಂಡ ಅನುಗ್ರಹ, ಎರಡಕ್ಕೂ ನಂಟು ಇದ್ದುದನ್ನು ಈಗ ಅವರು ಅರಿತುಕೊಂಡರು.

ಕ್ಷೇತ್ರಾಟನಕ್ಕೆ ಹೊರಡುವಾಗ ಇದ್ದ ದುಗುಡ ಈಗ ಮರೆಯಾಗಿದ್ದಿತು; ಮನಸ್ಸಿನಲ್ಲಿ ಹರ್ಷವಿದ್ದಿತು. ಶುಭೋದಯದ ಸೂಚನೆಯಿಂದಾಗಿ ಉತ್ಸಾಹವೂ ಇದ್ದಿತು. ನಡೆದ ಘಟನೆಗಳ ಸ್ವಾರಸ್ಯವನ್ನು ಅವರೀಗ ನೆನೆಸಿಕೊಂಡು ದೈವಲೀಲೆಯಲ್ಲಿ ನಂಬಿಕೆಯನ್ನು ತಳೆದರು. ಅವರು ಪಳನಿಯಲ್ಲಿ ಸೇವೆ ಮಾಡುತ್ತಿದ್ದಾಗಲೇ ದೊರೆತ ಅನುಭವವೊಂದು ಈಗ ಮರುಕಳಿಸಿತು. ಪಳನಿಯಾಂಡವನ ಮಂಡಲ ಪೂಜೆ ಮಾಡುತ್ತಿರುವಾಗ ಕಡೆಯ ದಿನ ನಡೆದದ್ದು ಅದು. ಆ ರಾತ್ರಿ ರಂಗನಾಯಕಿ ಅಮ್ಮ ನಿದ್ರೆ ಮಾಡುತ್ತಿರುವಾಗ ಕನಸೊಂದನ್ನು ಕಂಡರಂತೆ. ತ್ರಿಶೂಲವೊಂದು ಬಂದು ತಮ್ಮ ಹೊಟ್ಟೆಯೊಳಗೆ ಸೇರಿಕೊಂಡಂತೆ ಆ ಕನಸು. ಇದರಿಂದ ಆಕೆಗೆ ಹೆದರಿಕೆಯೂ ಆಯಿತಂತೆ. ಏನು ಅವಘಡ ಕಾದಿಯೋ ಎಂಬ ಆತಂಕ. ಮರುದಿನವೇ ಶೃಂಗೇರಿ ಸ್ವಾಮಿಗಳು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಯವರನ್ನು ಕಂಡು ಅವರಿಂದ ಫಲಮಂತ್ರಾಕ್ಷತೆಯನ್ನು ಪಡೆದುಕೊಂಡ ನಂತರ ಈ ಆತಂಕ ಮರೆಯಾಯಿತಂತೆ. ಪಳನಿಯಿಂದ ಹೊರಟು ಮಧುರೆಗೆ ಬಂದು ಮೀನಾಕ್ಷಿ ದೇವಿಯ ದರ್ಶನವನ್ನು ಪಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗಿದರು.

ಕ್ಷೇತ್ರಾಟನದಿಂದ ಹಿಂದಿರುಗಿದಮೇಲೆ ಆದಿನಾರಾಯಣಸ್ವಾಮಿ ನಾಯಕರೂ ಅವರ ಪತ್ನಿ ರಂಗನಾಯಕಿ ಅಮ್ಮನೂ ರವಣಸಮುದ್ರದ ನೆಲೆಯಲ್ಲೇ ಇದ್ದ ಇನ್ನೊಂದು ಹಳ್ಳಿಯಲ್ಲಿ ನೆಲೆಸುವ ಮನಸ್ಸು ಮಾಡಿದರು. ಆ ಹಳ್ಳಿಯ ಹೆಸರು ವಿಕ್ರಮಸಿಂಹಪುರ.

ತಾಮ್ರಪರ್ಣಿ ನದಿಯ (-ಈ ನದಿಗೆ ಪೊರುಣೈ ಎಂದೂ ಹೆಸರಿದೆ-) ದಂಡೆಯ ಮೇಲೆ, ಪೊಡಿಗೈ ಎಂಬ ಬೆಟ್ಟದ ತಪ್ಪಲಿನಲ್ಲಿರುವ ಹಳ್ಳಿ ಇದು; ಪಾಪನಾಶವೆಂಬ ಪ್ರಸಿದ್ಧ ಕ್ಷೇತ್ರದ ಹತ್ತಿರವೇ ಇದೆ. ಇಲ್ಲಿ ಆದಿನಾರಾಯಣಸ್ವಾಮಿ ನಾಯಕರಿಗೆ ದತ್ತಕವಾಗಿ ಬಂದಿದ್ದ ಭೂಮಿಯೂ ಇದ್ದುದರಿಂದ, ಅದನ್ನು ನೋಡಿಕೊಳ್ಳುವ ಸಲುವಾಗಿಯೇ ಇಲ್ಲಿಗೆ ಅವರು ಬಂದುದು. ಈ ಹಳ್ಳಿಯಲ್ಲಿ ಅವರು ವಾಸ್ತವ್ಯಮಾಡುತ್ತಿರುವಾಗಲೇ ಅವರಿಗೆ ಶಾಲೀವಾಹನ ಶಕೆ 1851ರ ಫಾಲ್ಗುಣ ಮಾಸದಲ್ಲಿ, ಕ್ರಿಸ್ತವರ್ಷ 1929ರ ಮಾರ್ಚ್ 29ನೆಯ ದಿನ ಗಂಡುಮಗುವೊಂದು ಹುಟ್ಟಿತು. ಈ ಮಗುವೇ ಮುಂದೆ ತಿರುಚ್ಚಿಸ್ವಾಮಿಗಳೆಂದು ಪ್ರಸಿದ್ಧವಾದುದು.

ಜನನದ ಸಂದರ್ಭವೂ ಲೋಕವಿಲಕ್ಷಣವಾಗಿದ್ದಿತು. ಆ ದಿನ ಆದಿನಾರಾಯಣಸ್ವಾಮಿ ನಾಯಕರು ತಮ್ಮ ತುಂಬುಗರ್ಭಿಣಿ ಪತ್ನಿಯೊಂದಿಗೆ ನದೀಸ್ನಾನಕ್ಕೆಂದು ಹೋಗಿದ್ದರು. ಅದು ಎಂದಿನ ವಾಡಿಕೆಯೇ. ಆದರೆ ಅಂದು ಸ್ನಾನ ಮುಗಿಸಿ, ದಡದ ಮೇಲೆ ಸಂಜೆಯವರೆಗೂ ವಿಶ್ರಮಿಸಿಕೊಳ್ಳುತ್ತ ಕುಳಿತಿದ್ದು ಮನೆಗೆ ಮರಳುವ ಸನ್ನಾಹದಲ್ಲಿದ್ದಾಗ, ಇದ್ದಕ್ಕಿದ್ದಂತೆ ಪ್ರಸವವೇದನೆ ಮೊದಲಾಗಿಬಿಟ್ಟಿತು. ನದಿಯ ದಡದ ಮೇಲೆ ಇದ್ದ ಆನಂದ ವಿಲಾಸವೆಂಬ ಕಟ್ಟಡದ ಬದಿಯಲ್ಲಿಯೇ ಸಂಜೆ ಆರುಗಂಟೆಯ ಸುಮಾರಿಗೆ ರಂಗನಾಯಕಿ ಅಮ್ಮ ಗಂಡು ಮಗುವನ್ನು ಹೆತ್ತರು. ಅನಂತರ ತಾಯಿಯನ್ನೂ ಮಗುವನ್ನೂ ಎತ್ತಿನ ಬಂಡಿಯಲ್ಲಿ ಮನೆಗೆ ಕರೆದುತರಲಾಯಿತು.

ಎರಡುಸಾವಿರದ ಆರುನೂರು ವರ್ಷಗಳ ಹಿಂದೆ ಮೈದಳೆದ ಭಗವಾನ್ ಬುದ್ಧನ ಅವತರಣವಾದುದೂ ಹೀಗೆಯೇ ಎಂಬುದು ನೆನಪಿಗೆ ಬಂದೀತು! ಕಪಿಲವಸ್ತುವಿನಿಂದ ತನ್ನ ತೌರುಮನೆಗೆ ಹೊರಟ ಮಾಯಾದೇವಿ, ಊರಹೊರಗೆ ಲುಂಬಿಣಿ ವನವನ್ನು ದಾಟುತ್ತಿರುವಾಗಲೇ ಪ್ರಸವವೇದನೆ ಶುರುವಾಗಿ ಮರವೊಂದರ ರೆಂಬೆಯನ್ನು ಹಿಡಿದು ನಿಂತಂತೆಯೇ ಗೌತಮ ಬುದ್ಧ ಹುಟ್ಟಿದನೆಂಬುದನ್ನು ಎಲ್ಲರೂ ಬಲ್ಲರಷ್ಟೆ. ಎಲ್ಲರಂತೆ ಮನೆಯಲ್ಲಿ ಹುಟ್ಟದೆ, ಕಾಡಿನಲ್ಲಿ, ನದಿಯ ದಂಡೆಯ ಮೇಲೆ ಬಟ್ಟಬಯಲಲ್ಲಿ ಹುಟ್ಟುವುದು ವಿಲಕ್ಷಣ ವ್ಯಾಪಾರವಲ್ಲವೆ? ಮುಂಬರುವ ಲೋಕಕಲ್ಯಾಣದ ನಿಷ್ಠೆಯನ್ನು ಹುಟ್ಟೇ ಕಾಣಿಸುತ್ತದೆ.

ಮುಂಜಾನೆಯ ಮಬ್ಬಿನಲ್ಲಿ

ಮಗುವನ್ನು ಮನೆಗೆ ಕರೆತಂದಮೇಲೆ ಆರೈಕೆಯಲ್ಲೇನೂ ಕೊರತೆಯಿರಲಿಲ್ಲ. ಹುಟ್ಟಿದ ಒಂದು ತಿಂಗಳೊಳಗೆ ಮಗುವಿಗೆ ಹೆಸರಿಡುವುದು ವಾಡಿಕೆ. ವ್ಯಕ್ತಿಗೊಂದು ನಾಮಕರಣ ಬೇಡವೆ? ಅದೊಂದು ಸಂಸ್ಕಾರವೂ ಹೌದು; ವ್ಯವಹಾರವೂ ಹೌದು. ಆದರೆ ಆದಿನಾರಾಯಣಸ್ವಾಮಿ ನಾಯಕರ ಮನೆಯಲ್ಲಿ ಕಾರಣಾಂತರಗಳಿಂದ ಮೂರು ವರ್ಷಗಳವರೆಗೆ ಮಗುವಿಗೆ ನಾಮಕರಣವೇ ನಡೆಯಲಿಲ್ಲ. ಆದರೆ ಮಗುವನ್ನು ಏನಾದರೊಂದು ಹೆಸರು ಹಿಡಿದು ಕರೆಯದೆ ಇರುವುದು ಹೇಗೆ? ಹೆಸರು ಏನೆಂಬುದೇ ಬಗೆಹರಿದಿರಲಿಲ್ಲ.

ತಂದೆತಾಯಿಯರೂ, ನೆಂಟರಿಷ್ಟರೂ ಮಗುವನ್ನು ಪ್ರೀತಿಯಿಂದ 'ಸ್ವಾಮಿ' ಎಂದೇ ಕರೆಯತೊಡಗಿದರು. ಹೆಸರು ಇಡುವಾಗ ಕುಲದೈವವೋ, ಗ್ರಾಮದೈವವೋ, ಇಷ್ಟದೈವವೋ ಮುಖ್ಯವಾಗುತ್ತದೆ. ಸಾಮಾನ್ಯವಾಗಿ ದೇವರ ಹೆಸರನ್ನೇ ಮಕ್ಕಳಿಗೆ ಇರಿಸುವುದು ಹಿಂದಿನ ಕಾಲದ ವಾಡಿಕೆ. ಆದಿನಾರಾಯಣಸ್ವಾಮಿ ನಾಯಕರದ್ದು ವೈಷ್ಣವ ಸಂಪ್ರದಾಯ; ವಿಷ್ಣುವಿನ ಸಂಬಂಧವುಳ್ಳ ಹೆಸರಾಗಬೇಕು. ಆದರೆ ಅನುಗ್ರಹ ದೊರೆತದ್ದು ಪಳನಿಯ ಸಬ್ರಹ್ಮಣ್ಯ ಸ್ವಾಮಿಯ ಸೇವೆ ಪೂರೈಸಿದಮೇಲೆ; ಆದಕ್ಕೆ ಸೂಚನೆ ದೊರೆತದ್ದು ಕನ್ಯಾಕುಮಾರಿಯ ದೇವಿ ಸನ್ನಿಧಿಯಲ್ಲಿ; ಆಶೀರ್ವಾದ ಪಡೆದುಕೊಂಡದ್ದು ಶೃಂಗೇರಿಯ ಶೈವ ಸಂಪ್ರದಾಯದ ಸ್ವಾಮಿಗಳಿಂದ. ಮಗುವಿಗೆ ಯಾವ ಹೆಸರಿಡಬೇಕು? ಸಮಸ್ಯೆಗೆ ಕಾರಣವಾದುದೇನೋ ಸರಿಯೆ.

ಯಾವ ದೈವಕ್ಕಾದರೂ ಒಪ್ಪುವಂಥ 'ಸ್ವಾಮಿ' ಎಂಬ ಹೆಸರನ್ನೇ ಮನೆಯವರು ಹಿಡಿದದ್ದೂ ಸರಿಯೆ. 'ಸ್ವಾಮಿ'ಯೆಂದರೆ ಒಡೆಯ, ಸಲಹುವ ದೈವ, ಶ್ರೀವೈಷ್ಣವರಿಗೆ

ವಿಷ್ಣುವೇ ಸ್ವಾಮಿ; ಶೈವರಿಗೆ ಶಿವನೇ ಸ್ವಾಮಿ. ಸ್ವಾಮಿಮಲೆಯಲ್ಲಿ ಪೂಜೆಗೊಳ್ಳುವ ಸ್ವಾಮಿ ಸುಬ್ರಹ್ಮಣ್ಯ. ಗೌರವಾರ್ಹರಾದ ಗುರುಹಿರಿಯರನ್ನು ಕರೆಯುವಾಗಲೂ 'ಸ್ವಾಮಿ'ಯೆಂಬುದೇ ವಾಡಿಕೆ. ಸಂಭಾಷಣೆಯಲ್ಲೂ 'ಸ್ವಾಮಿ' ವಿಶೇಷವಾಗಿ ಕೇಳಿಬರುವುದೇ. ಹೀಗಾಗಿ ಆದಿನಾರಾಯಣಸ್ವಾಮಿಯ ಮಗ 'ಸ್ವಾಮಿ'ಯೆಂದೇ ಬೆಳೆಯಬೇಕಾಯಿತು.

ಮೂರುವರ್ಷಗಳು ಕಳೆದನಂತರ 'ಸ್ವಾಮಿ'ಯೆಂದಿದ್ದುದು 'ಪಳನಿಸ್ವಾಮಿ'ಯಾಗಿ ಮಾರ್ಪಟ್ಟಿತು. ಇದು ಜರುಗಿದ ಸಂದರ್ಭವೂ ಸ್ವಾರಸ್ಯವಾದುದು. ಮಗುವಿಗೆ ಒಮ್ಮೆ ಯಾವುದೋ ಬೇನೆ ತಗುಲಿ ಮೂರುತಿಂಗಳುಗಳ ಕಾಲ ವಿಪರೀತ ಜ್ವರ ಕಾಡಿತು; ಪ್ರಜ್ಞೆ ತಪ್ಪಿತು. ತಂದೆತಾಯಿಯರು ಭಯಗೊಂಡಿದ್ದು ಆಶ್ಚರ್ಯವೇನಲ್ಲ. ಮಗು ಉಳಿಯುವುದು ಕಷ್ಟವೆಂಬ ಅರಿವುಂಟಾಗಿ ಕಳವಳಗೊಂಡರು. ಹೀಗಿರುವಾಗ, ಒಂದು ಬೆಳಿಗ್ಗೆ ಇದ್ದಕ್ಕಿದ್ದಂತೆ ಒಬ್ಬ ಸಾಧು ಮನೆಯೊಳಗೆ ಆತುರದಿಂದ ಬಂದರು. ಬಂದವರೇ ಹಾಸಿಗೆಯಮೇಲೆ ಹೊರಗಣ ಅರಿವಿಲ್ಲದೇ, ಮೈ ಬೇಗೆಯಿಂದ ಸುಡುತ್ತ ಮಲಗಿದ್ದ ಮಗುವನ್ನು ಕೈಹಿಡಿದೆಬ್ಬಿಸುತ್ತ 'ಏ ಪಳನಿಸ್ವಾಮಿ!' ಎಂದು ಕೂಗಿದರು. ಮಗುವಿನ ಮೈಗೆಲ್ಲ ಬಳಿಯುವಂತೆ ಹೇಳಿ ಕೊಂಚ ವಿಭೂತಿಯನ್ನು ತಾಯಿಯ ಕೈಗೆ ಕೊಟ್ಟರು. ಒಡನೆಯೇ ಮಗು ಚೇತರಿಸಿಕೊಂಡು ಕಣ್ಣುತೆರೆದು ನೋಡಿತು. ಜ್ವರದ ಕಾವು ಇಳಿಯಿತು. ಕ್ರಮೇಣ ಮಗು ಗುಣಮುಖವಾಯಿತು.

ಹೀಗೆ ದೈವದಂತೆ ಬಂದು ಮಗುವನ್ನು ಉಳಿಸಿದ ಸಾಧು ಆ ಊರವರಿಗೆಲ್ಲ ಪರಿಚಿತರಾಗಿದ್ದವರೇ. ಅವರನ್ನು 'ಅಮಾವಾಸ್ಯೆಸ್ವಾಮಿ'ಯೆಂದು ಕರೆಯುತ್ತಿದ್ದರು. ಅವರ ದಿಟವಾದ ಹೆಸರೇನೋ ಯಾರಿಗೂ ತಿಳಿಯದು. ಈ ಸ್ವಾಮಿಗಳು ಹೆಚ್ಚೂ ಕಡಿಮೆ ಹುಚ್ಚರಂತೆಯೇ ಇರುತ್ತಿದ್ದರು. ಬೆತ್ತಲೆಯ ಮೈ, ಅವಧೂತವೃತ್ತಿ, ಒಂದು ನೆಲೆಯಿಲ್ಲದೆ ತಿರುಗಾಡುವ ಪರಿವ್ರಾಜಕ, ದತ್ತಾತ್ರೇಯ ಪಂಥಕ್ಕೆ ಸೇರಿದ ಸಿದ್ಧರೆಂದು ಹೇಳುತ್ತಿದ್ದರು. ಮೊದಲಿಗೆ ಮಹಾರಾಷ್ಟ್ರದ ಕಡೆಯವರಂತೆ; ಅವರು ಆಗಾಗ ಮರಾಠೀ ಅಭಂಗಗಳನ್ನು ಹಾಡುತ್ತಿದ್ದುದನ್ನೂ ಕೆಲವರು ಕೇಳಿದ್ದರು. ಆದರೆ ಈ ಕಡೆ ಬಂದು ತಮಿಳನ್ನೂ ಚೆನ್ನಾಗಿ ಬಲ್ಲರು. ತಮಿಳುನಾಡಿನಲ್ಲೇ ಊರಿಂದೂರಿಗೆ ಅಡ್ಡಾಡುತ್ತಾ ಇರುವವರು. ಅವರ ವೈಶಿಷ್ಟ್ಯವೆಂದರೆ ಅವರು ಊಟಮಾಡುತ್ತಿದ್ದುದು

ಅಮಾವಾಸ್ಯೆಯೊಂದೇ ದಿನ; ಉಳಿದ ದಿನಗಳು ಅವರು ಉಂಡದ್ದನ್ನು ಯಾರೂ ಕಂಡಿರಲಿಲ್ಲ. ಈ ಕಾರಣದಿಂದಲೇ ಅವರ ಹೆಸರು 'ಅಮಾವಾಸ್ಯೆ ಸ್ವಾಮಿ'ಯೆಂದು ಪ್ರಸಿದ್ಧವಾದುದು.

ಅಮಾವಾಸ್ಯೆಯಂದು ಕೆಲವರು ಭಕ್ತರು ಅವರನ್ನು ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಪೂಜೆಮಾಡುವರು. ಅನಂತರ ಅವರೆದುರು ಐದು ಬಾಳೆಯೆಲೆಗಳನ್ನು ಹರಡಿ, ಅದರ ಮೇಲೆ ಅನ್ನವನ್ನು ಒಟ್ಟುವರು; ಉಳಿದ ಅಡುಗೆಯನ್ನು ಸೇರಿಸುವರು. ಅಮಾವಾಸ್ಯೆ ಸ್ವಾಮಿಗಳು ಎಲ್ಲವನ್ನೂ ಗಬಗಬನೆ ತಿಂದು ಮುಗಿಸುವರು. ನೆರೆದವರಿಗೆ ಈ ಸಾಹಸದಿಂದ ಅಚ್ಚರಿಯಾದರೂ ಸ್ವಾಮಿಗಳಿಗೆ ಏನೊಂದು ತೊಂದರೆಯೂ ಇರದು. ಹೀಗೆ ಊಟಮಾಡಿ ಭಕ್ತನ ಮನೆಯಿಂದ ಹೊರಡುವರು. ಭಕ್ತರು ಯಾರಾದರೂ ಹಣವನ್ನು ಅವರಿಗೆ ಒಪ್ಪಿಸಿದರೆನ್ನಿ. ಒಡನೆಯೇ ಅದನ್ನವರು ನೆಲ್ಲೈಯಪ್ಪರ ಗುಡಿಗೆ ಕಳುಹಿಸಿಬಿಡುವರು. ಇವರು ಹೀಗೆ ಸಲ್ಲಿಸಿದ ಹಣದಿಂದ ಆ ಗುಡಿಯ ದೇವರಿಗೆ ಬೆಳ್ಳಿಯ ತೇರೊಂದು ಸಿದ್ಧವಾಯಿತಂತೆ.

ಅವರನ್ನು ಮಹಾಪುರುಷರೆಂದು ಎಲ್ಲರೂ ಭಕ್ತಿಯಿಂದ ಕಾಣುತ್ತಿದ್ದರು. ಅವರ ಅವಧೂತವೃತ್ತಿಗೆ ಉನ್ಮತ್ತಾವರ್ತನೆಗೆ ಯಾರೂ ಬೇಸರಿಸಿಕೊಳ್ಳುತ್ತಿರಲಿಲ್ಲ. ಸಾಮಾನ್ಯವಾಗಿ ಅವರು ಯಾರ ಮನೆಯೊಳಗೂ ಬರುತ್ತಿರಲಿಲ್ಲ. ಅಮಾವಾಸ್ಯೆಯೊಂದು ದಿನ ಮಾತ್ರ ಕರೆದವರ ಮನೆಗೆ ಬರುತ್ತಿದ್ದರು. ಆದರೆ ಇವರು ಅಂದು ತಾವಾಗಿ ಆದಿನಾರಾಯಣಸ್ವಾಮಿ ನಾಯಕರ ಮನೆಯೊಳಗೆ ಬಂದು, ಮಗುವನ್ನು ಗುಣಪಡಿಸಿ ಹೋದರು. ಅಂದಿನಿಂದ ಅವರು ಮಗುವನ್ನು ಕರೆದು ಎಚ್ಚರಗೊಳಿಸಿದ 'ಪಳನಿಸ್ವಾಮಿ' ಎಂಬ ಹೆಸರು ಮಗುವಿಗೆ ಸ್ಥಿರವಾಗಿ ನಿಂತಿತು. ಮತ್ತೆ ನಾಮಕರಣದ ಅಗತ್ಯ ಇರಲಿಲ್ಲ.

ಪಳನಿ ಸ್ವಾಮಿ ವಯಸ್ಸಿಗೆ ಬಂದಂದು (ಅಂದರೆ ಏಳನೆಯ ವರ್ಷದಲ್ಲಿ) ಹಳ್ಳಿಯಲ್ಲೇ ಇದ್ದ ಒಂದೇ ಶಾಲೆಗೆ ಸೇರಿದನು. ಆ ಶಾಲೆ ಕ್ರೈಸ್ತಪಾದರಿಗಳು ನಡೆಸುತ್ತಿದ್ದುದು; ಮಕ್ಕಳಿಗೆ ಪಾಠ ಹೇಳುವ ಸಲುವಾಗಿ ತಮಿಳು ವಾದ್ಯಾರರೊಬ್ಬರನ್ನು ನೇಮಿಸಿಕೊಂಡಿದ್ದರು. ಈ ಗುರುಗಳ ಹೆಸರು ರಾಮಸ್ವಾಮಿ ಶಾಸ್ತ್ರಿಯೆಂದು; ವಡಮ

ಬ್ರಾಹ್ಮಣರು. ಅವರದ್ದು ಸ್ಥೂಲಕಾಯ, ಬೃಹದುದರ. ಎದ್ದರೆ ಕೂಡುವುದು ಕಷ್ಟ; ಕೂತರೆ ಏಳುವುದು ಕಷ್ಟ. ನಾಲ್ಕು ಹೆಜ್ಜೆ ನಡೆದರೂ ಏದುಸಿರು ಬಿಡುವರು. ಇವರ ಸೇವೆಯನ್ನು ಪಳನಿಸ್ವಾಮಿ ಚೆನ್ನಾಗಿ ಮಾಡುತ್ತಿದ್ದುದರಿಂದ ಗುರುಗಳಿಗೆ ಶಿಷ್ಯನ ಮೇಲೆ ತುಂಬ ಪ್ರೀತಿ. ಶಾಲೆಯಲ್ಲಿ ಪಾಠ ನಡೆಯುವಾಗ ಪಳನಿಸ್ವಾಮಿ ಅವರ ಕಾಲೊತ್ತುವನು; ಅವರು ಹೇಳಿದ ಕೆಲಸಗಳನ್ನೆಲ್ಲ ಶ್ರದ್ಧೆಯಿಂದ ಮಾಡುವನು.

ಹೀಗೆ ಆ ಶಾಲೆಯಲ್ಲಿ ಪಳನಿಸ್ವಾಮಿ ಕಲಿತದ್ದು ಮೂರು ವರ್ಷಗಳು; ತನ್ನ ಹತ್ತನೆಯ ವರ್ಷ ವಯಸ್ಸಿನವರೆಗೆ ತಮಿಳು ಓದುವುದು, ಬರೆಯುವುದು, ಸ್ವಲ್ಪ ಗಣಿತ, ತೊಲ್ಕಾಪ್ಪಿಯಂ ಎಂಬ ತಮಿಳು ವ್ಯಾಕರಣದ ಬಾಲಪಾಠ ಇವಿಷ್ಟೂ ಶಿಕ್ಷಣದ ಪಠ್ಯ ಪದ್ಧತಿಯಲ್ಲಿ ಸೇರಿದ್ದ ಅಂಶಗಳು. ಆದರೆ ನಿಗದಿಯಲ್ಲದ, ಹಳ್ಳಿಯ ಶಾಲೆಯಾದುದರಿಂದ ಬೇರೆ ಬಗೆಯಾದ ಒತ್ತಡಗಳು ಯಾವುವೂ ಇರಲಿಲ್ಲ. ಬದುಕಿಗೆ ಬೇಕಾದ ವಿದ್ಯೆಯನ್ನು ಕಲಿಯುವ ಸಾಧ್ಯತೆಯಿದ್ದಿತು.

ಪ್ರಾರಂಭದ ಪ್ರಭಾವಗಳು

ಪಳನಿಸ್ವಾಮಿ ಶಾಲೆಯಲ್ಲಿ ಓದುತ್ತಿರುವಾಗಲೇ ಆಧ್ಯಾತ್ಮಿಕ ಪ್ರವೃತ್ತಿಯೂ ಬೆಳೆದುಬಂದಿತು. ಇದಕ್ಕೆ ನೆರವಾದ ಒಂದು ವಿಚಿತ್ರ ಸಂದರ್ಭವೂ ಇದ್ದಿತು. ಆ ಹಳ್ಳಿಯಲ್ಲೊಬ್ಬಳು ಮುದುಕಿ; ಸುಮಾರು ತೊಂಬತ್ತರ ವಯಸ್ಸಿನವಳು. ಅಬುಬಕರ್ ಅಜ್ಜಿಯೆಂದು ಅವಳ ಹೆಸರು. ಪಳನಿಸ್ವಾಮಿಯ ಹಿರಿಯರು ಈಕೆಯನ್ನು ತಮ್ಮ ಮನೆಗೆಲಸಕ್ಕೆ ನೇಮಿಸಿಕೊಂಡಿದ್ದರು. ಮುಖ್ಯವಾಗಿ ಮಕ್ಕಳಿಗೆ ಎಣ್ಣೆಯೆರೆದು ಸ್ನಾನಮಾಡಿಸುವುದು ಈಕೆಯ ಕೆಲಸ. ವಾರಕ್ಕೊಮ್ಮೆ ಈ ಕೆಲಸ. ನೆತ್ತಿಗೆ ಮತ್ತು ಮೈಗೆ ಎಣ್ಣೆಯನ್ನು ಹಚ್ಚಿ, ಅಂಗಮರ್ದನ ಮಾಡಿ, ಸ್ವಲ್ಪ ನೆನೆದಮೇಲೆ ಬಿಸಿನೀರಿನಿಂದ ಸ್ನಾನಮಾಡಿಸಿ, ಸೀಗೆಹುಡಿಯಿಂದ ಎಣ್ಣೆಯ ಜಿಡ್ಡನ್ನು ತೆಗೆದು, ಆಭ್ಯಂಗವಾದಮೇಲೆ ತಲೆಕೂದಲನ್ನೂ, ಮುಖವನ್ನೂ ಸಾಮ್ರಾಣಿ ಧೂಪಕ್ಕೆ ಒಡ್ಡಿ ಒಣಗಿಸುವುದು ಆಕೆಯ ಕೆಲಸ. ಇದು ಮಾತ್ರವಲ್ಲದೆ ಸಂಜೆಯ ಸಮಯದಲ್ಲಿ ಮನೆಯೊಳಗೆ ಎಣ್ಣೆ ದೀಪಗಳನ್ನೆಲ್ಲ ಹಚ್ಚಿಡುವುದು ಕೂಡ ಆಕೆಯ ಕೆಲಸವೇ.

ಮುಪ್ಪಡರಿದಾಗ ಈ ಕೆಲಸಗಳ ಹೊರೆಯನ್ನು ಹೆಗಲಿನಿಂದ ಇಳಿಸಿ ಮನೆಮಕ್ಕಳನ್ನು ನೋಡಿಕೊಳ್ಳುವುದು, ಆಟವಾಡಿಸುವುದು, ಅವರಿಗೆ ಕತೆ ಹೇಳುವುದು ಇಷ್ಟರಲ್ಲಿ ಕಾಲ ಕಳೆಯುತ್ತಿದ್ದಳು. ಅಬುಬಕರ್ ಅಜ್ಜಿಯೆಂದರೆ ಊರವರಿಗೆಲ್ಲ ಬೇಕಾದ ಮುದುಕಿ. ಅವಳೇನು ಸಾಮಾನ್ಯ ಹೆಂಗಸಲ್ಲ.

ಈ ಮುಸಲ್ಮಾನ ಮುದುಕಿ ಹಿಂದುಗಳ ಪದ್ಧತಿಗಳನ್ನೆಲ್ಲ ಅರಿತಿದ್ದಳು; ಶಾಸ್ತ್ರಗ್ರಂಥಗಳ ಸ್ಥೂಲ ಪರಿಚಯವೂ ಇದ್ದಿತು. ತಮಿಳನ್ನು ಚೆನ್ನಾಗಿಯೇ ಬಲ್ಲಳು; ಸ್ವಲ್ಪಮಟ್ಟಿಗೆ ಸಂಸ್ಕೃತದ ಪರಿಚಯವೂ ಇದ್ದಿತು. ಆಧ್ಯಾತ್ಮಿಕ ಪ್ರವೃತ್ತಿ

ಪ್ರಬಲವಾಗಿಯೇ ಇದ್ದಿತಾದರೂ ಅದನ್ನು ತೋರಗೊಡುತ್ತಿರಲಿಲ್ಲ. ಯಾರಿಂದಲೋ ದೀಕ್ಷೆಯನ್ನು ಪಡಿದಿದ್ದಳೆಂದು ಕೆಲವರು ತಿಳಿದಿದ್ದರು. ಇದು ದಿಟವೋ ಅಲ್ಲವೋ, ಆಕೆಯ ಮಾತಿನಲ್ಲಂತೂ ಆಧ್ಯಾತ್ಮಿಕತೆಯ ಪ್ರವೇಶ ವಿಪುಲವಾಗಿದ್ದಿತು; ಆಗಾಗ ಎಚ್ಚರತಪ್ಪಿ ಸಮಾಧಿಯಲ್ಲಿರುವಂತೆ ಕೂತುಬಿಡುತ್ತಿದ್ದುದೂ ಉಂಟು.

ಆಕೆಯ ಕಡೆಗಾಲದಲ್ಲಿ ಊರಿನಲ್ಲಿ ಎಲ್ಲರಿಗೂ ಆಕೆಯನ್ನು ಕಂಡರೆ ತುಂಬ ಗೌರವ. ನಟೇಶಯ್ಯರೆಂಬ ಸದ್ಗೃಹಸ್ಥರೊಬ್ಬರು ಬಹುಮಟ್ಟಿಗೆ ಆಕೆಯ ಜೊತೆಯೇ ಇರುತ್ತಿದ್ದರು; ಅಡಿಗಡಿಗೆ ತಮ್ಮ ಮನೆಗೆ ಆಕೆಯನ್ನು ಕರೆದೊಯ್ದು ಉಪಚರಿಸುತ್ತಿದ್ದರು. ಬಗೆಬಗೆಯಾದ ಭಕ್ಷ್ಯ-ಭೋಜ್ಯಗಳನ್ನು ಆಕೆಗೆಂದು ಮಾಡಿಸಿ ಆಕೆಯ ಮುಂದಿರಿಸುವುದು; ಒಂದೆರಡು ತುತ್ತು ತಿಂದು ತೃಪ್ತಳಾಗಿ ಆತನನ್ನೂ ಆತನ ಮನೆಯವರನ್ನೂ ಮನಸಾರೆ ಆಶೀರ್ವದಿಸಿ ಹೊರಡುವಳು. ನೆರೂರಿನ ಸದಾಶಿವ ಬ್ರಹ್ಮೇಂದ್ರರು ಇರುತ್ತಿದ್ದಂತೆಯೇ ಈಕೆಯೂ ವಿಲಕ್ಷಣವಾಗಿಯೇ ಇರುತ್ತಿದ್ದಳು; ಯೋಗಿನಿಯಂತೆ ಆಕೆಯ ಇರವು.

ಕೊಂಚಮಟ್ಟಿಗೆ ಹುಚ್ಚು ಪ್ರವೃತ್ತಿಯೂ ಇದ್ದುದರಿಂದ ಜನರು ಈಕೆಯನ್ನು ಕಂಡರೆ ಹೆದರುತ್ತಿದ್ದುದೂ ಉಂಟು. ಆಕೆಯನ್ನು ಗೌರವಿಸುತ್ತಿದ್ದವರೂ ಬಹುಮಂದಿಯೆನ್ನಿ. ಬೀದಿಯಲ್ಲಿ ಆಕೆ ನಡೆದು ಬರುತ್ತಿದ್ದರೆ, ಎಲ್ಲರೂ ಆಕೆಗೆ ದಾರಿಮಾಡಿಕೊಡುವರು; ಎತ್ತಿನ ಬಂಡಿಯಾದರೂ ಓರೆಯಾಗಿ ನಿಲ್ಲುವುದು. ಆಕೆಯು ತೀರಿಕೊಂಡಮೇಲೆ ಊರಹೊರಗೆ ಆಕೆಗೊಂದು ಸಮಾಧಿಯನ್ನು (ದರ್ಗಾ) ಕಟ್ಟಿಸಿ ಹಿಂದೂಗಳೂ, ಮುಸಲ್ಮಾನರೂ ಭಕ್ತಿಯನ್ನು ತೋರಿಸಿದರು.

ಇಂಥ ಅಬು-ಬಕರ್ ಅಜ್ಜಿಗೆ ಪಳನಿಸ್ವಾಮಿಯೆಂದರೆ ವಿಶೇಷವಾದ ಪ್ರೀತಿ; ಪಳನಿಸ್ವಾಮಿಗೂ ಆಕೆಯಲ್ಲಿ ತುಂಬ ಅಕ್ಕರೆ, ಆದರ. ಪಳನಿಸ್ವಾಮಿ ಏಳುವರ್ಷ ವಯಸ್ಸಿನವನಾಗಿದ್ದಾಗ ಈಕೆಯೊಂದಿಗೆ ಸಂಪರ್ಕ ಮೊದಲಾಯಿತು. ಮುಂದೆ ನಾಲ್ಕು ವರ್ಷಗಳ ಒಡನಾಟದಲ್ಲಿ ಪಳನಿಸ್ವಾಮಿಯ ಆಧ್ಯಾತ್ಮಿಕ ಪ್ರವೃತ್ತಿಯನ್ನು ಆಕೆ ಬೇರೂರಿಸಿದ್ದಳು. ತೊಡೆಯ ಮೇಲೆ ಕೂರಿಸಿಕೊಂಡು ಸಂತರ ವೃತ್ತಾಂತಗಳನ್ನೂ,

ಧರ್ಮಗ್ರಂಥಗಳಿಂದ ಕತೆಗಳನ್ನೂ, ಭಕ್ತಿಯ ಪ್ರಸಂಗಗಳನ್ನೂ ಹೇಳುವಳು. ಆಕೆಗೆ ಆತ್ಮಜ್ಞಾನವೆನ್ನುವುದು ಪ್ರಿಯವಾದ ವಿಚಾರ. ಏನನ್ನು ಕುರಿತು ಮಾತನಾಡುತ್ತಿದ್ದರೂ ತನಗೆ ಅರಿವಿಲ್ಲದಂತೆ ಆತ್ಮಜ್ಞಾನ ಪ್ರವೇಶಿಸುವುದು. ಆಧ್ಯಾತ್ಮಿಕ ಸಂಸ್ಕಾರವನ್ನು ಒದಗಿಸಿ ಈಕೆ ಪಳನಿಸ್ವಾಮಿಯನ್ನು ಪುಟಗೊಳಿಸಿದಳು.

ಈ ಮುದುಕಿಯು ಪಳನಿಸ್ವಾಮಿಯ ಭವಿತವ್ಯವನ್ನು ಚೆನ್ನಾಗಿಯೇ ಅರಿತಿದ್ದಳು. ಮನೆಯವರಿಗೆ "ಈ ಮಗು ನಿಮ್ಮ ಕೈ ಹತ್ತುವುದಿಲ್ಲ. ಇದಕ್ಕೆ ಪ್ರಾಪಂಚಿಕ ಪ್ರವೃತ್ತಿಗಳು ಇರವು. ಫಕೀರನಾಗಿ ಬಹುಜನರನ್ನು ಉದ್ಧಾರಮಾಡುವನು" ಎಂದು ಹೇಳುತ್ತಲೇ ಇದ್ದಳು. ಪಳನಿಸ್ವಾಮಿಗೆ ಹನ್ನೊಂದು ವರ್ಷ ತುಂಬುತ್ತಲೇ ಈ ಅಜ್ಜಿ ತೀರಿಕೊಂಡಳು. ಆದರೆ ಆಕೆಯ ಪ್ರಭಾವ ಪಳನಿಸ್ವಾಮಿಯ ಮೇಲೆ ದೃಢವಾಗಿ ಬಿದ್ದಿದ್ದಿತು. ಆ ಸಮಯದಿಂದ ಹುಡುಗನ ಆಧ್ಯಾತ್ಮಿಕ ಪ್ರವೃತ್ತಿ ಹೆಚ್ಚುತ್ತಲೇ ಹೋಯಿತು. ಬರುಬರುತ್ತ ಲೌಕಿಕ ವಿಷಯಗಳಲ್ಲಿ ಆಸಕ್ತಿ ಕಡಿಮೆಯಾಗತೊಡಗಿತು. ಸಾಧುಸಂತರಲ್ಲಿ ಕುತೂಹಲ ಹೆಚ್ಚಿತು; ಅವರೊಂದಿಗೆ ಸಂಪರ್ಕ ಬೆಳೆಯಿಸಿಕೊಳ್ಳುವ ಕಾತರ ಮೂಡಿಕೊಂಡಿತು. ಶಾಲೆಯ ಓದಿನ ಕಡೆ ಗಮನ ಮರೆಯಾಯಿತು; ಸ್ನೇಹಿತರೊಂದಿಗೆ ಕೂಡಿಕೊಂಡು ಆಡುವ ಹವ್ಯಾಸವೂ ಕರಗಿತು.

ಈ ಪರಿವರ್ತನೆಯನ್ನು ಗಮನಿಸಿದ ಅವನ ಸಹಪಾಠಿಗಳು ಮನೆಯ ಹಿರಿಯರಿಗೆ ವರದಿ ಒಪ್ಪಿಸಿದರು; ಶಾಲೆಗೆ ಬರುವುದು ಆಗಾಗ, ಒಮ್ಮೊಮ್ಮೆ ಅಷ್ಟೆ, ಓದಿನಲ್ಲಿಯೂ ಶ್ರದ್ಧೆಸಾಲದು, ಆಟಪಾಟಗಳಲ್ಲೂ ಸೇರುವುದಿಲ್ಲ ಎಂಬುದು ದೂರು. ಮನೆಯಲ್ಲೂ ಇರದೆ, ಶಾಲೆಗೂ ಬರದೆ ಎಲ್ಲಿ ಹೋಗುತ್ತಾನೆಂಬುದು ಯಾರಿಗೂ ತಿಳಿಯದು. ಸಾಧುಗಳ ಸಂಗದಲ್ಲಿ ಇರುವುದನ್ನೇನೋ ಕೆಲವರು ಕಂಡಿದ್ದರು. ಯಾಕೆ ಹೀಗೆ ಅಲೆಯುವನೆಂದು ಎಲ್ಲರಿಗೂ ಅಚ್ಚರಿ. ಮನೆಯ ಹಿರಿಯರು ಅವನಿಗೆ ಬುದ್ಧಿ ಹೇಳಿದರು, ದಂಡಿಸಿದರು, ಕಟ್ಟುಪಾಡಿನಲ್ಲಿ ತಿದ್ದಲು ನೋಡಿದರು. ಆದರೆ ಹುಡುಗನ ವರ್ತನೆಯಲ್ಲೇನೂ ಮಾರ್ಪಾಟು ಕಾಣಲಿಲ್ಲ. ಎಲ್ಲ ಹುಡುಗರಂತೆ ಇವನೇನು ಇರತೊಡಗಲಿಲ್ಲ.

ಪಳನಿಸ್ವಾಮಿಯೇನು ಅವಿಧೇಯನಲ್ಲ, ಹಿರಿಯರಿಗೆ ಎದುರು ಮಾತನಾಡುವವನಲ್ಲ. ಕೆಟ್ಟದಾರಿಯನ್ನು ಹಿಡಿದಾನೆಂಬ ಭಯವೇನು ಮನೆಯವರಿಗಿರಲಿಲ್ಲ. ಒಳ್ಳೆಯ ಹುಡುಗನೆಂಬುದು ಅವರಿಗೂ ಅವನ ಸಹಪಾಠಿಗಳಿಗೂ ತಿಳಿದಿತ್ತು. ಆದರೆ ಲೌಕಿಕವಾದ ಆಸಕ್ತಿಯನ್ನು ಬೆಳೆಸಿಕೊಳ್ಳದೆ, ಓದು ಮುಗಿಸದೆ, ಉದ್ಯೋಗ ಹಿಡಿಯದೆ, ಮದುವೆಯಾಗಿ ಮಕ್ಕಳುಮರಿಗಳನ್ನು ಕಾಣದೆ ಯಾರಾದರೂ ಇರುವುದು ಹೇಗೆ ಎಂಬುದು ಅವರ ಆತಂಕ. ಸಾಧುಗಳ ಹಿಂದೆ ಅಲೆದಾಡುತ್ತಾ ಆಧ್ಯಾತ್ಮದಲ್ಲೇ ತೊಡಗುವುದು ಏನು ಚೆನ್ನ ? ಅವರಂತೆ ಇವನೂ ಬೈರಾಗಿಯಾಗಿ ಊರೂರು ಅಂಡಲೆಯುವಂತಾದರೆ ಮಾಡುವುದೇನು? ಇದು ಮನೆಯವರ ಚಿಂತೆ. ಅದಕ್ಕೆ ಸರಿಯಾಗಿ ಆ ಊರಿಗೆ ಬಂದುಹೋಗುವ ಸಾಧುಸಂತರ, ಫಕೀರ-ಬೈರಾಗಿಗಳ ಸಂಖ್ಯೆಯೂ ದೊಡ್ಡದೆ!

ಪಳನಿಸ್ವಾಮಿಗೆ ಹದಿನೈದು ವರ್ಷವಿರುವಾಗ ಆ ಊರಿಗೆ ಒಬ್ಬ ಅಲೆಮಾರಿ ಫಕೀರ ಬಂದ. ಜನರು ಅವನನ್ನು 'ನಾಯಿಕುಟ್ಟಿಸ್ವಾಮಿ'ಯೆಂದು ಕರೆಯುತ್ತಿದ್ದರು. ಅದಕ್ಕೆ ಕಾರಣವೆಂದರೆ ಅವನ ಹಿಂದೆ ಬೀದಿನಾಯಿಗಳ ಹಿಂಡೊಂದು ಯಾವಾಗಲೂ ಇರುತ್ತಿದ್ದುದು; ನಾಯಿಮರಿಗಳು ಅವನ ಕಾಲಿಗೆ ತೊಡರಿಕೊಂಡು ಅಡ್ಡಾಡುತ್ತಿದ್ದವು. ನಾಯಿಮರಿಗಳೆಂದರೆ ಸ್ವಾಮಿಗೆ ಪ್ರೀತಿಯಿದ್ದುದು ತಿಳಿಯುತ್ತಿತ್ತು. ತಮಿಳಿನಲ್ಲಿ 'ನಾಯಿಕುಟ್ಟಿ'ಯೆಂದರೆ ನಾಯಿಮರಿಯೆಂದರ್ಥ. ಇವನು ಕಾಪಾಲಿಕನೆಂದು ಜನ ಭಯಗೊಂಡಿದ್ದರು. ಕಾಪಾಲಿಕರು ವಾಮಮಾರ್ಗಿಗಳು, ಸ್ಮಶಾನದಲ್ಲಿ ಗುಟ್ಟಾಗಿ ಮಂತ್ರಮಾಟಗಳನ್ನು ಮಾಡುವವರು; ತಲೆಯೋಡೆಯಲ್ಲಿ ಮನುಷ್ಯರ ರಕ್ತವನ್ನು ಕುಡಿಯುವವರು; ಗುಟ್ಟಾಗಿ ನರಬಲಿ ಮುಂತಾದವನ್ನು ನೀಡುವವರು ಎಂದೆಲ್ಲಾ ಕಲ್ಪನೆಗಳು ಜನರ ಮನಸ್ಸಿನಲ್ಲಿ. ಆದುದರಿಂದಲೇ ಅರಿಯದ ಜನರು ಕಾಪಾಲಿಕರೆಂದರೆ ಬೆದರುತ್ತಿದ್ದರು.

ಪಳನಿಸ್ವಾಮಿ ಇವನ ಸಂಪರ್ಕಕ್ಕೆ ಬಂದುದು ಸಹಜವೇ. ಆದರೆ ಊರ ಹಿರಿಯರಿಗೆ ಇದು ಸರಿಕಾಣಲಿಲ್ಲ. ಅವನಂತೆಯೇ ಇವನೂ ಕಾಪಾಲಿಕನಾಗಿಬಿಟ್ಟರೆ ಮಾಡುವುದೇನು? ಸಹವಾಸವನ್ನು ತಪ್ಪಿಸಲು ಎಷ್ಟೋ ಪ್ರಯತ್ನಪಟ್ಟರು. ಪಳನಿಸ್ವಾಮಿಗೇನೋ ಈ

ನಾಯಿಕುಟ್ಟಿ ಸ್ವಾಮಿಯ ಮೇಲೆ ಗೌರವ ಬುದ್ಧಿ ಬೆಳೆದು ಬಂದುಬಿಟ್ಟಿತು. ಸಮಯ ದೊರೆತಾಗಲೆಲ್ಲ ಅವನೊಂದಿಗೇ ಇರತೊಡಗಿದ. ನಾಯಿಕುಟ್ಟಿಸ್ವಾಮಿಗೂ ಪಳನಿಸ್ವಾಮಿಯ ಮೇಲೆ ಪ್ರೀತಿ ಒದಗಿಬಂತು.

ದಿಟವಾಗಿ ನಾಯಿಕುಟ್ಟಿಸ್ವಾಮಿ ಉತ್ತರ ಭಾರತದಲ್ಲಿ ಪ್ರಸಿದ್ಧವಾದ ನಾಥಸಿದ್ಧಪಂಥಕ್ಕೆ ಸೇರಿದ ಅವಧೂತ. ಗೋರಕ್ಷಕನಾಥ, ಮತ್ಸ್ಯೇಂದ್ರನಾಥ, ಜಾಲಂಧರನಾಥ ಇವರಿಂದ ಪ್ರವರ್ತಿತವಾದ ಈ ಪಂಥದಲ್ಲಿ ಯೋಗಮಾರ್ಗ ಮುಖ್ಯವಾದುದು; ಪ್ರಾಣಾಯಾಮ, ಧ್ಯಾನ, ಗುರುಯೋಗ ಮೊದಲಾದ ವಿವರಗಳಿಗೆ ಅವರದ್ದೆ ಪ್ರಕಾರಗಳಿವೆ. ನಾಯಿಕುಟ್ಟಿಸ್ವಾಮಿ ಉತ್ತರ ಭಾರತದವನೇ; ನೇಪಾಳದವನೆಂದೂ ಕೆಲವರು ಹೇಳುತ್ತಿದ್ದರು. ಅಲ್ಲಿಂದ ಸಂಚಾರಕ್ರಮದಲ್ಲಿ ತಮಿಳು ನಾಡಿಗೆ ಬಂದವನು. ಈ ಸ್ಥಳ ಅವನಿಗೆ ಬಹುವಾಗಿ ಹಿಡಿಸಿ ಈ ಪ್ರಾಂತ್ಯದಲ್ಲೇ ಇರಲು ಮನಸ್ಸುಮಾಡಿ ತಮಿಳನ್ನು ಅಭ್ಯಾಸಮಾಡಿದ. ಹಿಂದಿ, ತಮಿಳು ಎರಡೂ ಭಾಷೆಗಳು ಅವನಿಗೆ ಚೆನ್ನಾಗಿ ತಿಳಿದಿದ್ದವು. ತಮಿಳು ನಾಡಿನ ಉದ್ದಗಲವನ್ನೆಲ್ಲ ತಿರುಗಾಡಿ, ಅಲ್ಲಲ್ಲಿ ಒಂದೆರಡು ದಿನಗಳು ತಂಗಿದ್ದು ಕಡೆಗೆ ವಿಕ್ರಮಸಿಂಹಪುರಕ್ಕೆ ಬಂದಾಗ, ಪಳನಿಸ್ವಾಮಿ ಅವನನ್ನು ನೋಡಿದ್ದು. ಮೊದಲ ಸಮಾಗಮದಲ್ಲೇ ಪರಸ್ಪರ ಆಕರ್ಷಣೆ.

ಜನರಿಗೆ ಇಂಥ ಅವಧೂತರನ್ನು ಕಂಡರೆ ಕುತೂಹಲವೂ ಉಂಟು, ಭಯವೂ ಉಂಟು. ಅನೇಕ ಸಿದ್ಧಿಗಳನ್ನು ಪಡೆದಿದ್ದವನು ನಾಯಿಕುಟ್ಟಿ ಸ್ವಾಮಿಯೆಂಬ ನಂಬಿಕೆಯಿದ್ದಿತು. ಅವನೋ ಗೊತ್ತುಗುರಿಯಿರದೆ ಬೀದಿಬೀದಿ ಅಲೆಯುವನು. ಕೈಯಲ್ಲೊಂದು ಕಪಾಲ; ತಲೆಯೋಡೆ. ಯಾರಾದರೂ ಅನ್ನ-ತಿಂಡಿ ಅದರೊಳಗೆ ಹಾಕಬೇಕು; ಅದನ್ನು ಅವನು ತಾನೂ ತಿನ್ನುವನು; ಜೊತೆಯಲ್ಲಿರುತ್ತಿದ್ದ ನಾಯಿಗಳಿಗೂ ತಿನ್ನಲು ಕೊಡುವನು. ಯಾರ ಮನೆಯೊಳಗೂ ಬರುತ್ತಿರಲಿಲ್ಲ. ಊರ ಹೊರಗೆ ಸುಡುಗಾಡಿನಲ್ಲೇ ವಾಸ. ಬೀದಿಯಲ್ಲಿ ತಿರುಗಾಡುವಾಗ ಒಮ್ಮೊಮ್ಮೆ ಬೀದಿಯ ಬದಿಯಲ್ಲೇ ಮಲಗಿಬಿಡುವನು; ನಾಯಿಮರಿಗಳು ಅವನ ಮೇಲೆಲ್ಲ ಓಡಿಯಾಡುತ್ತ ಆಟವಾಡುವುವು. ಇದನ್ನು ಕಂಡು ಹುಡುಗರೆಲ್ಲ ಅವನ ಸುತ್ತ ನೆರೆಯುವರು. ಅವನಿಗಂತೂ ಹೊರಗೆ ಯಾವುದರ ಪರಿವೆಯೂ ಇರದು.

ಪಳನಿಸ್ವಾಮಿ ಅವನೊಡನೆ ಬಹಳಕಾಲ ಕುಳಿತು ಮಾತನಾಡುತ್ತಿರುವುದನ್ನು ಕಂಡು ಮನೆಯವರಿಗೇನೋ ಗಾಬರಿಯೇ ಆಯಿತು. ತಮಗೆ ದಕ್ಕುವ ಹುಡುಗನಲ್ಲವೆಂದು ಅಬು-ಬಕರ್ ಅಜ್ಜಿ ಹೇಳುತ್ತಿದ್ದುದನ್ನು ನೆನೆಸಿಕೊಂಡರಂತೂ ಅಂಜಿಕೆಯೇ ಆಗುತ್ತಿತ್ತು. ಪಳನಿಸ್ವಾಮಿ ಅವನೊಂದಿಗೆ ಕಾಲ ಕಳೆಯುವಾಗ, ನಾಯಿಕುಟ್ಟಿಸ್ವಾಮಿ ನಾಥಸಿದ್ಧರ ಕತೆಗಳನ್ನು ಹೇಳುತ್ತಿದ್ದನಂತೆ, ಆ ಸಂಪ್ರದಾಯಕ್ಕೆ ಸೇರಿದ ಹಲವು ಯೋಗಿಗಳ ಪ್ರಸಂಗಗಳನ್ನೆಲ್ಲ ತಿಳಿಯಪಡಿಸುತ್ತಿದ್ದನಂತೆ; ಸಿದ್ಧಾಂತದ ರಹಸ್ಯಗಳನ್ನು ಬಿಡಿಸಿ ಹೇಳುತ್ತಿದ್ದನಂತೆ. ಜನರು ಭಾವಿಸಿದಂತೆ ನಾಯಿಕುಟ್ಟಿಗೆ ಅನೇಕ ಸಿದ್ಧಿಗಳಿದ್ದುದು ದಿಟ; ಕೆಲವನ್ನು ಕೆಲವೊಮ್ಮೆ ಜನರಿಗೆ ತೋರಿಸುತ್ತಿದ್ದುದೂ ಉಂಟು. ಆದರೆ ಇವು ಯಾವುವನ್ನೂ ಪಳನಿಸ್ವಾಮಿಗೆ ಕಲಿಸಲಿಲ್ಲ. ಇಂಥ ಸಿದ್ಧಿಗಳಿಂದ ಆಧ್ಯಾತ್ಮಿಕವಾಗಿ ಅಡಚಣೆಗಳೇ ಹೆಚ್ಚು ಎಂದು ಹೇಳುತ್ತಿದ್ದನಂತೆ. ನಾಥಸಿದ್ಧ ಪಂಥದಲ್ಲಿ ದೀಕ್ಷೆಯನ್ನು ನೀಡಬೇಕೆಂದು ಪಳನಿಸ್ವಾಮಿ ಒಮ್ಮೆ ಕೇಳಿಕೊಂಡಾಗ ನಾಯಿಕುಟ್ಟಿಸ್ವಾಮಿ ಒಪ್ಪದೆ "ನಾನು ನಿನ್ನ ಗುರುವಲ್ಲ. ನಿನ್ನ ಗುರು ಬೇರೆ ಇದ್ದಾನೆ. ಅವನನ್ನು ನೀನು ನೇಪಾಳದಲ್ಲಿ ಕಾಣುವಿ!" ಎಂದು ಹೇಳಿಬಿಟ್ಟರು.

ಇದೊಂದು ಸಾಂಪ್ರದಾಯಿಕ ಕಲ್ಪನೆ. ಯಾವ ಶಿಷ್ಯನಾದರೂ ಯಾವ ಗುರುವನ್ನಾದರೂ ಪಡೆದುಕೊಂಡು ಮುಂದುವರಿಯುವನೆಂದು ನಾವು ನಂಬುವುದಿಲ್ಲ. ಗುರು-ಶಿಷ್ಯ ಸಂಬಂಧ ಪೂರ್ವನಿಯೋಜಿತವಾದುದು. ಅದು ಅವರಿಬ್ಬರ ಪೂರ್ವಜನ್ಮದ ಕರ್ಮದಿಂದಾಗಿ ಒದಗಿಬರುತ್ತದೆ. ಒಬ್ಬ ಶಿಷ್ಯನ ಆತ್ಮೋದ್ಧಾರಕ್ಕೆ ನೆರವಾಗಬಲ್ಲ ಗುರು ಹೀಗೆ ಪ್ರಾಕ್ತನ ಒತ್ತಡವಿಲ್ಲದೆ ಬಂದೊದಗುವುದಿಲ್ಲ. ಕಾಲ-ಕರ್ಮ ಸಂಯೋಗದಿಂದಾಗಿ ಗುರು-ಶಿಷ್ಯರು ಪರಸ್ಪರ ಸಂಪರ್ಕಕ್ಕೆ ಬರುತ್ತಾರೆ. ಯಾವುದೋ ತಿಳಿಯದ ಹಿನ್ನೆಲೆಯಿಂದ ಎಲ್ಲಿಂದಲೋ ನಾಯಿಕುಟ್ಟಿ ಸ್ವಾಮಿಯು ಪಳನಿಸ್ವಾಮಿಯಿದ್ದ ಕುಗ್ರಾಮಕ್ಕೆ ಬಂದುದು ಆಕಸ್ಮಿಕವೆಂದೇನು ನಾವು ಗ್ರಹಿಸುವುದಿಲ್ಲ. ಅವರಿಬ್ಬರ ನಡುವೆ ಬೆಳೆದುಬಂದ ಆಧ್ಯಾತ್ಮಿಕ ಒಲವು ಸಾಮಾನ್ಯವಾಗಿ ಎಲ್ಲಿಯೂ ಕಾಣುವಂಥದೇನಲ್ಲ. ಅದೊಂದು ವಿಚಿತ್ರವಾದ, ವಿಲಕ್ಷಣವಾದ, ಅಸಾಧಾರಣವಾದ ಸಂದರ್ಭವೇ.

ಅಷ್ಟಲ್ಲದೆ, ಗುರು-ಶಿಷ್ಯರ ಸಮಾಗಮ ನಾವಾಗಿ ಬಯಸಿ, ಪ್ರಯತ್ನಪಟ್ಟು ಸಿದ್ಧವಾಗುವುದೂ ಇಲ್ಲ. ಶಿಷ್ಯನಿಗೆ ಅಧಿಕಾರ ಒದಗಿದೊಡನೆ ಗುರು ಅವನೆದುರು ತೋರಿಕೊಳ್ಳುತ್ತಾನೆ; ಅಲ್ಲಿಯವರೆಗೆ ಶಿಷ್ಯ ಎಷ್ಟು ಹಂಬಲಿಸಿದರೂ ಪರದಾಡಿದರೂ ದಿಟವಾದ ಗುರುವನ್ನು ಪಡೆದುಕೊಳ್ಳಲಾರ. ಶಿಷ್ಯನೇನು ಗುರುವನ್ನು ಅರಸಿಕೊಂಡು ಊರೂರು ತಿರುಗಬೇಕಾದುದಿಲ್ಲ; ಅವನು ಸಿದ್ಧನಾದೊಡನೆ ಗುರು ಅವನನ್ನರಿಸಿಕೊಂಡು ಬರುತ್ತಾನೆ; ಮಾರ್ಗದರ್ಶನ ಮಾಡುತ್ತಾನೆ. ಇಂಥ ಶಿಷ್ಯನಿಗೆ ಇಂಥವನೇ ಗುರು ಎಂದು ಮೊದಲೇ ನಿಶ್ಚಿತವಾಗಿರುವಂತೆಯೆ, ಆ ಗುರುವಿನೆಡೆ ಶಿಷ್ಯನನ್ನೊಯ್ಯುವ ಸಂದರ್ಭವೂ ಪೂರ್ವನಿಶ್ಚಿತವಾದುದೇ. ಪಳನಿಸ್ವಾಮಿಯಲ್ಲಿ ಆಧ್ಯಾತ್ಮಿಕ ಪ್ರವೃತ್ತಿ ಬಲಿಯಲು ಮುಸಲ್ಮಾನ ಮುದುಕಿ ನೆರವಾದಂತೆಯೇ, ಅವನಿಗೆ ಮಾರ್ಗದರ್ಶನಮಾಡುವ ಕೆಲಸ ನಾಯಿಕುಟ್ಟಿಸ್ವಾಮಿಯಿಂದಾಯಿತು. ಅವನಿಂದ ಸಂಸ್ಕಾರವನ್ನು ಊರ್ಜಿತಗೊಳಿಸಿಕೊಂಡರೂ ಪಳನಿಸ್ವಾಮಿಗೆ ಅವನೇನೂ ಪೂರ್ವನಿಯೋಜಿತನಾದ ಗುರುವಲ್ಲ. ಪಳನಿಸ್ವಾಮಿಯು ಗುರು ಸಮಾಗಮಕ್ಕೆ ಇನ್ನೂ ಸಿದ್ಧನಾಗಿರಲಿಲ್ಲ. ಗುರುವನ್ನು ಅರಸುವಾಗಲೂ ತಾಳ್ಮೆಯಿರಬೇಕು; ಆತುರಪಟ್ಟರೆ ಆತಂಕವೇ.

ಆದರೆ ಸರಿಯಾದ ದಾರಿಯನ್ನು ಹಿಡಿದು ನಡೆಯಬೇಕಲ್ಲವೇ? ಆಗಲೇ ಗುರುವನ್ನು ಕಾಣಲಾಗುವುದು. ಈ ದಾರಿ ಯಾವುದೆಂಬುದನ್ನು ನಾಯಿಕುಟ್ಟಿಸ್ವಾಮಿ ತಿಳಿಸಿದನು; ಆ ದಾರಿಯಲ್ಲೇ ನಡೆಯುವುದು ಹೇಗೆಂಬುದನ್ನು ತೋರಿಸಿದನು. ಅಲ್ಲಿಗೆ ಅವನ ಕೆಲಸ ಮುಗಿಯಿತು. ಈ ಕೆಲಸವನ್ನು ನಿರ್ವಹಿಸಲೆಂದೇ ವಿಧಿಯು ಅವನನ್ನು ಎಲ್ಲಿಂದಲೋ ಹೇಗೋ ವಿಕ್ರಮಸಿಂಹಪುರಕ್ಕೆ ಕರೆತಂದಿತು; ಕೆಲಸವಾದಮೇಲೆ ಅವನು ಏನಾದನೋ ಅದು ವಿಧಿಯ ಕೈವಾಡವೇ. ಪಳನಿಸ್ವಾಮಿಯ ಆಧ್ಯಾತ್ಮಿಕ ವಿಕಾಸಕ್ಕೆ ಪೂರ್ವಸಿದ್ಧತೆಯನ್ನು ಕೈಗೂಡಿಸುವುದರಲ್ಲಿ ಅಮಾವಾಸ್ಯೆಸ್ವಾಮಿ, ಅಬು-ಬಕರ್ ಅಜ್ಜಿ, ನಾಯಿಕುಟ್ಟಿಸ್ವಾಮಿ ಇವರೆಲ್ಲರ ಪಾತ್ರವನ್ನು ಗುರುತಿಸಬೇಕು.

ಇವರು ಪರಸ್ಪರ ನಂಟಿಲ್ಲದವರೆಂದು ಕಂಡುಬಂದರೂ ಸೂಕ್ಷ್ಮವಾಗಿ ಗಮನಿಸಿದರೆ ಸಂಬಂಧ ತಿಳಿದುಬಂದೀತು. ಅಮಾವಾಸ್ಯೆಸ್ವಾಮಿ ಮತ್ತು ನಾಯಿಕುಟ್ಟಿಸ್ವಾಮಿ ಇಬ್ಬರೂ ಅವಧೂತರೇ. ಅಮಾವಾಸ್ಯೆಸ್ವಾಮಿ ದತ್ತಸಂಪ್ರದಾಯಕ್ಕೆ ಸೇರಿದ್ದವನು,

ನಾಯಿಕುಟ್ಟಿಸ್ವಾಮಿ ನಾಥಸಿದ್ಧ ಸಂಪ್ರದಾಯಕ್ಕೆ. ಇವೆರಡೂ ಸಂಪ್ರದಾಯ ನಂಟಿದೆ. ದತ್ತಸಂಪ್ರದಾಯದಲ್ಲಿ ದತ್ತಾತ್ರೇಯನೇ ಗುರು. ದತ್ತಾತ್ರೇಯನ ಕಲ್ಪನೆ ಸೃಷ್ಟಿಯನ್ನು ಮಾಡುವ ಬ್ರಹ್ಮ, ಸ್ಥಿತಿಗೆ ಕಾರಣನಾದ ವಿಷ್ಣು, ಲಯವನ್ನುಂಟುಮಾಡುವ ರುದ್ರ ಈ ಮೂರು ರೂಪಗಳ ಸಮಷ್ಟಿಯೆಂದು. ದತ್ತಾತ್ರೇಯ ವಿಷ್ಣುವಿನ ಅವತಾರವೇ ಎಂದಾದರೂ ದತ್ತ ಸಂಪ್ರದಾಯವು ಶೈವ. ಪಳನಿಸ್ವಾಮಿ ವೈಷ್ಣವ ಮನೆತನಕ್ಕೆ ಸೇರಿದ್ದರೂ ಶೈವ ಸಂಪ್ರದಾಯದ ಹರವಿಗೆ ಸೇರಿಕೊಂಡುದು ಹೀಗೆ. ಅವನ ಎಳೆತನದಲ್ಲೆ ಅಮಾವಾಸ್ಯೆಸ್ವಾಮಿ ಅವನನ್ನು ಎಚ್ಚರಗೊಳಿಸಿದನಲ್ಲವೆ? ಈ ಎಚ್ಚರ ದಿಟವಾಗಿ ಆಧ್ಯಾತ್ಮಿಕವಾದ ಜಾಗರಣವೇ. ಅವನ ಸ್ಪರ್ಶ, ವಿಭೂತಿ ಇವು ಹೆಸರಿಲ್ಲದ ವ್ಯಕ್ತಿಯೊಬ್ಬನಿಗೆ ಹೆಸರನ್ನು ಒದಗಿದುವು; ಬರಿಯ 'ಸ್ವಾಮಿ'ಯಾಗಿದ್ದ ಮಗು 'ಪಳನಿಸ್ವಾಮಿ'ಯಾದುದರ ಒಳನೋಟ ಇದು.

ಹೀಗೆ ಪಳನಿಸ್ವಾಮಿಯ ಚೇತನಕ್ಕೊಂದು ಬಲವನ್ನೊದಗಿಸಿದವನು ಅಮಾವಾಸ್ಯೆ ಸ್ವಾಮಿಯಾದರೆ, ಅಬು-ಬಕರ್ ಅಜ್ಜಿಯಿಂದ ಇನ್ನಷ್ಟು ಸತ್ವವನ್ನು ಪಡೆದುಕೊಂಡ ಆ ಚೇತನಕ್ಕೆ ಸರಿಯಾದ ದಾರಿಯನ್ನು ಕಾಣಿಸಿದವನು ನಾಯಿಕುಟ್ಟಿಸ್ವಾಮಿ. ಬೆತ್ತಲೆ ಓಡಿಯಾಡುತ್ತಿದ್ದ ನಾಯಿಕುಟ್ಟಿಸ್ವಾಮಿಯ ವಿಲಕ್ಷಣ ವರ್ತನೆಗೂ ಅರ್ಥವಿಲ್ಲದೆ ಇಲ್ಲ. ದತ್ತ ಸಂಪ್ರದಾಯದಲ್ಲಿ ದಿಗಂಬರನಾದ ದತ್ತಾತ್ರೇಯನೂ ನಾಯಿಗಳೊಂದಿಗೆ ಇರುವವನೇ. ವೇದಗಳೇ ನಾಯಿಗಳ ರೂಪವನ್ನು ಧರಿಸಿ ಈ ಅವತಾರಪುರುಷನ ಸೇವೆಯಲ್ಲಿದ್ದುವು. ನಾಯಿಕುಟ್ಟಿಸ್ವಾಮಿಯೂ ದತ್ತಾತ್ರೇಯನ ಕಲ್ಪನೆಗೆ ಅನುಕೂಲನಾಗುವವನೆ. ಮೇಲಾಗಿ, ದತ್ತಾತ್ರೇಯ ಅತ್ರಿಮಹರ್ಷಿಯ ಮಗನಾಗಿ ಕಾಣಿಸಿಕೊಂಡವನು; ಪಳನಿಸ್ವಾಮಿಯದೂ ಅತ್ರಿಗೋತ್ರವೇ. ಮುಂದೆ ಪಳನಿಸ್ವಾಮಿಯು ತಿರುಚಿಸ್ವಾಮಿಯಾಗಿ ಬೆಂಗಳೂರಿನ ಕೈಲಾಸಾಶ್ರಮದಲ್ಲಿ ನೆಲೆಸಿದುದೂ ಆಶ್ಚರ್ಯವಲ್ಲ; ಕೈಲಾಸ ಆಶ್ರಮ ಇರುವ ಜಾಗ ದತ್ತಾತ್ರೇಯನ ತಾಯಿಯಾದ ಅನಸೂಯೆ ತಪಸ್ಸುಮಾಡಿದ ತಾಣವೆಂದು ಪ್ರತೀತಿಯಿದ್ದಿತು.

ಪ್ರಾರಂಭಿಕ ಪ್ರಭಾವಗಳಲ್ಲಿ ಈ ಮೂವರು (ಅಮಾವಾಸ್ಯೆ ಸ್ವಾಮಿ, ಅಬು-ಬಕರ್ ಅಜ್ಜಿ, ನಾಯಿಕುಟ್ಟಿಸ್ವಾಮಿ) ಒದಗಿಬಂದುದು ಸುಸಂಗತವಾದ ಪ್ರಸಂಗವೇ ಎನ್ನಬೇಕು.

ಮಣ್ಣಿನಿಂದ ಮೂರ್ತಿ

ಹುಟ್ಟುವಾಗ ಮಣ್ಣೇ; ಬೆಳೆದಂದು ಮೂರ್ತಿಯಾಗುತ್ತದೆ. ಆದರೆ ಮಣ್ಣು ತಾನಾಗಿಯೇ ಮೂರ್ತಿಯಾಗಲಾರದು. ಮಣ್ಣಿಗೇನೋ ಮೂರ್ತಿಯಾಗುವ ಸಾಮರ್ಥ್ಯವಿದೆ; ಆದರೆ ಕುಶಲನಾದ ಶಿಲ್ಪಿ ಅದರ ಮೇಲೆ ಕೈಯಾಡಿಸದಿದ್ದರೆ ಮಣ್ಣು ಮಣ್ಣಾಗಿಯೇ ಉಳಿದೀತು. ಹಿರಿಯ ಚೇತನಗಳಿಗೆ ಮೂರ್ತಿಯಾಗುವ ಸಾಧ್ಯತೆ ಹೆಚ್ಚಿನದು; ಮಣ್ಣನ್ನು ಮಾರ್ಪಡಿಸುವ ನೆರವು ತಾನಾಗಿಯೇ ಒದಗಿಬರುತ್ತದೆ. ಮೇಲೆ ಹೇಳಿದ ಮೂವರೂ ಪಳನಿಸ್ವಾಮಿಯ ಬದುಕಿನ ಮೊದಲ ಘಟ್ಟದಲ್ಲೇ ಸೇರಿಬಂದರು.

ಪಳನಿಸ್ವಾಮಿಯ ಮನೆಯಲ್ಲೂ ಇದಕ್ಕೆ ಪೋಷಕವಾಗುವ ಸಂದರ್ಭವಿದ್ದಿತು. ಇದೂ ವಿಧಿಯ ಮಾಟವೇ. ಮನೆಯಲ್ಲೇ ಪಳನಿಸ್ವಾಮಿಯ ಅಜ್ಜಿಯೊಬ್ಬರಿದ್ದರು; ಅವರನ್ನು ವೆಂಕಮ್ಮ ಅಜ್ಜಿ ಎಂದು ಕರೆಯುತ್ತಿದ್ದರು. ಪಳನಿಸ್ವಾಮಿಯ ತಂದೆಗೆ ದೊಡ್ಡಮ್ಮನಾಗಬೇಕು; ಪಳನಿಸ್ವಾಮಿಯ ತಾಯಿಗೂ ನಂಟರೇ. ಮದುವೆಯಾದ ಕೆಲವು ದಿನಗಳಲ್ಲೇ ಗಂಡನನ್ನು ಕಳೆದುಕೊಂಡು, ಬೇರೆ ದಾರಿ ಕಾಣದೆ, ಆದಿನಾರಾಯಣಸ್ವಾಮಿಯ ಸಂಸಾರದಲ್ಲೇ ಒಬ್ಬರಾಗಿ ಇರತೊಡಗಿದರು. ಪಳನಿಸ್ವಾಮಿಯ ತಂದೆ-ತಾಯಿಯರಿಬ್ಬರೂ ಈಕೆಯನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು.

ಈಕೆ (ವೆಂಕಮ್ಮ ನಾಚ್ಚಿಯಾರ್) ರಾಮಾಯಣ, ಮಹಾಭಾರತ, ಭಾಗವತ, ಪುರಾಣ ಎಲ್ಲವನ್ನೂ ಬಲ್ಲವರಾಗಿದ್ದರು; ಭಕ್ತಿಯೊಂದಿಗೆ ಜ್ಞಾನವನ್ನು ಬೆಳೆಸಿಕೊಂಡಿದ್ದವರು.

ತಮ್ಮ ಮನೆತನಕ್ಕೆ ಬಂದಿದ್ದ ಶ್ರೀವೈಷ್ಣವ ಸಂಪ್ರದಾಯದ ಆಚಾರವಿಚಾರಗಳಲ್ಲಿ ತುಂಬ ಶ್ರದ್ಧೆಯನ್ನಿರಿಸಿಕೊಂಡು ನಿಷ್ಠರಾಗಿದ್ದವರು. ವಿಧವೆಯ ಧರ್ಮಗಳೆಂದು ಆಗಿನ ಕಾಲದಲ್ಲಿ ಏನನ್ನು ನಂಬಿದ್ದರೋ ಅವನ್ನೆಲ್ಲ ನಡೆಸಿಕೊಂಡಿದ್ದರು. ಬೇರೆಯವರು ಮಾಡಿದ ಅಡುಗೆಯನ್ನು ಮುಟ್ಟದೆ, ತಾವೇ ತಮ್ಮ ಅಡುಗೆಯನ್ನು, ಮನೆಯವರಿಗೆಲ್ಲ ಅಡಿಗೆಯನ್ನು ಮಾಡುತ್ತಿದ್ದರು. ಬಹುಕಾಲವನ್ನು ಪೂಜೆ, ಜಪ, ಸ್ತೋತ್ರಪಾರಾಯಣಗಳಲ್ಲೇ ಕಳೆಯುತ್ತಿದ್ದರು. ಮಡಿಯಂತೂ ಹೇಳತೀರದು. ಮುಂಜಾನೆಯೆ ಎದ್ದು, ಮಿಂದು ಆಹ್ನಿಕಗಳನ್ನು ಮುಗಿಸಿ ಅಡುಗೆಗೆ ತೊಡಗುವರು; ಎಲ್ಲರಿಗೂ ಬಡಿಸಿದ ಮೇಲೆಯೇ ತಮ್ಮ ಊಟ. ಊಟ ಮುಗಿಯುವವರೆಗೆ ಯಾರೂ ಅವರನ್ನು ಮುಟ್ಟುವಂತಿಲ್ಲ. ಅವರು ಊಟ ಮಾಡುತ್ತಿದ್ದುದು ಒಪ್ಪೊತ್ತೆ; ರಾತ್ರಿ ಊಟವಿಲ್ಲ, ಉಪಹಾರವೂ ಇಲ್ಲ. ಮಡಿಯಲ್ಲಲ್ಲದೆ ನೀರನ್ನೂ ಕುಡಿಯುತ್ತಿರಲಿಲ್ಲ.

ಆಕೆಯನ್ನು ಕಂಡರೆ ಮನೆಯವರಿಗೆಲ್ಲ ಗೌರವಬುದ್ಧಿ. ತನ್ನ ಸ್ವಂತಪ್ರಯೋಜನವನ್ನು ಒಂದಿಷ್ಟೂ ಎಣಿಸದೆ ಬೇರೆಯವರ ಹಿತಕ್ಕಾಗಿಯೆ ತನ್ನ ಬಾಳನ್ನು ಮುಡಿಪಿಟ್ಟ ದೊಡ್ಡ ಜೀವ ಅದು. ಆಕೆಗೆ ಮೊಮ್ಮಗ ಪಳನಿಸ್ವಾಮಿಯೆಂದರೆ ತುಂಬಾ ಪ್ರೀತಿ. ಅವನನ್ನು ಕೂರಿಸಿಕೊಂಡು ಧರ್ಮದ ಕತೆಗಳನ್ನೆಲ್ಲಾ ಹೇಳುವಳು; ನೀತಿಯ ಮರ್ಮವನ್ನು ತಿಳಿಸುವಳು. ಆದರೆ ಆಕೆಗೆ ಅಮಾವಾಸ್ಯೆಸ್ವಾಮಿ, ನಾಯಿಕುಟ್ಟಿಸ್ವಾಮಿಯರಂಥ ಸಾಧುಸಂತರನ್ನು ಕಂಡರೆ ಆಗದು; ನೀತಿಗೆಟ್ಟು, ಆಚಾರವಿಲ್ಲದೆ, ಸ್ವೇಚ್ಛೆಯಾಗಿ ವರ್ತಿಸುವ ಅವಧೂತರನ್ನು ನಂಬಬಾರದೆಂದು ಆಕೆ ಮತ್ತೆಮತ್ತೆ ಹೇಳುತ್ತಿದ್ದರು.

ಮೊಮ್ಮಗನ ಆಧ್ಯಾತ್ಮಿಕ ಪ್ರವೃತ್ತಿಯ ಪರಿಚಯ ಆಕೆಗಿದ್ದಿತು; ಅದನ್ನೇನು ಆಕೆ ವಿರೋಧಿಸಲಿಲ್ಲ, ಬದಲಾಗಿ, ಮೆಚ್ಚಿಕೊಂಡಿದ್ದರು. ಅವಧೂತ-ಬೈರಾಗಿಗಳ ಹಿಂದೆ ಹೋಗಬಾರದೆಂದು ಮಾತ್ರ ಸೂಚಿಸುತ್ತಿದ್ದರು. ಸನ್ಯಾಸಿಗಳಲ್ಲಿ ಬಹುಮಂದಿ ಠಕ್ಕರು ಎಂಬುದು ಆಕೆಯ ನಂಬಿಕೆಯಾಗಿದ್ದಿತು. ಕಾವಿ ಬಟ್ಟೆ ತೊಟ್ಟ ಮಾತ್ರಕ್ಕೆ ಒಳಗಿನ ಶುದ್ಧಿ ಒದಗಿತೆಂದು ಹೇಳಬಹುದೆ? ಈ ನಿಲುವಿನಿಂದ ಆಕೆ ಪಳನಿಸ್ವಾಮಿಗೆ "ನಿನ್ನ ಒಲವು ತ್ಯಾಗದ ಕಡೆ ಇದ್ದರೆ ಸನ್ಯಾಸಿಯೇ ಆಗು. ಆದರೆ ಕಾವಿ ಬಟ್ಟೆಯನ್ನು ಮಾತ್ರ

ತೊಡಬೇಡ; ತಲೆಯನ್ನು ಬೋಳಿಸಿಕೊಂಡು ವಿರಕ್ತನಂತೆ ನಾಟಕವಾಡಬೇಡ!" ಎಂದು ಹೇಳಿ, ಹಾಗೆ ಮಾಡುವುದಿಲ್ಲವೆಂಬ ಭಾಷೆಯನ್ನೂ ಅವನಿಂದ ಪಡೆದುಕೊಂಡರು. ಆದುದರಿಂದಲೆ ಮುಂದೆ ತಿರುಚಿಸ್ವಾಮಿಯಾಗಿ ಶಿವಪುರಿ-ಬಾಬಾ ಅವರಿಂದ ಸಂನ್ಯಾಸ ದೀಕ್ಷೆಯನ್ನು ಕೈಗೊಂಡಮೇಲೂ ಅವರು ತಲೆಗೂದಲನ್ನು ತೆಗೆಯಲಿಲ್ಲ, ಕಾವಿಬಟ್ಟೆ ಉಡಲಿಲ್ಲ. ಇಂದಿಗೂ ಅವರು ಬಿಳಿಬಟ್ಟೆಯ ಯತಿಗಳೇ.

ಅಂತೂ ವೆಂಕಮ್ಮಜ್ಜಿಯ ಪ್ರಭಾವದಿಂದ ಪಳನಿಸ್ವಾಮಿ ಅವಧೂತನಾಗಿ ಅಂಡಲೆಯುವುದು ತಪ್ಪಿತು; ಆಧ್ಯಾತ್ಮದ ಒಲವು ಉನ್ಮಾರ್ಗಕ್ಕೆ ತಿರುಗುವುದು ತಪ್ಪಿತು. ಸದಾಚಾರ ನಿಷ್ಠೆ, ನೀತಿ ಸಂಹಿತೆ, ಅಕೃತ್ರಿಮತೆ, ಔದಾರ್ಯ ಮೊದಲಾದ ಗುಣಗಳು ಅಜ್ಜಿಯ ಉಪದೇಶದಿಂದ ಮುಂದುವರಿದವು; ಸಂಪ್ರದಾಯದ ಜಾಡು ಬಿಡದೆ ನಿಲ್ಲಬೇಕೆಂಬ ಶ್ರದ್ಧೆಯೂ ಮೂಡಿಬಂದಿತು. ತಾಂತ್ರಿಕ ಪ್ರಕ್ರಿಯೆಗಳ ಪರಿಚಯ ಎಷ್ಟಿದ್ದರೂ ವೈದಿಕ ನೆಲೆಯಲ್ಲೇ ಉಳಿದುಕೊಳ್ಳುವ ಉತ್ಸಾಹವು ಅಜ್ಜಿಯ ಉಪದೇಶದಿಂದ ಬಂದದ್ದೇ. ಈಗಲೂ ತಿರುಚಿಸ್ವಾಮಿಗಳು ತಮ್ಮ ಅಜ್ಜಿಯನ್ನು ಕೃತಜ್ಞತೆಯಿಂದ ನೆನೆಸಿಕೊಳ್ಳುತ್ತಿರುತ್ತಾರೆ.

ಇದೇ ಸಮಯದಲ್ಲಿ ಇನ್ನೊಂದು ಪ್ರಭಾವವೂ ಒದಗಿಬಂದಿತು. ಪಳನಿಸ್ವಾಮಿ ಇದ್ದ ಊರಿನಲ್ಲೇ ಕಟ್ಟುವಾ-ಮಸ್ತಾನ್-ಸಾಹಿಬ್ ಎಂಬ ಕೆಲಸಗಾರನಿದ್ದ. ಚಾಪೆ ಹೆಣೆಯುವುದು ಅವನ ವೃತ್ತಿ. ಹಳ್ಳಿಯಹೊರಗೆ ಕೆರೆಯಬಳಿ ಬೆಳೆದ ಜೊಂಡು, ನೊದೆಹುಲ್ಲುಗಳನ್ನು ಕತ್ತರಿಸಿಕೊಂಡು ತರುವುದು, ಮನೆಯಲ್ಲಿ ಕೂತು ಚಾಪೆಗಳನ್ನೂ, ಮಂದಲಿಗೆಗಳನ್ನೂ ಹೆಣೆಯುವುದು, ಅವನ್ನು ಊರವರಿಗೂ, ನೆರೆಯೂರವರಿಗೂ ಮಾರುವುದು; ಇದು ಅವನ ಉದ್ಯೋಗ. ತೆಳ್ಳಗೆ, ಎತ್ತರವಾಗಿದ್ದ ಕಟ್ಟುವಾ-ಮಸ್ತಾನ್ ತಲೆಯಮೇಲೊಂದು ಪೇಟ, ಮೈಮೇಲೆ ಉದ್ದನೆಯ ನಿಲುವಂಗಿ ಧರಿಸಿ ಸಾಮಾನ್ಯ ಮನುಷ್ಯನಂತೆಯೇ ಕಾಣುತ್ತಿದ್ದರೂ ಬೂದಿಮುಚ್ಚಿದ ಕೆಂಡ; ಅಂತರಂಗದಲ್ಲಿ ಸಂತ. ಪ್ರಾಮಾಣಿಕನಾದ ಮನುಷ್ಯ, ಸರಳ ಜೀವಿ, ಸಭ್ಯ ಎಂದು ಜನರೆಲ್ಲ ಬಲ್ಲರು; ಆದರೆ ಅವನಿಗೆ ಹಿಂದೂ, ಮುಸಲ್ಮಾನ ಧರ್ಮ ಗ್ರಂಥಗಳ ವಿಶೇಷ ಪರಿಚಯವಿದ್ದುದಾಗಲೀ,

ಆಧ್ಯಾತ್ಮಿಕ ಪ್ರವೃತ್ತಿ ಇದ್ದುದಾಗಲೀ ಬಹುಜನರಿಗೆ ತಿಳಿದಿರಲಿಲ್ಲ. ಅವನೊಬ್ಬ ವಿಲಕ್ಷಣ ವ್ಯಕ್ತಿಯೆಂದೇನೋ ಪ್ರಸಿದ್ಧಿ ಇದ್ದಿತು.

ಜನರು ಕೇಳಿದ್ದ ಒಂದು ಕತೆ. ಎಂದಿನಂತೆ ಕಟ್ಟುವಾ-ಮಸ್ತಾನ್ ಒಂದು ದಿನ ಬೆಳಿಗ್ಗೆ ಎದ್ದು ಚಾಪೆಗೆ ಬೇಕಾದ ಜೊಂಡುಹುಲ್ಲನ್ನು ತರಲು ಊರ ಹೊರಗಿನ ಕೆರೆಗೆ ಹೋದ. ಜೊಂಡನ್ನೆಲ್ಲ ಕತ್ತರಿಸಿ ಕಟ್ಟಿ ಹೊರೆ ಮಾಡುವ ವೇಳೆಗೆ ಸಂಜೆಯಾಯಿತು. ಅಷ್ಟು ಹೊತ್ತು ಅವನು ಸಾಮಾನ್ಯವಾಗಿ ಕೆರೆಯ ಬಳಿ ಇರುತ್ತಿರಲಿಲ್ಲ; ನಿರ್ಜನವಾದ ಪ್ರದೇಶ ಅದು; ನೆರೆಯಲ್ಲಿಯೇ ಕಾಡುಬೇರೆ. ಬೇಗ ಹೊರಟು ಮನೆ ಸೇರಿಕೊಳ್ಳುವೆನೆಂದು, ಜೊಂಡುಹುಲ್ಲ ಹೊರೆಯನ್ನು ಎತ್ತಿಕೊಳ್ಳುತ್ತಿರುವಷ್ಟರಲ್ಲೇ ಪಕ್ಕದ ಪೊದೆಯಿಂದ ಹುಲಿಯೊಂದು ಹೊರಬಂದಿತು. ಕಟ್ಟುವಾ-ಮಸ್ತಾನನಿಗೆ ಭಯವಾಯಿತು. ಆದರೂ ಗುಂಡಿಗೆಯನ್ನು ಗಟ್ಟಿಮಾಡಿಕೊಂಡು, ಹುಲಿಯತ್ತ ತಿರುಗಿ ಕೈಮುಗಿದು "ಅಯ್ಯಾ ಹುಲಿರಾಯ; ನಿನಗೆ ಹಸಿವಾಗಿರುವುದು ನನಗೆ ತಿಳಿದಿದೆ. ನನ್ನನ್ನು ನೀನು ತಿನ್ನುವುದಕ್ಕೆ ನನ್ನ ಅಡ್ಡಿಯೇನಿಲ್ಲ. ಆದರೆ ನಾನು ಸಂಜೆಯ ಪ್ರಾರ್ಥನೆಯನ್ನು ಸಲ್ಲಿಸಬೇಕಾಗಿದೆ; ಅದು ನನ್ನ ಧರ್ಮದಲ್ಲಿನ ಕರ್ತವ್ಯ. ಅದನ್ನು ಮುಗಿಸುವಷ್ಟು ಕಾಲ ಅವಕಾಶಕೊಡು. ಪ್ರಾರ್ಥನೆ ಮುಗಿದೊಡನೆ ನನ್ನನ್ನು ನಿನಗೆ ಒಪ್ಪಿಸಿಕೊಳ್ಳುತ್ತೇನೆ" ಎಂದು ಹೇಳಿ ಅದರ ಉತ್ತರಕ್ಕೆ ಕಾಯದೆ, ಹೊದ್ದಿದ್ದ ವಸ್ತ್ರವನ್ನು ನೆಲದ ಮೇಲೆ ಹಾಸಿ, ಮಂಡಿಯೂರಿ ಕುಳಿತು ಕಣ್ಣುಮುಚ್ಚಿ ಪ್ರಾರ್ಥನೆಯನ್ನು ಆರಂಭಿಸಿಯೇಬಿಟ್ಟ! ಹುಲಿಗೆ ಈ ವರ್ತನೆಯನ್ನೆಲ್ಲಾ ನೋಡಿ ದಿಗ್ಭ್ರಮೆಯಾಗಿರಬೇಕು; ಸ್ವಲ್ಪ ದಿಗಿಲೂ ಆಗಿರಬೇಕು. ಮೆತ್ತಗೆ ಅಲ್ಲಿಂದ ಹೊರಟೇಹೋಯಿತು. ಮಸ್ತಾನ್ ಪ್ರಾರ್ಥನೆ ಮುಗಿಸಿ ಕಣ್ಣುಬಿಟ್ಟು ನೋಡುತ್ತಾನೆ; ಹುಲಿಮಾಯವಾಗಿದೆ! ಆಗ ನಿಶ್ಚಿಂತೆಯಿಂದ ಹುಲ್ಲಿನ ಹೊರೆ ಎತ್ತಿಕೊಂಡು ಊರಿಗೆ ಹಿಂತಿರುಗಿದ.

ದಿಟವಾಗಿ ಇವನೊಬ್ಬ ಸಂತನೇ ಎಂದು ಪಳನಿಸ್ವಾಮಿ ಕಂಡುಕೊಂಡುದೇನು ಅಚ್ಚರಿಯಲ್ಲ. ಹಲವಾರು ಬಾರಿ ಹದಿನೇಳುವರ್ಷ ವಯಸ್ಸಿನ ಪಳನಿಸ್ವಾಮಿ ಅರವತ್ತೈದುವರ್ಷ ವಯಸ್ಸಿನ ಕಟ್ಟುವಾ-ಮಸ್ತಾನ್ ಕಲೆತು ಮಾತನಾಡುತ್ತ ಕುಳಿತಿರುತ್ತಿದ್ದರು. ಮಸ್ತಾನ್ ಅವನಿಗೆ ಕೊರಾನಿನ, ಹಿಂದೂ ಧರ್ಮಗ್ರಂಥಗಳ ಅನೇಕ

ರಹಸ್ಯಗಳನ್ನು ತಿಳಿಯ ಹೇಳಿದನು. ಅವರು ಭೇಟಿಮಾಡಿದ ಮೊದಲದಿನವೇ "ನೀನು ದೇವರನ್ನು ನೋಡಿದ್ದೀಯಾ?" ಎಂದು ಪಳನಿಸ್ವಾಮಿ ಕೇಳಿದ ಪ್ರಶ್ನೆಗೆ ಮಸ್ತಾನ್ ಯಾವೊಂದು ಆಳಕೂ ಇಲ್ಲದೆ "ಓಹೋ, ನೋಡಿದ್ದೇನೆ!" ಎಂದು ಹೇಳಿದುದಲ್ಲದೆ" ನೀನೂ ನೋಡಬಹುದು, ಹೇಗೆಂದು ನಾನು ಹೇಳಿಕೊಡುತ್ತೇನೆ" ಎಂಬ ಭರವಸೆಯನ್ನೂ ನೀಡಿದನಂತೆ.

ಕಟ್ಟುವಾ-ಮಸ್ತಾನ್ ಫಕೀರನೇನಲ್ಲ; ಸಂಸಾರವೊಂದಿಗ. ಅವನಿದ್ದುದು ಒಂದು ಗುಡಿಸಲಲ್ಲಿ. ಅಲ್ಲೊಂದು ಧುನಿ; ಸಾಮ್ರಾಣಿ ಹೊಗೆಯ ಎಡೆ. ಅದರ ಪಕ್ಕದಲ್ಲೇ ಇವನು ಕುಳಿತು ಧ್ಯಾನಮಗ್ನನಾಗಿರುತ್ತಿದ್ದ; ಇವನ ಹತ್ತಿರದಲ್ಲೇ ಮುಸಲ್ಮಾನರ ಮಂದಿರಗಳಲ್ಲಿರುವಂತೆ ನವಿಲುಗರಿಯ ಕುಚ್ಚು. ದಿನದಲ್ಲಿ ಮಾಡಬೇಕಾದ ಐದು ನಮಾಜುಗಳನ್ನು ಮಾಡುತ್ತಿದ್ದುದು ಇಲ್ಲಿಯೇ. ನಮಾಜನ್ನು ಮಾಡಿದಮೇಲೆ ಒಂದು ಲೋಟ ಹಾಲನ್ನು ಕುಡಿಯುವನು. ಅದನ್ನು ಬಿಟ್ಟು ಅವನ ಆಹಾರ ತೀರ ಕಡಿಮೆಯೇ; ಹಣ್ಣುಹಂಪಲು. ಆಗಾಗ ಪದನೀ ಅಥವಾ ನೀರಾ ಎಂಬ ಪಾನಕವನ್ನು ಕುಡಿಯುತ್ತಿದ್ದನು, ತಾಳೆಮರದ ರಸ ಇದು.

ಪಳನಿಸ್ವಾಮಿ ಅವನ ಮನೆಗೆ ಹೋಗುತ್ತಿದ್ದುದುಂಟು. ಆಗ ಮಸ್ತಾನ್ ಬಂದ ಅತಿಥಿಗೆ ಬೆಲ್ಲದ ಪಾನಕವನ್ನು ಕೊಡುತ್ತಿದ್ದನು. ಪಳನಿಸ್ವಾಮಿಯೂ ಯಾವೊಂದು ಸಂಕೋಚವೂ ಇಲ್ಲದೆ ಕುಡಿಯುವನು. ಬಹು ಹೊತ್ತಿನವರೆಗೆ ಮಾತುಕತೆ ನಡೆಯುವುದು. ಉತ್ತಮಕುಲದ ಹುಡುಗನೊಬ್ಬನು ಮುಸಲ್ಮಾನರ ಮನೆಗೆ ಹೋಗಿಬರುವುದು ಹುಡುಗನ ಮನೆಯವರಿಗೆ ಹಿಡಿಸದೆ ಹೋದುದು ಸಹಜವೇ. ಅಲ್ಲಿಗೆ ಹೋಗಬಾರದೆಂದು ಕಟ್ಟುಮಾಡಿದರಾದರೂ ಅದೇನು ಫಲಕಾರಿಯಾಗಲಿಲ್ಲ. ಆದರೆ ಬಹುವೇಳೆ ಅವರು ಹೊರಗೇ, ಊರ ನಡುವೆಯಿದ್ದ ಆಲದ ಮರದ ಕೆಳಗೆ ಕುಳಿತು ಮಾತನಾಡುವರು; ಗಂಟೆಗಟ್ಟಳೆ ಮಾತು.

ಹೀಗೆ ಕುಳಿತು ಮಾತನಾಡುತ್ತಿರುವಾ ಒಮ್ಮೆ ಮಸ್ತಾನ್ ಇದ್ದಕ್ಕಿದ್ದಂತೆ ಪಳನಿಸ್ವಾಮಿಯ ಬೆನ್ನಿನ ಮೇರುದಂಡದ ಅಡಿಭಾಗವನ್ನು ತನ್ನ ಕೈಬೆರಳುಗಳಿಂದ ಒತ್ತಿ

ಹಿಡಿದನಂತೆ. ಪಳನಿಸ್ವಾಮಿಗೆ ಒಡನೆಯೇ ದೊಡ್ಡ ಬೆಳಕೊಂದು ಕಾಣಿಸಿಕೊಂಡು ಪ್ರಜ್ಞೆ ತಪ್ಪಿತಂತೆ. ಹತ್ತು ನಿಮಿಷಗಳ ಕಾಲ ಹೀಗೆ ಕಳೆದಮೇಲೆ, ಪ್ರಜ್ಞೆ ಮರಳಿತು. ಮಸ್ತಾನ್ ಈ ಅನುಭವವನ್ನು ವಿವರಿಸಿ ಹೇಳಿ ಅದು ಕುಂಡಲಿನಿಯು ಜಾಗ್ರತವಾದುದರ ಕುರುಹು ಎಂದು ಸ್ಪಷ್ಟಪಡಿಸಿದನು. ಮಸ್ತಾನನು ಒತ್ತಿ ಹಿಡಿದ ಸ್ಥಳದಲ್ಲಿ ಈಗಲೂ ಸಣ್ಣದೊಂದು ತಗ್ಗು ಇರುವುದನ್ನು ತಿರುಚಿಸ್ವಾಮಿಗಳು ತೋರಿಸಿದರು.

ಕಟ್ಟುವಾ-ಮಸ್ತಾನ್ ಪಳನಿಸ್ವಾಮಿಗೆ ಮತ್ತೆಮತ್ತೆ ಹೇಳುತ್ತಿದ್ದನಂತೆ - "ಲೋಕದ ಭೋಗವೆಲ್ಲ ನಶ್ವರ; ಅದನ್ನು ನಂಬಬಾರದು, ಬಯಸಬಾರದು. ಇಲ್ಲಿಂದ ನೀನು ಸಾಧ್ಯವಾದಷ್ಟು ಬೇಗ ಹೊರಡಬೇಕು ನಿನ್ನ ಗುರು ನಿನಗಾಗಿ ಕಾಯುತ್ತಿದ್ದಾನೆ" ಎಂದು. ಇದರಿಂದ ಪ್ರಭಾವಿತನಾದ ಪಳನಿಸ್ವಾಮಿ ಒಮ್ಮೆ ಮನೆಬಿಟ್ಟು ಹೊರಟುಹೋಗಲು ಹವಣಿಸಿದರು. ಪಳನಿಸ್ವಾಮಿ ಹಳ್ಳಿಯನ್ನು(ವಿಕ್ರಮಸಿಂಹಪುರವನ್ನು) ಬಿಟ್ಟು ಹೊರಟು ಹೋದಮೇಲೆ ಯಾರೋ ಮಸ್ತಾನನ ಬಳಿಬಂದು ಸುದ್ದಿ ಹೇಳಿದಾಗ, "ನನಗೆ ತಿಳಿದಿತ್ತು, ಇಲ್ಲಿರುವ ಆಸಾಮಿಯಲ್ಲ ಅವನು!" ಎಂದುತ್ತರವಿತ್ತನಂತೆ. ಪಳನಿಸ್ವಾಮಿ ಹೊರಟುಹೋದ ಸ್ವಲ್ಪ ಕಾಲದ ಮೇಲೆ ಮಸ್ತಾನ್-ಸಾಹೇಬನು ತೀರಿಕೊಂಡನು. ಅವನ ಸಮಾಧಿಯನ್ನು ಪಾಪನಾಶದಲ್ಲಿ ಆರ್.ವಿ. ಮಿಲ್ಸ್ ಆವರಣದ ಪಕ್ಕದಲ್ಲಿ ಕಾಣಬಹುದು.

ಅಲೆದಾಟ ಆರಂಭ

ವಿಕ್ರಮಸಿಂಹಪುರವನ್ನು ಬಿಟ್ಟು ಪಳನಿಸ್ವಾಮಿ ಪಕ್ಕದ ಹಳ್ಳಿಗಳಲ್ಲಿ ಅಲೆದಾಡತೊಡಗಿದನು; ಗುರುವಿನ ಸುಳಿವು ಎಲ್ಲಿಯಾದರೂ ದೊರಕುವುದೋ ಎಂದು. ತಿರುಚೆಂದೂರಿನ ಸುತ್ತಮುತ್ತ ಸಣ್ಣಸಣ್ಣ ಹಳ್ಳಿಗಳಲ್ಲಿ ಇರುವಾಗ ಅವನನ್ನು ಹಿಂದೂಗಳೂ, ಮುಸಲ್ಮಾನರೂ ತಂತಮ್ಮ ಮನೆಗಳಿಗೆ ಕರೆದೊಯ್ಯುತ್ತಿದ್ದರು. ಮುಸಲ್ಮಾನರ ಮನೆಗಳಲ್ಲಿ ಅಕ್ಕಿ, ರೊಟ್ಟಿ, ಹಾಲು ಇವನ್ನು ಸ್ವೀಕರಿಸುತ್ತಿದ್ದನು. ಆ ಪ್ರದೇಶದಲ್ಲಿ ಮುಸಲ್ಮಾನರ ಜನಸಂಖ್ಯೆ ಸುಮಾರಾಗಿ ದೊಡ್ಡದು. ಅದರಲ್ಲೂ ಮೇಲ್-ಅತ್ತೂರು, ಕೀಳ್-ಅತ್ತೂರು, ಪಾಳಯಂಕೋಟ್ಟೆ, ಕಾಯಲ್‌ಪಟ್ಟಣಂ ಈ ಊರುಗಳಲ್ಲಿ ಬಹುಸಂಖ್ಯೆಯಲ್ಲಿರುತ್ತಿದ್ದರು. ಅವರಲ್ಲಿ ಹಲವರು ಶ್ರೀಮಂತರು, ಶ್ರದ್ಧಾಳುಗಳು ಪಳನಿಸ್ವಾಮಿಯನ್ನು ಕಂಡರೆ ಅವರಿಗೆಲ್ಲ ಪ್ರೀತಿ; ತಂತಮ್ಮ ಮನೆಗಳಿಗೆ ಕರೆದೊಯ್ಯುವರು. ಪಳನಿಸ್ವಾಮಿಯೂ ಏನೊಂದು ಮುಜಗರವಿರದೆ ಹೋಗುವನು.

ಇರಾಲ್ ಎಂಬೂರಿನಲ್ಲಿ ಹೀಗೆಯೆ ಮುಸಲ್ಮಾನ ವರ್ತಕನೊಬ್ಬನ ಮನೆಯಲ್ಲಿ ಪಳನಿಸ್ವಾಮಿಯು ತಂಗಿದ್ದಾಗ ಅದ್ಭುತವೆನಿಸುವ ಪ್ರಸಂಗವೊಂದು ನಡೆಯಿತು. ಮನೆಯ ಯಜಮಾನ ಶ್ರೀಮಂತ; ಸಾಧುಸಂತರೆಂದರೆ ಆದರ ಉಳ್ಳವನು. ಆ ಊರಿಗೆ ಬಂದ ಪಳನಿಸ್ವಾಮಿಯನ್ನು ಕಂಡವನು ತನ್ನ ಮನೆಗೆ ಕರೆದೊಯ್ದು ಉಪಚರಿಸಿದ. ಮರುದಿನವೇ ಯಾವುದೋ ರೋಗಕ್ಕೆ ತುತ್ತಾಗಿ ಪ್ರಜ್ಞೆಯಿಲ್ಲದೆ ಹನ್ನೊಂದು ದಿನಗಳು ಸಂದುವು. ವೈದ್ಯರು ಬಂದರು, ಪರೀಕ್ಷೆ ಮಾಡಿದರು; ರೋಗ ಏನೆಂಬುದು ತಿಳಿಯಲಿಲ್ಲ; ಮದ್ದು ಮಾಡಿದರು, ಗುಣವಾಗಲಿಲ್ಲ. ಮನೆಯವರೆಲ್ಲ ಆತಂಕಗೊಂಡರು.

ಮನೆಯಲ್ಲಿರುತ್ತಿದ್ದ ಪಳನಿಸ್ವಾಮಿಯೂ ಚಿಂತೆಯಿಂದ ಹೊರಗೆ ಅಡ್ಡಾಡಿಕೊಂಡುಬರಲು ಹೊರಟ; ಏನು ಮಾಡುವುದೆಂದು ಅವನಿಗೆ ತಿಳಿಯಲಿಲ್ಲ. ಹೊರಗೆ ಸ್ವಲ್ಪ ದೂರ ಹೋಗುವಷ್ಟರಲ್ಲಿ ಹೆಣ್ಣುಮಗಳೊಬ್ಬಳು ಇವನನ್ನು ಕಂಡು, ಇವನ ಬಳಿ ಬಂದು, ಯಾವುದೋ ಗಿಡದ ಹೆಸರನ್ನು ಹೇಳಿ, ಆ ಗಿಡದ ಎಲೆಗಳನ್ನು ಹಿಂಡಿ ರಸವನ್ನು ರೋಗಿಯ ಬಾಯಿಗೆ ಹಾಕೆಂದು ಸೂಚಿಸಿ ಹೊರಟುಹೋದಳು. ಅವಳು ಯಾರೆಂಬುದಾಗಲಿ, ಎಲ್ಲಿಗೆ ಹೋದಳೆಂಬುದಾಗಲಿ ಪಳನಿಸ್ವಾಮಿಗೆ ತಿಳಿಯದು.

ಅವಳು ಹೇಳಿದ ಗಿಡವೂ ಅಲ್ಲಿಯೇ ಇದ್ದಿತು. ಪಳನಿಸ್ವಾಮಿಯು ಆ ಗಿಡದ ಕೆಲವು ಎಲೆಗಳನ್ನು ಕಿತ್ತುಕೊಂಡು ಮುಸಲ್ಮಾನ ವರ್ತಕನ ಮನೆಗೆ ಹಿಂದಿರುಗಿದ. ಅಲ್ಲಿ ಎಲೆಗಳನ್ನು ಜಜ್ಜಿ ರಸವನ್ನು ಹಿಂಡಿ ಒಂದು ಚಮಚದಲ್ಲಿ ಹಾಕಿ, ಅರಿವಿಲ್ಲದೆ ಮಲಗಿದ್ದ ವರ್ತಕನ ಬಾಯನ್ನು ಬಲವಂತವಾಗಿ ತೆರೆದು ಅದರೊಳಗೆ ರಸವನ್ನು ಕುಡಿಸಿದ. ಬಾಯಲ್ಲಿ ಮಂತ್ರವೊಂದನ್ನು ಮಣಗುಟ್ಟಿ, ಸ್ವಲ್ಪ ವಿಭೂತಿಯನ್ನು ರೋಗಿಯ ಹಣೆಗೆ ಹಚ್ಚಿದ. ಒಂದೆರಡು ನಿಮಿಷಗಳಲ್ಲೆ ರೋಗಿ ಕಣ್ತೆರೆದು ನೋಡಿ, ನೆರೆದವರನ್ನು ಗುರುತಿಸಿದ; ಎದ್ದು ಕುಳಿತುಕೊಳ್ಳುವುದೂ ಆಯಿತು. ಕಾಲಕ್ರಮೇಣ ಗುಣಮುಖನಾದ.

ಇದು ಮನೆಯವರಿಗೂ ಸುತ್ತಮುತ್ತಲವರಿಗೂ ಪವಾಡವೆಂದೇ ಕಾಣಿಸಿತು. ವರ್ತಕನಿಗೂ ಅವನ ಮನೆಯವರಿಗೂ ಪಳನಿಸ್ವಾಮಿಯ ಮೇಲೆ ವಿಶೇಷವಾದ ಭಕ್ತಿ ಒದಗಿಬಂದಿತು. ಆ ಕಡೆಯೆಲ್ಲ ಪಳನಿಸ್ವಾಮಿಯ ಸಿದ್ಧಿಯ ಮಾತು ಹರಡಿಕೊಂಡಿತು. ಪಳನಿಸ್ವಾಮಿಯ ನೆರವಿಂದ ಗುಣಗೊಂಡ ವರ್ತಕನಿಗೆ ಶ್ರೀಲಂಕದಲ್ಲಿ ವ್ಯಾಪಾರದ ಸಂಬಂಧವಿದ್ದಿತು. ಶ್ರೀಲಂಕದ ಮುಖ್ಯ ಪಟ್ಟಣಗಳಲ್ಲೊಂದಾದ ಕಂಡಿಯಲ್ಲಿ ಅವನದ್ದೊಂದು ಚಾ ಅಂಗಡಿಯಿದ್ದಿತು; ವ್ಯಾಪಾರದ ಮಳಿಗೆಯೂ ಇದ್ದಿತು. ಇಲ್ಲಿಂದ ಅಲ್ಲಿಗೆ ಹೋಗಿಬರುತ್ತಲೇ ಇದ್ದನು. ಆ ವರ್ಷ ಅವನು ಶ್ರೀಲಂಕಕ್ಕೆ ಹೊರಟಾಗ ಪಳನಿಸ್ವಾಮಿಯನ್ನು ಜೊತೆಗೆ ಕರೆದೊಯ್ದನು. ಅಲ್ಲಿಗೆ ಪಳನಿಸ್ವಾಮಿಯನ್ನು ಕರೆದೊಯ್ದುದರ ಸಂದರ್ಭವನ್ನು ಸ್ವಲ್ಪ ವಿವರಿಸಬೇಕು.

ಅರಬಿ ದೇಶದಲ್ಲಿ ಮೊದಲಾದ ಇಸ್ಲಾಂ ಧರ್ಮವು ನಮ್ಮ ದೇಶಕ್ಕೆ ಬಂದುದು ಕ್ರಿಸ್ತಾಬ್ದ 969ರ ಸುಮಾರಿನಲ್ಲಿ; ಮುಂದೆ ಐವತ್ತು-ಅರವತ್ತು ವರ್ಷಗಳಲ್ಲಿ ಅದು ಇಲ್ಲಿ ಬೇರೂರಿತು. ಮುಂದೆ ಕೆಲವಾರು ಶತಕಗಳಲ್ಲಿ ದಕ್ಷಿಣದೇಶಕ್ಕೂ ಈ ಧರ್ಮ ಕಾಲಿಟ್ಟಿತು.

ಮುಸಲ್ಮಾನ ಧರ್ಮೀಯರ ಸಂಖ್ಯೆ ಈಕಡೆ ಸುಮಾರಾಗಿದ್ದುದು ತಮಿಳುನಾಡಿನಲ್ಲಿಯೆ. ತಮಿಳುನಾಡಿನ ಮುಸಲ್ಮಾನರು ವ್ಯಾಪಾರ, ಉದ್ಯಮ, ಕೂಲಿನಾಲಿ ಕಾರಣಗಳಿಂದ ಶ್ರೀಲಂಕಕ್ಕೆ ಹೋಗಿಬರುತ್ತಿದ್ದವರು ಅಲ್ಲಿ ಇಸ್ಲಾಂಧರ್ಮ ನೆಲೆಗೊಳ್ಳಲು ಕಾರಣರಾದರು. ಇಲ್ಲಿನ ತಮಿಳು ಮುಸಲ್ಮಾನರಿಗೂ ಶ್ರೀಲಂಕದ ಮುಸಲ್ಮಾನರಿಗೂ ನಂಟು ವಿಶೇಷವಾಗಿಯೇ ಇದ್ದುದು ಈ ನಿಮಿತ್ತದಿಂದ. ಶ್ರೀಲಂಕದ ಹಲವು ಮುಸಲ್ಮಾನ ಕುಟುಂಬಗಳು ಭಾರತ ಮೂಲದವೇ. ಹೀಗೆ ಶ್ರೀಲಂಕದ ಕಂಡಿಯಲ್ಲಿಯೂ ವಸತಿ, ಅಂಗಡಿ, ತೋಟ ಇದ್ದುವು. ವರ್ಷದ ಕೆಲವು ತಿಂಗಳುಗಳನ್ನು ಅವನು ಕಂಡಿಯಲ್ಲಿ ಕಳೆಯುತ್ತಿದ್ದನು.

ಕಂಡಿಯ ಹತ್ತಿರ ಇರುವ ಬೆಟ್ಟವೊಂದು ಹಿಂದುಗಳಿಗೂ ಮುಸಲ್ಮಾನರಿಗೂ ಬೌದ್ಧರಿಗೂ ಸಮಾನವಾಗಿಯೇ ಪವಿತ್ರವೆನಿಸಿದ್ದಿತು. ಹಿಂದುಗಳು ಅದನ್ನು ಶಿವನಡಿಪಾದವೆಂದು ಕರೆಯುತ್ತಾರೆ; ಅದಾಮನ ಶಿಖರವೆಂಬುದು ಇದರ ಇನ್ನೊಂದು ಹೆಸರು. ಬೆಟ್ಟದ ಮೇಲೆ ಕಲ್ಲಿನದೊಂದು ಪಾದವಿದೆ. ಇದು ಶಿವನ ಪಾದವೆಂದು ಹಿಂದುಗಳು, ಬುದ್ಧನು ಈ ದ್ವೀಪಕ್ಕೆ ಬಂದುದರ ಕುರುಹೆಂದು ಬೌದ್ಧರು, ಮೊದಲ ಮನುಷ್ಯನಾದ ಆದಾಮನು ಭೂಮಿಗೆ ಬಿದ್ದುದು ಇಲ್ಲಿಯೇ ಎಂದು ಇತರರು ನಂಬುತ್ತಾರೆ. ಪಳನಿಸ್ವಾಮಿಯು ಶಿವನಡಿಪಾದವನ್ನು ಸಂದರ್ಶಿಸಲೆಂದು ಮುಸಲ್ಮಾನ ವರ್ತಕನು ಅವನನ್ನು ತನ್ನೊಂದಿಗೆ ಕರೆದುತಂದಿದ್ದನು.

ಶ್ರೀಲಂಕದ ಬೌದ್ಧರು ಗೌತಮಬುದ್ಧನು ತನ್ನ ಜೀವಿತ ಕಾಲದಲ್ಲಿ ಶ್ರೀಲಂಕ ದ್ವೀಪಕ್ಕೆ ಮೂರು ಬಾರಿ ಬಂದಿದ್ದನೆಂದೂ, ಒಮ್ಮೆ ಈ ಬೆಟ್ಟವನ್ನು ಹತ್ತಿದನೆಂದೂ ನಂಬುತ್ತಾರೆ. ಇದರ ಸ್ಮಾರಕವಾಗಿ ಈ ಪಾದದ ಗುರುತನ್ನು ಬಿಟ್ಟುಹೋದನಂತೆ; ಹಾಗಾಗಿ ಬೌದ್ಧರಿಗೆಲ್ಲ ಅದು ಪವಿತ್ರವೆನಿಸಿದ ತಾಣ. ಹಿಂದುಗಳ ಪ್ರಕಾರ ಈ ದ್ವೀಪದ ಒಡೆಯ ಶಿವನೇ; ಸಾಮಾನ್ಯವಾಗಿ ಎಲ್ಲೆಲ್ಲೂ ಇರುವಂತೆ ಬೆಟ್ಟದ ನೆತ್ತಿಯ ಮೇಲೇ ಅವನ ವಸತಿ. ಒಂದೇ ಪಾದವು ಅಲ್ಲಿರುವುದರಿಂದ ಅದು ಅದ್ವೈತವನ್ನು ಸೂಚಿಸುತ್ತದೆಯೆಂದೂ ಒಕ್ಕಣೆಯಿದೆ. ಬೌದ್ಧಧರ್ಮವು ಶ್ರೀಲಂಕ ದ್ವೀಪಕ್ಕೆ ಬಂದುದು ಅಶೋಕ ಮೌರ್ಯನ ಕಾಲದಲ್ಲೆಂದು ಪ್ರತೀತಿ. ಇದು ಕ್ರಿಸ್ತಾಬ್ದಕ್ಕೆ ಕೆಲವು ಶತಮಾನಗಳ

ಮುಂಚೆ. ಹಿಂದೂ ಧರ್ಮವು ಅದಕ್ಕಿಂತಲೂ ಮೊದಲೇ ಅಲ್ಲಿದ್ದಿರಬೇಕು. ತಮಿಳು ಸಂಸ್ಕೃತಿಗೂ ಶ್ರೀಲಂಕೆಯ ಜನರಿಗೂ ನಿಕಟವಾದ ಸಂಪರ್ಕವಿರುವುದರಿಂದ ಶೈವಾಗಮವು ಅಲ್ಲಿ ಹರಡಿಕೊಂಡಿತು. ಪ್ರಾಚೀನ ಕಾಲದಿಂದ ಶ್ರೀಲಂಕೆಯು ಭಾರತ ಭೂಭಾಗಕ್ಕೇ ಸೇರಿದ ಒಂದು ದ್ವೀಪವಷ್ಟೆ. ರಾಜಕಾರಣಿಗಳ ಕೈವಾಡದಿಂದ ಅದು ಪ್ರತ್ಯೇಕ ರಾಷ್ಟ್ರವಾಯಿತಷ್ಟೆ. ಬ್ರಿಟನ್ನಿನ ಆಡಳಿತ ಧೋರಣೆಯೇ ರಾಷ್ಟ್ರವನ್ನು ತುಣುಕುಗಳಾಗಿ ಒಡೆದು ಆಳುವುದು.

ಪಳನಿಸ್ವಾಮಿಯನ್ನು ಯಾವ ಬೆಟ್ಟವನ್ನು ನೋಡಲೆಂದು ಮುಸಲ್ಮಾನ ವರ್ತಕನು ಕರೆದೊಯ್ದನೋ ಅದು ಸೆಮಿಟಿಕ್ ಸಂಪ್ರದಾಯದಲ್ಲೂ ವಿಶಿಷ್ಟವಾಗಿ ಬರುತ್ತದೆ. ಅವರ ಸೃಷ್ಟಿಯ ಕಲ್ಪನೆಯಲ್ಲಿ ಮನುಷ್ಯ ಸಂಕುಲದ ಮೂಲಪುರುಷ ಆದಾಂ. ಅವನು ಈವ್ ಎಂಬ ಸ್ತ್ರೀಯಿಂದಾಗಿ ಪಾಪವನ್ನೆಸಗಿದಾಗ ಅವನನ್ನು ಸ್ವರ್ಗದಿಂದ ಹೊರದೂಡಿದರು. ಅವರ ಸ್ವರ್ಗವೆಂದರೆ 'ಗಾರ್ಡನ್ ಆಫ್ ಈಡನ್'. ಸ್ವರ್ಗದಿಂದ ಭೂಮಿಯ ಮೇಲೆ ಬಿದ್ದದ್ದು ಶ್ರೀಲಂಕದಲ್ಲಿಯೇ (ಮೊದಲಿಗೆ ಇದು ಸಿಲೋನ್, ಸಿಂಹಳ ಎನಿಸಿಕೊಳ್ಳುತ್ತಿದ್ದಿತು); ಶ್ರೀಲಂಕದ ಈ ಬೆಟ್ಟದ ಮೇಲೆಯೇ. ಹೀಗಾಗಿ ಇದು 'ಆದಾಮನ ಶಿಖರ' (ಆಡಾಮ್ಸ್ ಪೀಕ್) ಎಂದಾಗಿದೆ. ಭೂಮಿಯ ಮೇಲೆ ಬೀಳುವಾಗ ಅವನು ಪಾಪಕ್ಕೆ ಪ್ರೇರೇಪಿಸಿದ ಈವಳನ್ನು ಸ್ವರ್ಗದಿಂದ ಹೊರದೂಡಲಾಯಿತು. ಅವಳು ಬಿದ್ದದ್ದು ಜಿಡ್ಡಾದಲ್ಲಿ.

ಹಿಬ್ರೂ ಜನರ ಕತೆಯಲ್ಲಿ ದೇವದೇವನಾದ ಯಹ್ವೆಯು ಆದಾಮನನ್ನು ಮಣ್ಣಿನಿಂದ ಮಾಡಿ ಜೀವ ತುಂಬಿದನು. ಆದಾಮನೇ ಮೊದಲ ಮನುಷ್ಯ. ಭೂಮಿಯ ಮೇಲಿರುವ ಎಲ್ಲ ಮನುಷ್ಯರಿಗೂ ಆದಾಮನಿಗೂ ನಿಕಟ ಸಂಬಂಧವಿದೆ. ಈ ನಂಬಿಕೆ ಯೆಹೂದಿಗಳಲ್ಲೂ, ಕ್ರೈಸ್ತರಲ್ಲೂ, ಮುಸಲ್ಮಾನರಲ್ಲೂ ಸಮಾನವಾಗಿಯೇ ಇದೆ. ಮುಸಲ್ಮಾನರೂ ಆದಾಮನನ್ನು ದೇವ ಪ್ರೇಷಿತರಾದ ಪ್ರವಾದಿಗಳಲ್ಲಿ ಒಬ್ಬನೆಂದು ಎಣಿಸುತ್ತಾರೆ. ಅವನೇ ಮೊದಲನೆಯ ಪ್ರವಾದಿ; ಅವನ ನಂತರ ನೋಆ, ಅಬ್ರಹಾಂ, ಮೋಸಸ್, ಜೀಸಸ್. ಒಂದು ಕಡೆಯಲ್ಲಿ ಮಹಮ್ಮದ್ ಕಾಣಿಸಿಕೊಂಡುದು. ಶ್ರೀಲಂಕದಲ್ಲಿ ಬಿದ್ದ ಆದಾಂ, ಜಿಡ್ಡಾದಲ್ಲಿ ಬಿದ್ದ ಈವ್ ಇಬ್ಬರೂ ಭೂಮಿಯ ಮೇಲೆ

ಮತ್ತೆ ಸಂಧಿಸಿದ್ದು ಅರಾಫತ್ ಎಂಬಲ್ಲಿ. ಈ ಸಮಾಗಮದ ಸಂದರ್ಭದಲ್ಲೇ ದಿವ್ಯವಾದ ಕರಿಯ ಕಲ್ಲು ಮೇಲಿನ ಲೋಕದಿಂದ ಭೂಮಿಗೆ ಇಳಿಯಿತೆಂದೂ ಅದಕ್ಕೆ ಆದಾಮನು ಮಕ್ಕಾದಲ್ಲಿ ಕಾಬಾ ಎಂಬ ಮಂದಿರವನ್ನು ಕಟ್ಟಿಸಿದನೆಂದೂ ಒಂದು ಒಕ್ಕಣೆಯಿದೆ. ಮುಂದೆ ಈ ಮಂದಿರವನ್ನು ಅಬ್ರಹಾಂ ಮತ್ತು ಇಸ್ಮಾಯಿಲ್ ಎಂಬುವರು ಪುನರ್‌ನಿರ್ಮಾಣ ಮಾಡಿದರಂತೆ.

ಹೀಗಾಗಿ ಶ್ರೀಲಂಕದ ಈ ಬೆಟ್ಟ ಹಿಂದೂಗಳಿಗೆ, ಬೌದ್ಧರಿಗೆ, ಕ್ರೈಸ್ತರಿಗೆ, ಮುಸಲ್ಮಾನರಿಗೆ ಎಲ್ಲರಿಗೂ ಪವಿತ್ರವಾದುದೇ. ಪಳನಿಸ್ವಾಮಿ ಇದನ್ನು ನೋಡಲೆಂದು ಮುಸಲ್ಮಾನ ವರ್ತಕ ಇಲ್ಲಿಗೆ ಕರೆತರಲೆಂದು ಬಗೆದಾಗ ಪಳನಿಸ್ವಾಮಿ ಒಪ್ಪಿ ಅವರೊಂದಿಗೆ ಬಂದನು. ಶ್ರೀಲಂಕ ಕಂಡಿನಗರದಲ್ಲಿಯೇ ವಾಸ್ತವ್ಯ. ಮುಸಲ್ಮಾನ ಭಕ್ತನದೇ ಚಹ ಅಂಗಡಿಯಿದ್ದಿತು; ಅಲ್ಲಿಯೇ ಅದರ ಮೇಲು ಮಹಡಿಯಲ್ಲಿ ಪಳನಿಸ್ವಾಮಿಯ ಬಿಡಾರ. ಈ ಅಂಗಡಿಯಿದ್ದುದು ನಗರದ ಮುಖ್ಯಬೀದಿಯಲ್ಲಿ. ಅಲ್ಲಿ ಜರುಗಿದ ಪ್ರಸಂಗವೊಂದು ಪಳನಿಸ್ವಾಮಿಯ ಪ್ರಸಿದ್ಧಿಗೆ ಕಾರಣವಾಯಿತು. ಅದರ ಹಿನ್ನೆಲೆಯನ್ನು ಸ್ವಲ್ಪ ವಿವರಿಸಬೇಕು.

ಕಂಡಿಯು ಬೌದ್ಧರಿಗೆ ಹಲವು ಶತಮಾನಗಳಿಂದ ಪವಿತ್ರ ಕ್ಷೇತ್ರ, ಕ್ರಿಸ್ತಾಬ್ಧ ಮೂರನೆಯ ಶತಮಾನದಲ್ಲಿ ಕಳಿಂಗ ದೇಶದಿಂದ ಅಲ್ಲಿ ಸ್ಮಾರಕವೆಂದು ಪ್ರಸಿದ್ಧವಾಗಿದ್ದ ಬುದ್ಧನ ದಂತವೊಂದನ್ನು ಶ್ರೀಲಂಕೆಗೆ ತಂದು ಅಭಯಗಿರಿ (ಅಸ್ಗಿರಿ) ವಿಹಾರದಲ್ಲಿರಿಸಿದ್ದರು. ಅದು ಅಲ್ಲಿನ ಭಿಕ್ಷುಗಳ ವಶದಲ್ಲಿದ್ದು ಪೂಜೆಗೊಳ್ಳುತ್ತಿತ್ತು. ಹನ್ನೆರಡನೆಯ ಶತಮಾನದಲ್ಲಿ ಸಿಂಹಳದ (ಎಂದರೆ ಶ್ರೀಲಂಕೆಯ) ಪ್ರಖ್ಯಾತ ಚಕ್ರವರ್ತಿಯಾಗಿದ್ದ ಪರಾಕ್ರಮ ಬಾಹು ಎಂಬುವನು ಈ ದಂತ-ಸ್ಮಾರಕದ ರಾಜಕೀಯ, ಸಾಮಾಜಿಕ, ಧಾರ್ಮಿಕ ಪ್ರಸ್ತುತತೆಯನ್ನು ಮನಗಂಡು ಅದನ್ನು ಬೌದ್ಧರೆಲ್ಲರ ಕೇಂದ್ರವನ್ನಾಗಿ ಮಾಡಿದನು. ರಾಜಕೀಯದ ಒತ್ತಡ ಹೆಚ್ಚಾದಂತೆಲ್ಲ ದಂತಸ್ಮಾರಕವೂ ಒಂದೆಡೆ ನಿಲ್ಲದೆ ಊರೂರು ತಿರುಗಲಾರಂಭಿಸಿತು. ಎಲ್ಲಿ ರಾಜಕೀಯ ಪ್ರಾಬಲ್ಯವೋ ಅಲ್ಲಿ ದಂತ ಸ್ಮಾರಕದ ವಾಸ್ತವ್ಯ; ಯಾವ ಅರಸೊತ್ತಿಗೆಯ ಮೇಲುಗೈಯೋ ಆ

ಅರಸೊತ್ತಿಗೆಯ ರಾಜಧಾನಿಯಲ್ಲೇ ದಂತವನ್ನಿರಿಸಿಕೊಳ್ಳುತ್ತಿದ್ದರು. ದಂತ ಇದ್ದೆಡೆ ಜನರ ಒಲವು; ದಂತ ಯಾರ ವಶದಲ್ಲಿದೆಯೋ ಅವರಿಗೆ ಬೌದ್ಧರೆಲ್ಲರೂ ನಡೆದುಕೊಳ್ಳುವರು.

ಆದರೆ ಹದಿನಾರನೆಯ ಶತಮಾನದಲ್ಲಿ ಪೋರ್ಚುಗೀಸರು ಶ್ರೀಲಂಕದ ಮೇಲೆ ದಾಳಿಮಾಡಿ ಅರಸೊತ್ತಿಗೆಗಳನ್ನು ಸದೆಬಡಿದು, ದಂತಸ್ಮಾರಕವನ್ನು ನಾಶಪಡಿಸಲೆತ್ನಿಸಿದರು. ಆಗ ದಂತವನ್ನು ನೋಡಿಕೊಳ್ಳುತ್ತಿದ್ದ ಬೌದ್ಧಭಿಕ್ಷುಗಳು ಗುಟ್ಟಾಗಿ ದಂತವನ್ನು ಕಂಡಿಗೆ ಸಾಗಿಸಿ ಅಲ್ಲಿ ಮಲಿಗವ ಎಂಬಲ್ಲಿ ಸುರಕ್ಷಿತವಾಗಿ ಇರಿಸಿಕೊಂಡರು; ಪೋರ್ಚುಗೀಸರು ನಾಶಪಡಿಸಿದ್ದು ನಕಲಿ ದಂತವನ್ನಷ್ಟೆ. ಮುಂದೆ ಪೋರ್ಚುಗೀಸರ ಆತಂಕ ತಪ್ಪಿದಮೇಲೆ ಕಂಡಿಯ ಮಲಿಗವದಲ್ಲೆ ದಂತಸ್ಮಾರಕಕ್ಕೆ ಭವ್ಯವಾದ ಮಂದಿರವೊಂದನ್ನು ಕಟ್ಟಿಸಿ ಅದರ ಪೂಜೆಗೆ ವ್ಯವಸ್ಥೆಮಾಡಿದರು. ವರ್ಷಕ್ಕೊಮ್ಮೆ ದಂತವಿರುವ ಕರಂಡವನ್ನು ಪೆರಹರ ಎಂಬ ಉತ್ಸವದಲ್ಲಿ ಸಂಭ್ರಮದಿಂದ ಹೊರತರುವರು; ಆಗ ನಾಲ್ಕು ಹಿಂದೂ ಗುಡಿಗಳಲ್ಲಿ ಪೂಜೆ ನಡೆಯುವುದು. ಹತ್ತು ವರ್ಷಗಳಿಗೊಮ್ಮೆ ಕರಂಡದಿಂದ ದಂತವನ್ನು ಹೊರತೆಗೆದು ನೆರೆದ ಭಕ್ತರಿಗೆ, ಉತ್ಸುಕರಿಗೆ, ಆಸಕ್ತರಿಗೆ ಪ್ರದರ್ಶಿಸುವರು. ಇದೊಂದು ವೈಭವದ ಸಂದರ್ಭ. ಬ್ರಿಟಿಷರು 1815ರಲ್ಲಿ ಶ್ರೀಲಂಕವನ್ನು ವಶಪಡಿಸಿಕೊಂಡಮೇಲೂ ಈ ದಂತಸ್ಮಾರಕದ ಉತ್ಸವಗಳನ್ನು ಮುಂದರಿಸಿಕೊಂಡು ಬಂದರು; ಮಂದಿರವು ಜನಪ್ರಿಯವಾಗಿಯೂ ಮುಂದುವರಿಯಿತು. ತುಂಬ ಸಂಪದ್ಭರಿತವಾದ ದೇಗುಲ ಇದು; ಅದರ ಸಿಬ್ಬಂದಿಯಲ್ಲಿ ಮಾವುತರೂ ಅವರ ವಶದಲ್ಲಿ ದೇಗುಲದ ಆನೆಗಳೂ ಇವೆ.

ಈ ದೇಗುಲದಿಂದ ಹೊರಡುವುದೇ ಊರಿನ ಹೆದ್ದಾರಿ; ಅದರ ಆಚೆ ತುದಿಯಲ್ಲಿ ನದಿ, ಮಹಾವಲಿ-ಗಂಗೆ. ದೇಗುಲದ ಆನೆಗಳನ್ನು ಮಾವುತರು ದಿನವೂ ಸ್ನಾನಕ್ಕೆ ಕರೆದೊಯ್ಯುವುದು ಈ ಹೆದ್ದಾರಿಯಲ್ಲೇ. ಪಳನಿಸ್ವಾಮಿ ತಂಗಿದ್ದ ಚಹಾ ಅಂಗಡಿಯಿದ್ದುದೂ ಈ ಹೆದ್ದಾರಿಯ ಬದಿಯಲ್ಲೇ. ಒಂದು ದಿನ ಮಾವುತನೊಬ್ಬ ತನ್ನ ಆನೆಯನ್ನು ದೇಗುಲದಿಂದ ಹೊರಡಿಸಿಕೊಂಡು, ನದಿಗೊಯ್ದು, ಅಲ್ಲಿ ಅದರ ಜಳಕವಾದ ಮೇಲೆ ಅದರ ಮೈಯನ್ನುಜ್ಜಿ ತೊಳೆಯುತ್ತಿದ್ದಾಗ ಇದ್ದಕ್ಕಿದ್ದಂತೆ ಅದಕ್ಕೆ

ಮದವೇರಿ ರೋಷಬಂದು ಮಾವುತನನ್ನು ಅಲ್ಲಿಯೇ ಕೊಂದುಬಿಟ್ಟಿತು. ಆನಂತರ ನದಿಯಿಂದ ಮೇಲೆ ಬಂದು ಹೆದ್ದಾರಿಗೆ ನುಗ್ಗಿ ಅಲ್ಲಿದ್ದವರಮೇಲೆ ಧಾಳಿಮಾಡತೊಡಗಿತು. ಅದನ್ನು ಹಿಡಿಯುವುದು ಯಾರಿಂದಲೂ ಆಗಲಿಲ್ಲ. ಜನರೆಲ್ಲ ಹೆದರಿ ದಿಕ್ಕಾಪಾಲಾಗಿ ಓಡಿದರು. ಊರಲ್ಲೆಲ್ಲ ಹಾಹಾಕಾರ ಮೊದಲಾಯಿತು.

ಪೋಲೀಸರಿಗೂ ಇದು ತಿಳಿದು ಹದ್ದುತಪ್ಪಿದ ಆನೆಯನ್ನು ಗುಂಡಿಕ್ಕಿ ಕೊಲ್ಲಲೆಂದು ಬಂದೂಕಗಳನ್ನೂ ಹಿಡಿದುಬಂದರು. ಜನರು ಹೆದ್ದಾರಿಯಲ್ಲಿ ಕೂಗಾಡುತ್ತ ಓಡಿಹೋಗುತ್ತಿದ್ದುದನ್ನು ಪಳನಿಸ್ವಾಮಿ ತನ್ನ ಕೋಣೆಯಿಂದ ಕಂಡು ಇದೇನೆಂದು ತಿಳಿಯಲು ಕೆಳಗಿಳಿದು ಬಂದು ಹೆದ್ದಾರಿಯಲ್ಲಿ ನಿಂತನು. ಅಕ್ಕಪಕ್ಕದಲ್ಲಿ ಅಡಗಿಕೊಂಡಿಂದ್ದ ಜನರೆಲ್ಲ 'ಒಳಗೆ ಹೋಗು', 'ಹಿಂದೆ ಬಾ' ಎಂದು ಕೂಗತೊಡಗಿದರು. ಇದೇಕೆಂದು ಪಳನಿಸ್ವಾಮಿಗೆ ಅರ್ಥವಾಗದೆ ಅಲ್ಲಿಯೇ ನಿಂತನು. ಮರೆಯಲ್ಲಿದ್ದ ಜನರು 'ಅಯ್ಯೋ! ಅನ್ಯಾಯವಾಗಿ ಈ ಸಾಧು ಸಾಯುವನಲ್ಲ!' ಎಂದು ಪರಿತಪಿಸುತ್ತಿದ್ದರು. ಅಲ್ಲಿದ್ದ ಪೋಲೀಸರೂ ಅವನನ್ನು ಟಾ ಅಂಗಡಿಯೊಳಗೆ ಮರೆಯಾಗೆಂದು ಹೇಳಿದರು.

ಪಳನಿಸ್ವಾಮಿ ಮಾತ್ರ ನಿಂತ ಜಾಗದಿಂದ ಕದಲದೆ ಅಲ್ಲಿಯೇ ಗೊಂಬೆಯಂತೆ ನಿಂತನು. ಅಷ್ಟರೊಳಗೆ ಹೆದ್ದಾರಿಯಲ್ಲಿ ಅಡ್ಡಗಾಲಿಟ್ಟು ಓಡಿಬರುತ್ತಿದ್ದ ಆನೆ ಹತ್ತಿರವೇ ಬಂದು ದಾರಿಯಲ್ಲಿ ನಿಂತಿದ್ದ ಪಳನಿಸ್ವಾಮಿಯನ್ನು ನೋಡಿ ಅವನಕಡೆ ರೋಷದಿಂದ ನುಗ್ಗಿತು. ಸಾಕಿದ ಆನೆಗಳಿಗೆ ಒಮ್ಮೊಮ್ಮೆ ಮದವೇರಿ ಕಾಡಿನ ಪ್ರವೃತ್ತಿ ಮರಳುವುದಂತೆ; ಕಾಡಾನೆಗಳಿಗೆ ಬಿಳಿಬಣ್ಣವೆಂದರೆ ಸಿಟ್ಟು ಮೇಲೇರಿ ಬರುವುದು. ಪಳನಿಸ್ವಾಮಿ ತೊಟ್ಟಿದ್ದುದು ಬಿಳಿಬಣ್ಣದ ಬಟ್ಟೆಯೇ. ಆನೆ ಅವನ ಕಡೆ ನುಗ್ಗಿಬಂದುದು ಆಶ್ಚರ್ಯವೇನಲ್ಲ. ಆಶ್ಚರ್ಯದ ಸಂಗತಿಯೇನೆಂದರೆ ಇನ್ನೇನು ಎಂಟುಹತ್ತು ಗಜ ದೂರ ಪಳನಿಸ್ವಾಮಿ ಇದ್ದಾನೆ ಎನ್ನುವಷ್ಟರಲ್ಲಿ ಆನೆ ಇದ್ದಕ್ಕಿದ್ದಂತೆ ನಿಂತುಬಿಟ್ಟಿತು. ಮದವೇರಿದ್ದುದು ಇಳಿದೂಬಿಟ್ಟಿತೋ ಏನೋ, ಮದವೇರಿದ್ದೂ ಮುನ್ಸೂಚನೆಯಿಲ್ಲದೆ, ಇದ್ದಕ್ಕಿದ್ದಂತೆ ಮದವಿಳಿದುದೂ ಹಾಗೆಯೇ ಇದ್ದೀತು.

ಆದರೆ ರೊಚ್ಚಿಗೆದ್ದು ತನ್ನ ಮಾವುತನನ್ನೆ ಕೊಂದು ಊರವರಲ್ಲಿ ಕೋಲಾಹಲವನ್ನುಂಟುಮಾಡಿದ ಮದದಾನೆ ಪಳನಿಸ್ವಾಮಿಯೆದುರು ಗಂಭೀರವಾಗಿ

ಶಾಂತವಾಗಿ ನಿಂತುದು ಪವಾಡವೆನಿಸಿತು. ಎಂದಿನಂತೆ ಸಾಧುವಾದ ಆನೆ ಈಗ ಪಳನಿಸ್ವಾಮಿಯ ಮುಂದೆ ಬಂದು ಸೊಂಡಿಲೆತ್ತಿ ಮೂರುಬಾರಿ ಘೀಳಿಟ್ಟಿತು. ಆಗ ಬೀದಿಯಲ್ಲೆಲ್ಲ ಇದ್ದವನು ಇವನೊಬ್ಬನೇ. ಪಳನಿಸ್ವಾಮಿಗೇನು ಗಾಬರಿಯಾಗಲಿಲ್ಲ; ನಿಂತಲ್ಲಿಂದ ಅವನು ಕದಲಲಿಲ್ಲ. ಆನೆ ನೆಮ್ಮದಿಯಾದುದನ್ನು ನೋಡಿ ಇತರರಿಗೂ ಧೈರ್ಯ ಒದಗಿತು; ತಾವು ಬಚ್ಚಿಟ್ಟುಕೊಂಡ ಎಡೆಗಳಿಂದ ಹೊರಗೆ ಬಂದರು. ಪಳನಿಸ್ವಾಮಿ ಅವರಿಗೆ ಬಾಳೆಯ ಹಣ್ಣುಗಳನ್ನು ಆನೆಗೆ ತಿನ್ನಿಸುವಂತೆ ಸೂಚಿಸಿದನು. ಅವರಲ್ಲಿ ಕೆಲವರು ಓಡಿಹೋಗಿ ಆ ಹಣ್ಣುಗಳನ್ನು ತಂದು ಆನೆಯ ಮುಂದಿಟ್ಟರು. ಆನೆ ಅವನ್ನು ತಿಂದು, ದೇಗುಲದ ಕಡೆಗೆ ತನ್ನಪಾಡಿಗೆ ತಾನು ಹೊರಟುಹೋಯಿತು.

ಈ ಪ್ರಸಂಗದಿಂದ ಪಳನಿಸ್ವಾಮಿಯ ಕೀರ್ತಿ ಕಂಡಿನಗರದಲ್ಲೆಲ್ಲ ಹರಡಿಕೊಂಡಿತು. ದೇಗುಲಕ್ಕೆ ಸೇರಿದ ಅಧಿಕಾರಿಗಳೂ, ಅಲ್ಲಿ ನೆರೆದಿದ್ದ ಬೌದ್ಧಭಿಕ್ಷುಗಳೂ, ಜನರೂ ಇವನೊಬ್ಬ ಪವಾಡ ಪುರುಷನೆಂದೇ ಪರಿಗಣಿಸಿದರು. ಭಿಕ್ಷುಗಳು ಅವನನ್ನು ತಂತಮ್ಮ ವಿಹಾರಗಳಿಗೆ ಕರೆದೊಯ್ದು ಸತ್ಕರಿಸಿದರು; ಶ್ರೀಮಂತರು ತಂತಮ್ಮ ಬಂಗಲೆಗಳಿಗೆ ಅವನನ್ನು ಕರೆದೊಯ್ದು ಉಪಚರಿಸಿದರು. ತಮಿಳರಿಗೆ ತಮ್ಮ ಕಡೆಯ ಸಾಧುವೊಬ್ಬ ಅನಾಹುತವನ್ನು ಅನಾಯಾಸವಾಗಿ ತಪ್ಪಿಸಿಬಿಟ್ಟನೆಂದು ಹೆಮ್ಮೆ; ಮುಸಲ್ಮಾನ ವರ್ತಕರಿಗೆ ತಾವು ಇಲ್ಲಿಗೆ ಕರೆತಂದ ಸಾಧು ಈ ಪವಾಡವನ್ನು ನಡೆಸಿದನೆಂದು ಅಭಿಮಾನ; ಬೌದ್ಧಭಿಕ್ಷುಗಳಿಗೆ ಬುದ್ಧ ಉಪದೇಶಿಸಿದ ಅಹಿಂಸಾಮಾರ್ಗಕ್ಕೆ ಇದೊಂದು ಸ್ಪಷ್ಟನಿದರ್ಶನವಾಯಿತೆಂದು ಸಮಾಧಾನ.

ಅಂತೂ ಅಂದಿನಿಂದ ಪಳನಿಸ್ವಾಮಿಗೆ ಗುಡಿಗಳಲ್ಲಿ, ಮಠಗಳಲ್ಲಿ, ಮಸೀದಿಗಳಲ್ಲಿ, ಚರ್ಚುಗಳಲ್ಲಿ, ಮನೆಗಳಲ್ಲಿ ಆದರದ ಸ್ವಾಗತ, ಸನ್ಮಾನ. ಜನ ಅವನ ಕಾಲಿಗೆ ಬಿದ್ದು ಅವನನ್ನು ಮಹಾಪುರುಷನೆಂದೂ, ಸಿದ್ಧನೆಂದೂ, ದೈವಾಂಶ ಸಂಭೂತನೆಂದೂ ಗೌರವಿಸತೊಡಗಿದರು. ಆದರೆ ಪಳನಿಸ್ವಾಮಿಗೆ ತಾನು ಇದಕ್ಕೆಲ್ಲ ಅರ್ಹನಲ್ಲವೆಂಬ ಸಂಕೋಚ. ಈ ಪ್ರಸಂಗದಲ್ಲಿ ತನ್ನ ಪಾತ್ರವೇನೂ ಇರದು, ತಾನೊಬ್ಬ ಸಾಮಾನ್ಯ ಸಾಧು, ನಡೆದುದು ದೈವಲೀಲೆ, ತನ್ನನ್ನು ಸತ್ಕರಿಸುವ ಆಗತ್ಯವೇನೂ ಇರದು ಎಂದು ಹೇಳುತ್ತಿದ್ದರೂ ಜನ ಕೇಳದೆ ಅವನೊಬ್ಬ ಪವಾಡಪುರುಷನೆಂದೇ ಬಗೆದು ಕಾಲಿಗೆ

ಬೀಳುತ್ತಿದ್ದರು. ಪಳನಿಸ್ವಾಮಿ "ನಾನು ಸಣ್ಣವನು; ನನಗೆ ಯಾರು ನಮಸ್ಕರಿಸದಿರಿ!" ('ನಾನ್ ಶಿರುವನ್, ಎನ್ನೈ ಯಾರುಂ ವಿಳುಂದು ವಣಂಗಕ್ಕೂಡಾದು') ಎಂದು ಅಡ್ಡಿಮಾಡುವನು; ಆದರೆ ಅದನ್ನು ಯಾರೂ ಮನಸ್ಸಿಗೆ ತಂದುಕೊಳ್ಳಲಿಲ್ಲ.

ಪಳನಿಸ್ವಾಮಿಯು ಈ ಪ್ರಸಂಗದಲ್ಲಿ ವ್ಯಕ್ತಪಡಿಸಿದ ಪ್ರಾಮಾಣಿಕತೆ, ಸರಳಸ್ವಭಾವ, ನಿರಾಡಂಬರ ಇವು ಜನರ ಹೃದಯವನ್ನು ಸೆಳೆದವು; ಅವನ ವಿಚಾರವಾಗಿ ಗೌರವಬುದ್ಧಿ ಇನ್ನಷ್ಟು ಹೆಚ್ಚಿತು. ಪಳನಿಸ್ವಾಮಿಯು ಏಕಾಂತದಲ್ಲಿ ಕುಳಿತು ಈ ಪ್ರಸಂಗದ ತಾತ್ಪರ್ಯವೇನೆಂದು ಚಿಂತಿಸತೊಡಗಿದನು. ಆನೆಗೆ ಇದ್ದಕ್ಕಿದ್ದಂತೆ ಮದವೇರಿದ್ದಾಗಲೀ, ಇಳಿದದ್ದಾಗಲೀ ಏಕೆ? ತಾನು ಇದರಲ್ಲಿ ಹೀಗೆ ಪಾಲ್ಗೊಳ್ಳುವ ಅವಕಾಶ ಒದಗಿದ್ದಾದರೂ ಹೇಗೆ? ತುಂಬ ಆಳವಾಗಿ ಆಲೋಚಿಸಿದಮೇಲೆ ಅವನಿಗೆ ಹೊಳೆದದ್ದು - ತಾನು ಈಗ ಅರಸುತ್ತಿರುವುದು ಗುರುವನ್ನು; ದಾರಿ ಯಾವುದೆಂಬುದು ತಿಳಿಯದು, ಇದನ್ನು ತಿಳಿಯಲೆಂದು ದೇವರನ್ನು ಎಡೆಬಿಡದೆ ಕೋರಿಕೊಳ್ಳುತ್ತಿದ್ದೆ; ಈಗ ದೇವರು ತನ್ನ ಮೊರೆಯನ್ನು ಕೇಳಿಕೊಂಡಂತೆ ತೋರುತ್ತದೆ. ದಾರಿಯಲ್ಲಿರಬಹುದಾದ ಎಡರುತೊಡರುಗಳನ್ನು ತೊಡೆದುಹಾಕಲು ಗಣಪತಿಯೇ ಆನೆಯ ರೂಪದಲ್ಲಿ ಕಾಣಿಸಿಕೊಂಡ. ಇನ್ನು ಮುಂದೆ ದಾರಿ ಸುಗಮವೆಂದು ಅವನಿಗೆ ನಂಬಿಕೆಯಾಯಿತು. ಇದೊಂದು ದೈವಾನುಗ್ರಹದ ಸಂದರ್ಭವೇ ಎಂಬುದು ಖಚಿತವಾಯಿತು.

ಭಾರತದ ಸಾಧುವೊಬ್ಬನು ಸಿಟ್ಟಿಗೆದ್ದ ಆನೆಯನ್ನು ಶಮನಮಾಡಿದ ಸುದ್ದಿ ಊರಲ್ಲೆಲ್ಲ ಹರಡಿತು. ಶ್ರೀಲಂಕೆಯಲ್ಲಿ ಹಿಂದೆ ರಾಜರಾಗಿದ್ದ ವಂಶದ ಅರಸುಗುವರ ಕಂಡಿಯಲ್ಲೇ ವಾಸಮಾಡುತ್ತಿದ್ದ. ಅವನ ಹೆಸರು ರತ್ನವಟ್ಟೆ. ಬ್ರಿಟಿಷರು ದ್ವೀಪವನ್ನು ತಮ್ಮ ವಶಪಡಸಿಕೊಂಡಮೇಲೆ, ರಾಜರ ಅಧಿಕಾರ ತಪ್ಪಿಸಿ ಅವರಿಗೆ ಮಾಸಾಶನವಿತ್ತು ಗೌರವದಿಂದ ಕಾಣುತ್ತಿದ್ದರು. ಅವರ ಅರಮನೆಯನ್ನೂ ಉಳಿಸಿದ್ದರು; ಸಿಬ್ಬಂದಿಯನ್ನು ಕೊಟ್ಟಿದ್ದರು; ಕೆಲವು ಹೊಣೆಗಾರಿಕೆಯನ್ನೂ ಹಂಚಿಕೊಟ್ಟಿದ್ದರು. ಕಂಡಿಯಲ್ಲಿದ್ದ ದಂತ ಸ್ಮಾರಕ ದೇಗುಲದ ಆಡಳಿತಕ್ಕೆ ಈ ರಾಜ ಮನೆತನದವರೇ ಪ್ರಮುಖರಾಗಿದ್ದರು. ಈ ಪ್ರಸಂಗ ನಡೆದ ವೇಳೆಯಲ್ಲಿ ರಾಜಕುಮಾರನಾಗಿ ಸುಖಜೀವನವನ್ನು ನಡೆಸುತ್ತಿದ್ದ ರತ್ನವಟ್ಟೆ, ತನ್ನ ಆಡಳಿತದಲ್ಲಿದ್ದ ದೇಗುಲಕ್ಕೆ ಸೇರಿದ ಆನೆಯನ್ನು ಕುರಿತಂತೆ



ಉದ್ರಿಕ್ತ ಮದದಾನೆ

ನಡೆದುದನ್ನು ಕೇಳಿ, ಆ ಸಾಧುವನ್ನು ಕಾಣಬೇಕೆಂದು ಬಯಸಿದ. ಅವನನ್ನು ತನ್ನ ಅರಮನೆಗೆ ಕರೆಸಿಕೊಂಡು ಉಪಚರಿಸಿ, ಸನ್ಮಾನ ಮಾಡಬೇಕೆಂದು ನಿಶ್ಚಯಿಸಿದ.

ಈ ಬಯಕೆಗೆ ಇನ್ನೊಂದು ಹಿನ್ನೆಲೆಯೂ ಇದ್ದಿತು. ಹಲವು ವರ್ಷಗಳ ಹಿಂದೆ ಅಲ್ಲಿನ ರಾಣಿಯೊಬ್ಬಳು ಅರಮನೆಯಲ್ಲಿ ಕಾರಣಾಂತರದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಳು. ಅಂದಿನಿಂದ ಅರಮನೆಯ ಒಂದು ಮಲಗುವ ಕೋಣೆಯಲ್ಲಿ ಆಗಾಗ ಘಟ ಸರ್ಪವೊಂದು ಕಾಣಿಸಿಕೊಳ್ಳುವುದು. ಮಂಚದ ಮೇಲೆ ತೋರಿಕೊಂಡು, ಹೊರಳಿ, ಕೆಳಗೆ ಬಿದ್ದು ಹೊರಟುಹೋಗುವುದು. ಎಲ್ಲಿಂದ ಈ ಹಾವು ಬರುತ್ತದೆ, ಎಲ್ಲಿಗೆ ಹೋಗುತ್ತದೆ ಎಂಬುದನ್ನು ಯಾರೂ ತಿಳಿಯಲಾಗಲಿಲ್ಲ. ಇದು ನಡೆದ ಒಂದೆರಡು ತಿಂಗಳುಗಳಲ್ಲೆ ಅರಸು ಮನೆತನಕ್ಕೆ ಸೇರಿದ ಯಾರಾದರೊಬ್ಬರು ಇದ್ದಕ್ಕಿದ್ದಂತೆ ಸಾಯುವರು. ಇದು ನಡೆಯುತ್ತಲೇ ಇದ್ದಿತು. ಸರ್ಪ ಬಾಧೆಯೋ, ಆತ್ಮಹತ್ಯೆ ಮಾಡಿಕೊಂಡ ರಾಣಿಯ ಭೂತಚೇಷ್ಟೆಯೋ ಇದ್ದೀತೆಂದು ಮಾಡಬೇಕಾದುದೆಲ್ಲವನ್ನೂ ಮಾಡಿಸಿದರು. ಏನೂ ಪ್ರಯೋಜನವಾಗಲಿಲ್ಲ. ಅರಮನೆಗೆ ಸೇರಿದವರಿಗೆಲ್ಲ ದಿಗಿಲು; ಯಾವ ಹೊತ್ತಿನಲ್ಲಿ ಏನೋ ಎಂಬ ಆತಂಕ. ಈಗ ಆನೆಯ ಪ್ರಸಂಗದಲ್ಲಿ ಪವಾಡ ಪುರುಷನೆನಿಸಿದ ಭಾರತೀಯ ಸಾಧುವಿನ ನೆರವಿನಿಂದ ಈ ಬಾಧೆಯನ್ನು ನೀಗಿಸಿಕೊಳ್ಳಬಹುದೆಂಬ ಆಸೆ ರತ್ನವಟ್ಟೆಗೆ ಹುಟ್ಟಿತು.

ರಾಜಕುಮಾರನ ಆಹ್ವಾನದಂತೆ ಪಳನಿಸ್ವಾಮಿ ಕಂಡಿಯ ಅರಮನೆಗೆ ಬಂದನು. ಅದ್ಧೂರಿಯ ಸ್ವಾಗತ ಸಂದಿತು; ಸಂಭ್ರಮದ ಊಟೋಪಚಾರಗಳು ನಡೆದುವು. ಮಧ್ಯಾಹ್ನ ಪಳನಿಸ್ವಾಮಿ ಏಕಾಂತದಲ್ಲಿ ಕೂತು ಧ್ಯಾನಮಗ್ನನಾದನು. ಆ ಸಮಯದಲ್ಲಿ ರತ್ನವಟ್ಟೆಗೆ ಏನೋ ಭರವಸೆ ಮೂಡಿದಂತಾಯಿತು. ಅರಮನೆಯಲ್ಲಿದ್ದ ಭೂತ ಬಾಧೆ, ಶಾಪ ಇನ್ನು ತೊಲಗಿತು ಎಂಬ ವಿಶ್ವಾಸ ಒದಗಿತು. ಮನಸ್ಸಿನಲ್ಲಿ ಈ ಬಗೆಯ ಸಮಾಧಾನ ಆವನಿಗೆ ಹಿಂದೆಂದೂ ಒದಗಿರಲಿಲ್ಲ. ಸಂಜೆ ಪಳನಿಸ್ವಾಮಿ ಅರಮನೆಯಿಂದ ಹೊರಡುವಾಗ, ಸನ್ಮಾನ ಮಾಡಿ ರತ್ನವಟ್ಟೆ ಆಗಿನ ಕಾಲಕ್ಕೆ ಐದು ಸಾವಿರ ರೂಪಾಯಿ ಬೆಲೆಬಾಳುವ ಕೈಗಡಿಯಾರವೊಂದನ್ನು ಕೊಡುಗೆಯಾಗಿ ಸಮರ್ಪಿಸಿದನು. ಪಳನಿಸ್ವಾಮಿ ಕೈಗೆ ಗಡಿಯಾರವನ್ನು ಕಟ್ಟಿಕೊಂಡುದು ಅದೇ ಮೊದಲು. ಆದರೆ ಅಲ್ಲಿದ್ದ ಕ್ರೈಸ್ತ

ಶ್ರೀ ತಿರುಚ್ಚಿ ಮಹಾಸ್ವಾಮಿಗಳು ತಮ್ಮ 21ನೇ ವಯಸ್ಸಿನಲ್ಲಿ, ಶ್ರೀಲಂಕೆಯ ರಾಜಕುಮಾರ ರತ್ನವಟ್ಟೆಯವರಿಂದ ಕಂಡಿಯ ಅರಮನೆಯಲ್ಲಿ ಸನ್ಮಾನಗೊಂಡ ಸಂದರ್ಭದಲ್ಲಿ ತೆಗೆದ ಚಿತ್ರ.



ಶಾಂತ ಆನೆಯಿಂದ ಸೊಂಡಿಲೆತ್ತಿ ಆಶೀರ್ವಾದ

ಪಾದ್ರಿಯೊಬ್ಬನು ಇದರ ಮೇಲೆ ಆಸಕ್ತಿ ತೋರಿಸಿದಾಗ ಪಳನಿಸ್ವಾಮಿ ಅದನ್ನು ಅವನಿಗೇ ದಾನಮಾಡಿಬಿಟ್ಟ.

ಪಳನಿಸ್ವಾಮಿ ಕಂಡಿಯ ಅರಮನೆಗೆ ಬಂದು ಹೋದಾಗಿನಿಂದ ದಿಟವಾಗಿಯೂ ಅರಮನೆಯಲ್ಲಿ ಹಾವು ಕಾಣಿಸಿಕೊಳ್ಳುವುದು, ರಾಜ ಮನೆತನದವರು ಸಾಯುವುದೂ ನಿಂತಿತು. ಮುಂದೆ, ಎರಡು ತಿಂಗಳುಗಳವರೆಗೆ ಪಳನಿಸ್ವಾಮಿ ಕಂಡೀನಗರದಲ್ಲೇ ಇದ್ದನು. ಆಗ ಶ್ರೀಲಂಕದಲ್ಲಿದ್ದ ನಾಟ್ಟುಕೋಟೆ ಚೆಟ್ಟಿಯಾರರು ಪಳನಿಸ್ವಾಮಿಗೆ ವಿಶೇಷವಾಗಿ ನಡೆದುಕೊಳ್ಳತೊಡಗಿದರು. ಇವರಲ್ಲಿ ಪ್ರಮುಖರು ಕೊಲಂಬೋದಲ್ಲಿ ವ್ಯಾಪಾರ ಸಂಸ್ಥೆಗಳನ್ನು ನಡೆಸುತ್ತಿದ್ದ ನಗರತ್ತಾರರು, ಕಾಶೀಚೆಟ್ಟಿಯಾರ್, ವೀರಪ್ಪ ಚೆಟ್ಟಿಯಾರ್ ಮತ್ತು ರಾಮಯ್ಯ ಚೆಟ್ಟಿಯಾರ್ ಇವರು. ನಗರತ್ತಾರರು ಅಥವಾ ನಾಟ್ಟುಕೋಟೆ ಚೆಟ್ಟಿಯಾರರ ವಿಚಾರ ಮುಂದೆ ಹೇಳುವುದಿದೆ. ಸಧ್ಯಕ್ಕೆ ಇವರೆಲ್ಲರೂ ತಮಿಳುನಾಡಿನ ಸಾಹಸಿಗಳೂ, ಉದ್ಯಮಿಗಳೂ ಆದ ಶ್ರೀಮಂತರೆಂದೂ, ಇವರಲ್ಲಿ ಹಲವರು ಶ್ರೀಲಂಕಕ್ಕೆ ಬಂದು ಕಂಡಿಯ ಸುತ್ತಮುತ್ತ ನೆಲಸಿದ್ದರೆಂದೂ ತಿಳಿದುಕೊಂಡರೆ ಸಾಕು.

ಇವರಿಗೆ ತಮ್ಮ ಕಡೆಯವನೇ ಆದ ಸಾಧುವೊಬ್ಬನು ಇಲ್ಲಿ ಪಡೆದ ಕೀರ್ತಿಯನ್ನು ಕಂಡು ಅಭಿಮಾನ ಮೂಡಿತು. ಅವನನ್ನು ಕೆಲ ಕಾಲ ಕಂಡಿಯಲ್ಲೇ ಉಳಿಸಿಕೊಂಡು ಉಪಚರಿಸಿದರು, ಅಲ್ಲಿ ಮತ್ತು ಜಾಫ್ನಾದಲ್ಲಿ ನೋಡಬೇಕಾದ ಸ್ಥಳಗಳಿಗೆಲ್ಲ ಕರೆದೊಯ್ದರು. ಶ್ರೀಲಂಕದಲ್ಲಿ ಅವನ ವಾಸ್ತವ್ಯ ಸುಖಕರವಾಗುವಂತೆ ಮಾಡಿದರು. ಹಲವರು ನಗರತ್ತಾರರು ಪಳನಿಸ್ವಾಮಿಯ ಭಕ್ತರಾದರು.



ಶ್ರೀ ತಿರುಚಿ ಸ್ವಾಮಿಗಳು

ದೈವಾನುಗ್ರಹದ ಮುನ್ಸೂಚನೆ

ಪಳನಿಸ್ವಾಮಿ ಶ್ರೀಲಂಕಕ್ಕೆ ಬಂದದ್ದು ಕಂಡಿಯ ನೆರೆಯಲ್ಲಿದ್ದ ಶಿವನಡಿಪಾದ ಬೆಟ್ಟವನ್ನು ಸಂದರ್ಶಿಸಲೆಂದು. ಅದು ಕಾರಣಾಂತರಗಳಿಂದ ಕೈಗೂಡಿರಲೇ ಇಲ್ಲ. ಭಾರತಕ್ಕೆ ಮರಳುವಮುನ್ನ ಬೆಟ್ಟವನ್ನೇರಿ ಶಿವನಪಾದವನ್ನು ಸೇವಿಸಿ ಬರಬೇಕೆಂಬ ಬಯಕೆ ಪಳನಿಸ್ವಾಮಿಗಿದ್ದುದು ಸಹಜವೇ. ಇದನ್ನು ತಿಳಿದ ನಗರತ್ತಾರರು ಒಡನೆಯೇ ಶಿವನಡಿ ಪಾದಯಾತ್ರೆಗೆ ವ್ಯವಸ್ಥೆ ಮಾಡಿದರು. ಯಾತ್ರಿಕರ ತಂಡವೊಂದು ಸಿದ್ಧವಾಯಿತು; ಪಳನಿಸ್ವಾಮಿಯನ್ನು ಶ್ರೀಲಂಕಕ್ಕೆ ಕರೆತಂದ ಮುಸಲ್ಮಾನ ವರ್ತಕರ ಕಡೆಯವರೂ ಸೇರಿದರು. ಪಳನಿಸ್ವಾಮಿಯ ಅಭಿಮಾನಿಗಳೂ, ಭಕ್ತರೂ ಕೂಡಿಕೊಂಡಿದ್ದರು. ಇವರನ್ನೆಲ್ಲ ಹೊತ್ತು ಸುಸಜ್ಜಿತವಾದ ಬಸ್ಸೊಂದು ಹೊರಟಿತು. ಕಂಡೀನಗರವನ್ನು ಮುಂಜಾನೆ ಬಿಟ್ಟು ರಾತ್ರಿ ಸುಮಾರು ಎಂಟು ಗಂಟೆಯ ಸಮಯಕ್ಕೆ ಬೆಟ್ಟದ ಬುಡಕ್ಕೆ (ಆಡಿವಾರ) ಬಂದಿತು.

ಯಾತ್ರಿಕರು ರಾತ್ರಿ ಅಲ್ಲೇ ತಂಗಿದರು. ನಗರತ್ತಾರರದ್ದೇ ಧರ್ಮಶಾಲೆಯೊಂದು ಅಲ್ಲಿದ್ದು ಊಟ, ವಸತಿ ಎಲ್ಲಕ್ಕೂ ಅನುಕೂಲವಾಗಿತ್ತು. ಮರುದಿನ ಬೆಳಿಗ್ಗೆ ಬೆಟ್ಟಹತ್ತುವುದೆಂದು ಯಾತ್ರಿಕರು ನಿರ್ಧರಿಸಿಕೊಂಡರು. ಶ್ರೀಲಂಕದ ಬಿಸಿಲು ಹೇಳತೀರದು. ಮುಂಜಾನೆಯ ತಂಪಿನಲ್ಲಾದರೆ ಬೆಟ್ಟ ಹತ್ತುವುದು ಕಷ್ಟವಾಗಲಾರದು. ರಾತ್ರಿಯೂ ಸೆಖೆ, ಬೇಗೆ ಇದ್ದುದರಿಂದ ಪಳನಿಸ್ವಾಮಿ ಧರ್ಮ ಶಾಲೆಯ ಹೊರಗೆ ಹಜಾರದಲ್ಲೇ ಮಲಗಿದನು. ಉಳಿದವರೆಲ್ಲ ಒಳಗೆ ಮಲಗಿದರು.

ರಾತ್ರಿ ಸ್ವಲ್ಪಹೊತ್ತಾದಮೇಲೆ ಪಳನಿಸ್ವಾಮಿಗೆ ತಟಕ್ಕನೆ ಎಚ್ಚರವಾಯಿತು. ಏನೋ ಮುಜಗರವಾಗಿ ಮತ್ತೆ ನಿದ್ರೆ ಬರಲಿಲ್ಲ. ನಡುರಾತ್ರಿಯ ಸಮಯಕ್ಕೆ ಸರಿಯಾಗಿ, ತನ್ನನ್ನು

ಯಾರೋ ಮೈಮುಟ್ಟಿ ಎಬ್ಬಿಸುತ್ತಿರುವಂತೆ ಭಾಸವಾಯಿತು. ಕತ್ತಲು ಕವಿದಿತ್ತಾಗಿ ಯಾರೆಂದು ತಿಳಿಯಲಾಗಲಿಲ್ಲ. ಆದರೆ ಎದ್ದುಕುಳಿತುಕೊಂಡಮೇಲೆ ಎದುರಿಗೆ ಹೆಂಗಸೊಬ್ಬಳು ನಿಂತಿದ್ದುದು ಕಾಣಿಸಿತು. ಸಹಜವಾಗಿಯೇ ಪಳನಿಸ್ವಾಮಿಗೆ ಭಯವಾಯಿತು, ಆಶ್ಚರ್ಯವಾಯಿತು. ಆದರೆ ನಿಂತ ಹೆಂಗಸಿನ ಮುಖದಲ್ಲಿದ್ದ ಅಸಾಧಾರಣ ಕಳೆ, ನಸುನಗು ಇವು ಅವನಿಗೆ ಸ್ವಲ್ಪ ಸಮಾಧಾನವನ್ನು ತಂದವು. ಏನೂ ತೊಂದರೆಯಾಗದು ಎಂಬ ನಂಬಿಕೆಯಾಯಿತು.

ಆಕೆ ಪಿಸುಮಾತಿನಲ್ಲಿ "ಪಳನಿಸ್ವಾಮಿ, ಏಳು ('ಎಳಂದಿರು'), ತಡಮಾಡಬೇಡ, ಹೊರಡು. ಈ ಬೆಟ್ಟದ ಮೇಲೆ ನಿನ್ನನ್ನೊಯ್ಯುತ್ತೇನೆ. ಇತರರು ಏಳುವಷ್ಟರೊಳಗೆ ನೀನು ಹಿಂದಕ್ಕೆ ಬಂದುಬಿಡಬಹುದು" ಎಂದು ಹೇಳಿದಳು. ಮಾತಿನಲ್ಲಿ ಆತುರ ಇದ್ದಿತು; ಆಕೆಯ ನಿಲುವಿನಲ್ಲಿ ಸ್ಥೈರ್ಯವಿದ್ದಿತು. ಹಿಂದೆಂದೂ, ಪಳನಿಸ್ವಾಮಿ ಅಂಥ ವ್ಯಕ್ತಿಯನ್ನು ಕಂಡಿರಲಿಲ್ಲ. ಪಳನಿಸ್ವಾಮಿಗೆ ಮತ್ತೇನೂ ಮಾಡಲು ದಿಕ್ಕುತೋಚದೆ, ಆಕೆ ಹೇಳಿದಂತೆಯೇ ಎದ್ದು ಅವಳ ಹಿಂದೆ ಹೊರಟ. ಮುಂದೆ ಸಾಗುತ್ತಿದ್ದ ಆ ಹೆಂಗಸಿನ ಧೀರ ಗಂಭೀರ ನಡೆ ಆಕೆಯ ಸುತ್ತಲೂ ಹರಡಿಕೊಂಡಿದ್ದ ಬೆಳಕು ಅವನ ಅನುಭವಕ್ಕೆ ಬಂದವು.

ಎತ್ತರದ ಹೆಂಗಸು; ಮುಖದಲ್ಲಿ ಸೌಂದರ್ಯ ಎದ್ದು ಕಾಣುತ್ತಿತ್ತು. ಆಕೆಯ ಉಡುಗೆ ಸನ್ಯಾಸಿನಿಯದು, ಕಾವಿಬಣ್ಣದ ಸೀರೆ. ತಲೆಯ ಮೇಲೆ ಜಟೆಯನ್ನು ಎತ್ತಿಕಟ್ಟಿಕೊಂಡದ್ದು ಕಾಣುತ್ತಿತ್ತು. ಕೈಯಲ್ಲೊಂದು ಮರದ ಕಮಂಡಲು; ಸಾಮಾನ್ಯವಾಗಿ ಯತಿಗಳು ಹಿಡಿದಿರುವಂತದು. ಅವಳು ಬೇಗಬೇಗನೇ ಹೆಜ್ಜೆಯಿಟ್ಟು ನಡೆಯುತ್ತಿದ್ದಳು; ಮಾತನಾಡದೆ ಮೌನವಾಗಿ ಮುಂದರಿಯುತ್ತಿದ್ದಳು. ಪಳನಿಸ್ವಾಮಿಯೂ ಹಾಗೆಯೇ ಆಕೆಯ ಹಿಂದೆ ನಡೆದು ಹೋಗುತ್ತಿದ್ದನು. ಮೇಲೆ ಬೆಟ್ಟವನ್ನು ಅರ್ಧದಷ್ಟು ಏರಿಯಾದ ಮೇಲೆ ಆಕೆ ತಟ್ಟನೆ ನಿಂತಳು; ಪಳನಿಸ್ವಾಮಿಯೂ ನಿಂತನು. ಆಕೆ ಹಿಂದಿರುಗಿ ಪಳನಿಸ್ವಾಮಿಯ ಮುಖವನ್ನೇ ನೋಡುತ್ತ ತಾನು ಹಿಡಿದಿದ್ದ ಕಮಂಡಲುವಿನೊಳಗೆ ಕೈಹಾಕಿ ಏನನ್ನೋ ಹೊರತೆಗೆದು ಪಳನಿಸ್ವಾಮಿಯ ಮುಂದೆ ಹಿಡಿದಳು.

ಧರ್ಮಶಾಲೆಯಿಂದ ಹೊರಟದ್ದು ನಡುರಾತ್ರಿ ಕಳೆದ ಮೇಲೆ; ಈ ಘಟ್ಟಮುಟ್ಟುವ ವೇಳೆಗೆ ಮೂರು ಗಂಟೆಯ ಸಮಯವಾಗಿದ್ದಿತು. ಮುಂಜಾನೆಯ ಮುನ್ನ ಮುಗಿಲಿಂದ ಕೆಳಗೆ ಕಾಣಿಸಿಕೊಳ್ಳುವ ತಿಳಿಬೆಳಕಿನಲ್ಲಿ ಪಳನಿಸ್ವಾಮಿಯ ಕಣ್ಣಿಗೆ ಕಂಡದ್ದು ಆ ಹೆಂಗಸು

ಕೈಯಲ್ಲಿ ಹಿಡಿದಿದ್ದುದು ಒಂದು ಗೊಂಬೆಯೆಂದು. ಪಳನಿಸ್ವಾಮಿ ಕಣ್ಣರಳಿಸಿ ನೋಡಿದಾಗ ಈ ಗೊಂಬೆಯ ಗುರುತು ಸಿಕ್ಕಿತು; ಪರಮಾಶ್ಚರ್ಯವಾಯಿತು. ತಾನು ಎಳವೆಯಲ್ಲಿ ಆಟಕ್ಕೆಂದು ಮಣ್ಣಿನಿಂದ ಮಾಡಿಕೊಂಡಿದ್ದ ದೇವಿಯ ಮೂರ್ತಿಯೇ ಅದು! ಹುಡುಗರು ಓರಗೆಯವರು ಆಡುತ್ತಿರುವಾಗ ಗುಡಿಯಲ್ಲಿ ನಡೆಯುವ ಪೂಜೆಯನ್ನು ಅನುಕರಿಸಿ ತಾವೂ ಪೂಜೆಯ ಆಟವನ್ನು ಆಡುತ್ತಿದ್ದರು. ಆಟವೇ ಆಗಲಿ, ಪೂಜೆಗೊಂದು ಮೂರ್ತಿಬೇಡವೇ? ಪಳನಿಸ್ವಾಮಿ ಮಣ್ಣಿನಲ್ಲೇ ಒಂದು ಪರಾಶಕ್ತಿಯ ಗೊಂಬೆಯನ್ನು ಮಾಡಿದನು; ಅದನ್ನು ಹುಡುಗರು ತಮಗೆ ಬಂದ ರೀತಿಯಲ್ಲಿ ಪೂಜೆಮಾಡಿದರು. ಇದು ಆಟದಲ್ಲಿ ನಡೆಯುತ್ತಿದ್ದಿತು; ಹಲವಾರು ವರ್ಷಗಳ ಹಿಂದೆ.

ಆಗ ತಾನು ಮಾಡಿದ ಗೊಂಬೆಯ ನೆನಪು ಕೂಡ ಪಳನಿಸ್ವಾಮಿಗೆ ಇರಲಿಲ್ಲ; ಅದೇನಾಯಿತೋ ಎಲ್ಲಿದೆಯೋ ಎಂಬುದೂ ತಿಳಿದಿರಲಿಲ್ಲ. ಆಟದ ಸಂದರ್ಭದಲ್ಲಿ ಇದ್ದುದನ್ನೆಲ್ಲಾ ಯಾರು ಕಾಪಿಟ್ಟುಕೊಳ್ಳುತ್ತಾರೆ? ಆದರೆ ಈ ಹೆಂಗಸು ಈಗ ತನ್ನ ಕಮಂಡಲುವಿನಿಂದ ಹೊರತೆಗೆದದ್ದು ತಾನು ಆಟಕ್ಕೆಂದು ಮಾಡಿದ್ದ ದೇವಿಯ ಗೊಂಬೆಯೇ ಎಂಬುದನ್ನು ಗುರುತಿಸಿ ಪಳನಿಸ್ವಾಮಿ ಅವಾಕ್ಕಾದನು; ಅವನ ಅಚ್ಚರಿಗೆ ಮೇರೆಯೇ ಇರಲಿಲ್ಲ. "ಇದೇನು ಆಶ್ಚರ್ಯ? ('ಇದೆನ್ನ ಆಚ್ಚರಿಯಂ')" ಎಂಬ ಉದ್ಗಾರ ಅವನ ಬಾಯಿಂದ ಹೊರಟಿತು. ಕುತೂಹಲವನ್ನು ತಡೆಯಲಾರದೆ ಹೆಂಗಸನ್ನು ಕುರಿತು "ಅಮ್ಮಾ, ಇದು ನಾನು ಹುಡುಗನಾಗಿದ್ದಾಗ ಆಟಕ್ಕೆಂದು ಮಾಡಿಕೊಂಡ ದೇವಿ ಮೂರ್ತಿ. ಇದು ನಿನ್ನ ಕೈಗೆ ಬಂದುದು ಹೇಗೆ? ಇಷ್ಟು ದಿನ ಇದನ್ನು ನಾನು ಕಂಡುದೇ ಇಲ್ಲ!" ಎಂದು ಕೇಳಲು ಆ ಹೆಂಗಸು ನಸುನಗುತ್ತ "ಈ ಗೊಂಬೆಯೇ ನಾನು, ಪರಾಶಕ್ತಿ!" ಎಂದು ಉತ್ತರವಿತ್ತಳು.

ಒಡನೆಯೇ ಪಳನಿಸ್ವಾಮಿಗೆ ಹೊರಗಣ ಜಗತ್ತಿನ ಅರಿವು ತಪ್ಪಿತು; ಜಡನಾಗಿ, ಅರಿವಿಲ್ಲದೆ ಹೆಂಗಸಿನ ಪಾದಗಳಲ್ಲಿ ನಮಸ್ಕರಿಸಿದನು. ತಾನೆಲ್ಲಿರುವೆನೆಂಬುದು, ತಾನು ಮಾಡುತ್ತಿರುವುದೇನೆಂಬುದು, ತನ್ನ ಮುಂದಿರುವ ವ್ಯಕ್ತಿ ಯಾರೆಂಬುದು, ಕಡೆಗೆ ತಾನು ಯಾರೆಂಬುದೂ ತಿಳಿಯದೆ ಮಂತ್ರ ಮುಗ್ಧನಾಗಿ ಕುಳಿತನು. ತನ್ನನ್ನು ಎಲ್ಲೆಡೆಗಳಿಂದಲೂ ಸುತ್ತರಿದ ಬೆಳಕೊಂದು ಮಾತ್ರ ಅವನಿಗೆ ಗೋಚರಿಸಿತು. ಸಮಾಧಿಯಂಥ ಈ ಸ್ಥಿತಿಯಿಂದ ಅವನು ಹೊರಗೆ ಬಂದದ್ದು, ಎದುರಿಗಿದ್ದ ಹೆಂಗಸು ಮಾತನಾಡಿದಾಗಲೇ.

"ದೇವಿಯ ಪೂರ್ಣಾನುಗ್ರಹ ನಿನ್ನ ಮೇಲಿದೆ. ದೈವಸಂಕಲ್ಪಕ್ಕೆ ನಿನ್ನನ್ನು ನೀನು ತೊಡಗಿಸಿಕೋ. ಧರ್ಮ, ಜ್ಞಾನಗಳತ್ತ ಜನರ ಗಮನವನ್ನು ತಿರುಗಿಸುವ ಕೆಲಸ ನಿನ್ನಿಂದ ಆಗಬೇಕಾಗಿದೆ. ನಿನ್ನ ಗುರುವನ್ನು ನೀನು ಕಾಣುವಿ; ಕೈಲಾಸ ಪರ್ವತಕ್ಕೆ ತೆರಳುವಿ. ಅದಕ್ಕೆ ಮುಂಚೆ ಇಲ್ಲಿನ ಕ್ಷೇತ್ರಗಳಲ್ಲಿ ಸುತ್ತಾಡು. ಮುಂದೆ ಕನ್ನಡನಾಡನ್ನು ನಿನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೋ" ಎಂದು ಹೇಳಿದಂತಾಯಿತು.

ಕ್ರಮೇಣ ಅರಿವು ಹಿಂದಿರುಗಿತು. ಪಳನಿಸ್ವಾಮಿ ಎದ್ದು ನಿಂತನು. ಸುತ್ತಮುತ್ತ ನೋಡಿದರೆ ತನ್ನನ್ನು ಇಲ್ಲಿಗೆ ಕರೆತಂದ ಹೆಂಗಸು ಮಾಯವಾಗಿದ್ದಾಳೆ; ಎಲ್ಲೆಲ್ಲಿ ಹುಡುಕಿದರೂ ಕಾಣದಾದಳು. ಆ ವೇಳೆಗಾಗಲೇ ಮುಂಜಾನೆಯ ಬೆಳಕು ಮೂಡಿದ್ದಿತು. ಆದ ಅನುಭವದಿಂದ ಪಳನಿಸ್ವಾಮಿಗೆ ಅಪೂರ್ವವಾದ ಶಾಂತಿ, ಸಮಾಧಾನ, ಸಂತೋಷ ಒದಗಿದ್ದವು. ಹಿಂದೆಂದೂ ಈ ಬಗೆಯ ಕೃತಾರ್ಥತೆಯನ್ನು, ಧನ್ಯತೆಯನ್ನು ಅವನು ಅನುಭವಿಸಿರಲಿಲ್ಲ. ಒದಗಿಬಂದ ಅನುಭವವನ್ನು ಅರ್ಥಮಾಡಿಕೊಳ್ಳಲು ನೋಡಿದನು; ಆದರೆ ಅದೇನು ಬಗೆ ಹರಿಯಲಿಲ್ಲ. ತಾನು ನಿರೀಕ್ಷೆ ಮಾಡದ ಒಂದು ಲಾಭ; ಅಸಾಧಾರಣವಾದ ಈ ಅನುಭವವು ಆಲೋಚನೆಯ ಹಿಡಿತಕ್ಕೆ ಸಿಕ್ಕುವುದಲ್ಲ, ಅದನ್ನು ಯುಕ್ತಿಯಿಂದ ವಿಶ್ಲೇಷಣೆ ಮಾಡುವುದಾಗದು. ಅನುಭವದ ಫಲವಂತೂ ಸ್ಪಷ್ಟವಾಗಿದ್ದಿತು; ಶಾಂತಿ ಸಮೃದ್ಧಿ.

ಇದರ ಪ್ರಭಾವದಿಂದ ಲೌಕಿಕ ಭೋಗವಾಗಲೀ, ಪ್ರಾಪಂಚಿಕ ಪ್ರಯೋಜನವಾಗಲೀ ತೀರಾ ಅಲ್ಪವೆಂಬ ಭಾವನೆ ಬೇರೂರಿತು. ಸಂಸಾರದ ಆಕರ್ಷಣೆ ಸಂಪೂರ್ಣವಾಗಿ ಕಳಚಿಬಿದ್ದಿತು. ತನ್ನದೊಂದು ಕರ್ತವ್ಯವಿದೆ, ನಾನು ನಿರ್ವಹಿಸಬೇಕಾದುದಿದೆ ಎಂಬುದು ಖಚಿತವಾಯಿತು. ಅಧ್ಯಾತ್ಮಿಕ ಸತ್ಯದ ಕಡೆಗೆ ಜನರ ಮನಸ್ಸನ್ನೂ, ಹೃದಯವನ್ನೂ ತಿರುಗಿಸುವುದೇ ತಾನು ಬದುಕಿನಲ್ಲಿ ಸಾಧಿಸಬೇಕಾದುದು ಎಂಬುದನ್ನು ಕಂಡುಕೊಂಡನು.

ಈ ವಿಲಕ್ಷಣ ಅನುಭವವನ್ನು ಮೆಲುಕುಹಾಕುತ್ತಿರುವಾಗಲೇ ಅವನನ್ನು ರಾತ್ರಿ ಧರ್ಮಶಾಲೆಯಲ್ಲೇ ಬಿಟ್ಟುಬಂದಿದ್ದ ಸಂಗಾತಿಗಳು ಬಂದು ಸೇರಿಕೊಂಡರು. ಮೊದಲೇ ಅಂದುಕೊಂಡಂತೆ ಅವರು ರಾತ್ರಿ ನಿದ್ದೆ ಮಾಡಿ, ಮುಂಜಾನೆಯೆದ್ದು ಬೆಟ್ಟವೇರಿ ಬಂದಿದ್ದರು; ಹೊರಡುವಾಗ ಪಳನಿಸ್ವಾಮಿಯನ್ನು ಅಲ್ಲೆಲ್ಲಾ ಹುಡುಕಾಡಿದರು. ಎಲ್ಲಿಯೂ ಕಾಣದಿದ್ದಾಗ ತಾವೇ ಹೊರಟರು. ಅರ್ಧಬೆಟ್ಟ ಹತ್ತಿಬಂದಮೇಲೆ

ಪಳನಿಸ್ವಾಮಿ ಇಲ್ಲಿ ಕುಳಿತಿರುವುದನ್ನು ಕಂಡು ಅವನನ್ನು ತರಾಟೆಗೆ ತೆಗೆದುಕೊಂಡರು; ಒಬ್ಬರಿಗೂ ತಿಳಿಸದೆ ಒಬ್ಬನೇ ರಾತ್ರಿಯೇ ಬೆಟ್ಟಹತ್ತಿ ಹೊರಟುದು ಏಕೆಂದು ಕೇಳಿದರು. ಪಳನಿಸ್ವಾಮಿಗೆ ಏನುತ್ತರ ಹೇಳಬೇಕೆಂಬುದು ತಿಳಿಯದೆ ಮೌನವಾಗಿದ್ದನು.

ಯಾತ್ರಿಕರ ತಂಡ ಅಲ್ಲಿಂದ ಬೆಟ್ಟವನ್ನು ಏರತೊಡಗಿದಾಗ ಪಳನಿಸ್ವಾಮಿಯೂ ಅದರಲ್ಲಿ ಸೇರಿಕೊಂಡನು. ಆದರೆ ಈಗ ಮೌನಿಯಾಗಿಬಿಟ್ಟಿದ್ದನು. ದಿಟವಾಗಿ ನಡೆದುದನ್ನು ಹೇಗೆ ಹೇಳುವುದು? ನಂಬುವವರಾದರೂ ಯಾರು? ಅದರ ತಾತ್ಪರ್ಯ ತನಗೇ ಮನದಟ್ಟಾಗಲಿಲ್ಲವಷ್ಟೇ?

ಯಾತ್ರಿಕರು ಬೆಟ್ಟದ ನೆತ್ತಿಯಮೇಲೆ ಹತ್ತಿಬಂದು ಶಿವನ ಪಾದವನ್ನು ನೋಡಿ ನಮಸ್ಕರಿಸಿದರು. ಅವರಿಗೇನು ಕಂಡಿತೋ ಕಾಣಲಿಲ್ಲವೋ, ಪಳನಿಸ್ವಾಮಿಗಂತೂ ಪಾದದಸುತ್ತ ಬೆಳಕು ಚಕ್ರಾಕಾರವಾಗಿ ತಿರುಗುತ್ತಿರುವುದು ಕಾಣಿಸಿತು. ಪಾದದಿಂದ ಕಣ್ಣನ್ನು ಕೋರೈಸುವ ಪ್ರಭೆ ಹೊರಹೊಮ್ಮಿದುದು ಕಂಡಿತು. ಪಳನಿಸ್ವಾಮಿಯ ಬಾಯಿಂದ ಯಾವ ಮಾತೂ ಹೊರಡಲಿಲ್ಲ. ಆದರೆ ಪಳನಿಸ್ವಾಮಿಯ ಚೇತನದಲ್ಲೊಂದು ಪರಿವರ್ತನೆಯಾಗಿದ್ದಿತು; ಜೀವಿತದ ಮಾರ್ಗದರ್ಶನ ದೊರೆತಿದ್ದಿತು. ದೈವಾನುಗ್ರಹದ ಮುನ್ಸೂಚನೆ ಒದಗಿದ್ದಿತು.

ತೃತೀಯ ಪುಷ್ಪ

ತಿರುಚಿಸ್ವಾಮಿಯಾಗಿ ಪರಿವರ್ತನೆ



"ಎಳವೆಯಲ್ಲಿ ಆಟಕ್ಕೆಂದು ಮಣ್ಣಿನಿಂದ ಮಾಡಿಕೊಂಡಿದ್ದ ಗೊಂಬೆಯೇ ನಾನು, ಪರಾಶಕ್ತಿ"

ಚೆಟ್ಟಿನಾಡಿನ ಕರೆ

ಶಿವನಡಿಪಾದಕ್ಕೆ ಹೋದ ಯಾತ್ರಿಕರು ಪಳನಿಸ್ವಾಮಿಯೊಡಗೂಡಿ ಶಿವನ ಪಾದವನ್ನು ಸಂದರ್ಶಿಸಿ, ಪೂಜೆಯನ್ನು ಸಲ್ಲಿಸಿ, ಬೆಟ್ಟವನ್ನಿಳಿದು ಕಂಡೀನಗರಕ್ಕೆ ಮರಳಿದರು. ಪಳನಿಸ್ವಾಮಿಯು ಕಂಡಿಯಲ್ಲಿ ಮತ್ತೆ ಮೂರು ತಿಂಗಳು ಕಳೆದು ಭಾರತ ದೇಶಕ್ಕೆ ಹಿಂದಿರುಗಿದನು. ತಮಿಳುನಾಡಿಗೆ ಬಂದಮೇಲೆ ತಿರುಚಿಯಲ್ಲಿ ಕೆಲದಿನಗಳನ್ನು ಕಳೆಯುವ ಮನಸ್ಸು ಮಾಡಿದನು. ತಿರುಚಿಯಲ್ಲಿ ಅವನ ಸೋದರ ಮಾವ (ತಾಯಿಯ ತಮ್ಮ) ದೊರೆಸ್ವಾಮಿ ನಾಯಕರೆಂಬುವರು ಉದ್ಯೋಗದಲ್ಲಿದ್ದರು (ಇಂಜಿನಿಯರ್).

ತಿರುಚಿಯೆಂಬುದು ತಿರಿಚ್ಚಿರಪಳ್ಳಿಯೆಂಬುದರ ಸಂಕ್ಷಿಪ್ತರೂಪ; 'ತಿರಿಚಿ' ಎಂದಿರಬೇಕಾದುದು 'ತಿರುಚಿ' ಎಂದಾಗಿದೆ. ತಮಿಳಿನ ಈ ಹೆಸರಿಗೆ ಮೂಲ ಲಂಕಾಧಿಪತಿ ರಾವಣನ ನಂಟನಾಗಿದ್ದ ತ್ರಿಶರನು ಈ ಊರಿನ ನಡುವೆ ಬಂಡೆಯ ಮೇಲೆ ಕುಳಿತು ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡನೆಂದು ಪುರಾಣದ ಕತೆ. ಕಾವೇರಿ ನದಿಯ ದಂಡೆಯಮೇಲಿರುವ ಈ ಊರು ಏಳನೆಯ ಶತಮಾನದಿಂದ ಹದಿನೇಳನೆಯ ಶತಮಾನದವರೆಗೂ ಪಲ್ಲವ, ಚೋಳ, ವಿಜಯನಗರದ ಅರಸರಿಗೆ ಮಾಂಡಲೀಕ ರಾಜಧಾನಿಯಾಗಿದ್ದಿತು. ವಿಜಯನಗರದ ಅರಸನ ಮಂತ್ರಿಯೊಬ್ಬನ ಮಗನಾಗಿದ್ದು ಶೈವಸಂತರಲ್ಲಿ ಪ್ರಖ್ಯಾತನಾದ ತಾಯುಮಾನವರ್ ಇಲ್ಲಿದ್ದವನು. ಇಲ್ಲಿರುವ ಶಿವಾಲಯ ತಾಯುಮಾನೇಶ್ವರವೆಂದೇ ಪ್ರಸಿದ್ಧವಾಗಿದೆ. ಊರ ನಡುವೆ ಇರುವ ಬಂಡೆಯಮೇಲೆ ಉಚ್ಚಿ ವಿನಾಯಕನ ಗುಡಿಯಿದೆ; ಗಣಪತಿಯ ಹಣೆಯ ಮೇಲೆ ಸ್ವಲ್ಪ ಹಳ್ಳವಾಗಿರುವುದರಿಂದ ಈ ಹೆಸರು. ಊರ ಸುತ್ತಮುತ್ತ ಶ್ರೀರಂಗ (ಉತ್ತರಕ್ಕೆ ಮೂರು

ಮೈಲಿ ದೂರದಲ್ಲಿ), ಉರೈಯಾರ್ (ತಿರುಮುಕ್ಕೀಶ್ವರಂ, ಪಂಚವರ್ಣೇಶ್ವರ ಊರ ಹೊರಗೆ), ಜಂಬುಕೇಶ್ವರ (ತಿರುಯಾನೈಕ್ಕಾವಲ್, ಎರಡು ಮೈಲಿ ದೂರದಲ್ಲಿ), ತಿರುವಾಶಿ (ನಟರಾಜ, ಮೂಯಲಕ ಪಕ್ಕದಲ್ಲಿ ನಿಂತಿರುವುದು ವಿಶೇಷ), ಕಣ್ಣನೂರು (ವಿಕ್ರಮಪುರ, ಹೊಯ್ಸಳೇಶ್ವರ) ಮುಂತಾದ ಕ್ಷೇತ್ರಗಳಿವೆ. ಮದ್ರಾಸಿನಿಂದ ಸುಮಾರು 250 ಮೈಲಿ ದೂರದಲ್ಲಿರುವ ಊರು ಇದು.

ಪಳನಿಸ್ವಾಮಿಗೆ ತಿರುಚಿಯ ಆಕರ್ಷಣೆಯಿದ್ದುದು ಊರನಡುವೆ ಇರುವ ಬಂಡೆಗುಡ್ಡದಲ್ಲಿ; ಅದರಲ್ಲಿರುವ ಗುಹೆಯಲ್ಲಿ ಕುಳಿತು ಯಾವ ಆತಂಕ ವಿಲ್ಲದೆ ಧ್ಯಾನ ಮಾಡಬಹುದೆಂಬುದು ಅವನ ಉದ್ದೇಶವಾಗಿದ್ದಿತು. ಪ್ರಶಸ್ತವಾದ ಜಾಗ; ಶಾಂತವಾದುದೂ ಹೌದು, ಜನಸಂಚಾರ ಕಡಿಮೆ; ಗದ್ದಲವಿರದು. ಊರಿನ ಇನ್ನೊಂದು ಆಕರ್ಷಣೆಯೆಂದರೆ ಅಲ್ಲಿ ವಾಸವಾಗಿದ್ದ ರಾಮಾಶಾಸ್ತ್ರಿಯೆಂಬ ಪಂಡಿತರು. ವೇದಭಾಗದಲ್ಲಿ ಚೆನ್ನಾಗಿ ಅಧ್ಯಯನ ಮಾಡಿದ್ದ ಇವರು ಪಳನಿಸ್ವಾಮಿಗೆ ಪೂರ್ವಪರಿಚಿತರು. ಇವರು ಸ್ವಲ್ಪಮಟ್ಟಿಗೆ ವೇದಾಂತವನ್ನೂ ಅಭ್ಯಾಸ ಮಾಡಿದ್ದರು. ಪಳನಿಸ್ವಾಮಿ ಇವರ ಬಳಿ ಕೃಷ್ಣಯಜುರ್ವೇದದ ಕೆಲವು ಭಾಗಗಳನ್ನು ಕಲಿತನು. ಪಳನಿಸ್ವಾಮಿಯ ಹಿರಿಯರು ಕೃಷ್ಣಯಜುರ್ವೇದ ಶಾಖೆಗೆ ಸೇರಿದ್ದವರು. ಗುಹೆಯಲ್ಲಿ ಧ್ಯಾನ ನಡೆಯುತ್ತಿದ್ದಿತು. ಸೋದರ ಮಾವನ ಮನೆಯಲ್ಲಿ ವಾಸ್ತವ್ಯ.

ಇಲ್ಲಿ ಅವನ ತಪಸ್ಸು, ಅಧ್ಯಯನ ನಿರಾತಂಕವಾಗಿ ಸಾಗಿತಲ್ಲದೆ, ಅವನ ಯಶಸ್ಸೂ ಸ್ವಲ್ಪಮಟ್ಟಿಗೆ ಹರಡಿತು. ಅವನು ಇಲ್ಲಿರುವುದು ಶ್ರೀಲಂಕದಲ್ಲಿ ಪರಿಚಿತರಾದ ಕೆಲವು ನಗರತ್ತಾರರಿಗೆ (ನಾಟ್ಟುಕೋಟೆ ಚೆಟ್ಟಿಯಾರರಿಗೆ) ತಿಳಿದು ಅವರು ಇಲ್ಲಿಗೆ ಬರತೊಡಗಿದರು. ಹಿಂದಿನ ಪಳನಿಸ್ವಾಮಿಯೆಂಬ ಹೆಸರು ಹೋಗಿ ಈಗ ತಿರುಚಿಸ್ವಾಮಿಯೆಂಬುದೇ ನಿಂತಿತು; ತಿರುಚಿಯಲ್ಲಿರುತ್ತಿದ್ದುದೇ ಕಾರಣ. ಇದು ಸಂತ ಜೀವನದಲ್ಲಿ ಬಾಲ್ಯದೆಶೆ ಕಳೆದ, ಪ್ರೌಢದೆಶೆಯನ್ನು ಮುಟ್ಟಿದ ಘಟ್ಟ.

ಪಳನಿಸ್ವಾಮಿಗೆ ಮದುವೆಮಾಡಬೇಕೆಂದು ಮನೆಯ ಹಿರಿಯರು ಪ್ರಯತ್ನಪಟ್ಟುದು ಸಹಜವೇ. ಆದರೆ ಮದುವೆಯಾಗಲು ಸ್ಪಷ್ಟವಾಗಿ ನಿರಾಕರಿಸಿ, ತನ್ನದು ಹೇಳಿಕೇಳಿ

ಸಂತಜೀವನವೆಂದು ಪಳನಿಸ್ವಾಮಿ ನಿರಾಕರಿಸಬಿಟ್ಟನು. ಈ ವೇಳೆಗೆ ಅವನಿಗೆ 20 ವರ್ಷ ವಯಸ್ಸು; ಸಣ್ಣದೊಂದು ಶಿಷ್ಯಕೂಟವೂ ಸಿದ್ಧವಾಗಿದ್ದಿತು. ಮನೆಯವರ ಪಳನಿಸ್ವಾಮಿಯು ಈಗ ಊರವರಿಗೆ ತಿರುಚಿಸ್ವಾಮಿಗಳು. ತಿರುಚಿಯಲ್ಲಿ ಬಹುಕಾಲ ಇರದೆ ತಿರುಚಿಯ ಸಂಬಂಧವೂ ಏನೂ ಇರದೆ, ಅವರ ಕಾರ್ಯಕ್ಷೇತ್ರ ಬೇರೆಬೇರೆ ಕಡೆ ಇದ್ದರೂ, ಅವರು ತಿರುಚಿಸ್ವಾಮಿಗಳಾಗಿಯೇ ಉಳಿದರು. ಮುಂದೆ ಸಂನ್ಯಾಸ ದೀಕ್ಷೆಯನ್ನು ಪಡೆದು ಶಿವರತ್ನಪುರಿಯೆಂಬ ಆಶ್ರಮ ನಾಮವನ್ನು ಪಡೆದುಕೊಂಡಮೇಲೂ ಅವರು ತಿರುಚಿಸ್ವಾಮಿಗಳೆಂದೇ ಪ್ರಸಿದ್ಧರಾದರು. ಇನ್ನುಮುಂದೆ ನಮ್ಮ ನಿರೂಪಣೆಯಲ್ಲೂ ಅವರು ತಿರುಚಿಸ್ವಾಮಿಗಳೇ.

ತಿರುಚಿಯಲ್ಲಿ ಅವರಿದ್ದಾಗ ನಗರತ್ತಾರರು (ನಾಟ್ಟುಕೋಟೆ ಚೆಟ್ಟಿಯಾರರು) ಅವರ ಬಳಿ ಬಂದು ಅವರ ಸೇವೆಮಾಡಿ ಹೋಗುವುದು ಬರುಬರುತ್ತಾ ಹೆಚ್ಚಿತು. ಇವರಲ್ಲಿ ಕೆಲವರು ತಿರುಚಿಸ್ವಾಮಿಗಳನ್ನು ತಮ್ಮ ಚೆಟ್ಟಿನಾಡಿಗೆ ಕರೆದೊಯ್ಯಬೇಕೆಂದು ಮನಸ್ಸು ಮಾಡಿದರು. ಈ ಸೂಚನೆಗೆ, ತೋರಿಕೆಗೆ ಸ್ವಾಮಿಗಳು ಒಪ್ಪಿದರು. ತಿರುಚಿಯಲ್ಲಿ ತಮ್ಮ ನಂಟರು ಬಹುಮಂದಿ. ನಾಯಕ ಮನೆತನದ ಒಂದು ಶಾಖೆ ತಿರುಚಿಯ ವಿಜಯನಗರದ ಅರಸರ ಅಧೀನವಾಗಿದ್ದಾಗ ಇಲ್ಲಿ ನೆಲೆಸಿದ್ದಿತು; ಅದು ಬೆಳೆದು ಊರಲ್ಲೂ ಊರ ಸುತ್ತಮುತ್ತಲೂ ಸ್ವಾಮಿಗಳಿಗೆ ಹತ್ತಿರದ, ದೂರದ ಸಂಬಂಧಿಗಳಿದ್ದು ಅವರು ತಂತಮ್ಮ ಮನೆಗಳಿಗೆ ಇವರನ್ನು ಕರೆದೊಯ್ಯುತ್ತಿದ್ದರು. ಇದು ಅವರಿಗೆ ತೊಂದರೆಯಾಗಿಯೇ ಪರಿಣಮಿಸಿತು; ಧ್ಯಾನಕ್ಕೆ, ಏಕಾಂತಕ್ಕೆ ಅಡ್ಡಿಯಾಯಿತು. ಹೀಗಾಗಿ ಊರು ಬಿಟ್ಟು ದೂರ ಎಲ್ಲಿಯಾದರೂ ಹೋಗಬೇಕೆಂದು ಹವಣಿಸುತ್ತಲೇ ಇದ್ದರು. ಚೆಟ್ಟಿನಾಡಿನ ಕರೆ ಬಂದಾಗ ಒಡನೆಯೇ ಸಮ್ಮತಿಸಿದರು.

ಚೆಟ್ಟಿನಾಡಿನ ನಗರತ್ತಾರರ ವಿಚಾರ ಸ್ವಲ್ಪ ತಿಳಿಸಬೇಕು. ತಮಿಳುನಾಡಿನಲ್ಲಿ ಮಧುರೆ, ಕಾರೈಕ್ಕುಡಿ, ರಾಮನಾಥಪುರಂ ಮತ್ತು ಪುದುಕ್ಕೋಟ್ಟೈ ಈ ಪ್ರದೇಶಗಳಲ್ಲಿ ತೊಂಬತ್ತಾರು ಗ್ರಾಮಗಳು ಕೂಡಿಕೊಂಡು ಚೆಟ್ಟಿನಾಡೆಂದಾಗಿದೆ. ಈ ಗ್ರಾಮಗಳೆಲ್ಲ ಸಮೃದ್ಧವಾದುವು; ಅಲ್ಲಿನ ಜನರು ವ್ಯಾಪಾರ, ಉದ್ಯಮ, ಬ್ಯಾಂಕಿಂಗ್ ಮೊದಲಾದ ವೃತ್ತಿಗಳನ್ನು ಹಿಡಿದು

ಶ್ರೀಮಂತರಾದವರು. ಅವರ ವ್ಯವಹಾರ ಕೌಶಲ, ಪ್ರಾಮಾಣಿಕತೆ, ಧರ್ಮಶ್ರದ್ಧೆ, ಸಾಹಸ ಪ್ರವೃತ್ತಿ ಇವೆಲ್ಲವೂ ಇಡೀ ದೇಶದಲ್ಲಿಯೇ ಪ್ರಸಿದ್ಧವಾಗಿವೆ. ಇವರು ನೆರೆ ದೇಶಗಳಿಗೆ (ಶ್ರೀಲಂಕ, ಮಲಯ, ಬರ್ಮಾ, ಇಂಡೋಚೀಣಾ) ಹೋಗಿ ಅಲ್ಲಿ ಉದ್ಯಮಿಗಳಾಗಿ ಹಣವನ್ನೂ ಹೆಸರನ್ನೂ ಪಡೆದುಕೊಂಡಿರುವುದಿದೆ. ಹೀಗಾಗಿ ಇವರು ಏಶಿಯಾ ಖಂಡದ ಎಲ್ಲೆಲ್ಲೂ ಹರಡಿಕೊಂಡಿದ್ದಾರೆ. ನಾಟ್ಟುಕೋಟೆ ಚೆಟ್ಟಿಯಾರರೆಂದರೆ ಶ್ರೀಮಂತರೆಂದೇ ಅರ್ಥ!

ಇಷ್ಟಾದರೂ ಅವರು ತಮ್ಮ ಮೂಲಗ್ರಾಮವನ್ನು ಮರೆಯುವುದಿಲ್ಲ. ಎಲ್ಲಿಯೇ ವಾಸಿಸಲಿ, ಉದ್ಯೋಗ ಮಾಡಲಿ, ತಮ್ಮ ಹಳ್ಳಿಯಲ್ಲೊಂದು ಮನೆಯನ್ನು ಅಚ್ಚುಕಟ್ಟಾಗಿ ಉಳಿಸಿಕೊಂಡೇ ಇರುತ್ತಾರೆ. ವರ್ಷಕ್ಕೊಮ್ಮೆಯಾದರೂ ತಮ್ಮ ಹಳ್ಳಿಗೆ ಹೋಗಿಬರುತ್ತಾರೆ. ತಮ್ಮ ಮನೆಗಳಲ್ಲಿ ನಡೆಯಬೇಕಾದ ಮದುವೆ ಮೊದಲಾದ ಉತ್ಸವಗಳನ್ನು ತಮ್ಮ ಹಳ್ಳಿಯ ಮನೆಯಲ್ಲಿಯೇ ನಿರ್ವಹಿಸುತ್ತಾರೆ. ಅವರೆಲ್ಲ ಧರ್ಮದಲ್ಲಿ ಶ್ರದ್ಧೆಯುಳ್ಳವರು; ತಮ್ಮ ಸ್ವಂತ ಊರುಗಳಲ್ಲಿ ಗುಡಿಗಳನ್ನು ಕಟ್ಟಿಸಿ ಅಲ್ಲಿ ಪೂಜೆ ತಪ್ಪದೆ ನಡೆಯುವ ವ್ಯವಸ್ಥೆಮಾಡುವರು; ಹಳೆಯ ಗುಡಿಗಳಾದರೆ ತಪ್ಪದೆ ಜೀರ್ಣೋದ್ಧಾರ ಮಾಡಿಸುವರು.

ಆಚಾರದಲ್ಲಿ ಅವರೆಲ್ಲ ಶೈವರು. ತಮ್ಮ ಉತ್ಪಾದನೆಯಲ್ಲಿ ಒಂದು ಭಾಗವನ್ನು ಧರ್ಮಕಾರ್ಯಗಳಿಗೆಂದು ಮೀಸಲಿಡುವರು; ಇದಕ್ಕೆ ಮಹಿಮೆಯೆಂದು ಹೆಸರು. ಶಿವಾಲಯವನ್ನು ಕಟ್ಟಿಸುವುದು, ಆಲಯಗಳನ್ನು ದುರಸ್ತಿಮಾಡುವುದು, ಪುಣ್ಯಕ್ಷೇತ್ರಗಳಲ್ಲಿ ಯಾತ್ರಿಕರ ಅನುಕೂಲಕ್ಕಾಗಿ ಧರ್ಮಸತ್ರಗಳನ್ನು ನಡೆಸುವುದು, ವೇದಪಾಠಶಾಲೆಗಳನ್ನು ನಡೆಸುವುದು ಇವೆಲ್ಲ ಅವರ 'ಮಹಿಮೆ'ಯಲ್ಲಿ ಸೇರುವ ಕಾರ್ಯಗಳು. ಧರ್ಮದ ಸಲುವಾಗಿ ಅಪಾರವಾದ ಹಣವನ್ನು ವೆಚ್ಚಮಾಡುವರು ಈ ಜನ. ಈ ದಿಶೆಯಲ್ಲಿ ಹಿಂದೆ ನಡೆದಷ್ಟು ಧರ್ಮ ಬರುಬರುತ್ತ ನಡೆಯದಂತಾಯಿತು; ನಗರತ್ತಾರರಿಗೆ ಧರ್ಮಬುದ್ದಿ ಕಡಿಮೆಯಾಗುತ್ತ ಬಂದಿತು. ಚೆಟ್ಟಿನಾಡಿನಲ್ಲಿ ಹಲವಾರು ಶಿವಾಲಯಗಳು ಹಾಳುಬಿದ್ದುವು.

ಯುವಕ ನಗರತ್ತಾರರಿಗೆ ಒದಗಿದ ಪಾಶ್ಚಾತ್ಯ ಶಿಕ್ಷಣ, ಅವರು ಪಡೆದುಕೊಂಡ ನಗರ ಸಂಸ್ಕೃತಿಯ ಪರಿಚಯ, ಉದ್ಯಮದಲ್ಲಿ ಒದಗಿಬಂದ ಲೌಕಿಕ ಮನೋಧರ್ಮ, ಶ್ರೀಮಂತಿಕೆಯ ಮಡಿಲಲ್ಲಿ ಬೆಳೆದುಬಂದ ಭೋಗಾಸಕ್ತಿ ಇವೆಲ್ಲ ತಪ್ಪದೆ ಪ್ರಭಾವವನ್ನು ಬೀರಿದವು. ಹಿರಿಯರು ಅನುಸರಿಸುತ್ತಿದ್ದ ಸರಳ ಜೀವನ ಅವರ ಹಿಂದೆಯೇ ಹೋಯಿತು; ಅವರ ಮೌಲ್ಯಗಳು ಈಗ ಯಾರಿಗೂ ಬೇಡವಾದವು. ಆಧುನಿಕತೆಯ ಬಿರುಗಾಳಿಯಲ್ಲಿ ಧರ್ಮದ ಸೊಡರು ಆರಿಹೋಗುವಂತಾಯಿತು. ಧನವಿರುವುದು ಧರ್ಮಕ್ಕಾಗಿ ಎಂಬ ಸಂಹಿತೆಯು ಈಗ ಯಾವ ಧನಿಕನಿಗೂ ಬೇಡವಾಯಿತು. ಕರ್ತವ್ಯನಿಷ್ಠೆಯೂ ಸಡಿಲವಾಗತೊಡಗಿತು.

ಇಂಥ ಸಂದರ್ಭದಲ್ಲಿ ತಿರುಚಿಸ್ವಾಮಿಗಳು ಚೆಟ್ಟಿನಾಡಿಗೆ ಬಂದುದು ಧರ್ಮದ ಪುನರುಜ್ಜೀವನದಲ್ಲಿ ಪ್ರಮುಖಪಾತ್ರವನ್ನು ವಹಿಸಿತು; ಅವನತಿಯ ಗತಿಯನ್ನು ತಡೆಹಿಡಿಯಲು ನೆರವಾಯಿತು. ನಗರತ್ತಾರರಲ್ಲಿ ಹಲವರು ಶ್ರೀಲಂಕದ ಕಂಡಿಯಲ್ಲಿ ನಡೆದ ಪ್ರಸಂಗವನ್ನು ಅರಿತಿದ್ದರು. ತಿರುಚಿಸ್ವಾಮಿಗಳಲ್ಲಿ ಗೌರವಬುದ್ಧಿ ಬೆಳೆದಿದ್ದಿತು. ಶ್ರೀಲಂಕದಲ್ಲಿಯೆ ಶಿವನಡಿಪಾದದಲ್ಲಿ ತಿರುಚಿಸ್ವಾಮಿಗಳಿಗೆ ಲಭಿಸಿದ ದೇವೀದರ್ಶನದ ಕತೆಯನ್ನು ಇವರು ಕರ್ಣಾಕರ್ಣಿಕೆಯಾಗಿ ಕೇಳಿದ್ದರು. ಹೀಗಾಗಿ ಚೆಟ್ಟಿನಾಡಿನ ಹಳ್ಳಿಹಳ್ಳಿಯಲ್ಲಿಯೂ ಇವರಿಗೆ ಆದರದ ಸ್ವಾಗತ ದೊರೆಯಿತು; ಪಾದಪೂಜೆ ನಡೆಯಿತು. ಚೆಟ್ಟಿನಾಡಿನಲ್ಲೆಲ್ಲ ಸುತ್ತಾಡಿ ಅಲ್ಲಿನ ಸ್ಥಿತಿಗತಿಗಳನ್ನೆಲ್ಲ ನೇರವಾಗಿ ಅರಿತುಕೊಂಡರು. ಜನರ ಸಮಸ್ಯೆಗಳನ್ನು ತಿಳಿದುಕೊಂಡು ಸ್ವಾಮಿಗಳು ಜನರ, ಜನರು ಸ್ವಾಮಿಗಳ ಪರಿಚಯಮಾಡಿಕೊಳ್ಳುವುದಾಯಿತು.

ನೇತ್ರಾಂಬಿಕೈ ದೇವಾಸ್ಥಾನದ ಉತ್ಸವದಲ್ಲಿ ಶ್ರೀ ತಿರುಚಿಸ್ವಾಮಿ

ದೇಗುಲ ಸಂಸ್ಕೃತಿ

ಸ್ವಾಮಿಗಳು ಈ ಪ್ರದೇಶದಲ್ಲಿ ಕಂಡದ್ದು ಮುಖ್ಯವಾಗಿ ದೇವಾಲಯಗಳ ದುಃಸ್ಥಿತಿ. ನಗರತ್ತಾರರು ಅನುಕೂಲಸ್ಥರಾವ ಜನ; ಶ್ರೀಮಂತರು. ಆರ್ಥಿಕವಾದ ಯಾವ ತೊಂದರೆಯೂ ಅವರನ್ನು ಕಾಡುತ್ತಿರಲಿಲ್ಲ. ಅವರಲ್ಲಿ ಬಹುಮಂದಿಗೆ ಒಳ್ಳೆಯ ವಿದ್ಯಾಭ್ಯಾಸವೂ ದೊರೆತಿದ್ದಿತು. ಜೀವನ ಮಾರ್ಗವೂ ಬಹುಮಟ್ಟಿಗೆ ಸುಧಾರಿಸಿದ್ದಿತು. ಗ್ರಾಮಗಳು ಚೆನ್ನಾಗಿಯೇ ಇದ್ದುವು. ಆದರೆ ಒಮ್ಮೆ ವೈಭವದಿಂದ ಕೂಡಿದ್ದ ದೇಗುಲಗಳು ಮಾತ್ರ ಈಗ ಪಾಳುಬಿದ್ದಿದ್ದುವು. ಅದರ ಕಡೆ ಗಮನ ಯಾರಿಗೂ ಇದ್ದಂತೆ ತೋರಲಿಲ್ಲ. ಸ್ವಾಮಿಗಳು ಹೋದಲ್ಲೆಲ್ಲ ಅವರಿಗೆ ಮನವರಿಕೆಯಾದುದು ಇದೇ.

ನಮ್ಮ ಸಂಸ್ಕೃತಿಯಲ್ಲಿ ದೇವಾಲಯಗಳಿಗೆ ಮಹತ್ವದ ಸ್ಥಾನವಿದೆ. ಜನಜೀವನದಲ್ಲಿ ದೇವಾಲಯವು ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಪಾತ್ರಗಳನ್ನೆಲ್ಲ ವಹಿಸುತ್ತದೆ. ಕೇವಲ ಪೂಜಾಸ್ಥಾನವೆಂದಷ್ಟೇ ಅದರ ಅಗತ್ಯವಲ್ಲ; ಸಂಸ್ಕೃತಿಯ ಹಲವು ಪ್ರಕಾರಗಳು ಊರ್ಜಿತವಾಗುವುದು ದೇವಾಲಯದ ವ್ಯವಸ್ಥೆಯಲ್ಲಿಯೇ. ಜನರ ಪರಸ್ಪರ ಭಾವನೆ, ಸಹಕಾರ, ಸಹಯೋಗ, ಸಂಪರ್ಕ ಇವು ದೇವಾಲಯದಿಂದ ಮೈದಳೆಯುತ್ತವೆ. ಸಾಂಪ್ರದಾಯಿಕ ಶಿಕ್ಷಣದ ವಿತರಣೆಯೂ ದೇವಾಲಯದ ಚೌಕಟ್ಟಿನಲ್ಲೇ ನಡೆಯುವುದು ಪ್ರಾಚೀನ ಕ್ರಮ. ದೇವಾಲಯದ ನಿರ್ಮಾಣ, ಜೀರ್ಣೋದ್ಧಾರ, ದೇವಾಲಯದ ನಿತ್ಯಪೂಜಾ ವಿಧಿಗಳು, ಉತ್ಸವಗಳು ಇವೆಲ್ಲವೂ ಹಲವು ವೃತ್ತಿಗಳನ್ನು ಒಳಗೊಳ್ಳುತ್ತವೆ; ಅಲ್ಲಿನ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸುತ್ತವೆ; ವಿಭಿನ್ನ ಮನೋಧರ್ಮದ ಜನರನ್ನು ಒಟ್ಟುಗೂಡಿಸುತ್ತವೆ. ಮತ್ತೆ ಧರ್ಮವೆನ್ನುವ ಕಲ್ಪನೆಗೆ ಒಂದು ಮೂರ್ತ

ರೂಪವನ್ನು ಒದಗಿಸುತ್ತವೆ. ನಮ್ಮ ಜನರ ಹಲವು ಸಮಸ್ಯೆಗಳಿಗೆ ದೇವಾಲಯಗಳೇ ಪರಿಹಾರ.

ಇದು ಸ್ವಾಮಿಗಳ ದೃಷ್ಟಿ. ಅವರಿಗೆ ಇದು ಸ್ಪಷ್ಟವಾದದ್ದು ಚೆಟ್ಟಿನಾಡಿನಲ್ಲಿ ಅವರು ಸುತ್ತಾಡಿದಾಗ. ದೇಗುಲಗಳು ಹೇಳಕೇಳುವವರಿಲ್ಲದೆ ಪಾಳುಬಿದ್ದಿರುವುದು ಅವುಗಳನ್ನು ಸರಿಪಡಿಸುವುದಕ್ಕೆ ಅಥವಾ ಅಲ್ಲಿ ಪೂಜಾದಿಗಳನ್ನು ನಡೆಸುವುದಕ್ಕೆ ಹಣವಿರದೆಂದಲ್ಲ. ಚೆಟ್ಟಿನಾಡಿನಲ್ಲಿ ಹಣಕ್ಕೇನು ಕೊರತೆಯಿಲ್ಲ. ಆದರೆ ಗ್ರಾಮಗಳಲ್ಲಿ ಜನರ ನಡುವೆ ಇರುವ ವೈಮನಸ್ಯದಿಂದ, ಪೈಪೋಟಿಯಿಂದ ಈ ಪರಿಸ್ಥಿತಿ. ಹಲವು ದೇವಾಲಯಗಳಲ್ಲಿ ಧರ್ಮದರ್ಶಿಗಳ ಜಗಳದಿಂದ ನಿತ್ಯಪೂಜೆಯೇ ನಿಂತಿದ್ದಿತು. ಗ್ರಾಮದ ಹಿರಿಯರ ಕಾದಾಟದಿಂದ ಉತ್ಸವಗಳು ನಡೆಯುವುದೇ ತಪ್ಪಿದ್ದಿತು. ಅಸೂಯೆ, ಅಂತಃಕಲಹ ಇವುಗಳಿಂದಾಗಿ ಆಲಯಗಳಿಗೆ ಹೋಗುವವರೇ ಇಲ್ಲವಾಯಿತು. ಮತ್ತೆ ಕೆಲವು ದೇಗುಲಗಳು ದುರಸ್ತಿ ಇಲ್ಲದೆ ಪಾಳುಬಿದ್ದಿದ್ದುವು.

ತಿರುಚಿಸ್ವಾಮಿಗಳು ಇದನ್ನು ಕಂಡು ಮಮ್ಮಲ ಮರುಗಿದರು. ಇದಕ್ಕೆ ಏನಾದರೂ ಮದ್ದನ್ನು ಕಂಡುಹಿಡಿಯಬೇಕೆಂದು ಹಗಲೂರಾತ್ರಿ ಚಿಂತಿಸಿದರು. ಊರ ಹಿರಿಯರನ್ನು, ಅರ್ಚಕರನ್ನು, ಅಧಿಕಾರಿಗಳನ್ನು, ಜನಸಾಮಾನ್ಯರನ್ನು ಕರೆಸಿಕೊಂಡು ಅವರೊಂದಿಗೆ ವಿಚಾರಮಾಡಿದರು. ದೇವಾಲಯಗಳನ್ನು ಕಾಪಾಡಿಕೊಳ್ಳಬೇಕಾದ ಅಗತ್ಯವನ್ನು ವಿವರಿಸಿದರು; ಪೂಜಾದಿಗಳನ್ನು ತಪ್ಪದೇ ನಡೆಸುವುದರ ಪ್ರಯೋಜನವನ್ನು ಎತ್ತಿಹೇಳಿದರು. ಉತ್ಸವಗಳನ್ನು ಕಾಲಕಾಲಕ್ಕೆ ನಡೆಸುವುದರ ಸ್ವಾರಸ್ಯವನ್ನು ತಿಳಿಯಹೇಳಿದರು. ನಗರತ್ತಾರರಲ್ಲಿ ಹಿರಿಯರೂ ಕಿರಿಯರೂ ಸ್ವಾಮಿಗಳ ಮಾತಿನಿಂದ ಎಚ್ಚರಗೊಂಡರು, ತಪ್ಪನ್ನು ತಿದ್ದಿಕೊಳ್ಳಲು ಬದ್ಧಕಂಕಣರಾದರು.

ತಿರುಚಿಸ್ವಾಮಿಗಳನ್ನು ತಿರುಚಿಯಿಂದ ಚೆಟ್ಟಿನಾಡಿಗೆ ಕರೆತಂದವರಲ್ಲಿ ಎ.ವಿ.ಆರ್. ಕಾಶಿ ಚೆಟ್ಟಿಯಾರರೆಂಬುವರೊಬ್ಬರು. ಅವರ ಸ್ವಂತ ಊರು ಪಟ್ಟಮಂಗಳಂ. ಸ್ವಾಮಿಗಳನ್ನು ಇಲ್ಲಿಗೇ ಮೊದಲು ಕರೆದುಕೊಂಡು ಹೋದರು. ಈ ಹಳ್ಳಿಯಲ್ಲಿ ಸೋಮಸುಂದರೇಶ್ವರ ಮತ್ತು ಮೀನಾಕ್ಷಿದೇವಿಯರ ಪ್ರಾಚೀನ ದೇವಾಲಯವಿದೆ.

ಮಧ್ಯಯುಗದಲ್ಲಿ ಹಲವು ಶೈವಸಂತರು (ನಾಯನ್ಮಾರರು) ಈ ದೇವಾಲಯವನ್ನು ಸಂದರ್ಶಿಸಿ ಅದರ ಹೆಗ್ಗಳಿಕೆಯನ್ನು ಕುರಿತು ಹಾಡಿದ್ದಾರೆ. ಅವರಲ್ಲಿ ಸುಪ್ರಸಿದ್ಧರಾದ ಮಾಣಿಕ್ಯವಾಚಕರೂ ಒಬ್ಬರು. ಇದೇ ಗ್ರಾಮದಲ್ಲಿ ಅಳಗು-ಸುಂದರಿಯಮ್ಮನೆಂಬ ಗ್ರಾಮ ದೇವತೆಯ ಗುಡಿಯೂ ಇದ್ದಿತು; ಇದನ್ನೂ ಮಾಣಿಕ್ಯವಾಚಕರು ಕಂಡಿದ್ದರು, ಅದನ್ನು ಹೊಗಳಿ ಕವಿತೆಯನ್ನೂ ರಚಿಸಿದ್ದರು. ಆದರೆ ತಿರುಚಿಸ್ವಾಮಿಗಳು ಅದನ್ನು ನೋಡಿದಾಗ ಅದು ತೀರಾ ದುಃಸ್ಥಿತಿಯಲ್ಲಿದ್ದಿತು. ಕಟ್ಟಡ ಕುಸಿದು ಬೀಳುತ್ತಿದ್ದು, ಗುಡಿಯಲ್ಲಿ ಪೂಜೆಯೂ ನಿಂತಿದ್ದಿತು.

ಒಡನೆಯೇ ಸ್ವಾಮಿಗಳು ಊರವರನ್ನೆಲ್ಲಾ ಕೂಡಿಸಿ, ನೆರೆಯೂರಿನ ಶ್ರೀಮಂತರನ್ನೂ ಕರೆಯಿಸಿ ಈ ಗುಡಿಯ ಪ್ರಾಚೀನ ಮಹತ್ವವನ್ನು ಅವರಿಗೆ ತಿಳಿಯ ಹೇಳಿ ಕೂಡಲೇ ದೇವಾಲಯವನ್ನು ಹೊಸದಾಗಿ ಕಟ್ಟಿಸಿ ಪೂಜೆಗಳನ್ನು ನಡೆಸಬೇಕೆಂದು ಸೂಚಿಸಿದರು. ಹಳ್ಳಿಯಲ್ಲಿ ಈ ದೇವಾಲಯ ಹೀಗಿರುವುದು ಊರವರಿಗೆ ನಾಚಿಕೆಗೇಡಿನ ಪ್ರಸಂಗವೆಂದು ಸ್ಪಷ್ಟಪಡಿಸಿದರು. ಊರವರೂ ಇತರರೂ ಸ್ವಾಮಿಗಳ ಮಾತಿಗೆ ಬೆಲೆಕೊಟ್ಟು, ದೇಗುಲದ ಜೀರ್ಣೋದ್ಧಾರದ ಕೆಲಸವನ್ನು ಕೂಡಲೆ ಕೈಗೊಂಡರು. ಅದಕ್ಕೆ ಬೇಕಾದ ಹಣ ಸಂಗ್ರಹವಾಯಿತು; ಕೆಲಸಗಾರರು ಸಿದ್ಧರಾದರು, ತಜ್ಞರು ಮುಂದೆಬಂದರು. ಕೆಲವೇ ತಿಂಗಳುಗಳಲ್ಲಿ ದೇವಾಲಯದ ಜೀರ್ಣೋದ್ಧಾರ ಸಂಪೂರ್ಣವಾಯಿತು. ಮೊದಲಿದ್ದ ಮೂರ್ತಿಯು ಭಿನ್ನವಾಗಿದ್ದುದರಿಂದ ಸ್ವಾಮಿಗಳು ಇಲುವನ್‌ಕೋಟ್ಟೈ ಗಣಪತಿಸ್ಥಪತಿ ಎಂಬ ಹೆಸರಾಂತ ಶಿಲ್ಪಿಯನ್ನು ಕರೆಸಿ ದೇವಿಯ ಹೊಸ ಮೂರ್ತಿಯನ್ನು ಮಾಡಿಸಿದರು. ಆಗಮ ಕ್ರಮದಿಂದ ಈ ಮೂರ್ತಿಯ ಪ್ರತಿಷ್ಠೆಯೂ ದೇಗುಲದ ಕುಂಭಾಭಿಷೇಕವೂ ನೆರವೇರಿದುವು.

ಈ ದೇವಾಲಯ ಮತ್ತೆ ತಲೆಯೆತ್ತಿತಾಗಿ ಹಳ್ಳಿಯಲ್ಲಿ ಹೊಸ ಚೇತನವೇ ಮೂಡಿದಂತಾಯಿತು. ಸ್ವಾಮಿಗಳು ಒಂದು ಪವಾಡವನ್ನೇ ಮಾಡಿದ್ದರು. ದೇವಾಲಯದ ಜೀರ್ಣೋದ್ಧಾರಕ್ಕೆ ಅಗತ್ಯವಾಗಿದ್ದ ಹಲವು ಲಕ್ಷ ರೂಪಾಯಿಗಳನ್ನು ನಗರತ್ತಾರರು ಸ್ವಂತ ಇಚ್ಛೆಯಿಂದಲೆ ಕೊಡಲು ಮುಂದೆಬಂದರು; ಕೆಲವೇ ದಿನಗಳಲ್ಲಿ ಇಷ್ಟೂ ಹಣ ಒದಗಿತು. ಅದು ಮಾತ್ರವಲ್ಲ. ಜನರು ತಮ್ಮ ಹಳೆಯ ಜಗಳಗಳನ್ನು ಮರೆತು ಹೊಸ

ಹುರುಪಿನಿಂದ, ಸೌಹಾರ್ದದಿಂದ ಬಾಳಲು ನಿರ್ಧರಿಸಿದರು. ಇಲ್ಲಿ ಜರುಗಿದ ಈ ಪರಿವರ್ತನೆಯಿಂದ ಇತರ ಗ್ರಾಮಗಳವರಿಗೂ ಪ್ರೇರಣೆ ಒದಗಿತು. ಹಲವಾರು ನೆರೆಯೂರುಗಳವರು ತಿರುಚಿಸ್ವಾಮಿಗಳನ್ನು ತಮ್ಮೂರುಗಳಿಗೆ ಕರೆದೊಯ್ಯಲು ಹಾತೊರೆದರು. ಸ್ವಾಮಿಗಳೂ ಹೋಗಲು ಉತ್ಸಕರಾಗಿದ್ದರು.

ಪಟ್ಟಮಂಗಳದಲ್ಲಿ ತಂಗಿದ್ದಾಗಲೆ ಚೆಟ್ಟಿಯಾರರ ಆಧ್ಯಾತ್ಮಿಕ ಅಗತ್ಯಗಳಿಗೆ ನೆರವಾಗುವ ಮಠಗಳ ವಿಚಾರ ಕೇಳಿ ತಿಳಿದುಕೊಂಡರು. ಇಂಥ ಮಠಗಳಲ್ಲೊಂದಾದ ಕೋವಿಲೂರು ಮಠವನ್ನು ನೋಡಿಯೂ ಬಂದರು. ಅಲ್ಲಿಂದ ಆತ್ತಂಗುಡಿಯೆಂಬ ಗ್ರಾಮಕ್ಕೆ ತೆರಳಿ ಅಲ್ಲಿ ಪಾತರಕ್ಕುಡಿ ಮಠದ ಹಿರಿಯರಾಗಿದ್ದ ಪರಮೇಶ್ವರಸ್ವಾಮಿಗಳನ್ನು ಸಂದರ್ಶಿಸಿದರು. ಅಡಯ್ಯಕ್ಕಪ್ಪ ಚೆಟ್ಟಿಯಾರರೆಂಬ ಭಕ್ತರು ತಮ್ಮೂರಾದ ಕಲ್ಲಲ್ ಎಂಬಲ್ಲಿಗೆ ಕರೆದುಕೊಂಡು ಹೋದರು (1955). ಇಲ್ಲಿ ಸ್ವಾಮಿಗಳು ಮಲೈಯಾಂಡಿ ಚೆಟ್ಟಿಯಾರರ ಮನೆಯಲ್ಲಿ ಹದಿನೈದು ದಿನಗಳ ಕಾಲ ತಂಗಿದ್ದು ಮದರಾಸಿಗೆ ಹೋದರು.

ಮದರಾಸಿನಲ್ಲಿ ಕೆಲವು ದಿನಗಳನ್ನು ಕಳೆದು ಚೆಟ್ಟಿನಾಡಿಗೆ ಹಿಂದಿರುಗಿದರು. ಚೊಕ್ಕನಾಥಪುರಂ ಎಂಬ ಗ್ರಾಮದಲ್ಲಿ ಸುಬ್ಬಯ್ಯ-ಚೆಟ್ಟಿಯಾರರ ಮನೆಯಲ್ಲಿ ಎರಡು ತಿಂಗಳುಗಳಿದ್ದರು. ಈ ಗ್ರಾಮದಲ್ಲಿರುವಾಗ ಗ್ರಾಮಸ್ಥರನ್ನೆಲ್ಲ ಕೂಡಿಸಿ, ಶ್ರೀಮಂತರನ್ನೂ ಬರಮಾಡಿಕೊಂಡು ಊರಿನ ಮಕ್ಕಳಿಗೆ ಶಾಲೆಯೊಂದನ್ನು ಕಟ್ಟಿಸಿದರು; ಇದಕ್ಕೆ ಬೇಕಾದ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಗ್ರಾಮಸ್ಥರೇ ಒದಗಿಸಿದರು.

ಮುಂದೆ ಕೆಲವು ತಿಂಗಳುಗಳಲ್ಲಿ ಚೆಟ್ಟಿನಾಡಿನ ಹಲವಾರು ಶಿವಾಲಯಗಳ ಜೀರ್ಣೋದ್ಧಾರವನ್ನು ಸ್ವಾಮಿಗಳು ಮಾಡಿಸಿದರು; ಹಲವಾರು ಗುಡಿಗಳಲ್ಲಿ ಮೂರ್ತಿಪ್ರತಿಷ್ಠೆಯನ್ನು ಮಾಡಿಸಿದರು. ಅಲ್ಲೆಲ್ಲ ನಿತ್ಯ-ನೈಮಿತ್ತಿಕ ಪೂಜೆಗಳ ವ್ಯವಸ್ಥೆಯನ್ನೂ ಮಾಡಿಸಿದರು.

ಚೆಟ್ಟಿನಾಡಿನಲ್ಲಿ ನಾಟ್ಟರಸನ್‌ಕೋಟ್ಟೈ ಎಂಬುದು ಪ್ರಮುಖವಾದ ಗ್ರಾಮ. ಅಲ್ಲಿ ಹಳೆಯ ತಲೆಮಾರಿನ ಚೆಟ್ಟಿಯಾರರು ಕಟ್ಟಿಸಿದ್ದ ಅನೇಕ ದೇವಾಲಯಗಳಿದ್ದುವು.

ಅವುಗಳಲ್ಲೊಂದು ಕಣ್ಣಾತ್ತಾಳ್ (ಸಂಸ್ಕೃತದಲ್ಲಿ ನೇತ್ರಾಂಬಾ, ಅದೇ ತಮಿಳಿನ ರೂಪದಲ್ಲಿ ನೇತ್ರಾಂಬಾಳ್) ಎಂಬ ದೇವಿಯ ಗುಡಿ; ಇದು ದುರ್ಗೆಯ ಒಂದು ರೂಪ. ತುಂಬ ಜಾಗ್ರತವಾದ ದೈವಕ್ಷೇತ್ರವೆಂದು ಆ ಕಡೆಯಲ್ಲೆಲ್ಲ ಅದು ಪ್ರಸಿದ್ಧವಾಗಿದ್ದಿತು. ಬಹುಮಂದಿ ಈ ಗುಡಿಗೆ ನಡೆದುಕೊಳ್ಳುತ್ತಿದ್ದರು. ವರ್ಷಕ್ಕೊಮ್ಮೆ ಈ ದೇವಿಗೆ 'ಕಳಿಯಾಟ್ಟ-ತಿರುನಾಳ್' ಎಂಬ ಉತ್ಸವ ನಡೆಯುತ್ತಿದ್ದು ಊರೂರುಗಳಿಂದ ಜನ ಬಹುಸಂಖ್ಯೆಯಲ್ಲಿ ಬಂದು ನೆರೆಯುತ್ತಿದ್ದರು. ಆದರೆ ಊರಿನವರ ಹಗರಣದಿಂದಾಗಿ ಈ ಉತ್ಸವ ಹಲವು ವರ್ಷಗಳಿಂದ ನಡೆಯುತ್ತಿರಲಿಲ್ಲ. ತಿರುಚಿಸ್ವಾಮಿಗಳು ಇಲ್ಲಿಗೆ ಬಂದಾಗ ಉತ್ಸವ ನಿಂತುಹೋಗಿರುವುದನ್ನು ಅರಿತುಕೊಂಡು ಛತ್ರಂ ಕಣ್ಣಪ್ಪ ಚೆಟ್ಟಿಯಾರ್, ಕೃಷ್ಣಪ್ಪ ಚೆಟ್ಟಿಯಾರ್ ಮುಂತಾದ ಪ್ರಮುಖರ ನೆರವಿನಿಂದ ಊರಿನವರ ನಡುವೆ ಶಾಂತಿಯನ್ನೇರ್ಪಡಿಸಿ ವಾರ್ಷಿಕ ಉತ್ಸವ ಮತ್ತೆ ನಡೆಯುವಂತೆ ಮಾಡಿದರು. ಊರವರು ಮೊದಲ ಮನಸ್ತಾಪವನ್ನು ಮರೆತು, ಒಗ್ಗಟ್ಟಾದಾಗ, 'ಕಳಿಯಾಟ್ಟ-ತಿರುನಾಳ್' ಮತ್ತೆ ಜನಪ್ರಿಯವಾಯಿತು.

ತಿರುಚಿಸ್ವಾಮಿಗಳು ಸುಧಾರಕರೂ ಹೌದು. ಮೇಲೆ ಹೇಳಿದ ನಾಟ್ಟರಸನ್-ಕೋಟ್ಟೈ ಗುಡಿಯಲ್ಲಿ ವರ್ಷಕ್ಕೊಮ್ಮೆ ನಡೆಯುತ್ತಿದ್ದ 'ಕಳಿಯಾಟ್ಟ-ತಿರುನಾಳಿ'ನಲ್ಲಿ ದೇವಿಗೆ ಪ್ರಾಣಿಬಲಿ ಕೊಡುವ ಪದ್ಧತಿ ಬಹು ಹಳೆಯ ಕಾಲದಿಂದ ವಾಡಿಕೆಯಲ್ಲಿದ್ದಿತು. ಗುಡಿಯಿಂದ ಉತ್ಸವ ಹೊರಡುವ ಮೊದಲು ಮೇಕೆಗಳನ್ನು ದೇವಿಯ ಎದುರು ಕಡಿಯುತ್ತಿದ್ದರು. ತಿರುಚಿಸ್ವಾಮಿಗಳು ಇದು ದುಷ್ಟಪದ್ಧತಿಯೆಂದೂ, ದೇವಿಯು ಹಿಂಸೆಯಿಂದ ಪ್ರಸನ್ನಳಾಗುವಳೆಂಬ ನಂಬಿಕೆ ಸರಿಯಾದುದಲ್ಲವೆಂದೂ ಆಗಮಗ್ರಂಥಗಳಲ್ಲೆಲ್ಲಿಯೂ ಪಶುವಧೆ, ಪ್ರಾಣಿಬಲಿಗಳನ್ನು ಹೇಳಿಲ್ಲವೆಂದೂ, ಸಾತ್ವಿಕಪೂಜೆಯೇ ತಕ್ಕುದೆಂದೂ ಜನರಿಗೆ ತಿಳಿಯಹೇಳಿ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಪ್ರಾಣಿಹಿಂಸೆಯನ್ನು ನಿಲ್ಲಿಸಿದರು. ಹಿಂದಿನಿಂದ ಬಂದ ಆಚಾರವೊಂದನ್ನು ಜನ ಕೈಬಿಡುವಂತೆ ಮಾಡಲು ಸ್ವಾಮಿಗಳು ತಮ್ಮ ಪ್ರಭಾವವನ್ನೆಲ್ಲ ಬಳಸಬೇಕಾಯಿತು. ಭಕ್ತರು ಅವರ ಆದೇಶವನ್ನು ಒಪ್ಪಿದ್ದು ಬಹುವಾಗಿ ಚರ್ಚೆ, ವಾದ, ವಿವಾದಗಳು ನಡೆದ ಮೇಲೆಯೇ. ಪ್ರಾಣಿಹಿಂಸೆಯಿಂದ ಪಾಪವೇ ತಟ್ಟುವುದೆಂದೂ, ದೇವರ

ಅನುಗ್ರಹವೆಂದಿಗೂ ದೊರಕಲಾರದೆಂದೂ ಸ್ವಾಮಿಗಳು ಸ್ಪಷ್ಟಪಡಿಸಿದುದು ಈ ಬಗೆಯ ಹಿಂಸೆ ಬೇರೆಡೆ ನಡೆಯುತ್ತಿದ್ದುದೂ ತಪ್ಪಿತು.

ತಿರುಚಿಸ್ವಾಮಿಗಳು ತಾವು ಹೋದೆಡೆಯಲ್ಲೆಲ್ಲ ಸಾತ್ತ್ವಿಕಪೂಜೆಯೇ ಸರಿಯಾದುದೆಂದು ಉಪದೇಶಮಾಡುತ್ತಿದ್ದರು. ಮಾತಿನಲ್ಲಿ, ಮನಸ್ಸಿನಲ್ಲಿ, ಕೆಲಸದಲ್ಲಿ ಅಹಿಂಸೆ ಇದು ಎಲ್ಲ ಧರ್ಮದ ಮೂಲಸ್ತಂಭ. ಅಹಿಂಸೆಯೆಂಬುದೇ ಮಾನಸಪೂಜೆಯಲ್ಲಿ ಮೊದಲ ಹೂ; ದೇವರಿಗೆ ಪ್ರಿಯವಾದುದು

'ಅಹಿಂಸಾ ಪ್ರಥಮಂ ಪುಷ್ಪಂ'

ಎಂಬುದು ಆಗಮದ ವಿಧಿ. ಸ್ವಾಮಿಗಳಿಗೆ ತಾಂತ್ರಿಕವಿಧಿಗಳ ಪರಿಚಯವಿದ್ದಿತು; ಕಾಪಾಲಿಕರ ಒಡನಾಟವೇ ಇದ್ದಿತಲ್ಲ? ಆದರೆ ಅವರು ಮನಸಾರೆ ಮೆಚ್ಚಿಕೊಂಡಿದ್ದು ವೈದಿಕ ವಿಧಿಗಳನ್ನೇ. ಜನರು ಇವನ್ನನುಸರಿಸಿದರೇ ಶ್ರೇಯಸ್ಸು; ತಾಂತ್ರಿಕ ಪ್ರಕ್ರಿಯೆಗಳಲ್ಲಿ ದಾರಿ ತಪ್ಪುವ, ನೀತಿ ಕೆಡುವ, ಕೆಳಗೆ ಬೀಳುವ ಸಂಭವವಿದೆ ಎಂದು ಅವರ ಎಣಿಕೆ. ಸಂಪ್ರದಾಯಶುದ್ಧವಾಗಿ ದೇವಾಲಯವನ್ನು ಕಟ್ಟಿಸಿ, ಆಗಮೋಕ್ತವಾದ ಪೂಜೆಗಳನ್ನು ನಡೆಸಿದರೇ ಲೋಕಕಲ್ಯಾಣವೆಂದು ಅವರು ಹೇಳುತ್ತಾರೆ. ಈ ಅಭಿಪ್ರಾಯಕ್ಕನುಗುಣವಾಗಿಯೇ ಅವರು ಹಳೆಯ ದೇವಾಲಯಗಳನ್ನು ಸಂಪ್ರದಾಯದಂತೆ ಜೀರ್ಣೋದ್ಧಾರಮಾಡಿಸಿ, ಅದರಲ್ಲಿ ಆಗಮಪ್ರಕಾರವಾದ ಪೂಜೆ, ಉತ್ಸವ ಮೊದಲಾದುವನ್ನು ಏರ್ಪಡಿಸಿದರು.

ಅವರ ಗಮನಕ್ಕೆ ಬಂದು ಜೀರ್ಣೋದ್ಧಾರಗೊಂಡ ಚೆಟ್ಟಿನಾಡಿನ ಆಲಯಗಳಲ್ಲಿ ಕಲ್ಲಲ್ ಎಂಬಲ್ಲಿದ್ದ ನರ್ಕನಿ-ಅಂಬಾಳ್ ಗುಡಿ, ವೆಟ್ರಿಯೂರ್‌ನ ಅನ್ನಪೂರ್ಣಿಯಂಬಾಳ್ ಗುಡಿ, ರಾಂಗಿಯಂನಲ್ಲಿರುವ ಪೊನ್ನಳಕಿ-ಅಮ್ಮನ್ ಆಲಯ, ಪಳ್ಳತ್ತೂರಿನ ನಗರಶಿವನ್ ಗುಡಿ, ಕುಳಿಪಿರೈನ ಲೋಕನಾಯಕಿಯಮ್ಮನ ಆಲಯ, ವಿರಯ ಚಿಲೈನ ಅಡೈಕಲಂ-ಕಾತ್ತ ಅಂಬಾಳ್ ಆಲಯ, ಚಕ್ಕಂಡಿಯ ಶಿವಾಲಯ, ಒಕ್ಕೂರಿನ ಪಿಳ್ಳಯಾರ್-ಕೋಯಿಲ್, ಶೋಳಪುರದ ಶಿವಾಲಯ ಮತ್ತು ಕಾರೈಕ್ಕುಡಿಯ ಕೊಪ್ಪುಡೈ-ಅಮ್ಮನ್ ಆಲಯ ಇವು ಮುಖ್ಯವಾದುವು.

ಹೀಗೆ ಅವರು ಆಲಯಗಳ ವಿಚಾರವಾಗಿ ಆಸಕ್ತಿವಹಿಸಿದರಾಗಿ ತಮಿಳುನಾಡಿನ ಆಲಯ ಸಂಸ್ಕೃತಿ, ಕಲೆ, ವಾಸ್ತು, ಆಗಮ, ಪದ್ಧತಿಗಳು ಇವೆಲ್ಲದರ ನಿಕಟಪರಿಚಯವಾಯಿತು. ಆಗಮ ವಿದ್ವಾಂಸರನ್ನೂ, ವಾಸ್ತುಪರಿಣತರನ್ನೂ, ಶಾಸ್ತ್ರಾಭಿಜ್ಞರನ್ನೂ ಅವರು ಪದೇಪದೇ ಕರೆಸಿಕೊಂಡು ಚರ್ಚೆಮಾಡುತ್ತಿದ್ದರು; ವಿಷಯಸಂಗ್ರಹಣ ಮಾಡುತ್ತಿದ್ದರು. ಪ್ರತಿಷ್ಠೆ, ಕುಂಭಾಭಿಷೇಕ, ಶುದ್ಧಿ, ಉತ್ಸವ ಈ ವಿಚಾರವಾಗಿ ಅವರ ತಿಳಿವಳಿಕೆ ಪ್ರೌಢವಾಗಿದೆ. ಚಿಕ್ಕಂದಿನಿಂದಲೂ ಅವರಿಗೆ ಗುಡಿ, ಪೂಜೆಗಳ ಮೇಲೆ ವಿಶೇಷವಾದ ಅಭಿರುಚಿಯಿದ್ದಿತು; ಈಗ ಚೆಟ್ಟಿನಾಡಿನಲ್ಲಿ ಪ್ರವಾಸಮಾಡುವಾಗ ಈ ಅಭಿರುಚಿ ಪುಟಗೊಂಡು ಹೆಮ್ಮರವಾಯಿತು.

ಧಾರ್ಮಿಕವಿಚಾರಗಳಲ್ಲೇ ಅವರ ಪ್ರೇರಣೆಯೆಂದಾದರೂ ಜನರ ನಿತ್ಯಜೀವನದ ಅಗತ್ಯಗಳನ್ನು ಅವರು ಮರೆಯಲಿಲ್ಲ. ನಿದರ್ಶನಕ್ಕೆ ನಟರಾಜಪುರಂ ಎಂಬ ಚೆಟ್ಟಿನಾಡಿನ ಹಳ್ಳಿಯೊಂದರಲ್ಲಿ ಬಹುಕಾಲದಿಂದ ಜನರಿಗೆ ಕುಡಿಯುವ ನೀರಿನ ಕೊರತೆಯಿದ್ದಿತು. ತಮ್ಮ ಭಕ್ತರೂ ಆ ಊರವರೂ ಆಗಿದ್ದ ಉಳಗಪ್ಪ ಚೆಟ್ಟಿಯಾರರಿಗೆ ಈ ಕೊರತೆಯನ್ನು ಕೂಡಲೆ ನೀಗಿಸುವಂತೆ ಆದೇಶವಿತ್ತರು. ಅವರ ಪ್ರಯತ್ನದಿಂದ, ಸಾಹಸದಿಂದ ಊರಿನಲ್ಲಿ ನೀರಿನ ವ್ಯವಸ್ಥೆಯಾಯಿತು. ಹೀಗೆಯೇ ಮತ್ತೆ ಕೆಲವು ಹಳ್ಳಿಗಳಲ್ಲಿ ಕಲ್ಯಾಣಿಯನ್ನು ಕಟ್ಟಿಸಲು ಹೇಳುತ್ತಿದ್ದರು; ಕಲ್ಯಾಣಿಯಿಂದ ಊರಿಗೆಲ್ಲ ನೀರಿನ ಪ್ರಯೋಜನ. ಚೊಕ್ಕನಾಥಪುರ ಎಂಬ ಇನ್ನೊಂದು ಹಳ್ಳಿಯಲ್ಲಿ ಮಕ್ಕಳಿಗೆ ಶಾಲೆಯೇ ಇರಲಿಲ್ಲ. ಇವರು ತಮ್ಮ ಭಕ್ತರಿಗೆ ಶಾಲೆಯನ್ನು ತೆರೆಯಬೇಕೆಂದು ಆಣತಿಯಿತ್ತರು. ತಮ್ಮನ್ನು ಕಾಣಲು ಬಂದವರನ್ನು"ನಿಮ್ಮೂರಿನಲ್ಲಿ ಶಾಲೆಯಿದೆಯೆ?" ಎಂದು ಕೇಳಿ ಇಲ್ಲವೆಂದರೆ, "ಶಾಲೆಯ ವ್ಯವಸ್ಥೆಮಾಡಿರಿ. ಊರಿಗೆ ಗುಡಿ ಎಷ್ಟು ಮುಖ್ಯವೋ ಶಾಲೆ ಅಷ್ಟೇ ಮುಖ್ಯ" ಎಂದು ಸೂಚಿಸುತ್ತಿದ್ದರು. ಒಕ್ಕೂರು ಎಂಬ ಹಳ್ಳಿಯಲ್ಲಿ ಜನಸಂಖ್ಯೆ ಸುಮಾರಾಗಿದ್ದರೂ ವೈದ್ಯಶಾಲೆಯಿರಲಿಲ್ಲ; ಊರಿನಲ್ಲಿ ವೈದ್ಯರು ಇರಲಿಲ್ಲ. ತಮ್ಮ ಭಕ್ತರಾಗಿದ್ದ ಸೋಮಸುಂದರ ಚೆಟ್ಟಿಯಾರರಿಗೆ ಹೇಳಿ ಅಲ್ಲೊಂದು ಆಸ್ಪತ್ರೆಯನ್ನು ಕಟ್ಟಿಸಿದರು.

ಅವರ ಚೆಟ್ಟಿನಾಡಿನ ಪ್ರವಾಸದಲ್ಲಿ ಕೆಲವು ವಿಚಿತ್ರವೆಂಬಂಥ, ವಿಶೇಷವೆಂಬಂಥ ಪ್ರಸಂಗಗಳೂ ಜರುಗಿದವು. ವೆಟ್ರಿಯೂರೆಂಬ ಗ್ರಾಮದಲ್ಲಿ ಗ್ರಾಮದೇವತೆಯ ಗುಡಿ ತುಂಬ ಶಿಥಿಲವಾಗಿದ್ದಿತು; ಸ್ವಾಮಿಗಳು ಅಲ್ಲಿಗೆ ಬಂದಾಗ ಇದರ ಜೀರ್ಣೋದ್ಧಾರದ

ಕೆಲಸವನ್ನು ಕೈಗೊಂಡರು. ಗುಡಿಯ ಆವರಣದಲ್ಲಿ ಅವರು ನಡೆದಾಡುತ್ತಿದ್ದಾಗ ಒಂದು ದಿನ ಒಂದು ಸ್ಥಳವನ್ನು ತೋರಿಸಿ "ನೋಡಿ, ಇಲ್ಲಿ ಗ್ರಾಮದೇವತೆಯ ಬಂಗಾರದ ಆಭರಣಗಳನ್ನು ಭೂಮಿಯೊಳಗೆ ಅಡಗಿಸಿಟ್ಟಿದ್ದಾರೆ" ಎಂದು ಹೇಳಿದರು. ಹಾಗೆ ಹೇಳಲು ಅವರಿಗೆ ಸ್ಥಳದಲ್ಲೇನು ವಿಶೇಷ ಕಂಡಿರಲಿಲ್ಲ; ಹಿಂದೆ ನಡೆದದ್ದೂ ತಿಳಿದಿರಲಿಲ್ಲ. ಹತ್ತಿರ ಇದ್ದವರು ಸ್ವಾಮಿಗಳ ಮಾತನ್ನು ನಂಬಲಿಲ್ಲ. ಆದರೆ ಸ್ವಾಮಿಗಳು ಮತ್ತೆ ಮತ್ತೆ ಅದನ್ನೇ ಹೇಳಿದಾಗ, ಆ ಸ್ಥಳವನ್ನು ಅಗೆದು ನೋಡಲಾಯಿತು. ಸುಮಾರು ಆಳದಲ್ಲಿ ಆಭರಣಗಳಿದ್ದ ಪೆಟ್ಟಿಗೆ ಸಿಕ್ಕಿತು!

ದೇವಕೋಟ್ಟೆಯ ಶಿವಾಲಯಕ್ಕೆ ಮೊದಲಬಾರಿ ಅವರನ್ನು ಮೆರವಣಿಗೆಯಲ್ಲಿ ಕರೆತರಲಾಯಿತು. ಶಿವಾಲಯದೊಳಗೆ ಅವರು ಕಾಲಿಟ್ಟೊಡನೆ ಅವರು "ಈಗ ಇದು ಶಿವಾಲಯ; ಮೊದಲಿಗೆ ಇಲ್ಲಿ ಪೂಜೆಗೊಳ್ಳುತ್ತಿದ್ದವಳು ಕಾಳಿ (ಪೀಡಾರಿ)" ಎಂದು ಹೇಳಿಬಿಟ್ಟರು. ಜೊತೆಯಲ್ಲಿದ್ದವರಿಗೆ ಆಶ್ಚರ್ಯವಾಯಿತು. ಅವರಲ್ಲಿ ತೀರ ಮುದುಕರಾಗಿದ್ದವರು ಕೂಡ "ಎಂದಿನಿಂದಲೂ ಇದು ಶಿವಾಲಯವೇ. ಇದು ಪೀಡಾರಿಯ ಸನ್ನಿಧಿಯೆಂಬುದನ್ನು ನಾವು ಕೇಳಿಯೂ ಇಲ್ಲ!" ಎಂದರು. ಆದರೆ ಆ ಗುಡಿಯನ್ನು ದುರಸ್ತಿ ಮಾಡುವ ಸಮಯದಲ್ಲಿ ಗರ್ಭಗುಡಿಯ ಹಿಂದಿನ ಜಾಗವನ್ನು ಅಗೆಯುತ್ತಿರುವಾಗ ಪೀಡಾರಿಯ ಒಂದು ಪ್ರತಿಮೆ ದೊರಕಿತು. ಪ್ರತಿಮೆ ಪೂಜೆಗೊಳ್ಳುತ್ತಿದ್ದ ಕುರುಹುಗಳೂ ಇದ್ದುವು!

ಅನಂತರ ಊರವರ ಕೋರಿಕೆಯಂತೆ ಅಲ್ಲಿಯೇ ಒಂದು ಪೀಡಾರಿಯ ಗುಡಿಯನ್ನು ಕಟ್ಟಿಸುವಂತೆ ತಮ್ಮ ಭಕ್ತರಾಗಿದ್ದ ಲಕ್ಷ್ಮಣಚೆಟ್ಟಿಯಾರ್, ಕರೂರು ಚಿದಂಬರಂ ಚೆಟ್ಟಿಯಾರ್, ಮಲೈಯಾಂಡಿ ಚೆಟ್ಟಿಯಾರಿಗೆ ಸೂಚಿಸಿದರು. ಗುಡಿಯ ಕಟ್ಟಡ ಮುಗಿದಮೇಲೆ ದೇವಿಯ ಪ್ರತಿಷ್ಠೆಯನ್ನು ಅವರೇ ಮಾಡಿದರು.

ಚೆಟ್ಟಿನಾಡಿನ ಪ್ರವಾಸಕಾಲದಲ್ಲಿ ಒಮ್ಮೆ ಮದರಾಸಿಗೆ ಹೋಗಿದ್ದರು. ಆಗ ಲಾಯ್ಡ್ಸ್ ರೋಡಿನಲ್ಲಿ ಕುಪ್ಪುಸ್ವಾಮಿ ಮುದಲಿಯಾರರೆಂಬ ತಮ್ಮ ಭಕ್ತರ ಮನೆಯಲ್ಲಿ ಕೆಲವು ದಿನಗಳಿದ್ದರು. ಈ ಸಮಯದಲ್ಲಿ ಕಾಂಚೀಪುರದ ಕಾಮಕೋಟಿಪೀಠದ ಪರಮಾಚಾರ್ಯರೆಂದು ಪ್ರಸಿದ್ಧರಾಗಿದ್ದ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿಗಳನ್ನು ಭೇಟಿಮಾಡಿ, ಅವರೊಂದಿಗೆ 'ತಿರುಪ್ಪಾವೈ' ವಿಚಾರವಾಗಿ ಚರ್ಚೆನಡೆಸಿದರು.

ದರ್ಶನ-ಮಾರ್ಗದರ್ಶನ

ಚೆಟ್ಟಿನಾಡಿನಲ್ಲಿ ಅವರು ಇರುವಾಗ ಅವರ ಬದುಕಿನಲ್ಲಿ ಮತ್ತೊಂದು ತಿರುವು ತೋರಿಕೊಂಡಿತು. ನಮ್ಮ ದೇಶದಲ್ಲಿ ಜನಾಂಗವೊಂದೊಂದಕ್ಕೂ ಒಂದೊಂದು ಮಠವೆಂಬ ಧಾರ್ಮಿಕವ್ಯವಸ್ಥೆಯಿರುವುದು ವಾಡಿಕೆ. ನಾಟ್ಟುಕೋಟ್ಟೈ ಚೆಟ್ಟಿಯಾರರಿಗೂ ಒಂದು ಮಠವಿದ್ದಿತು. ರಾಮನಾಥಪುರಂ ತಾಲೂಕಿನಲ್ಲಿ ಕೋವಿಲೂರು ಎಂಬಲ್ಲಿ ಅವರ ಮಠ (ಅಥವಾ ಮಠಾಲಯ). ಇದನ್ನು ಒಂದು ನೂರು ಐವತ್ತು ವರ್ಷಗಳಷ್ಟು ಹಿಂದೆ ಇದೇ ಜನಾಂಗಕ್ಕೆ ಸೇರಿದ ಶ್ರೀ ಮುತ್ತುರಾಮಲಿಂಗ ದೇಶಿಕರೆಂಬ ಸಂತರು ಸ್ಥಾಪಿಸಿದರು; ಇವರನ್ನು ಜನರು ಭಕ್ತಿಯಿಂದ 'ಆದಿಗುರುಮೂರ್ತಿ'ಯೆಂದು ಕರೆಯುತ್ತಾರೆ; ಬ್ರಹ್ಮಜ್ಞಾನಿಗಳು, ಪ್ರಭಾವಶಾಲಿಗಳು. ಶೃಂಗೇರಿಯ ಶ್ರೀ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳ ಕಾಲದಲ್ಲಿ ಈ ಮಠವು ಶೃಂಗೇರಿಯಮಠಕ್ಕೆ ಉಪಪೀಠವೆಂದು ಪರಿಗಣಿಸಲ್ಪಟ್ಟಿತು. ಆದರೆ ವ್ಯವಹಾರದಲ್ಲಿ ಸ್ವತಂತ್ರವಾಗಿಯೇ ಉಳಿದಿರುವ ಮಠ ಇದು. ಅದ್ವೈತಸಂಪ್ರದಾಯವನ್ನು ಅನುಸರಿಸಿದೆ.

ಈ ಮಠದ ಪರಂಪರೆಯಲ್ಲಿ ಜ್ಞಾನಿಗಳೂ ಮಹಾಪುರುಷರು ಕಾಣಿಸಿಕೊಂಡಿದ್ದಾರೆ. ತಿರುಚಿಸ್ವಾಮಿಗಳು ಈ ಮಠಕ್ಕೆ ಭೇಟಿಕೊಟ್ಟಾಗ ಮಠದ ಮೂಲಪುರುಷರಾದ ಶ್ರೀ ಮುತ್ತುರಾಮಲಿಂಗ-ದೇಶಿಕರ ಸಮಾಧಿಯನ್ನು ಸಂದರ್ಶಿಸಿದರು. ಅವರಿಗೆ ಅಲ್ಲಿ ಅನಿರ್ವಚನೀಯವಾದ ಆನಂದವೊಂದು ಅನುಭವಕ್ಕೆ ಬಂದಿತು. ಒಡನೆಯೆ ಅಲ್ಲಿಯೆ ಕೂತು ಬಹುಕಾಲ ಧ್ಯಾನಮಗ್ನರಾದರು. ಮರುದಿನ ಕೋವಿಲೂರಿನಿಂದ ಹೊರಟು ಮೂರು ಮೈಲಿದೂರದ ಪಟ್ಟಮಂಗಳಕ್ಕೆ ಬಂದರು.



ಶ್ರೀ ಕೋವಿಲೂರು ಮಠದ ಆರಂಭೋತ್ಸವದಲ್ಲಿ ಶ್ರೀ ಕೋವಿಲೂರು ಮಠದ
ಶ್ರೀ ಜ್ಞಾನಾನಂದಗಿರಿ ಮತ್ತು ಸೇಲಂ ಆತ್ತೂರ್‌ನ ಶ್ರೀ ಅಪ್ಪಣ್ಣಸ್ವಾಮಿಯವರೊಂದಿಗೆ
ಶ್ರೀ ತಿರುಚಿಸ್ವಾಮಿಗಳು

ಪಟ್ಟಮಂಗಳದ ಸೋಮಸುಂದರೇಶ್ವರರ ಆಲಯದಲ್ಲಿ ಉತ್ಸವ ಮೂರ್ತಿಯದು ಶಿವನ ದಕ್ಷಿಣಾಮೂರ್ತಿಯ ರೂಪ. ಆದುದರಿಂದ ಈ ಸ್ಥಳವನ್ನು ದಕ್ಷಿಣಾಮೂರ್ತಿ ಕ್ಷೇತ್ರವೆಂದು ಕರೆಯುವುದುಂಟು. ದಕ್ಷಿಣಾಮೂರ್ತಿಗೂ ಜ್ಞಾನಕ್ಕೂ ಇರುವ ನಂಟು ಎಲ್ಲರಿಗೂ ತಿಳಿದದ್ದೇ. ಅಂದು ಸಂಜೆ ತಿರುಚಿಸ್ವಾಮಿಗಳು ದಕ್ಷಿಣಾಮೂರ್ತಿಯನ್ನು ಪೂಜಿಸಿ ತಮ್ಮ ವಸತಿಗೆ ಹಿಂದಿರುಗಿ ರಾತ್ರಿ ನಿದ್ರಿಸುತ್ತಿರುವಾಗ ಕನಸೊಂದನ್ನು ಕಂಡರು. ಕನಸಿನಲ್ಲಿ ಕೋವಿಲೂರು ಮಠದ ಶ್ರೀ ಮುತ್ತುರಾಮಲಿಂಗ ದೇಶಿಕರು ಕಾಣಿಸಿಕೊಂಡು ಉತ್ತರಭಾರತದ ಯಾತ್ರೆ ಕೈಗೊಳ್ಳುವಂತೆ ಸೂಚಿಸಿದರು; ಸ್ವರೂಪೋದ್ಧಾರಕಗುರುವು ನೇಪಾಳದಲ್ಲಿ ದೊರೆಯುವರೆಂದೂ ತಿಳಿಸಿದರು. ನಿದ್ರೆಯಲ್ಲಿ ಕೋವಿಲೂರು ಮಠದ ಆದಿಗುರುಮೂರ್ತಿಯ ದರ್ಶನವಾದದ್ದು, ಅವರಿಂದ ಮಾರ್ಗದರ್ಶನ ದೊರೆತದ್ದು ತಿರುಚಿಸ್ವಾಮಿಗಳ ಮೇಲೆ ತುಂಬ ಪ್ರಭಾವವನ್ನು ಬೀರಿತು. ಉತ್ತರಭಾರತದ ಕಡೆ ಪ್ರವಾಸ ಹೊರಡುವುದೆಂದು ನಿಶ್ಚಯಿಸಿದರು.

ನಾಟ್ಟುಕೋಟ್ಟೈ ಚೆಟ್ಟಿಯಾರರದ್ದು ಇನ್ನೊಂದು ಮಠವಿದೆ. ಅದು ತಿರುವಣ್ಣಾಮಲೆಯಲ್ಲಿರುವ ಈಶಾನ್ಯಮಠ. ತಿರುವಣ್ಣಾಮಲೆಯಿರುವುದು ಉತ್ತರ ಆರ್ಕಾಟು ಜಿಲ್ಲೆಯಲ್ಲಿ; ಮದರಾಸಿನಿಂದ ನೂರ ಇಪ್ಪತ್ತು ಮೈಲಿಗಳಷ್ಟು ದೂರ. ಇಲ್ಲಿನ ಮುಖ್ಯ ವಿವರ ಅರುಣಾಚಲವೆಂಬ ಬೆಟ್ಟ; ಸಮುದ್ರಮಟ್ಟಕ್ಕೆ ಎರಡು ಸಾವಿರದ ಆರುನೂರು ಅರವತ್ತೈದು ಅಡಿಗಳ ಎತ್ತರವಾಗಿದೆ. ಇಲ್ಲಿನ ಶಿವಾಲಯದಲ್ಲಿರುವುದು ತೇಜೋಲಿಂಗ. ಶಿವಾಲಯವು ದ್ರಾವಿಡ ವಾಸ್ತು ಶಿಲ್ಪದ ಅತ್ಯುತ್ತಮ ನಿದರ್ಶನ; ಭವ್ಯವಾಗಿದೆ, ನಿಸ್ತೃತವಾಗಿದೆ, ಕಲಾತ್ಮಕವಾಗಿದೆ. ದೇವಾಲಯದ ಆವರಣವು ಇಪ್ಪತ್ತೈದು ಎಕರೆಗಳಷ್ಟಿದೆ! ಅಲ್ಲಿ ವಿಶ್ವವಿಖ್ಯಾತಿಯನ್ನು ಪಡೆದ ರಮಣಮಹರ್ಷಿಗಳ (1879-1950) ಸಾನ್ನಿಧ್ಯವಿದ್ದುದು ಕ್ಷೇತ್ರದ ಹಿರಿಮೆಯನ್ನು ಹಿಗ್ಗಿಸಿತು. ಅವರ ರಮಣಾಶ್ರಮವೂ ತಿರುವಣ್ಣಾಮಲೆಯ ಪ್ರಧಾನ ವಿವರವಾಗಿದೆ.

ರಮಣಾಶ್ರಮವು ಅರುಣಾಚಲಬೆಟ್ಟಕ್ಕೆ ಆಗ್ನೇಯ ದಿಕ್ಕಿನಲ್ಲಿದೆ; ಬೆಟ್ಟದ ಈಶಾನ್ಯ ದಿಕ್ಕಿನ್ನಿರುವುದು ಈಶಾನ್ಯಮಠ. ಇದೊಂದು ಕಾಡಿನ ನಡುವೆ ಇದ್ದು ಪ್ರಶಾಂತವಾದ ವಾತಾವರಣವನ್ನು ಹೊಂದಿದೆ. ಕನ್ನಡನಾಡಿನ ಹೆಸರಾಂತ ಸಂತರು ಎಡೆಯೂರು

ಸಿದ್ಧಲಿಂಗೇಶ್ವರರು ಇಲ್ಲಿ ಕೆಲವು ಕಾಲ ತಪಸ್ಸುಮಾಡಿದರೆಂದು ಪ್ರತೀತಿ. ತಿರುಚಿಸ್ವಾಮಿಗಳು ಈ ಮಠವನ್ನು ನೋಡಿಬರಲು ಹೋದಾಗ ಅಲ್ಲಿ ಮಠಾಧಿಪತಿಗಳಾಗಿದ್ದವರು ರಾಮನಾಥ ಜ್ಞಾನದೇಶಿಕಸ್ವಾಮಿಗಳು. ಈ ಭೇಟಿಯ ಹಿನ್ನೆಲೆ ಸ್ವಾರಸ್ಯವಾಗಿದೆ.

ತಿರುಚಿಸ್ವಾಮಿಗಳು ಇವರನ್ನು ಮೊದಲೇ ಕಂಡಿದ್ದರು. ಚೆಟ್ಟಿನಾಡು ಪ್ರವಾಸದ ಕಾಲದಲ್ಲೇ ಅವರೊಮ್ಮೆ ಮದರಾಸಿಗೆ ಹೋಗಿದ್ದಾಗ, ಅಲ್ಲಿ ತಂಬೂಚೆಟ್ಟಿ ರಸ್ತೆಯಲ್ಲಿದ್ದ ಭಕ್ತರೊಬ್ಬರ ಮನೆಯಲ್ಲಿ ತಂಗಿದ್ದರು. ಅಲ್ಲಿಗೆ ರಾಮನಾಥ ಜ್ಞಾನದೇಶಿಕಸ್ವಾಮಿಗಳು ಇವರನ್ನು ಭೇಟಿಮಾಡಲು ಬಂದಿದ್ದರು. ರಾಮನಾಥಸ್ವಾಮಿಗಳು ತಿರುಚಿಸ್ವಾಮಿಗಳನ್ನು ಕಂಡೊಡನೆ ಭಾವಪರವಶರಾಗಿ "ಅಮ್ಮಾವೇ ಉಲಗುಕ್ಕುಂ ಅಮ್ಮಾ; ಎನಕ್ಕುಂ ಅಮ್ಮಾ!" ಎಂದು ಉದ್ಗಾರತೆಗೆದರು. ತಿರುಚಿಸ್ವಾಮಿಗಳಲ್ಲಿ ಅವರು ಜಗದಂಬಿಕೆಯನ್ನೇ ಕಂಡರು; ತಮ್ಮ ತಾಯನ್ನೂ ಕಂಡುಕೊಂಡರು."ನೀವೇ ನನ್ನ ತಾಯಿ!" ಎಂದು ಉದ್ಗಾರದ ಭಾವ. ಅದಕ್ಕೆ ಉತ್ತರವಾಗಿ ತಿರುಚಿಸ್ವಾಮಿಗಳು"ಅಮ್ಮಾವುಂ ಕುಳಂದೈಯುಂ ಆಹ ಇರುಪ್ಪೋಂ" ಎಂದು ಹೇಳಿದರು. "ತಾಯಿ ಮಗು ಆಗಿಯೇ ಇದ್ದೇವಲ್ಲ" ಎಂದು ತಾತ್ಪರ್ಯ.

ಅವರಿಬ್ಬರ ನಡುವೆ ಪ್ರಾಕ್ತನ ಸಂಬಂಧವಿದ್ದುದು ಇದರಿಂದ ಸ್ಪಷ್ಟವಾಗುತ್ತದೆ. ಎರಡನೆಯ ಬಾರಿ ತಿರುಚಿಸ್ವಾಮಿಗಳು ಅವರನ್ನು ಕಂಡುದು ಕೋವಿಲೂರುಮಠದಲ್ಲಿ. ರಾಮನಾಥ ಜ್ಞಾನದೇಶಿಕ ಸ್ವಾಮಿಗಳೂ ನಾಟ್ಟುಕೋಟ್ಟೈ-ಚೆಟ್ಟಿಯಾರ್ ಜನಾಂಗಕ್ಕೆ ಸೇರಿದವರೇ. ಅವರಿಗೆ ಸಂನ್ಯಾಸದೀಕ್ಷೆ ಒದಗಿದುದು ಕೋವಿಲೂರುಮಠದಲ್ಲಿ. ಮೂಲಪುರುಷರಿಂದ ಒಂಬತ್ತನೆಯ ತಲೆಯ ಪೀಠಾಧಿಪತಿಗಳಿಂದಲೇ. ಕೋವಿಲೂರಿನಲ್ಲಿ ಪರಸ್ಪರ ಪರಿಚಯ ಚೆನ್ನಾಗಿ ಆಯಿತು. ನಾಡಿನಲ್ಲಿ ಧರ್ಮಜಾಗ್ರತಿಯನ್ನುಂಟುಮಾಡುವ ಬಗೆಗಳನ್ನು ಕುರಿತು ಅವರಿಬ್ಬರು ಸುದೀರ್ಘವಾಗಿ ಸಮಾಲೋಚನೆ ನಡೆಸಿದರು.

ಕೋವಿಲೂರಿನಲ್ಲಿ ಮಾತುಕತೆ ಮುಗಿದಮೇಲೆ ರಾಮನಾಥಸ್ವಾಮಿಗಳು ತಮ್ಮ ಮಠವಾದ ತಿರುವಣ್ಣಾಮಲೆ ಈಶಾನ್ಯಮಠಕ್ಕೆ ಹೊರಟುಬಿಟ್ಟರು; ತಿರುಚಿಸ್ವಾಮಿಗಳು

ಕೋವಿಲೂರಿನಲ್ಲಿಯೇ ಉಳಿದುಕೊಂಡರು. ರಾಮನಾಥಸ್ವಾಮಿಗಳನ್ನು ಭೇಟಿಮಾಡಿದ ಒಂದು ವಾರದನಂತರ ತಿರುಚ್ಚಿಸ್ವಾಮಿಗಳಿಗೆ ಕನಸೊಂದು ಬಿದ್ದಿತು. ಕನಸಿನಲ್ಲಿ ಅವರು ಕಂಡದ್ದು ತಿರುವಣ್ಣಾಮಲೆಯ ಅರುಣಾಚಲೇಶ್ವರ ದೇವಾಲಯದ ದೇವಿ "ಉನ್ನಾಮುಲೈ ಅಮ್ಮ" (ಸಂಸ್ಕೃತದಲ್ಲಿ ಅಪೀತಕುಚಾಂಬಾ) ತನ್ನೆದುರು ತೋರಿಕೊಂಡು ಉತ್ಸವ ರಥವನ್ನು ಸರಿಮಾಡಿಸೆಂದು ಅಪ್ಪಣೆಯಿತ್ತಂತೆ. ಇದರ ಅಂತರಾರ್ಥ ಅವರಿಗೇನು ತಿಳಿಯದಿದ್ದರೂ ದೇವಿಯ ಆಣತಿಯಂತೆ ಒಡನೆಯೆ ತಿರುವಣ್ಣಾಮಲೆಗೆ ಹೊರಟುಬಿಟ್ಟರು.

ನೇರವಾಗಿ ಈಶಾನ್ಯಮಠಕ್ಕೆ ಬಂದು ರಾಮನಾಥಸ್ವಾಮಿಗಳನ್ನು ಕಂಡು ತಮ್ಮ ಕನಸನ್ನು ಅವರಿಗೆ ತಿಳಿಸಿದರು. ರಾಮನಾಥಸ್ವಾಮಿಗಳೂ ತಿರುಚಿಸ್ವಾಮಿಗಳೂ ಅರುಣಾಚಲೇಶ್ವರ ದೇವಾಲಯಕ್ಕೆ ಬಂದು ವಿಚಾರಿಸಿದಾಗ ದೇವಿಯ ರಥ ಶಿಥಿಲವಾಗಿ ಅದು ಸ್ಥಳ ಬಿಟ್ಟು ಕದಲುತ್ತಿರಲಿಲ್ಲವೆಂದು ತಿಳಿಯಿತು. ವರ್ಷದ ಬ್ರಹ್ಮೋತ್ಸವದ ಸಮಯದಲ್ಲಿ ಕಡೆಯ ದಿನ ಅರುಣಾಚಲೇಶ್ವರ ರಥದೊಂದಿಗೆ ದೇವಿಯ ರಥವೂ ಪ್ರತ್ಯೇಕವಾಗಿ ಬಿಜಯಮಾಡುವ ವಾಡಿಕೆಯಿದ್ದಿತು; ಆದರೆ ಕೆಲವು ವರ್ಷಗಳ ಹಿಂದೆ ಮರದಿಂದ ಕಟ್ಟಿದ ಈ ರಥ ಮುರಿದುಹೋಗಿ, ಅದನ್ನು ಹೊರಗೆ ಎಳೆದು ತರಲಾಗುತ್ತಿರಲಿಲ್ಲ. ದೇವಿಯ ಉತ್ಸಮೂರ್ತಿಯನ್ನು ಅರುಣಾಚಲೇಶ್ವರನ ಉತ್ಸವಮೂರ್ತಿಯ ರಥದಲ್ಲೇ ಇರಿಸಿ ಕೊಂಡೊಯ್ಯುತ್ತಿದ್ದರು.

ತಿರುಚಿಸ್ವಾಮಿಗಳ ಕನಸಿನಲ್ಲಿ ದೇವಿಯ ದರ್ಶನ, ಆಕೆ ನೀಡಿದ ಮಾರ್ಗದರ್ಶನ ಎರಡೂ ಅವರಿಗೆ ತಮ್ಮ ಕರ್ತವ್ಯದ ಅರಿವನ್ನು ಹೆಚ್ಚಿಸಿದವು. ತಿರುಚಿಸ್ವಾಮಿಗಳು ರಾಮನಾಥಸ್ವಾಮಿಗಳೊಡನೆಯೂ ಇತರ ಭಕ್ತರೊಡನೆಯೂ ಸಮಾಲೋಚನೆ ನಡೆಸಿ ರಥವನ್ನು ದುರಸ್ತಿಮಾಡಿಸುವ ಕೆಲಸದಲ್ಲಿ ತೊಡಗಿದರು. ಅರುಣಾಚಲದ ರಥಗಳೇನು ಸಾಮಾನ್ಯವಲ್ಲ. ಬೃಹದಾಕಾರದವು; ಮರದ ಕಟ್ಟಡ; ಶಿಲ್ಪಗಳು ಅಸಂಖ್ಯ. ಒಂದು ರಥವನ್ನು ನಿರ್ಮಿಸಬೇಕೆಂದರೆ ಒಂದು ದೊಡ್ಡ ಗುಡಿಯನ್ನು ಕಟ್ಟಿದಂತೆಯೇ. ಅಪಾರ ಹಣ ವೆಚ್ಚವಾಗಬೇಕು; ಸಮರ್ಥರಾದ ಶಿಲ್ಪಿಗಳು ಸಿಗಬೇಕು; ಯೋಗ್ಯರಾದ ಸ್ಥಪತಿಗಳು,



ಶ್ರೀ ರಾಮನಾಥ ಜ್ಞಾನ್ ದೇಶಿಕರ್ ಅವರ ದೀಕ್ಷಾ ಉತ್ಸವದಲ್ಲಿ
ಶ್ರೀ ತಿರುಚಿ ಸ್ವಾಮಿಗಳು

ಬಡಗಿಗಳು ಕೂಡಿಕೊಳ್ಳಬೇಕು. ಇದಕ್ಕೂ ಆಗಮದ ಕಟ್ಟುಪಾಡಿದೆ. ತಿರುಚಿಸ್ವಾಮಿಗಳ ಮಾರ್ಗದರ್ಶನದಲ್ಲಿ ಆ ವರ್ಷವೇ ದೇವಿಯ ರಥ ಸಿದ್ಧವಾಯಿತು. ಆ ವರ್ಷದ ಬ್ರಹ್ಮೋತ್ಸವದಲ್ಲಿ ದೇವಿಯ ರಥ ವೈಭವದಿಂದ ಪಾಲ್ಗೊಂಡಿತು.

ಈ ಕೆಲಸ ಮುಗಿದಮೇಲೆ ತಿರುಚಿಸ್ವಾಮಿಗಳು ಹಲವಾರು ತಿಂಗಳುಗಳನ್ನು ತಿರುವಣ್ಣಾಮಲೆಯಲ್ಲಿಯೇ ಕಳೆದರು. ಈ ದೀರ್ಘಕಾಲದ ವಾಸ್ತವ್ಯಕ್ಕೆ ಕಾರಣ ಶಾಸ್ತ್ರಾಧ್ಯಯನವನ್ನು ಮಾಡಬೇಕೆಂಬ ಅವರ ಕುತೂಹಲ. ಈಶಾನ್ಯಮಠಕ್ಕೆ ಸೇರಿದಂತೆ ಇಬ್ಬರು ಪಂಡಿತರಿದ್ದರು. ಒಬ್ಬರು ಕೇರಳದ ಉಮಾಮಹೇಶ್ವರ ಶಾಸ್ತ್ರಿಗಳೆಂಬುವರು; ಇನ್ನೊಬ್ಬರು ತಮಿಳುನಾಡಿನ ರಾಮಸ್ವಾಮಿಶಾಸ್ತ್ರಿಗಳು. ಇಬ್ಬರೂ ವೇದ, ವೇದಾಂತ, ಸ್ಮೃತಿ, ಸೂತ್ರ, ಶಾಸ್ತ್ರಗಳಲ್ಲಿ ಪಾರಂತರಾಗಿದ್ದುದು ಮಾತ್ರವಲ್ಲದೆ ಶ್ರೀವಿದ್ಯೆಯ ಉಪಾಸಕರು. ತಿರುಚಿಸ್ವಾಮಿಗಳು ಅವರ ಬಳಿ ಶಾಸ್ತ್ರಭಾಗವನ್ನು ಅಭ್ಯಾಸಮಾಡಿದರು; ಶ್ರೀಚಕ್ರದ ನವಾವರಣಪೂಜೆಯ ವಿವರಗಳನ್ನು ಶ್ರೀವಿದ್ಯೆಯ ರಹಸ್ಯವನ್ನು ಅರಿತುಕೊಂಡರು.

ದೇವಿಯಿಂದಲೇ ನೇರವಾಗಿ ಅವರಿಗೆ ಮಂತ್ರೋಪದೇಶವಾಗಿದ್ದಿತು; ಈಗ ಷೋಡಶೀಮಹಾಮಂತ್ರದ ಅಂತರಾರ್ಥವನ್ನು ಇವರಿಬ್ಬರು ಸಾಧಕರಿಂದ ತಿಳಿದುಕೊಂಡರು; ಪೂಜಾವಿಧಾನ, ನ್ಯಾಸವಿಧಿ, ಮೊದಲಾದುವನ್ನು ಕಲಿತುಕೊಂಡರು. ಈಶಾನ್ಯಮಠದಲ್ಲಿರುವಾಗಲೇ ಶ್ರೀಚಕ್ರದ ಭೂಪ್ರಸ್ತಾರಮೇರುವನ್ನೂ ತಮ್ಮ ನಿತ್ಯಪೂಜೆಗೆ ವಿಧ್ಯುಕ್ತವಾಗಿ ಮಾಡಿಸಿಕೊಂಡರು. ಈ ಸಮಯದಲ್ಲಿ ಆರಂಭವಾದ ಶ್ರೀಚಕ್ರಪೂಜೆ ಮುಂದೆ ನೇಪಾಳದಲ್ಲಿ ಅವರು ಸಂನ್ಯಾಸದೀಕ್ಷೆ ಪಡೆದುಕೊಳ್ಳುವವರೆಗೂ ವಿಚ್ಛಿತ್ತಿಯಿಲ್ಲದೆ ಮುಂದರಿಯಿತು.

ತಿರುವಣ್ಣಾಮಲೆಯಲ್ಲಿ ಒದಗಿದ ಶ್ರೀಚಕ್ರದೊಂದಿಗೆ ಸಂಬಂಧ ಅವರಲ್ಲಿ ಗುರುವನ್ನು ಕಾಣಬೇಕೆಂಬ ತವಕವನ್ನು ಹೆಚ್ಚಿಸಿತು. ಗುರುವಿನ ನೆರವಿಲ್ಲದೆ ಯಾವುದೇ ಸಾಧನೆಯಾಗಲಿ ಸಾರ್ಥಕವಾಗಲಾರದು; ಸಂಪೂರ್ಣವಾಗಲಾರದು; ಪ್ರಯೋಜನಕಾರಿಯಾಗಲಾರದು. ಗುರುವನ್ನು ಪಡೆದುಕೊಳ್ಳುವ ಅಗತ್ಯವಿತ್ತು.

ತಿರುಚಿಸ್ವಾಮಿಗಳು ಎಲ್ಲೆಲ್ಲೋ ಅಲೆದಾಡುತ್ತ ಇರುವುದಾಯಿತು. ಇವೆಲ್ಲ ಭಗವತ್ಪ್ರೇರಣೆಯೇ; ಅವರು ಮಾಡಿದ್ದೆಲ್ಲವೂ ಭಗವತ್ಕಾರ್ಯವೇ. ದೈವಾನುಗ್ರಹ ಅವರ ಮೇಲೆ ಸಂಪೂರ್ಣವಾಗಿದ್ದುದು ಅವರಿಗೂ ಇತರರಿಗೂ ಸ್ಪಷ್ಟವಾಗಿದ್ದಿತು. ಅವರೇ ಗುರುಗಳಾಗಿ ಜನರಿಂದ ಮಾನ್ಯರಾಗಿದ್ದರು. ಆದರೂ ತಮ್ಮ ಸ್ವರೂಪೋದ್ಧಾರಕಗುರುವನ್ನು ಈವರೆಗೆ ಪಡೆದುಕೊಳ್ಳುವುದಾಗಿರಲಿಲ್ಲ.

ಗುರುವನ್ನು ಪಡೆಯುವ ಮೊದಲು ಕ್ಷೇತ್ರಾಟನೆ ಮಾಡಬೇಕೆಂಬ ಸೂಚನೆ ಶ್ರೀಲಂಕದ ಶಿವನಡಿಪಾದದಲ್ಲೇ ಒದಗಿ ಬಂದಿದ್ದಿತಷ್ಟೆ; ದೇವಿಯೇ ಸಂನ್ಯಾಸಿನಿಯಾಗಿ ತೋರಿಕೊಂಡು ಇದನ್ನು ಹೇಳಿದ್ದಳು. ಕ್ಷೇತ್ರಾಟನೆಯ ಕೆಲಸ ಇನ್ನೂ ಮುಗಿದಿರಲಿಲ್ಲ. ಉತ್ತರಭಾರತದಲ್ಲಿ ಕ್ಷೇತ್ರಾಟನೆಮಾಡಬೇಕೆಂಬ ಮಾರ್ಗದರ್ಶನ ಕೋವಿಲೂರು ಮಠದ ಆದಿಗುರುಮೂರ್ತಿಗಳಿಂದ ಕನಸಿನಲ್ಲಿ ಒದಗಿದ್ದಿತು. ಗುರುವು ನೇಪಾಳದಲ್ಲಿ ದೊರಕಬಹುದೆಂಬ ಸೂಚನೆಯೂ ಇದ್ದಿತು. ಆದರೆ ತಿರುವಣ್ಣಾಮಲೆಯ ಕಾಡಿನ ನಡುವೆ ಈಶಾನ್ಯಮಠದಲ್ಲಿದ್ದ ಸಾಧಕನಿಗೆ ನೇಪಾಳ ಎಲ್ಲಿದೆಯೋ, ಅಲ್ಲಿಗೆ ಹೋಗುವುದು ಹೇಗೋ, ತಿಳಿಯದಿದ್ದುದು ಸಹಜವೇ. ಉತ್ತರಭಾರತದಲ್ಲಿ ಕಾಶಿ, ಪ್ರಯಾಗ, ಅಯೋಧ್ಯೆ, ಕೈಲಾಸ ಮೊದಲಾದ ಕ್ಷೇತ್ರಗಳಿದ್ದುದೇನೋ ತಿಳಿದಿದ್ದಿತು. ಕ್ಷೇತ್ರಾಟನೆಯೆಂದರೆ ಅವುಗಳ ಸಂದರ್ಶನವೆ ತಾನೆ?

ಗುರುವನ್ನು ಪಡೆದುಕೊಳ್ಳುವ ಮುನ್ನ, ಅದಕ್ಕೆ ಸಿದ್ಧತೆಯಾಗಿ, ಭಾರತದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವ ಅಗತ್ಯವನ್ನು ತಿರುಚಿಸ್ವಾಮಿಗಳು ಮನಗಂಡು, ತಡಮಾಡದೆ ಉತ್ತರಭಾರತಯಾತ್ರೆಯನ್ನು ಕೈಗೊಳ್ಳುವ ನಿಶ್ಚಯಮಾಡಿದರು. ಆಗ ಸ್ವಾಮಿಗಳಿಗೆ ಇಪ್ಪತ್ತೊಂಬತ್ತು ವರ್ಷ ವಯಸ್ಸು.

ಮಹಾಮಂಡಲೇಶ್ವರ 1008 ಶ್ರೀ ಮಹೇಶ್ವರಾನಂದರವರೊಂದಿಗೆ
ಶ್ರೀ ತಿರುಚಿ ಸ್ವಾಮಿಗಳು

ಉತ್ತರಾಪಥಯಾತ್ರೆ

ಈಗ ಅವರದ್ದೇ ಒಂದು ಶಿಷ್ಯಕೋಟಿಯಿದೆ, ಭಕ್ತವೃಂದವಿದೆ; ಇವರು ಯಾತ್ರೆಗೆ ಹೊರಟರೆ ಅವರೆಲ್ಲ ಸೇರಿಕೊಳ್ಳುವರು. ಅವರನ್ನೆಲ್ಲ ನೋಡಿಕೊಳ್ಳುವ ಹೊಣೆ ತಮ್ಮದೇ. ಮುಂಚೆ ತಮಿಳುನಾಡಿನಲ್ಲಿ ಚೆಟ್ಟಿನಾಡಿನಲ್ಲಿ ಅವರು ಯಾತ್ರೆ ಮಾಡಿದಾಗ ವ್ಯವಸ್ಥೆಯ ಮೇಲ್ವಿಚಾರಣೆಯೆಲ್ಲ ನಾಟ್ಟುಕೋಟ್ಟೈ ಚೆಟ್ಟಿಯಾರರದ್ದೇ. ಸ್ವಾಮಿಗಳಿಗೆ ಏನೊಂದು ತ್ರಾಸವೂ ಇರದಂತೆ ಎಲ್ಲವನ್ನೂ ನಿರ್ವಹಿಸುತ್ತಿದ್ದವರು ಅವರೇ. ಸ್ವಾಮಿಗಳಿಗೆ ಯಾವ ಯೋಚನೆಯೂ ಇರದು, ಯಾವ ಹೊಣೆಗಾರಿಕೆಯೂ ಇರದು. ಆದರೆ ಈಗ ಸಂದರ್ಭ ಬದಲಾಯಿತಲ್ಲವೆ?

ಈಗಲೂ ಅವರ ಪ್ರವಾಸದ ವ್ಯವಸ್ಥೆಯನ್ನೆಲ್ಲ ಚೆಟ್ಟಿಯಾರರೇ ಮಾಡಲು ಮುಂದೆಬಂದರು. ಆದರೆ ಮಾರ್ಗದರ್ಶನ ಮಾಡಬೇಕಾದವರು ಸ್ವಾಮಿಗಳೇ ತಾನೆ? ಎಲ್ಲೆಲ್ಲಿಗೆ ಹೋಗಬೇಕು, ಎಷ್ಟುದಿನ ಇರಬೇಕು, ಯಾತ್ರೆಯ ಕ್ರಮ ಏನು ಇವೆಲ್ಲವೂ ಇವರ ನಿರ್ಧಾರಕ್ಕೆ ಬಿಟ್ಟದ್ದೇ. ಸಾಲದ್ದಕ್ಕೆ ಸ್ವಾಮಿಗಳ ಜೊತೆಗೊಂದು ಗುಂಪುಜನ; ಅವರೆಲ್ಲರ ಸೌಕರ್ಯಕ್ಕೂ ವ್ಯವಸ್ಥೆಯಾಗಬೇಕು. ಅಂತೂ ಎಲ್ಲರ ಸಹಯೋಗದಿಂದ ಯಾತ್ರೆ ವಿವರಗಳು ನಿಶ್ಚಿತವಾಗಿ, ಮದರಾಸಿನಿಂದ ಹೊರಡುವುದೆಂದು ಗೊತ್ತಾಯಿತು.

ಯಾತ್ರಾರ್ಥಿಗಳು ಮದರಾಸನ್ನು ಬಿಟ್ಟದ್ದು ಹೇವಿಳಂಬಿ ಸಂವತ್ಸರದ ಪುಷ್ಯಮಾಸದ ಚತುರ್ದಶಿಯಂದು. ರೈಲಿನಲ್ಲೇ ಪ್ರಯಾಣದ ವ್ಯವಸ್ಥೆ. ಬೀಳ್ಕೊಡುಗೆಯ ಸಮಾರಂಭವೂ ಇದ್ದಿತು. ಮದರಾಸಿನಿಂದ ಹೊರಟವರು ಆಂಧ್ರಪ್ರದೇಶದ ಗುಂಟೂರು

ಜಿಲ್ಲೆಗೆ ಸೇರಿದ ಓಂಗೋಲು ನಿಲ್ದಾಣದಲ್ಲಿ ಇಳಿದರು. ಯಾತ್ರೆಯ ಮೊದಲ ಘಟ್ಟ ಇದು. ಓಂಗೋಲಿನಲ್ಲಿ ಮರಕತಮಾಯಿ ಎಂಬ ಸಂನ್ಯಾಸಿನಿಯೊಬ್ಬಳಿದ್ದಳು; ಅಲ್ಲೆಲ್ಲ ಪ್ರಸಿದ್ಧಳು. ಈಕೆ ತಿರುಚಿಸ್ವಾಮಿಯನ್ನು ಬರಮಾಡಿಕೊಂಡು ಪಾದಪೂಜೆ ಮಾಡಿದಳು.

ಈ ಸಂನ್ಯಾಸಿನಿಯು ಆರ್ಯವೈಶ್ಯ ಜನಾಂಗಕ್ಕೆ ಸೇರಿದವಳು; ಬಹುಕಾಲದ ಸಾಧನೆಯಿಂದ ಹಲವಾರು ಸಿದ್ಧಿಗಳನ್ನು ಪಡೆದುಕೊಂಡಿದ್ದಳು. ತನ್ನ ಜಟೆಗಳನ್ನು ಝಾಡಿಸಿ ಕುಂಕುಮವನ್ನು ಧಾರಾಕಾರವಾಗಿ ಸುರಿಸುತ್ತಿದ್ದುದೊಂದು ಸಿದ್ಧಿ. ತಿರುಚಿಸ್ವಾಮಿಗಳನ್ನು ಈಕೆ ಸನ್ಮಾನಿಸಿ ಉಪದೇಶವನ್ನು ಬೇಡಿದಾಗ ಅವರು ಈ ಸಿದ್ಧಿಗಳೆಲ್ಲವನ್ನೂ ಮರೆತು ಜ್ಞಾನಮಾರ್ಗವನ್ನು ಹಿಡಿಯುವಂತೆ ಸೂಚಿಸಿದರು. ಯೋಗಸಿದ್ಧಿಗಳ ವಿಚಾರವಾಗಿ ಅವರಿಗೇನು ಅಪನಂಬಿಕೆ ಇರಲಿಲ್ಲ; ಆದರೆ ಈ ಸಿದ್ಧಿಗಳಿಗೇ ಅಂಟಿಕೊಂಡರೆ ಯೋಗಭ್ರಷ್ಟರಾಗುವ ಸಂಭವ ಹೆಚ್ಚು. ಮೇಲಾಗಿ ಇಂಥ ಸಿದ್ಧಿಗಳಿಂದ ಪುರುಷಾರ್ಥವೇನು? ಪ್ರಯೋಜನವೇನು? ಆತ್ಮಜ್ಞಾನ, ಭಗವತ್ಸಾಕ್ಷಾತ್ಕಾರ ಇವು ಮುಖ್ಯವಾಗಿ ಸಾಧಕನ ಗುರಿಯಾಗಬೇಕೆಂದು ಸ್ವಾಮಿಗಳ ಆಶಯ.

ಓಂಗೋಲಿನಿಂದ ಹೊರಟು ಕೃಷ್ಣಾಜಿಲ್ಲೆಯಲ್ಲಿ ವಿಜಯವಾಡ ಎಂಬ ನಗರಕ್ಕೆ ಬಂದರು. ಕೃಷ್ಣಾನದಿ ತೀರದಲ್ಲಿರುವ ಬೆಟ್ಟದ ಮೇಲೆ ಕನಕದುರ್ಗಾ ದೇವಾಲಯ ಸುಪ್ರಸಿದ್ಧವಾಗಿದೆ. ಇದು ತುಂಬ ಪ್ರಾಚೀನವಾದ ಆಲಯ; ಪಲ್ಲವರಾಜ ಮಾಧವ ವರ್ಮನ ಕಾಲದ್ದು. ದೇವಿಯು ಶುಂಭ-ನಿಶುಂಭರೆಂಬ ಅಸುರರನ್ನು ಕೊಂದ ಬಳಿಕ ಇಲ್ಲಿ ವಿಶ್ರಾಂತಿಪಡೆದುಕೊಂಡಳಂತೆ; ದೇವತೆಗಳು ಅವಳ ಮೇಲೆ ಕನಕವರ್ಷವನ್ನು ಸುರಿಸಿದರಂತೆ. ಆದುದರಿಂದ ದೇವಿಯ ಈ ರೂಪಕ್ಕೆ ಕನಕದುರ್ಗಾ ಎಂಬ ಹೆಸರು. ಈ ಬೆಟ್ಟದ ಬಳಿ ಇನ್ನೊಂದು ಬೆಟ್ಟವಿದೆ; ಇಂದ್ರಕೀಲಾದ್ರಿಯೆಂದು ಅದರ ಹೆಸರು. ಅದರ ಮೇಲೆ ಮಲ್ಲೇಶ್ವರಸ್ವಾಮಿ-ಭ್ರಮರಾಂಬಾ ದೇವಿಯರ ಗುಡಿಯಿದೆ. ತಿರುಚಿಸ್ವಾಮಿಗಳು ಕೃಷ್ಣಾನದಿಯಲ್ಲಿ ಸ್ನಾನಮಾಡಿ ಈ ಆಲಯಗಳನ್ನು ನೋಡಿಬಂದರು.

ಅಲ್ಲಿಂದ ಇಪ್ಪತ್ತು ಮೈಲಿಗಳಷ್ಟು ದೂರದಲ್ಲಿ ಮಂಗಳಗಿರಿಯಿದೆ. ಇಲ್ಲಿನ ದೇವಾಲಯವೂ ಪ್ರಸಿದ್ಧವಾದುದೇ, ಪಾನಕ ನರಸಿಂಹ ಸ್ವಾಮಿಯದು. ಬೆಟ್ಟದ

ಮೇಲಿರುವ ಈ ಗುಡಿಯೂ ಪ್ರಾಚೀನವಾದುದು, ಬೆಟ್ಟವು ಅಗ್ನಿಪರ್ವತವಂತೆ; ಅದರ ತಾಪವನ್ನು ಇಳಿಸಲು ಪಾನಕಪೂಜೆ. ಬೆಟ್ಟವನ್ನೇರಿ ಹೋಗಲು ಐನೂರು ಮೆಟ್ಟಿಲುಗಳ ಸೋಪಾನವಿದೆ. ನರಸಿಂಹಸ್ವಾಮಿ ಇಲ್ಲಿ ಸ್ವಯಂಭುಮೂರ್ತಿಯಾಗಿ ತೋರಿಕೊಂಡಿದ್ದಾನೆ. ಇಲ್ಲಿನ ಕ್ಷೇತ್ರಪಾಲಕ ಆಂಜನೇಯ. ತಿರುಚಿಸ್ವಾಮಿಗಳು ಎಲ್ಲವನ್ನೂ ಕಂಡು ಸಂತೋಷಗೊಂಡರು.

ಮಂಗಳಗಿರಿಯಿಂದ ವಿಜಯವಾಡಕ್ಕೆ ಹಿಂದಿರುಗಿ ಪೂರ್ವಗೋದಾವರಿ ಜಿಲ್ಲೆಯಲ್ಲಿರುವ ರಾಜಮಹೇಂದ್ರವರಕ್ಕೆ ಬಂದರು; ಇಲ್ಲಿ ಗೋದಾವರೀ ನದಿಯಲ್ಲಿ ಸ್ನಾನ, ಕೋಟಿಲಿಂಗೇಶ್ವರ ದರ್ಶನ. ಮುಂದೆ ಒರಿಸ್ಸಪ್ರಾಂತ್ಯದಲ್ಲಿ ಜಗನ್ನಾಥಪುರಿಯಲ್ಲಿ ನಿಲುಗಡೆ. ಅತಿಪ್ರಾಚೀನವೂ ಪ್ರಸಿದ್ಧವೂ ಆದ ಜಗನ್ನಾಥನ ಗುಡಿಯು ವಾಸ್ತುಶಿಲ್ಪಕ್ಕೂ ಹೆಸರಾದುದು; ಪೂಜಾಪದ್ಧತಿಯಲ್ಲಿ ವೈಷ್ಣವ-ತಾಂತ್ರಿಕ ಪ್ರಕಾರಗಳ ಸಮಾಯೋಗವಿದೆ. ತಿರುಚಿಸ್ವಾಮಿಗಳು ಸಮುದ್ರಸ್ನಾನಮಾಡಿ ದೇವಾಲಯಕ್ಕೆ ಬಂದು ಜಗನ್ನಾಥ, ಬಲಭದ್ರ, ಸುಭದ್ರೆಯರ ದರ್ಶನಮಾಡಿ, ಅನಂತರ ಸಾಕ್ಷೀಗೋಪಾಲನ ಗುಡಿಗೂ ಹೋಗಿಬಂದರು.

ಜಗನ್ನಾಥಪುರಿಯಿಂದ ಪಶ್ಚಿಮಬಂಗಾಳಾ ಪ್ರಾಂತ್ಯದ ಕಲ್ಕತ್ತಾನಗರ. ಊರದೇವತೆಯಾದ ಕಾಳಿಯದರ್ಶನ. ರಾಮಕೃಷ್ಣಪರಮಹಂಸರು ವಾಸಿಸುತ್ತಿದ್ದ ದಕ್ಷಿಣೇಶ್ವರಕ್ಕೂ ಹೋಗಿ ಅಲ್ಲಿ ಅವರು ಪೂಜೆಮಾಡುತ್ತಿದ್ದ ಕಾಳಿಯನ್ನೂ ನೋಡಿದರು. ಬೇಲೂರ ಮಠವನ್ನೂ ಸಂದರ್ಶಿಸಿದರು. ಹತ್ತಿರದಲ್ಲೇ ಇದ್ದ ತಾರಕೇಶ್ವರವೆಂಬ ಇನ್ನೊಂದು ಕ್ಷೇತ್ರ ಅವರನ್ನು ಬಹುವಾಗಿ ಆಕರ್ಷಿಸಿತು. ತಾರಕೇಶ್ವರದಲ್ಲಿ ಕೆಲವು ದಿನಗಳನ್ನು ಕಳೆದರು.

ತಾರಕೇಶ್ವರದಲ್ಲಿರುವಾಗ ನಡೆದ ಪ್ರಸಂಗವೊಂದನ್ನು ಉಲ್ಲೇಖಿಸಬಹುದು. ತಾರಕೇಶ್ವರದಲ್ಲಿ ಅವರು ಪಂಡನೊಬ್ಬನ (ಎಂದರೆ ಕ್ಷೇತ್ರಪುರೋಹಿತನ) ಮನೆಯಲ್ಲಿ ತಂಗಿದ್ದರು. ಯಾತ್ರಿಕರಿಗೆ ವಸತಿಸೌಕರ್ಯವನ್ನು ಭೋಜನವನ್ನು ಒದಗಿಸಿ ಕ್ಷೇತ್ರವಿಧಿಗಳಲ್ಲಿ ಮಾರ್ಗದರ್ಶನ ಮಾಡುವುದು, ಸ್ನಾನಪೂಜಾತರ್ಪಣಾದಿಗಳಲ್ಲಿ

ನೆರವಾಗುವುದು ಪಂಡರೆಂಬುವರ ಕೆಲಸ. ತಿರುಚಿಸ್ವಾಮಿಗಳು ಇಳಿದುಕೊಂಡಿದ್ದ ಪಂಡ ತನ್ನ ಹೆಂಡತಿಯೊಂದಿಗೆ ತನ್ನದೇ ಆದ ದೊಡ್ಡ ಮನೆಯೊಂದರಲ್ಲಿ ವಾಸಿಸುತ್ತಿದ್ದ; ಅವರಿಗೆ ಮಕ್ಕಳಿರಲಿಲ್ಲ. ಗಂಡ-ಹೆಂಡತಿಯರಿಬ್ಬರಿಗೂ ಆಧ್ಯಾತ್ಮಿಕ ಪ್ರವೃತ್ತಿಯಿದ್ದಿತು, ಧರ್ಮಬುದ್ಧಿಯಿದ್ದಿತು. ತಿರುಚಿಸ್ವಾಮಿಗಳಿಗೆ ಇವರ ಮೇಲೆ ಒಳ್ಳೆಯ ಭಾವನೆ ಒದಗಿಬಂದಿತು; ದಂಪತಿಗಳಿಗೂ ತಿರುಚಿಸ್ವಾಮಿಗಳ ಮೇಲೆ ತುಂಬ ಗೌರವಬುದ್ಧಿ ಬಂದಿತು. ತಿರುಚಿಸ್ವಾಮಿಗಳನ್ನು ಕುರಿತು ಪಂಡ ಮತ್ತು ಅವನ ಹೆಂಡತಿ "ನಿಮಗೆ ಈ ಮನೆಯನ್ನು ದಾನವಾಗಿ ಕೊಟ್ಟುಬಿಡುತ್ತೇವೆ. ತಮ್ಮ ಆಶ್ರಮವನ್ನು ಕಟ್ಟಿಕೊಂಡು ಇಲ್ಲಿಯೇ ಇದ್ದು ಬಿಡಿ!" ಎಂದು ಹೇಳಿದರು. ತಿರುಚಿಸ್ವಾಮಿಗಳು ಒಪ್ಪಲಿಲ್ಲ. ಅವರು ಗುರುವನ್ನರಸುತ್ತಿದ್ದವರು; ಇಲ್ಲಿಯೇ ಉಳಿದರೆ ಹೇಗೆ?

ಆ ದಿನವೇ ತಾರಕೇಶ್ವರವನ್ನು ಬಿಟ್ಟು ಹೊರಟು ಉತ್ತರಪ್ರದೇಶದ ವಾರಣಾಸಿಗೆ ಬಂದರು. ಶಿವರಾತ್ರಿಯ ಸಮಯಕ್ಕೆ ಸರಿಯಾಗಿ ಬಂದವರು ಮೂರು ತಿಂಗಳ ಕಾಲ ಅಲ್ಲಿಯೇ ವಾಸಮಾಡಿದರು. ಪುರಾಣೋಕ್ತವಾದ ಗಂಗಾನದಿಯ ಅರವತ್ತುನಾಲ್ಕು ಘಟ್ಟಗಳಲ್ಲಿಯೂ ಸ್ನಾನಮಾಡಿ, ವಿಶ್ವನಾಥ, ಅನ್ನಪೂರ್ಣೆ, ವಿಶಾಲಾಕ್ಷಿ, ದುಂಢಿವಿನಾಯಕ, ವೇಣೀಮಾಧವ, ಕಾಳಭೈರವ, ಕೇದಾರೇಶ್ವರ ಮೊದಲಾದ ಸ್ಥಳಗಳಲ್ಲೆಲ್ಲ ಪೂಜೆ ಸಲ್ಲಿಸಿದರು. ಬಿಡುವಿನ ವೇಳೆಯಲ್ಲಿ ಪಂಡಿತರು, ಸಾಧುಗಳು, ಸಾಧಕರು ಇವರೊಂದಿಗೆ ಕಲೆತು ಅಧ್ಯಾತ್ಮ, ಶಾಸ್ತ್ರ, ಸಾಧನೆಗಳ ವಿಚಾರವಾಗಿ ಚರ್ಚೆ ನಡೆಸಿದರು. ಹಲವಾರು ಬಗೆಯ ಸಾಧನೆಗಳ ವಿವರಗಳನ್ನು ಅರಿತುಕೊಂಡರು.

ವಾರಣಾಸಿಯಿಂದ ವಿಂಧ್ಯಾಚಲಕ್ಕೆ ಹೋಗಿ ಅಲ್ಲಿ ಅಷ್ಟಭುಜಂಗದೇವಿಯ ಗುಡಿಯಲ್ಲಿ ಸಾಧನೆಮಾಡಿದರು. ಗಂಗಾಸ್ನಾನವನ್ನು ಮುಗಿಸಿ ಪ್ರಯಾಗಕ್ಕೆ ಬಂದರು. ಇಲ್ಲಿ ಗಂಗಾ-ಯಮುನಾ, ಸರಸ್ವತೀ ನದಿಗಳು ಕೂಡುತ್ತವೆಯಾಗಿ ಅದು ತ್ರಿವೇಣಿಸಂಗಮ. ಅಲ್ಲಿ ನೋಡಬೇಕಾದುದನ್ನೆಲ್ಲ ತಿರುಚಿಸ್ವಾಮಿಗಳು ನೋಡಿಬಂದರು. ಭರದ್ವಾಜಾಶ್ರಮ, ವ್ಯಾಸಪೀಠ, ಚಕ್ರತೀರ್ಥ, ಲಲಿತಾ ದೇವಾಲಯ ಇವನ್ನು ವಿಶೇಷವಾಗಿ ಸಂದರ್ಶಿಸಿ, ಶಕ್ತಿಪೀಠಗಳಲ್ಲೊಂದಾದ ಮಂಗಳಾಗೌರಿಯ ಗುಡಿಯಲ್ಲಿ ಕೊಂಚಕಾಲ ಸಾಧನೆಮಾಡಿದರು.

ಪ್ರಯಾಗದಿಂದ ಪುರಾಣಪ್ರಸಿದ್ಧವಾದ ನೈಮಿಷಾರಣ್ಯದ ಮಾರ್ಗವಾಗಿ ಅಯೋಧ್ಯೆಗೆ ಬಂದರು. ಶ್ರೀರಾಮನ ಜನ್ಮಸ್ಥಳ ಅಯೋಧ್ಯೆ; ಇತಿಹಾಸ ಪ್ರಸಿದ್ಧವಾದ ಸ್ಥಳ. ಇಲ್ಲಿ ತಿರುಚಿಸ್ವಾಮಿಗಳು ಸರಯೂ ನದಿಯಲ್ಲಿ ಸ್ನಾನ ಮಾಡಿ ರಾಮನ ಮತ್ತು ಹನುಮಂತರ ಅನೇಕ ಆಲಯಗಳನ್ನು ನೋಡಿಕೊಂಡುಬಂದರು. ಅಯೋಧ್ಯೆಯಿಂದ ಗಯಾಕ್ಷೇತ್ರ; ಹಿಂದೂಗಳಿಗೂ ಬೌದ್ಧರಿಗೂ ಸಮಾನವಾಗಿಯೇ ಪವಿತ್ರವೆನಿಸಿದ ಸ್ಥಳ. ಇಲ್ಲಿಯೂ ಫಲ್ಗುಣೀನದಿಯಲ್ಲಿ ತೀರ್ಥಸ್ನಾನ, ವಿಷ್ಣುಪಾದ ಸಂದರ್ಶನ, ಅಕ್ಷಯವಟ ಪ್ರದಕ್ಷಿಣೆ ಮೊದಲಾದ ಕ್ರಿಯೆಗಳನ್ನೆಲ್ಲ ನಿರ್ವಹಿಸಿದರು. ವಿಷ್ಣುಪಾದವನ್ನು ವಿಷ್ಣುಸಹಸ್ರನಾಮಸ್ತೋತ್ರದಿಂದ ಪೂಜಿಸಿದರು. ಮುಂದೆ ಬುದ್ಧಗಯೆಗೆ ಹೋಗಿ ಅಲ್ಲಿ ಗೌತಮ ಬುದ್ಧನಿಗೆ ಬೋಧಿದರ್ಶನವಾದ ಎಡೆಯಲ್ಲಿರುವ ಬೋಧಿವೃಕ್ಷವನ್ನು ನೋಡಿಕೊಂಡು ಬಂದರು.

ತಿರುಚಿಸ್ವಾಮಿಗಳು ತಮ್ಮ ಯಾತ್ರಾತಂಡದವರೊಂದಿಗೆ ಗಯೆಯಿಂದ ಹೊರಟು ವೈದ್ಯನಾಥಕ್ಷೇತ್ರಕ್ಕೆ ಬಂದರು. ಅಲ್ಲಿರುವ ದಕ್ಷಿಣಾಕಾಳಿ ತಾಂತ್ರಿಕ ಪೀಠ; ಜಾಗ್ರತಸ್ಥಳ. ತಿರುಚಿಸ್ವಾಮಿಗಳು ಧ್ಯಾನಸ್ಥರಾಗಿ ಈ ದೇವಿಯನ್ನು ಆರಾಧಿಸಿ, ಪಟನಾ ನಗರದ ಮೂಲಕ ವಾರಣಾಸಿಗೆ ಹಿಂದಿರುಗಿದರು. ಮುಂದೆ ಹರಿದ್ವಾರಕ್ಕೆ ಹೋಗಿ ಅಲ್ಲಿ ಹದಿನೈದು ದಿನಗಳ ಕಾಲ ತಂಗಿದರು. ಇಲ್ಲಿ ಬ್ರಹ್ಮಕುಂಡವೆಂಬ ತೀರ್ಥದಲ್ಲಿ ಸ್ನಾನ, ಸಪ್ತರ್ಷಿಗಳ ಆಶ್ರಮದ ದರ್ಶನ, ತಾಂತ್ರಿಕ ಶಕ್ತಿಪೀಠವಾದ ಮಾಯಾದೇವಿಯಲ್ಲಿ ಸಾಧನೆ ಇವನ್ನು ಮಾಡಿದರಲ್ಲದೆ, ಅಲ್ಲಿರುತ್ತಿದ್ದ ಹಲವಾರು ಸಿದ್ಧರ, ಸಾಧಕರ, ಪಂಡಿತರ ಜೊತೆಗೆ ಶಾಸ್ತ್ರದ ವಿಚಾರವಾಗಿ, ಸಾಧನೆಯ ವಿಚಾರವಾಗಿ ಚರ್ಚೆ ನಡೆಸಿದರು.

ಇದಾದಮೇಲೆ ಹಿಮಾಲಯ ಪರ್ವತ ಶ್ರೇಣಿಯ ತಪ್ಪಲಿನಲ್ಲಿ ಋಷೀಕೇಶಕ್ಕೆ ಪ್ರಯಾಣಮಾಡಿದರು. ಇಲ್ಲಿನ ವನ್ಯ, ಪ್ರಶಾಂತ ವಾತಾವರಣ ಅವರಿಗೆ ತುಂಬ ಹಿಡಿಸಿತು; ಇಲ್ಲಿಯೇ ಹಲವಾರು ದಿನಗಳನ್ನು ಕಳೆದರು. ಮುಂದೆ ಹಿಮಾಲಯದ ಅತಿಪ್ರಸಿದ್ಧ ಕ್ಷೇತ್ರವಾದ ಬದರಿಗೆ ಹೋದರು. ಸಾವಿರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಕ್ಷೇತ್ರರಾಜನೆಂದು ಹೆಸರಾಗಿರುವುದು ಬದರಿ; ಸಾಯುವ ಮುನ್ನ ಬದರೀಯಾತ್ರೆ ಮಾಡಿಬರಬೇಕೆಂಬುದು ಪ್ರತಿಯೊಬ್ಬ ಹಿಂದುವಿನ ಬಯಕೆ. ವಿಷ್ಣುವೇ

ಇಲ್ಲಿ ಧ್ಯಾನಮಗ್ನನಾಗಿ ಕುಳಿತಿದ್ದಾನೆ. ತಿರುಚಿಸ್ವಾಮಿಗಳು ಬದರೀನಾಥನನ್ನು ಭಕ್ತಿಯಿಂದ ಸೇವಿಸಿ, ರುದ್ರಪ್ರಯಾಗ ಮತ್ತು ಕೇದಾರಗಳನ್ನೂ ಸಂದರ್ಶಿಸಿ ಮತ್ತೆ ಬದರಿಗೆ ಬಂದರು. ಅಲ್ಲಿಂದ ಮತ್ತೆ ರುದ್ರಪ್ರಯಾಗಕ್ಕೆ ಹೋದರು. ಅಲ್ಲಿಂದ ಕುರುಕ್ಷೇತ್ರ (ಮಹಾಭಾರತ ಯುದ್ಧ ನಡೆದ ಜಾಗ). ಅಲ್ಲಿ ಸೂರ್ಯತೀರ್ಥದಲ್ಲಿ ಸ್ನಾನ ತೀರಿಸಿಕೊಂಡು ದಿಲ್ಲಿಗೆ ಬಂದರು.

ದಿಲ್ಲಿ ನಮ್ಮ ದೇಶದ ರಾಜಧಾನಿಯಷ್ಟೆ. ಅಲ್ಲಿ ತಿರುಚಿಸ್ವಾಮಿಗಳು ಕೆಂಪುಕೋಟೆ, ಕುತಬ್‌ಮಿನಾರ್, ಜುಮ್ಮಾಮಸೀದಿ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನೂ ದಿಲ್ಲಿಯ ನೆರೆಯಲ್ಲಿರುವ ಆಗ್ರ (ತಾಜಮಹಲ್ ಇರುವ ಸ್ಥಳ), ಮಥುರಾ ಮತ್ತು ಬೃಂದಾವನ (ಶ್ರೀ ಕೃಷ್ಣನ ಜೀವನಕ್ಕೆ ಸಂಬಂಧಿಸಿದ ಕ್ಷೇತ್ರಗಳು) ಇವನ್ನೂ ನೋಡಿಬಂದರು. ದಿಲ್ಲಿಯಲ್ಲಿ ತಂಗಿರುವಾಗ ಅದೇನೋ ಕಾರಣದಿಂದ ಮತ್ತೆ ವಾರಣಾಸಿಗೆ ಹೋಗಿಬರಬೇಕೆಂಬ ಬಯಕೆ ಮನಸ್ಸಿನಲ್ಲಿ ಮೂಡಿಬಂದಿತು. ಕಾರಣವೇನೆಂದು ತಿಳಿಯಲಿಲ್ಲ. ಒಂದು ರಾತ್ರಿ ನಿದ್ರೆ ಮಾಡುತ್ತಿರುವಾಗ ಕನಸಿನಲ್ಲಿ ವಿಶ್ವನಾಥ-ವಿಶಾಲಾಕ್ಷಿಯರ ದರ್ಶನವಾಯಿತು. ಎಚ್ಚರವಾದೊಡನೆ ಬಹುಹೊತ್ತು ಧ್ಯಾನದಲ್ಲಿ ಕೂತರು. ವಾರಣಾಸಿಗೆ ಹೋಗಬೇಕೆಂಬ ಆಸೆಯು ಅಗತ್ಯವಾಗಿ ಅನಿವಾರ್ಯವಾಗಿ ಮಾರ್ಪಟ್ಟಿತು.

ದಿಲ್ಲಿಯಿಂದ ವಾರಣಾಸಿಗೆ ಬಂದದ್ದೂ ಆಯಿತು. ಈ ಬಾರಿ ತಾವು ಅಲ್ಲಿದ್ದಷ್ಟು ದಿನವೂ ತಪ್ಪದೆ ಮುಂಜಾನೆ ವಿಶಾಲಾಕ್ಷಿಯ ಗುಡಿಗೆ ಹೋಗಿ ಅಲ್ಲಿ ಶ್ರದ್ಧಾಭಕ್ತಿಗಳಿಂದ ಪೂಜೆಮಾಡಿಬಂದರು. ಏನೋ ಮುಖ್ಯವಾದುದು ತನಗಾಗಿ ಕಾದಿದೆಯೆಂಬ ಅರಿವು ಅವರಲ್ಲಿ ಮೂಡಿಕೊಂಡಿತು. ಹೀಗಿರುವಾಗ ಒಂದು ರಾತ್ರಿ ಇದ್ದಕ್ಕಿದ್ದಂತೆ ನಿದ್ರೆಯಿಂದ ಎಚ್ಚರವಾಯಿತು; ಏನೋ ಕಸವಿಸಿ, ತಳಮಳ, ಆತಂಕ. ಕಾರಣ ಏನೆಂದು ತಿಳಿಯಲಿಲ್ಲ. ಏನು ಮಾಡಲೂ ತೋಚದೆ ಸ್ವಾಮಿಗಳು ವಿಶಾಲಾಕ್ಷಿಯನ್ನೆ ಮೊರೆಹೊಕ್ಕರು. ಒಡನೆಯೆ ಅವರಿಗೆ ವಿಶಾಲಾಕ್ಷಿಯ ದರ್ಶನವಾಯಿತು. ತಾವು ದಿನವೂ ಪೂಜೆಮಾಡುತ್ತಿದ್ದ ವಿಶಾಲಾಕ್ಷಿಯ ರೂಪ ಎದುರಿಗೆ ನಿಂತಂತಾಯಿತು. ನೋಡುತ್ತ ನೋಡುತ್ತ ಈ ರೂಪ ಒಬ್ಬ ವೃದ್ಧನಾಗಿ ಮಾರ್ಪಟ್ಟಿತು. ಬಿಳಿಯ ಮೈಬಣ್ಣ, ಸೊಂಪಾಗಿ ಬೆಳೆದ ಗಡ್ಡ,

ನಡುವಿಗೆ ಬಿಳಿಯ ವಸ್ತ್ರ, ಪದ್ಮಾಸನದಲ್ಲಿ ನಿರಾಳವಾಗಿ ಕುಳಿತಂತೆ ಭಂಗಿ. ಈ ರೂಪವು ಮರೆಯಾಯಿತು. ಸ್ವಲ್ಪ ಹೊತ್ತಾದ ಮೇಲೆ ಮತ್ತೆ ತೋರಿಕೊಂಡಿತು.

ಹೀಗೆ ಈ ವೃದ್ಧನ ರೂಪ ತೋರಿಕೊಳ್ಳುವುದು, ಮರೆಯಾಗುವುದು ಕೆಲವು ಬಾರಿ ನಡೆಯಿತು. ಆಗ ತಿರುಚಿಸ್ವಾಮಿಗಳಿಗೆ ಈ ವೃದ್ಧನೇ ತನ್ನ ಗುರುವಿದ್ದೀತು ಎಂಬ ಭಾವನೆಯೊದಗಿ ಬಂದಿತು. ಈ ಭಾವನೆ ಮನಸ್ಸಿನಲ್ಲಿ ಮೂಡಿಕೊಂಡಿತೋ ಇಲ್ಲವೋ, ಓಂಕಾರದ ಧ್ವನಿಯು ಕೇಳತೊಡಗಿತು. ಎಲ್ಲಿಂದ ಬರುತ್ತಿದೆ ಈ ಶಬ್ದ ಎಂಬುದು ತಿಳಿಯಲಿಲ್ಲ. ಆದರೆ ಓಂಕಾರದ ಧ್ವನಿಯು ಎಡೆಬಿಡದೆ ಸ್ಪಷ್ಟವಾಗಿ ಕೇಳಿಬರುತ್ತಿದ್ದಿತು. ತನ್ನ ಭಾವನೆ ದಿಟವಾದುದು ಎಂಬ ನಂಬಿಕೆಯಾದೊಡನೆ ಓಂಕಾರದ ನಾದಸಂತತಿಯೂ ನಿಂತಿತು.

ಇಲ್ಲಿ ವಿಚಾರಮಾಡಬೇಕಾದ ಅಂಶವೊಂದಿದೆ. ತಿರುಚಿಸ್ವಾಮಿಗಳಿಗೆ ಕ್ಷೇತ್ರಾಟನ ಮಾಡಬೇಕೆಂಬ ಆದೇಶ ಒದಗಿದ್ದಿತಷ್ಟೆ. ಅವರು ಈವರೆಗೆ ನಡೆಸಿದ ಕ್ಷೇತ್ರಾಟನ ಸಾಮಾನ್ಯವಾಗಿ ಅವರಿಗೆ ಉಪಯುಕ್ತವೇ ಆಗಿದ್ದಿತು. ಆಗಮಗಳಲ್ಲಿ ಮೂರು ಬಗೆಯ ಯಾತ್ರೆಗಳನ್ನು ಹೇಳಿದ್ದಾರೆ. ತೀರ್ಥಕ್ಷೇತ್ರಗಳನ್ನು ನೋಡಿಕೊಂಡು ಅಲ್ಲಿನ ಕ್ಷೇತ್ರವಿಧಿಗಳನ್ನೆಲ್ಲ ನಡೆಸುವುದು 'ತೀರ್ಥಯಾತ್ರೆ'. ಇದರಿಂದ ಒದಗುವ ಲಾಭ ಕನಿಷ್ಠಸ್ತರದ್ದು. ದೇವರನ್ನು ಅರಸುತ್ತ ಧ್ಯಾನ, ಪೂಜೆ, ಸೇವೆಗಳನ್ನು ಸಲ್ಲಿಸುವುದು 'ದೇವಯಾತ್ರೆ'. ಇದರ ಪ್ರಯೋಜನ ಮಧ್ಯಮಸ್ತರದ್ದು. ಗುರುವನ್ನು ಅರಸುತ್ತ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುವುದು 'ಗುರುಯಾತ್ರೆ'. ಇದೇ ಉತ್ತಮವಾದುದು. ಚಂದ್ರಜ್ಞಾನಾಗಮವೆಂಬ ಗ್ರಂಥದಲ್ಲಿ (ಪಟಲ ೨, ೨೮) ಹೀಗೆ ಹೇಳಿದೆ

'ಗುರುಯಾತ್ರಾ ದೇವಯಾತ್ರಾ ತೀರ್ಥಯಾತ್ರೇತಿ ಚ ತ್ರಿಧಾ।
ಆಸಾಂ ತ್ರಿವಿಧಯಾತ್ರಾಣಾಂ ಗುರುಯಾತ್ರಾ ಫಲಾದಿಕಾ॥

ಸ್ವಾಮಿಗಳು ತೀರ್ಥಯಾತ್ರೆಯನ್ನು ಕೈಗೊಂಡಾಗ ಹಲವು ಕ್ಷೇತ್ರಗಳ ಪರಿಚಯವಾಯಿತು; ಹಲವಾರು ಮಂದಿ ಸಾಧುಸಂತರ, ಮಹಾತ್ಮರ ದರ್ಶನವಾಯಿತು; ಧರ್ಮವನ್ನು ಜನ ನಿತ್ಯಜೀವನದಲ್ಲಿ ಅನ್ವಯ ಮಾಡಿಕೊಂಡಿರುವ ಬಗೆ ಹೇಗೆಂಬ ಅರಿವಾಯಿತು. ಇದರಿಂದ ದೃಷ್ಟಿಯೂ ವಿಶಾಲವಾಯಿತು. ಅನುಭವವೂ ಹೆಚ್ಚಿತು, ಸಾಮಾಜಿಕಪ್ರಜ್ಞೆಯೂ ಮೂಡಿತು. ಒಂದು ಶ್ಲೋಕವಿದೆ-

'ಯಸ್ತು ಪರ್ಯಟತೇ ದೇಶಾನ್ ಯಸ್ತು ಸೇವೇತ ಪಂಡಿತಾನ್।
ತಸ್ಯ ವಿಸ್ತಾರಿತಾ ಬುದ್ಧಿಃ ತೈಲಬಿಂದುರಿವಾಂಭಸಿ॥

ಎಣ್ಣೆಯ ಹನಿಯನ್ನು ನೀರಿನಮೇಲೆ ಹಾಕಿದಾಗ ಅದು ಹರಡಿಕೊಳ್ಳುವಂತೆಯೇ ದೇಶಗಳನ್ನು ಸುತ್ತಾಡಿದರೆ ವಿದ್ವಜ್ಜನರೊಡಗೂಡಿದರೆ ಬುದ್ಧಿಯೂ ವಿಸ್ತರಿಸಿಕೊಳ್ಳುತ್ತದೆ ಎಂದು ಈ ಶ್ಲೋಕದ ಅರ್ಥ. ಇದು ತಿರುಚಿಸ್ವಾಮಿಗಳ ವಿಚಾರದಲ್ಲಿ ದಿಟವಾಯಿತು.

'ತೀರ್ಥಯಾತ್ರೆ' ಹೀಗೆ ಫಲಕಾರಿಯಾಯಿತು. 'ದೇವಯಾತ್ರೆ'ಯನ್ನು ಅವರು ಮೊದಲೇ ಮಾಡಿದ್ದರು. ಎಳೆತನದಲ್ಲಿಯೇ ಇದರ ಗೀಳು ಮೂಡಿಕೊಂಡು ಶ್ರೀಲಂಕದಲ್ಲಿ ಶಿವನಡಿಪಾದದಲ್ಲಿ ದೇವಿಯ ಅನುಗ್ರಹವನ್ನು ಪಡೆದುಕೊಂಡರಷ್ಟೇ. ಇದು ಬದುಕಿನುದ್ದಕ್ಕೂ ನಡೆಯುವ ಯಾತ್ರೆಯೆ. ಇನ್ನು ಉಳಿದಿರುವುದು 'ಗುರುಯಾತ್ರೆ'. ಇದನ್ನು ಮಾಡುವುದು ಹೇಗೆಂಬುದು ತಿರುಚಿಸ್ವಾಮಿಗಳಿಗೆ ತಿಳಿದಿರಲಿಲ್ಲ. ಗುರುವು ಯಾರು, ಹೇಗಿರುವನು, ಎಲ್ಲಿ ಅವನನ್ನು ಕಾಣಬೇಕು ಎಂಬುದು ನಿಗೂಢವಾಗಿಯೇ ಉಳಿದಿದ್ದುವು.

ವಾರಣಾಸಿಯಲ್ಲಿ ವಿಶಾಲಾಕ್ಷಿಯ ದರ್ಶನವಾಗಿ, ಈ ರೂಪ ವೃದ್ಧನ ರೂಪವಾಗಿ ಮಾರ್ಪಟ್ಟಂದು ಗುರುವಿನ ದರ್ಶನವಾದಂತೆಯೇ ಆಯಿತು. ತೀರ್ಥಯಾತ್ರೆ ಮುಗಿದು ಗುರುಯಾತ್ರೆ ಮೊದಲಾಗುವ ಘಟ್ಟ ಇದು. ದಿಲ್ಲಿಯಲ್ಲಿ ಏನೋ ಅದಮ್ಯವಾದ ಬಯಕೆ ತಲೆದೋರಿ ವಾರಣಾಸಿಗೆ ಬಂದು ವಿಶಾಲಾಕ್ಷಿಯ ಸೇವೆ ಮಾಡಿದಮೇಲೆ ಗುರು ಹೇಗಿರುವನೆಂಬುದು ತಿಳಿಯಿತು. ಈ ಅನುಭವವಾದ ಮೇಲೆ ಬಹುಹೊತ್ತು ಧ್ಯಾನದಲ್ಲಿ ಕುಳಿತಿದ್ದರು. ಆಗ ಅವರ ಮನಸ್ಸಿನಲ್ಲಿ 'ನೇಪಾಳ, ನೇಪಾಳ' ಎಂಬ ಶಬ್ದಗಳು ಸ್ಫುರಿಸಿದುವು. ನೇಪಾಳದಲ್ಲಿ ಗುರು ದೊರೆಯುವನೆಂಬುದೇನೂ ಅವರಿಗೆ ಹೊಸವಿಚಾರವಾಗಿರಲಿಲ್ಲ. ಶ್ರೀಲಂಕದ ಕಂಡಿಯಲ್ಲಿ ದೇವಿಯೇ ಹೇಳಿದ್ದಳು; ಕೋವಿಲೂರು ಮಠದಲ್ಲಿ ಆದಿಗುರುಮೂರ್ತಿಯೂ ಹೇಳಿದ್ದರು. ಆಗ ನೇಪಾಳ ಎಂಬುದು ಎಲ್ಲೋ ಯಾರಿಂದ ತಿಳಿಯುವುದು? ಆದರೆ ನೇಪಾಳ ಎಂಬುದು ಈಗ ದೂರದ ಮಾತಲ್ಲವೆಂಬುದು ಹೊಳೆಯಿತು. ನೇಪಾಳಕ್ಕೆ ಹೊರಡಬೇಕಾದ ಗಳಿಗೆ ಕೂಡಿಬಂದಿದ್ದಿತು. ನೇಪಾಳದ ವಿಚಾರವನ್ನೆಲ್ಲ ತಿಳಿದುಕೊಂಡರು.



ತಿರುವಣ್ಣಾಮಲೈನಲ್ಲಿ ಶ್ರೀ ತಿರುಚಿಸ್ವಾಮಿಗಳು

ಗುರುಯಾತ್ರೆ

ತಿರುಚಿಸ್ವಾಮಿಗಳು ಕೂಡಲೆ ವಾರಣಾಸಿಯಿಂದ ಹೊರಟು ಪಟನಾ ನಗರವನ್ನು ಸೇರಿದರು. ಅಲ್ಲಿಂದ ವಿಮಾನಮಾರ್ಗವಾಗಿ ಖಾಟ್ಮಂಡುವಿಗೆ ಬಂದರು. ಖಾಟ್ಮಂಡು ನೇಪಾಳದ ರಾಜಧಾನಿ. ನೇಪಾಳಕ್ಕೆ ಬಂದುದೇನೋ ಆಯಿತು; ಆದರೆ ನೇಪಾಳವೆಂಬುದು ರಾಜ್ಯ. ಅಲ್ಲಿ ತನ್ನ ಗುರು ಎಲ್ಲಿದ್ದಾನೆಂದು ಪತ್ತೆ ಮಾಡುವ ಬಗೆ ಹೇಗೆ? ಗುರುವಿನ ರೂಪವನ್ನೇನೋ ಕಂಡಿದ್ದರೆನ್ನಿ. ಆದರೆ ಅವರ ಹೆಸರೇನೆಂಬುದನ್ನು ಅರಿಯರು. ರೂಪವನ್ನು ಯಾರ ಮುಂದೆ ಬಣ್ಣಿಸುವುದು? ರೂಪದಿಂದ ಹೆಸರನ್ನು ತಿಳಿದುಕೊಳ್ಳುವುದು ಹೇಗೆ? ಹೆಸರು ತಿಳಿದರೆ ಹೇಗಾದರೂ ಎಲ್ಲಿದ್ದಾರೆಂಬುದನ್ನು ತಿಳಿಯುವ ಸಾಧ್ಯತೆಯಾದರೂ ಇದೆ.

ಆದರೆ ತಿರುಚಿಸ್ವಾಮಿಗಳೇನು ಇದನ್ನು ತಲೆಗೆ ಹಚ್ಚಿಕೊಳ್ಳಲಿಲ್ಲ. ಗುರುವನ್ನು ಕಾಣುವುದು ಇಂದಲ್ಲ ನಾಳೆ ಖಂಡಿತವೇ ಎಂಬುದು ಅವರ ವಿಶ್ವಾಸ. ಅವರು ಆತುರಪಡಲಿಲ್ಲ, ಚಿಂತೆಮಾಡಲಿಲ್ಲ. ದೈವವು ಹೇಗೋ ತನ್ನನ್ನು ಗುರುವಿನ ಬಳಿಗೆ ಒಯ್ಯುವುದೆಂಬ ನಂಬಿಕೆ ಅವರದ್ದು. ಅದಕ್ಕೆ ಕಾಲ ಕೂಡಿಬರಬೇಕು. ಇಷ್ಟೆಲ್ಲ ಆಗಲಿಲ್ಲವೆ? ಎಲ್ಲಿಯ ವಿಕ್ರಮಸಿಂಹಪುರ, ಎಲ್ಲಿಯ ನೇಪಾಳ? ಅಲ್ಲಿಂದ ಇಲ್ಲಿಗೆ ಬಂದುದಾಯಿತಲ್ಲ! ದೈವ ದಾರಿ ತೋರಿಸದೆ ಮನುಷ್ಯನ ಕಾತರ ಏನು ಮಾಡೀತು?

ತಿರುಚಿಸ್ವಾಮಿಗಳು ನೇಪಾಳದಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಬರಲು ಹೊರಟರು. ಬಾಗಮತಿನದಿಯಲ್ಲಿ ಸ್ನಾನ; ನೀಲಕಂಠೇಶ್ವರ, ಭೈರವ, ವಿಷ್ಣುಗಂಗಾ,

ಮಾರ್ಕಂಡೇಯ, ಪಶುಪತಿನಾಥ, ಗುಹಾಂಬಿಕೆ ಮೊದಲಾದ ಪವಿತ್ರ ತಾಣಗಳ ಸಂದರ್ಶನ. ಗುಹಾಂಬಿಕೆಯೆಂಬುದು ನಿಸರ್ಗಸಿದ್ಧವಾದ ಗುಹಾಲಯ. ಇಲ್ಲಿಗೆ ಬಂದೊಡನೆ ಸ್ವಾಮಿಗಳು ಪುಳಕಿತರಾದರು; ಮನಸ್ಸು ಪ್ರಸನ್ನವಾಯಿತು. ಈ ದೇವಿಯ ಮುಂದೆ ನಿಂತು ಮೈಮರೆತರು. ಇದೊಂದು ತಾಂತ್ರಿಕ ಸನ್ನಿಧಿ. ಸಮಾಧಿಯ ಅನುಭವ ಅಲ್ಲಿ ಆಯಿತು. ಇಡೀ ದೇಹವೆಲ್ಲ ಹಗುರಾಯಿತು, ಸುತ್ತಲೂ ಹೊಂಬೆಳಕು ಮೂಡಿಕೊಂಡಿತು; ಶಾಂತಿಯೆಂಬುದು ಮೈವೆತ್ತಿಬಂದಿತು. ಇಂಥ ಅನುಭವ ಅವರಿಗೆ ಹಿಂದೆಂದೂ ಆಗಿರಲಿಲ್ಲ. ಇದನ್ನು ಬಣ್ಣಿಸುವುದು ಸಾಧ್ಯವಿಲ್ಲವೆಂದು ಈಗಲೂ ಹೇಳುತ್ತಾರೆ.

ಅಂದೇ ದಾರಿಯಲ್ಲಿ ನಡೆಯುತ್ತಿದ್ದಾಗ ನೇಪಾಳೀ ಬ್ರಾಹ್ಮಣನೊಬ್ಬನ ಪರಿಚಯವಾಯಿತು. ಅವನು ಸ್ವಾಮಿಗಳ ಅಭಿಮಾನಿಯಾದ. ಅವರ ಆಧ್ಯಾತ್ಮಿಕ ಒಲವನ್ನು ಮೆಚ್ಚಿಕೊಂಡ. ಆ ಮಾತು ಈ ಮಾತು ಆಡುತ್ತ, ಇಲ್ಲಿಯೇ ಹತ್ತಿರ ತೀರ ವೃದ್ಧರಾದ ಯೋಗಿಗಳೊಬ್ಬರಿದ್ದಾರೆ; ಅವರು ಇಲ್ಲೆಲ್ಲ ಪ್ರಸಿದ್ಧರು. ಬೇಕಿದ್ದರೆ ಅವರನ್ನು ನೋಡಲು ಕರೆದೊಯ್ಯುತ್ತೇವೆ" ಎಂದು ತಾನಾಗಿ ಸೂಚಿಸಿದ; ಮತ್ತೆ, ಆ ಯೋಗಿಯ ಹೆಸರು 'ಶಿವಪುರಿಬಾಬಾ' ಎಂಬುದನ್ನು ತಿಳಿಸಿದ. ಆ ಹೆಸರು ಕಿವಿಗೆ ಬಿದ್ದೊಡನೆ ತಿರುಚಿಸ್ವಾಮಿಗಳ ಮೈನವಿರೆದ್ದಿತು; ಹೃದಯದಲ್ಲಿ ಉತ್ಸಾಹ ಮೂಡಿತು; ಮನಸ್ಸು ಸಂತೋಷದಿಂದ ತುಂಬಿತು. ಇವರೇ ನನ್ನ ಗುರು ಇದ್ದಾರು ಎಂಬ ಆಸೆ ಅಂಕುರಿಸಿತು.

ನೇಪಾಳೀ ಬ್ರಾಹ್ಮಣನು ತಿರುಚಿಸ್ವಾಮಿಗಳನ್ನು ಅದೇ ಸಂಜೆ ಶಿವಪುರಿಬಾಬಾ ಅವರ ಆಶ್ರಮಕ್ಕೆ ಕರೆದೊಯ್ದನು. ಈ ಆಶ್ರಮವಿದ್ದುದು ಖಾಟ್ಮಂಡುವಿನ ಹೊರಗೆ; ಕಾಡಿನ ನಡುವೆ. ಇವರು ಹೋದಾಗ ಶಿವಪುರಿಬಾಬಾ ಅಲ್ಲಿಯೇ ಇದ್ದರು. ತಿರುಚಿಸ್ವಾಮಿಗಳ ದೃಷ್ಟಿಯೂ ಶಿವಪುರಿಬಾಬಾ ದೃಷ್ಟಿಯೂ ಸಂಧಿಸಿದೊಡನೆ ಅವರ ಕಾರ್ಮಿಕಸಂಸ್ಕಾರ ಸಂಬಂಧದ ಅರಿವು ಇಬ್ಬರಿಗೂ ಒದಗಿತು. ತಿರುಚಿಸ್ವಾಮಿಗಳಿಗೆ ತಮ್ಮ ಗುರು ಕಡೆಗೂ ದೊರೆತರೆಂದು ಪರಮಾನಂದ; ಶಿವಪುರಿಬಾಬಾರಿಗೆ ತಮ್ಮ ಪೂರ್ವಸಿದ್ಧನಾದ ಶಿಷ್ಯ ಬಂದನೆಂಬ ಸಂತೋಷ.



ಶ್ರೀ ಶಿವಪುರಿ ಬಾಬಾರವರು

ಇಲ್ಲಿ ಶಿವಪುರಿಬಾಬಾರ ವಿಚಾರ ಸ್ವಲ್ಪ ಹೇಳಬೇಕು.

ಮೊದಲಿಗೆ ಅವರು ಕೇರಳದವರು, ನಂಬೂದರಿಮನೆತನಕ್ಕೆ ಸೇರಿದವರು. ಕೇರಳದಲ್ಲಿ ನಂಬೂದರಿಗಳು ಉಚ್ಚಕುಲದವರು; ಶ್ರೋತ್ರಿಯರು, ಮೇಧಾವಿಗಳು, ವಿದ್ಯಾವಂತರು. ಶಿವಪುರಿಬಾಬಾ ಹುಟ್ಟಿದ ವರ್ಷ1826. ಅವರ ಅಜ್ಜ ಅಚ್ಯುತನ್ ನಂಬೂದರಿ ಸಂಸ್ಕೃತ ವಿದ್ವಾಂಸರು, ಜ್ಯೋತಿಷಿ, ವೇದಾಂತಿ; ತುಂಬ ಅನುಕೂಲಸ್ಥರು, ಶ್ರೀಮಂತರು, ಜಮೀನುದಾರರು. ಆದರೂ ಆಧ್ಯಾತ್ಮಿಕ ಸಾಧಕರು. ಮೊಮ್ಮಗನಿಗೆ ಎಳವೆಯಲ್ಲೇ ಸಂಸ್ಕೃತವನ್ನು ಕಲಿಸಿ ಅಧ್ಯಾತ್ಮದ ರುಚಿಯನ್ನು ಬೆಳೆಸಿದರು. ಮೊಮ್ಮಗ ಆರೇಳುವರ್ಷ ವಯಸ್ಸಿನವನಿದ್ದಾಗಲೇ, ಅಚ್ಯುತನ್ ನಂಬೂದರಿ ಮನೆ ಬಿಟ್ಟು ಹೊರಟು ದೂರದ ನರ್ಮದಾ ನದಿಯ ತೀರದಲ್ಲಿ ಗುಡಿಸಲೊಂದನ್ನು ಕಟ್ಟಿಕೊಂಡು, ಅಲ್ಲಿ ನೆಲೆಸಿ, ಸಾಧನೆಯಲ್ಲಿ ತೊಡಗಿದ್ದರು. ಯಾರ ಸಂಪರ್ಕವು, ಇರದೆ ಏಕಾಂತದಲ್ಲಿ ತೀವ್ರ ವೈರಾಗ್ಯದಿಂದ ಕಠೋರವಾದ ತಪಶ್ಚರ್ಯೆಯಲ್ಲಿ ಕಾಲ ಕಳೆಯುತ್ತಿದ್ದರು.

ಶಿವಪುರಿಬಾಬಾರ ಮೊದಲ ಹೆಸರು ಗೋವಿಂದ ನಂಬೂದರಿಯೆಂದು. ಅವರು ಹದಿನೆಂಟು ವರ್ಷ ವಯಸ್ಸಿನವರಿದ್ದಾಗ ಅವರೂ ವಿರಕ್ತರಾಗಿ, ಮನೆ ಬಿಟ್ಟು, ಅಜ್ಜನ ಬಳಿಯೇ ಬಂದು ಬಿಟ್ಟರು. ಅಜ್ಜನು ಮೊಮ್ಮಗನಿಗೆ "ಸಾಧನೆಗೆ ತೊಡಗುವ ಮೊದಲು, ಪ್ರಪಂಚದ ಪರಿಚಯ ಇರಬೇಕು. ಅದಕ್ಕಾಗಿ ದೇಶಪರ್ಯಟನೆ ಮಾಡಿ ಬಾ" ಎಂದು ಹೇಳಿ ಅದಕ್ಕೆ ಬೇಕಾಗುವ ಹಣವನ್ನು ಕೊಟ್ಟು ಕಳುಹಿಸಿದರು. ಗೋವಿಂದ ನಂಬೂದರಿ ದೇಶವನ್ನೆಲ್ಲ ಸುತ್ತಾಡುತ್ತ ಶೃಂಗೇರಿಗೆ ಬಂದರು. ಶೃಂಗೇರಿಯು ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಪೀಠಗಳಲ್ಲಿ ಒಂದೆಂದು ಪ್ರಸಿದ್ಧವಾಗಿದೆಯಷ್ಟೆ. ಅಲ್ಲಿನ ಗುರುಪೀಠದಲ್ಲಿದ್ದ ಸ್ವಾಮಿಗಳನ್ನು ಗೋವಿಂದ ನಂಬೂದರಿ ಕಂಡು ಸಂನ್ಯಾಸದೀಕ್ಷೆಯನ್ನು ನೀಡಬೇಕೆಂದು ಕೇಳಿದ; ಸ್ವಾಮಿಗಳೂ ಒಪ್ಪಿದರು. ಆದರೆ ಗೋವಿಂದ ನಂಬೂದರಿ ತನ್ನ ಮನಸ್ಸು ಬದಲಾಯಿಸಿ ಸಂನ್ಯಾಸದೀಕ್ಷೆಗೆಂದು ಗೊತ್ತಾಗಿದ್ದ ದಿನಕ್ಕೆ ಮೊದಲೇ ಶೃಂಗೇರಿಯನ್ನು ಬಿಟ್ಟು ಹೊರಟುಹೋದರು.

ಅಜ್ಜ ಹೇಳಿದ್ದ ದೇಶಪರ್ಯಟನೆ ಇನ್ನೂ ಮುಗಿದಿಲ್ಲವೆಂದು ಅವರಿಗೆ ತೋರಿತು. ಮತ್ತೆ ಕೆಲವು ಪ್ರಾಂತ್ಯಗಳಲ್ಲಿ ಸುತ್ತಾಡಿ ಕಡೆಗೆ ಕಾಶ್ಮೀರದ ಶ್ರೀನಗರಕ್ಕೆ ಬಂದರು. ಅಲ್ಲಿ

ಶಿವರತ್ನಪುರಿಯೆಂಬ ಸಿದ್ಧಪುರುಷರಿಂದ ಸಂನ್ಯಾಸ ದೀಕ್ಷೆಯನ್ನು ಗ್ರಹಿಸಿ ಗೋವಿಂದಾನಂದ ಭಾರತಿಯೆಂಬ ಆಶ್ರಮ ನಾಮವನ್ನು ಪಡೆದರು. ಆದರೆ ಅಲ್ಲಿಯೂ ನಿಲ್ಲದೆ, ದೇಶಪರ್ಯಟನೆಯ ಗೀಳು ತಪ್ಪದೆ ಮುಂದೆ ನಲವತ್ತು ವರ್ಷಗಳ ಕಾಲ ಸುತ್ತಾಡುತ್ತಲೇ ಇದ್ದರು. ಅವರ ದೇಶ ಪರ್ಯಟನೆ ಪ್ರಪಂಚ ಪರ್ಯಟನೆಯಾಯಿತು. ತಮ್ಮ ಪ್ರವಾಸದಲ್ಲಿ ಆಫ್ಘಾನಿಸ್ಥಾನ, ಪರ್ಶಿಯಾ, ಮೆಕ್ಕ, ಜೆರೂಸಲೆಂ, ಇಸ್ತಾನ್ಬುಲ್, ರೋಮ್, ಇಟಲಿ, ಇಂಗ್ಲೆಂಡ್, ಅಮೇರಿಕ, ಮೆಕ್ಸಿಕೋ, ಆಂಡಿಸ್, ದಕ್ಷಿಣ ಅಮೇರಿಕ, ನ್ಯೂಜಿಲ್ಯಾಂಡ್, ಆಸ್ಟ್ರೇಲಿಯ ಮತ್ತು ಜಪಾನ್ ದೇಶಗಳೂ ಸೇರಿದ್ದುವಂತೆ. ಅವರು ಇಂಗ್ಲೇಡಿನಲ್ಲಿದ್ದುದು 1910 ರಲ್ಲೆಂದೂ, ಜಪಾನಿನಲ್ಲಿದ್ದುದು 1913 ರಲ್ಲೆಂದೂ ಹೇಳುತ್ತಾರೆ.

ಹೀಗೆ ಪ್ರಪಂಚ ಪರ್ಯಟನವನ್ನು ಮುಗಿಸಿ ಭಾರತದೇಶಕ್ಕೆ ಹಿಂದಿರುಗಿದರು. ನೇಪಾಳದ ಖಾಟ್ಮಂಟುವಿನ ಬಳಿ ಶಿವಪುರಿ ಎಂಬ ಬೆಟ್ಟದ ಮೇಲೆ ಆಶ್ರಮವೊಂದನ್ನು ಕಟ್ಟಿಕೊಂಡು ಅಲ್ಲಿ ಇರತೊಡಗಿದರು. ಈ ಸ್ಥಳದಿಂದಾಗಿ ಅವರಿಗೆ ಶಿವಪುರಿ ಬಾಬಾ ಎಂಬ ಹೆಸರು ಬಳಕೆಗೆ ಬಂದಿತು. ಅವರು 1963 ರ ಜನವರಿ 28 ರಂದು ತೀರಿಕೊಂಡರು. ಅವರು ಒಟ್ಟು ಒಂದುನೂರ ಮುವತ್ತೇಳು ವರ್ಷಗಳು ಬದುಕಿದ್ದು ಸಿದ್ಧಪುರುಷರೆಂಬ ಖ್ಯಾತಿ ಪಡೆದಿದ್ದರು. ಆದರೆ ಜನ ಸಂಪರ್ಕದಿಂದ ದೂರವಾಗಿ ಏಕಾಂತದಲ್ಲೇ ಇರುತ್ತಿದ್ದರು. ಶಿಷ್ಯ ಸಂಪತ್ತೂ ಕಡಿಮೆಯೆ. ಶಿಷ್ಯರಲ್ಲಿ ಒಬ್ಬರಾದ ಥಾಕುರ್‌ಲಾಲ್ ಮಾನಂಧರ ಎಂಬುವರು ತಮ್ಮ ಗುರುಗಳ ಉಪದೇಶಗಳನ್ನು ಸಂಗ್ರಹಿಸಿ ಬರೆದಿಟ್ಟಿದ್ದಾರೆ. ಅವರ ಪ್ರಕಾರ ಶಿವಪುರಿ ಬಾಬಾ ಅವರದ್ದು ಜ್ಞಾನಮಾರ್ಗ.

ಆದರೆ ಜ್ಞಾನನಿಷ್ಠೆ ಒದಗುವ ಮೊದಲು ಆತ್ಮಸಂಯಮ ಮತ್ತು ನೀತಿಸಂಹಿತೆಗಳು ಅಗತ್ಯವೆಂದು ಅವರ ಎಣಿಕೆ. ಸಾಧನೆಯು ಮೂರು ಘಟ್ಟಗಳಲ್ಲಿರಬೇಕೆಂದು ಅವರು ಹೇಳುತ್ತಿದ್ದರಂತೆ. ಮೊದಲನೆಯದು ಸಂವೃತಿ (ಅಥವಾ ವ್ಯಾವಹಾರಿಕ) ಸತ್ಯವನ್ನು ಅರಿತುಕೊಳ್ಳುವ ಆತ್ಮ ಸಾಕ್ಷಾತ್ಕಾರದ್ದು, ಎರಡನೆಯದು ಈ ಘಟ್ಟವನ್ನು ರೂಢಿಸಿಕೊಳ್ಳಲು ಜೀವ ಸಾಕ್ಷಾತ್ಕಾರದ ಸಾಧನೆ, ಕಡೆಯದು ಭಗವತ್ ಸಾಕ್ಷಾತ್ಕಾರದ ಘಟ್ಟ.



ಶ್ರೀ ಶಿವಪುರಿ ಬಾಬಾರವರು

ಆತ್ಮಸಂಯಮವಿರದೆ ಆಧ್ಯಾತ್ಮಿಕ ಸಾಧನೆಯು ಸಾಧ್ಯವೇ ಇಲ್ಲವೆಂದು ಅವರ ಆಗ್ರಹ. "ಭಗವಂತನ ಕಲ್ಪನೆಯೊಂದೇ ನಿಮ್ಮ ಮನಸ್ಸಿನಲ್ಲಿರಲಿ; ಉಳಿದೆಲ್ಲ ಭಾವನೆಗಳನ್ನೂ ಹೊರದೂಡಿರಿ. ಆಗ ಭಗವಂತನ ನಿಮ್ಮೆದುರೆ ತೋರಿಕೊಳ್ಳುತ್ತಾನೆ. ಆಗ ನಿಮ್ಮ ಸಮಸ್ಯೆಗಳೆಲ್ಲ ತಮ್ಮಷ್ಟಕ್ಕೆ ತಾವೆ ಪರಿಹಾರಗೊಳ್ಳುತ್ತವೆ" ಎನ್ನುವುದು ಅವರ ಉಪದೇಶ. ಅವರ ಕಡೆಗಾಲದಲ್ಲಿ ಅವರ ಸೇವೆಯನ್ನು ಮಾಡುತ್ತಿದ್ದ ಮಾನಂಧರರು ಗುರುಗಳು ಕಡೆಯುಸಿರು ಬಿಡುವ ಮುನ್ನ ಹೇಳಿದ ಮಾತನ್ನು ಉಳಿಸಿದ್ದಾರೆ:

"ಸರಿಯಾಗಿ ಬದುಕು; ಭಗವಂತನನ್ನು ಪೂಜಿಸು. ಅಷ್ಟೆ, ಇನ್ನೇನೂ ಹೆಚ್ಚಿನಮಾತಿಲ್ಲ"

ಶ್ರೀ ಶಿವರತ್ನಪುರಿಗಳಾದದ್ದು

ಹೀಗೆ ತಿರುಚಿಸ್ವಾಮಿಗಳು ಪೂರ್ವನಿಯೋಜಿತನಾದ ಗುರುವನ್ನು ಪಡೆದುಕೊಂಡರು. ಈ ಲಾಭಕ್ಕೆ ಅವರು ಬಹುಕಾಲದಿಂದ ಹಂಬಲಿಸುತ್ತಿದ್ದರು; ಆದರೆ ಸಹನೆಯಿಂದ ಕಾಯುತ್ತಿದ್ದರು. ಖಾಟ್ಮಂಡುವಿನಲ್ಲಿ ತಾವು ಭೇಟಿಮಾಡಿದ, ಅನಂತರ ನೇಪಾಳಿ ಬ್ರಾಹ್ಮಣನ ಮನೆಯಲ್ಲೇ ಬಿಡಾರ ಹೂಡಿದರು. ನೇಪಾಳೀಬ್ರಾಹ್ಮಣನು ಅವರನ್ನು ಶಿವಪುರಿಬಾಬಾ ಅವರ ಬಳಿಗೆ ಕರೆದೊಯ್ಯುವೆನೆಂದು ಹೇಳಿದಾಗಲೂ ತಮ್ಮ ಗುರುಯಾತ್ರೆ ಮುಗಿಯುವುದೆಂಬ ನಿಶ್ಚಯವೇನಿರಲಿಲ್ಲ; ಮುಗಿದೀತೆಂಬ ನಿರೀಕ್ಷೆಯೇನೋ ಇದ್ದಿತು. ಆದರೆ ಶಿವಪುರಿಬಾಬಾರ ಎದುರೇ ನಿಂತಾಗ ಸಂಶಯವೇನು ಉಳಿಯಲಿಲ್ಲ; ಗುರುಯಾತ್ರೆ ಮುಗಿದದ್ದು ಖಚಿತವಾಯಿತು.

ಅದಕ್ಕೆ ಸರಿಯಾಗಿ ಶಿವಪುರಿಬಾಬಾ ಕೂಡ ತಿರುಚಿಸ್ವಾಮಿಗಳನ್ನು ನೋಡಿದೊಡನೆ 'ಬಾ, ನಿನಗಾಗಿಯೇ ಕಾಯುತ್ತಿದ್ದೆ' ಎಂದು ಹೇಳಿದರು. ಪ್ರಥಮ ಸಮಾಗಮದಲ್ಲೇ ಸ್ವಾಮಿಗಳು ಧೈರ್ಯಮಾಡಿ ತಮಗೆ ದೀಕ್ಷೆ ಕೊಡುವಂತೆ ಕೇಳಿಕೊಂಡರು. ಗುರುವಾದರೋ ಶಾಂತಚಿತ್ತದಿಂದಲೇ 'ನಾಳೆ ಬಾ' ಎಂದು ಹೇಳಿದರು; ಆಕ್ಷೇಪಣೆಯೇನನ್ನು ಎತ್ತಲಿಲ್ಲ. ಅಂತೂ ಗುರುಯಾತ್ರೆ ಯಶಸ್ವಿಯಾಗಿ ಕೈಗೂಡುವ ಲಕ್ಷಣ ತೋರಿಬಂದದ್ದು ತಿರುಚಿಸ್ವಾಮಿಗಳಿಗೆ ಪರಮಾನಂದವಾಯಿತು. ಇನ್ನೇನು ಭಾಗ್ಯದ ಬಾಗಿಲು ತೆರೆಯಿತಲ್ಲ?

ಮರುದಿನ ಬೆಳಿಗ್ಗೆ ಸ್ವಾಮಿಗಳು ತಮ್ಮ ಅಡುಗೆಯವನು ಮತ್ತು ಸಂಗಾತಿಯೊಬ್ಬರು ಇವರೊಂದಿಗೆ ಶಿವಪುರಿಬಾಬಾರ ಆಶ್ರಮಕ್ಕೆ ಬಂದರು. ಅವರು ತಮ್ಮ

ಉತ್ತರಭಾರತಯಾತ್ರೆಯಲ್ಲಿ ತಮ್ಮ ಅಡುಗೆಯವನನ್ನೆ ಕರೆದೊಯ್ದಿದ್ದರು. ಈಗ ಅವರೊಂದಿಗೆ ಆಶ್ರಮಕ್ಕೆ ಬಂದ ಸಂಗಾತಿ ಆತ್ಮಾನಂದಸ್ವಾಮಿಯೆಂಬುವರು; ಉತ್ತರಭಾರತಯಾತ್ರೆಯ ಸಂದರ್ಭದಲ್ಲಿ ಅವರಿಗೆ ಪರಿಚಿತರಾದವರು. ಅವರಿಗೂ ಶಿವಪುರಿಬಾಬಾರ ಬಳಿ ದೀಕ್ಷೆ ಪಡೆದುಕೊಳ್ಳುವ ಬಯಕೆಯಿದ್ದಿತು. ಅದಕ್ಕಾಗಿ ಸ್ವಾಮಿಗಳೊಂದಿಗೆ ಬಂದಿದ್ದರು. ಆದರೆ ಆಶ್ರಮದ ನಡುಮನೆಯಲ್ಲಿ ಶಿವಪುರಿಬಾಬಾ ಇವರಿಬ್ಬರನ್ನು ಕಂಡಾಗ ಆತ್ಮಾನಂದಸ್ವಾಮಿಗಳನ್ನು ಕೈಸನ್ನೆಯಿಂದ ಹೊರಗೆ ಕಳಿಸಿಬಿಟ್ಟರು. ತಿರುಚಿಸ್ವಾಮಿಗಳೊಬ್ಬರೇ ಒಳಗೆ ಉಳಿದರು.

ಆಶ್ರಮದ ನಡುಮನೆಯಲ್ಲಿ ತಿರುಚಿಸ್ವಾಮಿಗಳು ಕಂಡದ್ದು ಬಾಬಾರವರ ಉಯ್ಯಾಲೆಯ ಮೇಲೆ ವಿಶ್ರಮಿಸಿಕೊಳ್ಳುತ್ತ ಕುಳಿತದ್ದನ್ನು. ತಿರುಚಿಸ್ವಾಮಿಗಳನ್ನು ಹತ್ತಿರ ಬರುವಂತೆ ಸಂಜ್ಞೆಮಾಡಿ ಕರೆದರು, ಪಕ್ಕದಲ್ಲೇ ಕೂರಿಸಿಕೊಂಡರು. ಮತ್ತೆ 'ನಿನಗಾಗಿಯೆ ಕಾಯುತ್ತಿದ್ದೆ' ಎಂದು ಸೂಚಿಸಿದರು. ತಿರುಚಿಸ್ವಾಮಿಗಳ ಸಂತೋಷಕ್ಕೆ ಪಾರವುಂಟೆ? ಆಗ ಅವರಿಗಾದ ಆನಂದವನ್ನು ಮಾತಿನಿಂದ ಹೇಳುವುದು ಸಾಧ್ಯವಿಲ್ಲವೆಂದು ಈಗ ಅವರೇ ಹೇಳುತ್ತಾರೆ.

ಹತ್ತಿರ ಕೂಡಿಸಿಕೊಂಡು ಅವರೊಂದಿಗೆ ಶಿವಪುರಿಬಾಬಾ ಬಹು ಹೊತ್ತು ಮಾತನಾಡುತ್ತಿದ್ದರು. ಬಾಬಾರಿಗೆ ಹಲವು ಭಾಷೆಗಳ ಪರಿಚಯವಿದ್ದಿತು. ತಮಿಳು, ತೆಲುಗು ಭಾಷೆಗಳು ಚೆನ್ನಾಗಿಯೆ ತಿಳಿದಿದ್ದುವು. ಆದರೆ ಮಾತುಕತೆ ಯಾವ ವಿಚಾರವಾಗಿ ನಡೆಯಿತು ಎಂಬುದನ್ನು ತಿರುಚಿಸ್ವಾಮಿಗಳು ಹೇಳಬಯಸುವುದಿಲ್ಲ; ಮೂರನೆಯವರು ಯಾರೂ ಅಲ್ಲಿರಲಿಲ್ಲ. ಹೀಗಾಗಿ ಅದು ರಹಸ್ಯವಾಗಿಯೇ ಉಳಿಯುತ್ತದೆ. ತಿರುಚಿಸ್ವಾಮಿಗಳನ್ನು ಮತ್ತೆ ಮತ್ತೆ ಕೇಳಿದಾಗ ಅವರು ನಸುನಗುತ್ತ'ಜ್ಞಾನೋಪದೇಶವನ್ನು ಪಡೆದುಕೊಂಡೆ' ಎಂದಷ್ಟೆ ಹೇಳುತ್ತಾರೆ.

ಆ ದಿನ ತಿರುಚಿಸ್ವಾಮಿಗಳು ಆಶ್ರಮದಲ್ಲೇ ಇದ್ದರು. ಗುರುವಿನ ಹತ್ತಿರವೇ, ಅವರಿಗೆ ಪರಿಚರ್ಯೆ ಮಾಡುತ್ತ ದಿನವನ್ನು ಕಳೆದರು. ತಮ್ಮ ಮನಸ್ಸಿನಲ್ಲಿ ಅಪೂರ್ವವಾದ ಶಾಂತಿ ನೆಲೆಸಿದುದನ್ನು ಈಗಲೂ ನೆನೆಸಿಕೊಳ್ಳುತ್ತಾರೆ. ಗುರು ತಮ್ಮನ್ನು ದಿಟ್ಟಿಸಿ ನೋಡಿದಾಗಲೆ

ತಮಗೆ ಅಗತ್ಯವಾದ ದೀಕ್ಷೆ ಒದಗಿತೆಂದು ಅವರ ವಿಶ್ವಾಸ; ದೀಕ್ಷೆಯ ಹಲವು ಪ್ರಕಾರಗಳಲ್ಲಿ ಇದು ದೃಷ್ಟಿ ದೀಕ್ಷೆಯೆನಿಸಿಕೊಳ್ಳುತ್ತದೆ. ಬಾಬಾರವರ ಕಣ್ಣಿಂದ ಉಜ್ವಲವಾದ ಕಾಂತಿಯೊಂದು ಹೊರಹೊಮ್ಮಿ, ಚಕ್ರದಂತೆ ಗಿರಗಿರನೆ ಸುತ್ತುತ್ತ ಬಂದು ತಿರುಚಿಸ್ವಾಮಿಗಳ ಮೇಲೆ ಎರಗಿದಂತೆ ಭಾಸವಾಯಿತು; ಅನಂತರ ಬಾಬಾರವರ ಕಣ್ಣಿಂದ ಬೆಳಕು ಸೋಪುನೀರಿನ ಗುಳ್ಳೆಗಳಂತೆ ಹೊರಗೆ ಹರಿಯುತ್ತ ಇಡೀ ಕೋಣೆಯನ್ನೆಲ್ಲ ಆವರಿಸಿಕೊಂಡಿತು ಎಂದು ತಿರುಚಿಸ್ವಾಮಿಗಳು ಹೇಳುತ್ತಾರೆ. ಇಂಥ ಅನುಭವ ಅವರಿಗೆ ಹಿಂದೆಂದೂ ಆಗಿರಲಿಲ್ಲ; ಅದರಲ್ಲಿ ಅವರು ಮೈಮರೆತರು.

ರಾತ್ರಿಯನ್ನೂ ಆಶ್ರಮದಲ್ಲೇ ಕಳೆದರು. ಇಡೀ ದಿನ ಮತ್ತು ರಾತ್ರಿ ಅವರು ಏನನ್ನೂ ತಿನ್ನದೆ ಉಪವಾಸ ನೇಮದಲ್ಲೇ ಇದ್ದು, ರಾತ್ರಿಯನ್ನು ಧ್ಯಾನದಲ್ಲಿ ಕಳೆದರು. ಮರುದಿನವೇ ದೀಕ್ಷೆ ನೀಡುವುದೆಂದು ನಿಶ್ಚಯವಾಗಿದ್ದಿತು. ಸಂನ್ಯಾಸದೀಕ್ಷೆಗೆ ಅನುಕೂಲವಾದ ಮುಹೂರ್ತವನ್ನು ರಾಜಗುರುವಾಗಿದ್ದ ನೇಪಾಳಿ ಪುರೋಹಿತನೊಬ್ಬ ಗೊತ್ತುಮಾಡಿಕೊಟ್ಟಿದ್ದ. ಮರುದಿನ ಬೆಳಿಗ್ಗೆ ತಿರುಚಿಸ್ವಾಮಿಗಳು ಎದ್ದು ಹೊರಬಂದಾಗ ಸಿದ್ಧತೆಗಳೆಲ್ಲ ಆಗಲೇ ನಡೆದಿದ್ದುವು. ಪುರೋಹಿತರಾಗಿ ಕೆಲವು ನೇಪಾಳೀ ಬ್ರಾಹ್ಮಣರೂ ಬಂದಿದ್ದರು; ಅಗ್ನಿಯನ್ನು ಆಗಲೇ ಹೋಮಕ್ಕಾಗಿ ಸಿದ್ಧಪಡಿಸಿದ್ದರು.

ತಿರುಚಿಸ್ವಾಮಿಗಳು ಬಾಗಮತಿನದಿಗೆ ಹೋಗಿ ಸ್ನಾನಮಾಡಿ ಆಶ್ರಮಕ್ಕೆ ಹಿಂದಿರುಗಿದರು. ಸಂನ್ಯಾಸದೀಕ್ಷೆಯ ವಿಧಿಗಳು ಕ್ರಮವರಿತು ಆರಂಭವಾಗಿ ಸಾಗಿದವು. ಪಿತೃತರ್ಪಣ, ಪಿಂಡಪ್ರದಾನ, ಆತ್ಮಶ್ರಾದ್ಧ, ವಿರಜಾಹೋಮ, ಪ್ರೈಷೋಚ್ಚಾರಣಗಳು ಮುಗಿದು ದಂಡಗ್ರಹಣವೂ ಆಯಿತು. ನೇಪಾಳದ ವಾಡಿಕೆಯಂತೆ ಪಿಂಡಪ್ರದಾನಕ್ಕೆ ಬಳಸಿದ್ದು ಹಿಟ್ಟನ್ನು; ಹೋಮದಲ್ಲಿ ಭತ್ತ ಮತ್ತು ಎಳ್ಳು. ಈ ವಿಧಿಗಳು ಮುಗಿದಮೇಲೆ ತಿರುಚಿಸ್ವಾಮಿಗಳನ್ನು ದಂಡವಿರಿಸಿಕೊಳ್ಳುವಿರೋ ಹೇಗೆಂದು ಕೇಳಿದರು. ಪರಮಹಂಸ ಸಂನ್ಯಾಸಿಗಳಾದರೆ ದಂಡವನ್ನು ವಿಸರ್ಜನೆ ಮಾಡಿಬಿಡುತ್ತಾರೆ; ಉಳಿದ ಸಂನ್ಯಾಸಿಗಳು ದಂಡಧಾರಿಗಳಾಗಿಯೇ ಇರುತ್ತಾರೆ. ತಿರುಚಿಸ್ವಾಮಿಗಳು ದಂಡವಿಸರ್ಜನೆಯನ್ನೆ ಆರಿಸಿಕೊಂಡರು. ತರುವಾಯ, ಸಂನ್ಯಸ್ತರಾದ ತಿರುಚಿಸ್ವಾಮಿಗಳು ದೀಕ್ಷಾಗುರುಗಳಿಗೆ

ಸಾಷ್ಟಾಂಗ ಪ್ರಣಾಮ ಮಾಡಿದರು. ಬಾಬಾ ಅವರಿಗೆ ಆಶೀರ್ವಾದ ಮಾಡುತ್ತ "ದೇವಿಯ ಅನುಗ್ರಹ ನಿನ್ನ ಮೇಲಿದೆ. ಈಗ ಇಲ್ಲಿಂದ ಹೊರಡು; ಮತ್ತೆ ಇಲ್ಲಿಗೆ ಬರಬೇಕಾದುದಿಲ್ಲ. ನಿನ್ನ ಕಾರ್ಯಕ್ಷೇತ್ರ ಕನ್ನಡನಾಡು" ಎಂದು ಸೂಚಿಸಿದರು.

ಇಲ್ಲಿ ತಿರುಚಿಸ್ವಾಮಿಗಳು ಪರಿಗ್ರಹಿಸಿದ ಸಂನ್ಯಾಸ ದೀಕ್ಷೆಯ ವಿಚಾರವಾಗಿ ಸಾಮಾನ್ಯವಾದ ಕೆಲವು ವಿವರಗಳನ್ನು ನೀಡಬಹುದು.

ನಾರದಪರಿವ್ರಾಜಕೋಪನಿಷತ್ತು, ಸಂನ್ಯಾಸೋಪನಿಷತ್ತು ಮುಂತಾದ ಗ್ರಂಥಗಳಲ್ಲಿ ನಾಲ್ಕು ತೆರನಾದ ಸಂನ್ಯಾಸಗಳನ್ನು ಹೇಳಿದೆ. ಮೊದಲನೆಯದು ವೈರಾಗ್ಯ ಸಂನ್ಯಾಸ; ಸಂಸಾರದ ಕಷ್ಟಕಾರ್ಪಣ್ಯಗಳನ್ನು ಕಂಡಾಗ ತನಗೆ ತೀವ್ರವಿರಾಗ ಒದಗಿದಾಗ ಇದರ ಪ್ರಸಕ್ತಿ. ಎರಡನೆಯದು ಜ್ಞಾನ ಸಂನ್ಯಾಸ; ಶಾಸ್ತ್ರಾಧ್ಯಯನದಿಂದ ಸಂಸಾರದ ಎಡರುತೊಡರುಗಳನ್ನರಿತುಕೊಂಡು, ದೇಹ-ವಾಸನೆ, ಶಾಸ್ತ್ರ ವಾಸನೆ ಮತ್ತು ಲೋಕ ವಾಸನೆಗಳನ್ನು ಪರಿತ್ಯಾಗಮಾಡುವುದು. ಮೂರನೆಯದು ಜ್ಞಾನ ವೈರಾಗ್ಯ ಸಂನ್ಯಾಸ; ಮೊದಲೆರಡು ವಿವರಗಳು ಇಲ್ಲಿ ಕೂಡಿಕೊಳ್ಳುತ್ತವೆ. ಇಲ್ಲಿ ಸಂನ್ಯಾಸಿಯು ಶಾಸ್ತ್ರಾಭ್ಯಾಸವನ್ನು ಮಾಡಿ ನಿತ್ಯಾನಿತ್ಯವಸ್ತು ವಿವೇಕವನ್ನು ಪಡೆದುಕೊಂಡಿರುತ್ತಾನೆ, ಅನುಭವದಿಂದಲೂ ಸಂಸಾರದ ಹೇಯತ್ವವನ್ನು ಮನಗಂಡಿರುತ್ತಾನೆ. ನಾಲ್ಕನೆಯದು ಕ್ರಮ ಸಂನ್ಯಾಸ ಅಥವಾ ಕರ್ಮಸಂನ್ಯಾಸ; ಮೊದಲು ಬ್ರಹ್ಮಚರ್ಯಾಶ್ರಮವನ್ನು ಪಾಲಿಸಿ, ಅನಂತರ ಗೃಹಸ್ಥನಾಗಿ ವ್ಯವಹರಿಸಿ, ಆದಾದಮೇಲೆ ವಾನಪ್ರಸ್ಥನಾಗಿಯು ಇದ್ದು ಕಡೆಯಲ್ಲಿ ಸಂನ್ಯಾಸಿಯಾಗುವುದು.

ತಿರುಚಿಸ್ವಾಮಿಗಳಾದರೋ ಗೃಹಸ್ಥರೂ ಆಗಿರಲಿಲ್ಲ, ವಾನಪ್ರಸ್ಥಾಶ್ರಮದಲ್ಲಿಯೂ ಇರಲಿಲ್ಲ. ಸಂಸಾರದ ಹೇಯತ್ವವನ್ನು ಅವರು ಅನುಭವದಿಂದಲೂ ಮನಗಂಡಿರಲಿಲ್ಲ. ವೈರಾಗ್ಯ ಭಾವನೆಯನ್ನೇನೋ ಚಿಕ್ಕಂದಿನಿಂದಲೇ ಬೆಳೆಸಿಕೊಂಡಿದ್ದರು; ಈ ಸಂನ್ಯಾಸ ದೀಕ್ಷೆ ಒದಗುವ ಮೊದಲೇ ವಿರಕ್ತಸ್ವಾಮಿಗಳಾಗಿದ್ದರು. ಆದರೆ ತಾರಕವಾದ, ಮೋಕ್ಷಕ್ಕೆ ಅಗತ್ಯವಾದ ಜ್ಞಾನ ಒದಗಿರಲಿಲ್ಲ; ಅದನ್ನು ಬಯಸಿಯೇ ಅವರು ಗುರುಯಾತ್ರೆಯನ್ನು ಕೈಗೊಂಡದ್ದು. ಆದುದರಿಂದ ಈಗ ಅವರಿಗೆ ಒದಗಿದುದು ಜ್ಞಾನಸಂನ್ಯಾಸದೀಕ್ಷೆಯೆಂದು ಹೇಳಬಹುದು.

ಮತ್ತೆ ಗ್ರಂಥಗಳಲ್ಲಿ ಆರು ಬಗೆಯ ಸಂನ್ಯಾಸಿಗಳನ್ನು ನಿರ್ದೇಶಿಸುವುದಿದೆ-

೧. ಕುಟೀಚಕ: ಇವರು ತಲೆಗೂದಲನ್ನೂ ಗಡ್ಡಮೀಸೆಗಳನ್ನೂ ತೆಗೆದು, ದಂಡಕಮಂಡಲುಗಳನ್ನು ಹಿಡಿದು ಕಾಷಾಯವಸ್ತ್ರವನ್ನು ಧರಿಸಿ ಒಂದೇ ಸ್ಥಳದಲ್ಲಿ ವಾಸಮಾಡುವರು.

೨. ಬಹೂದಕ: ಇವರು ಮೇಲಿನವರಂತೆಯೇ ಇರುವವರಾದರೂ ಹಲವು ಕಡೆಗಳಲ್ಲಿ ಇರುತ್ತ ಗೃಹಸ್ಥರಿಂದ ಭಿಕ್ಷೆಯನ್ನು ಪಡೆದುಕೊಳ್ಳುವರು.

೩. ಹಂಸ: ಇವರು ದಂಡ-ಕಮಂಡಲುಗಳನ್ನು ಹಿಡಿದು, ತಲೆಕೂದಲನ್ನು ಜಟೆಯಾಗಿ ಧರಿಸಿ, ಗಡ್ಡಮೀಸೆಗಳನ್ನು ತೆಗೆಯದೇ, ಒಂದೆಡೆ ನಿಲ್ಲದೆ ಊರೂರು ಅಳೆಯುವರು.

೪. ಪರಮಹಂಸ: ಇವರು ಒಂದೇ ವಸ್ತ್ರವನ್ನು ಉಡುವರು; ವಸ್ತ್ರ ಕಾಷಾಯ ಬಣ್ಣದ್ದಾಗಬಹುದು, ಬಿಳಿಬಣ್ಣದ್ದಾಗಬಹುದು, ಬೇಕಿದ್ದರೆ ದಂಡ-ಕಮಂಡಲುಗಳನ್ನು ಹಿಡಿದಿರಬಹುದು, ಇಲ್ಲವೆ ಅವನ್ನೂ ಬಿಟ್ಟಿರಬಹುದು; ಆಹಾರಮಾತ್ರ ಅಲ್ಪವಾಗಿರಬೇಕು; ಸರ್ವಸಂಗ ಪರಿತ್ಯಾಗ ಮಾಡಬೇಕು.

೫. ತುರೀಯಾತೀತ: ಇವರು ಬೆತ್ತಲೆ ತಿರುಗಾಡುವರು; ದಂಡ-ಕಮಂಡಲುಗಳನ್ನು ಬಿಟ್ಟಿರುತ್ತಾರೆ; ಬರಿಯ ಹಣ್ಣುಹಂಪಲು ತಿಂದು ಬದುಕುತ್ತಾರೆ; ದೇಹವನ್ನು ಹೆಣದಂತೆ ಕಾಣುತ್ತಾರೆ.

೬. ಅವಧೂತ: ಇವರಿಗೆ ಯಾವ ನಿಯಮವೂ ಅನ್ವಯಿಸದು. ಸಂನ್ಯಾಸಾಶ್ರಮದ ವಿಧಿಯನ್ನಾಗಲಿ ಇವರು ಪಾಲಿಸಬೇಕಾದುದಿಲ್ಲ; ಸಂಸಾರಿಯ ನೇಮನಿಷ್ಠೆಗಳನ್ನೂ ಅನುಸರಿಸಬೇಕಾದುದಿಲ್ಲ; ಆತ್ಮಾವಲೋಕನದಲ್ಲಿ ಎಡೆಬಿಡದೆ ತೊಡಗಿರುತ್ತಾರೆ; ಉಳಿದ ಯಾವ ಪ್ರಸಕ್ತಿಯೂ ಇವರಿಗಿರದು.

ಈ ಸಂನ್ಯಾಸಪ್ರಕಾರಗಳಲ್ಲಿ ತಿರುಚಿಸ್ವಾಮಿಗಳಿಗೆ ಒದಗಿದುದು ಪರಮಹಂಸಸಂನ್ಯಾಸ. ಆದುದರಿಂದ ದಂಡ-ಕಮಂಡಲುಗಳನ್ನು ಹಿಡಿದಿರಬೇಕಾದುದಿಲ್ಲ. ದೀಕ್ಷೆಯ ಸಮಯದಲ್ಲಿ ಗಡ್ಡಮೀಸೆಗಳನ್ನೂ ತಲೆಗೂದಲುನ್ನೂ ಇರಿಸಿಕೊಳ್ಳುವ ಅಥವಾ ತೆಗೆಯುವ ವಿಚಾರದಲ್ಲಿ ಇವರ ಅಭಿಮತವೇನೆಂದು ಗುರುಗಳು ಕೇಳಿದಾಗ ಇರಿಸಿಕೊಳ್ಳುತ್ತೇನೆಂದರು; ಗುರುಗಳು ಒಪ್ಪಿದರು. ಬಟ್ಟೆಯ ವಿಚಾರದಲ್ಲಿ ಬಿಳಿಬಟ್ಟೆಯನ್ನುಟ್ಟರೆ ಸಾಕೆಂದೂ, ಕಾಷಾಯ ವಸ್ತ್ರದ ಅಗತ್ಯವಿಲ್ಲವೆಂದೂ ಗುರುಗಳೇ ಹೇಳಿದರು.

ತಿರುಚಿಸ್ವಾಮಿಗಳು ಪರಮಹಂಸಸಂನ್ಯಾಸವನ್ನೇ ಆರಿಸಿಕೊಂಡುದಕ್ಕೆ ಹಿನ್ನಲೆಯೂ ಒಂದಿದೆ. ಒಂಬತ್ತು ವರ್ಷದ ಹುಡುಗನಾಗಿದ್ದಾಗಲೆ ಅವರು ಸಾಧುಸಂತರ ಜೊತೆಯಲ್ಲಿ ತಿರುಗಾಡುತ್ತಿದ್ದರಷ್ಟೆ. ಆಗ ಅವರ ಅಜ್ಜಿ ವೆಂಕಮ್ಮ ಹುಡುಗನೆಲ್ಲಿಯಾದರೂ ದಾರಿ ತಪ್ಪಿಯಾನು, ಕಪಟಿಗಳ ಪ್ರಲೋಭನೆಗೆ ಪಕ್ಕಾದಾನು ಎಂಬ ಭಯದಿಂದ, ಇವನಿಗೆ ಮತ್ತೆ ಮತ್ತೆ ಹೇಳುತ್ತಿದ್ದರು "ನೀನು ಸಂನ್ಯಾಸಿಯಾದರೂ ರಾವಣಸಂನ್ಯಾಸಿಯಾಗಬೇಡ. ಸೀತೆಯನ್ನು ಹೊತ್ತುಕೊಂಡು ಹೋಗುವುದಕ್ಕಷ್ಟೆ ಅವನು ಸಂನ್ಯಾಸಿಯಾದದ್ದು. ಅವನ ಮನಸ್ಸಾಗಲಿ ಹೃದಯವಾಗಲಿ ಸಂನ್ಯಾಸಕ್ಕೆ ಸಿದ್ಧವಾಗಿರಲಿಲ್ಲ. ನೀನು ಹಾಗಾಗಬೇಡ. ಸಾಧುವಾದರೂ ಸಂನ್ಯಾಸಿಯಂತೆ ವೇಷಧರಿಸಬೇಡ". ಹಾಗೆ ಸಂನ್ಯಾಸಿಯಂತೆ ತೋರಗೊಡದೆ, ದಿಟವಾದ ಸಂನ್ಯಾಸ ಹೃದಯದಲ್ಲಿರಬೇಕಾದುದು ಅಗತ್ಯವೆಂದು ಒತ್ತಿ ಹೇಳಿ, ಹಾಗೆ ನೋಟಕ್ಕೆ ಸಂನ್ಯಾಸಿಯಾಗಿರುವುದಿಲ್ಲವೆಂದು ಹುಡುಗನಿಂದ ಭಾಷೆ ತೆಗೆದುಕೊಂಡಿದ್ದರು.

ಆದುದರಿಂದಲೇ ತಿರುಚಿಸ್ವಾಮಿಗಳು ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿದರೂ, ಮುಂಡನ, ಕಾಷಾಯವಸ್ತ್ರಾಧಾರಣ, ದಂಡ-ಕಮಂಡಲು ಮುಂತಾದ ಯಾವ ಬಾಹ್ಯ ಚಿಹ್ನೆಗಳನ್ನೂ ಪರಿಗ್ರಹಿಸಲಿಲ್ಲ. ಎಂದಿನಂತೆಯೇ ಮುಂದರಿದರು. ಆಶ್ರಮನಾಮ 'ಶಿವರತ್ನಪುರಿ'ಯೆಂದು ಗುರುಗಳಿಂದ ಕೊಡಲ್ಪಟ್ಟಿತಾದರೂ ತಿರುಚಿಸ್ವಾಮಿಯಾಗಿಯೇ ಉಳಿದರು.

ಆದರೆ ಅವರ ದೀಕ್ಷಾಗುರುಗಳು ಪರಂಪರೆಯೊಂದಕ್ಕೆ ಸೇರಿದ್ದರು. ಆನಂದಭಗವತ್ಪಾದ ಎಂಬುವರಿಂದ ಮೊದಲಾದ ಈ ಪರಂಪರೆಯಲ್ಲಿ ಶಿವಪುರಿಬಾಬಾ ಮೂವತ್ತೊಂಬತ್ತನೆಯ ತಲೆ. ತಿರುಚಿಸ್ವಾಮಿಗಳು ಅವರ ಶಿಷ್ಯರಾಗಿ ಶಿವರತ್ನಪುರಿ ಎಂಬ ಹೆಸರಿನಿಂದ ನಲವತ್ತನೆಯ ಗುರುಗಳಾದರು. ಶಿವಪುರಿಬಾಬಾರ ಗುರುಗಳೂ ಶಿವರತ್ನಪುರಿ ಭಗವತ್ಪಾದರೇ. ಅವರಿಗೆ ಪೂರ್ವದಲ್ಲಿ ಇನ್ನು ಮೂರು ಮಂದಿ ಶಿವರತ್ನಪುರಿಗಳಿದ್ದರು. ತಿರುಚಿಸ್ವಾಮಿಗಳು ಈ ಪರಂಪರೆಯಲ್ಲಿ ಐದನೆಯ ಶಿವರತ್ನಪುರಿ ಭಗವತ್ಪಾದರು.

ಈ ಪರಂಪರೆಯ ಗುರುಗಳ ಹೆಸರು ಕ್ರಮವಾಗಿ ಹೀಗಿವೆ

೧. ಆನಂದ ಭಗವತ್ಪಾದಾಚಾರ್ಯರು (೧)
೨. ಜಯೇಂದ್ರಪುರಿ ಭಗವತ್ಪಾದಾಚಾರ್ಯರು (೧)
೩. ಜ್ಞಾನಬೋಧಕ ಭಗವತ್ಪಾದಾಚಾರ್ಯರು
೪. ಜಯಪುರಿ ಭಗವತ್ಪಾದಾಚಾರ್ಯರು
೫. ಗೋವಿಂದಪುರಿ ಭಗವತ್ಪಾದಾಚಾರ್ಯರು
೬. ಕಾಂತ ಪುರಿ ಭಗವತ್ಪಾದಾಚಾರ್ಯರು
೭. ಶಿವಪುರಿ ಭಗವತ್ಪಾದಾಚಾರ್ಯರು (೧)
೮. ಮಧುಸೂದನಪುರಿ ಭಗವತ್ಪಾದಾಚಾರ್ಯರು
೯. ಕೃಷ್ಣಪುರಿ ಭಗವತ್ಪಾದಾಚಾರ್ಯರು
೧೦. ವಿದ್ಯಾಶೇಖರಪುರಿ ಭಗವತ್ಪಾದಾಚಾರ್ಯರು
೧೧. ವಿಜಯಜಯಪುರಿ ಭಗವತ್ಪಾದಾಚಾರ್ಯರು
೧೨. ಪುರುಷೋತ್ತಮಪುರಿ ಭಗವತ್ಪಾದಾಚಾರ್ಯರು
೧೩. ರಾಮಚಂದ್ರಪುರಿ ಭಗವತ್ಪಾದಾಚಾರ್ಯರು
೧೪. ಜಯಪುರಿ ಭಗವತ್ಪಾದಾಚಾರ್ಯರು
೧೫. ಯೋಗಾನಂದಪುರಿ ಭಗವತ್ಪಾದಾಚಾರ್ಯರು
೧೬. ನರಸಿಂಹಪುರಿ ಭಗವತ್ಪಾದಾಚಾರ್ಯರು

೧೭. ಶಿವರತ್ನಪುರಿ ಭಗವತ್ಪಾದಾಚಾರ್ಯರು (೧)

೧೮. ಶಂಕರಾನಂದಪುರಿ ಭಗವತ್ಪಾದಾಚಾರ್ಯರು

೧೯. ಈಶ್ವರಪುರಿ ಭಗವತ್ಪಾದಾಚಾರ್ಯರು

೨೦. ಶಿವರತ್ನಪುರಿ ಭಗವತ್ಪಾದಾಚಾರ್ಯರು (೨)

೨೧. ಶಿವಪುರಿ ಭಗವತ್ಪಾದಾಚಾರ್ಯರು (೨)

೨೨ ತಪೋವನಪುರಿ ಭಗವತ್ಪಾದಾಚಾರ್ಯರು

೨೩. ಜಯೇಂದ್ರಪುರಿ ಭಗವತ್ಪಾದಾಚಾರ್ಯರು (೨)

೨೪. ಶಿವರತ್ನಪುರಿ ಭಗವತ್ಪಾದಾಚಾರ್ಯರು (೩)

೨೫. ಸಚ್ಚಿದಾನಂದಪುರಿ ಭಗವತ್ಪಾದಾಚಾರ್ಯರು

೨೬ ಶಿವಪುರಿ ಭಗವತ್ಪಾದಾಚಾರ್ಯರು (೩)

೨೭. ತೋತಾಪುರಿ ಭಗವತ್ಪಾದಾಚಾರ್ಯರು (೧)

೨೮. ಆದಿದೇವಾನಂದಪುರಿ ಭಗವತ್ಪಾದಾಚಾರ್ಯರು

೨೯. ಬ್ರಹ್ಮಪುರಿ ಭಗವತ್ಪಾದಾಚಾರ್ಯರು

೩೦. ಆದಿಯತಿರಾಜಪುರಿ ಭಗವತ್ಪಾದಾಚಾರ್ಯರು

೩೧. ಜಯೇಂದ್ರಪುರಿ ಭಗವತ್ಪಾದಾಚಾರ್ಯರು (೨)

೩೨. ತೀರ್ಥಪುರಿ ಭಗವತ್ಪಾದಾಚಾರ್ಯರು

೩೩. ಸದಾಶಿವಪುರಿ ಭಗವತ್ಪಾದಾಚಾರ್ಯರು

೩೪. ಶಿವಪುರಿ ಭಗವತ್ಪಾದಾಚಾರ್ಯರು (೪)

೩೫. ಜಯೇಂದ್ರಪುರಿ ಭಗವತ್ಪಾದಾಚಾರ್ಯರು (೩)

೩೬. ಆನಂದಪುರಿ ಭಗವತ್ಪಾದಾಚಾರ್ಯರು (೨)

೩೭. ತೋತಾಪುರಿ ಭಗವತ್ಪಾದಾಚಾರ್ಯರು (೨)

೩೮. ಶಿವರತ್ನಪುರಿ ಭಗವತ್ಪಾದಾಚಾರ್ಯರು (೪)

೩೯. ಶಿವಪುರಿ ಭಗವತ್ಪಾದಾಚಾರ್ಯರು (೫)

೪೦. ಶಿವರತ್ನಪುರಿ ಭಗವತ್ಪಾದಾಚಾರ್ಯರು (೫)

ಚತುರ್ಥ ಪುಷ್ಪ

ಸ್ವಾಮಿ ಮತ್ತು ದೈವನಿಯಮಿತ ಕಾರ್ಯ

ಕೈಲಾಸಯಾತ್ರೆ

ತಿರುಚಿಸ್ವಾಮಿಗಳು ಶಿವಪುರಿಬಾಬಾ ಬಳಿ ಜ್ಞಾನಸಂನ್ಯಾಸ ದೀಕ್ಷೆ ಪಡೆದುಕೊಂಡಮೇಲೆ ಆಶ್ರಮದಿಂದ ಖಾಟ್ಮಂಡುವಿಗೆ ಬಂದು ಅಲ್ಲಿ ಪಶುಪತಿನಾಥನ ಆಲಯವನ್ನು ನೋಡಿಕೊಂಡು ಪಟನಾ ಮಾರ್ಗವಾಗಿ ದಿಲ್ಲಿಗೆ ಹಿಂದಿರುಗಿದರು. ಅವರು ಶಿವಪುರಿ ಬಾಬಾರನ್ನು ಕಂಡಾಗ ಬಾಬಾರಿಗೆ ಒಂದು ನೂರಾಮೂವತ್ತೆರಡು ವರ್ಷ ವಯಸ್ಸು. ಮುಂದೆ ಅವರು ಐದು ವರ್ಷ ಬದುಕಿದ್ದರು. ತಿರುಚಿಸ್ವಾಮಿಗಳು ಮತ್ತೆ ಅವರನ್ನು ಕಾಣಲಿಲ್ಲ. ತಿರುಚಿಸ್ವಾಮಿಗಳಿಗೆ ಈ ಮೊದಲೇ ಹಿಮಾಲಯದ ಕೈಲಾಸ ಪರ್ವತವನ್ನು ಸಂದರ್ಶಿಸಬೇಕೆಂಬ ಬಯಕೆ ಇದ್ದಿತು. ತಮ್ಮ ಕಾರ್ಯಕ್ಷೇತ್ರವಾದ ಕನ್ನಡನಾಡಿಗೆ ಬರುವ ಮುಂಚೆ ಈ ಯಾತ್ರೆಯನ್ನು ಮುಗಿಸುವ ಯೋಚನೆ ಮಾಡಿದರು. ದಿಲ್ಲಿಯಲ್ಲಿ ಅವರ ಭಕ್ತರು ಅಗತ್ಯವಾದ ಸಿದ್ಧತೆಯನ್ನೆಲ್ಲ ಮಾಡಿದರು.

ಸಣ್ಣ ಪರಿವಾರದೊಂದಿಗೆ (ಹತ್ತೇ ಮಂದಿ) ತಿರುಚಿಸ್ವಾಮಿಗಳು ದಿಲ್ಲಿಯಿಂದ ಹೊರಟು ಕಾಟ್ಗೆಗಧಾಮ ಎಂಬಲ್ಲಿಗೆ ಬರ್‍ಯೆಲಿ ಮೂಲಕ ಕೈಲಾಸಕ್ಕೆ ಹೋಗುವ ದಾರಿಯಾಗಿ ಬಂದರು. ಕಾಟ್ಗೆಗಧಾಮದಿಂದ ಅಲಮೋಡ ಮಾರ್ಗವಾಗಿ ಕೈಲಾಸಕ್ಕೆ ಇನ್ನೂರಾಮೂವತ್ತೆಂಟು ಮೈಲಿಗಳು. ಸ್ವಾಮಿಗಳು ಹಿಡಿದಿದ್ದು ಈ ದಾರಿಯನ್ನು. ಅಲಮೋಡಾದಲ್ಲಿ ಮೂರುದಿನಗಳು ತಂಗಿ ಭಾಗೇಶ್ವರ (ಪಾವಕೇಶ್ವರ)ದ ಕಡೆ ಬಸ್ಸಿನಲ್ಲಿ ಪ್ರಯಾಣ ಬೆಳೆಸಿದರು. ಒಂದು ರಾತ್ರಿ ಅಲ್ಲಿದ್ದು ಚೌಖಡಿಯೆಂಬಲ್ಲಿಗೆ ಬಂದರು; ಧಾಲ್‌ನಲ್ಲಿ ರಾತ್ರಿಯನ್ನು ಕಳೆದು ಧಲ್, ಅಸ್ಕೋಟ್, ಪಲವಕೋಟ್, ಕಾರ್ಜೂಲ, ಖೇಲ, ಮಲ್‌ಪುವಾ, ನಾರಾಯಣಾಶ್ರಮ, ಬುದ್ಧಿಗರ್ಭ, ಕಾಲಾಪಾನಿ, ಲಿಪ್ಲೆ ಎಂಬ ಹಳ್ಳಿಗಳನ್ನು ದಾಟಿ ತಕ್ಲಕೋಟಕ್ಕೆ ಬಂದರು.

ಕಲಿಗಂಗಾನದಿಯ ದಂಡೆಯ ಮೇಲಿರುವ ತಕ್ಲಕೋಟ್ ಕೈಲಾಸ ಯಾತ್ರೆಯಲ್ಲೊಂದು ಪ್ರಮುಖ ಘಟ್ಟ. ಅಲ್ಲಿ ಸ್ವಾಮಿಗಳೂ ಅವರ ಪರಿವಾರವೂ ಮೂರುದಿನಗಳ ಕಾಲ ವಿಶ್ರಮಿಸಿಕೊಂಡು ರಾಕ್ಷಸಕಲ್(ಇದನ್ನು ರಾವಣ ಹೃದಯವೆಂದು ಕರೆಯುತ್ತಾರೆ) ಎಂಬೂರಿಗೆ ಬಂದಿಳಿದರು. ಇದು ಕೈಲಾಸ ಪರ್ವತದ ತಪ್ಪಲಿನಲ್ಲೇ ಇರುವ ಸಣ್ಣ ಊರು. ಇಲ್ಲಿಂದ ಕೈಲಾಸ ಪರ್ವತ ಕಾಣುತ್ತದೆ. ಇಲ್ಲಿಂದ ಬೆಟ್ಟವನ್ನೂ ಏರುವುದೊಂದು ಅಭೂತಪೂರ್ವವಾದ ಸನ್ನಿವೇಶ. ಸ್ವಾಮಿಗಳು ಸುತ್ತಲ ನಿಸರ್ಗದ ಸೌಂದರ್ಯವನ್ನೂ ಅದ್ಭುತ ಕಳೆಯನ್ನೂ ಅನುಭವಿಸುತ್ತ ಕೈಲಾಸ ಪರ್ವತವನ್ನೇರ ತೊಡಗಿದರು; ಕನಸಿನ ಕಾಣಿಕೆಯಂತೆ, ಮಾಯಾಲೋಕದಂತೆ ಗೋಚರಿಸುವ ಮಾನಸಸರೋವರವನ್ನು ಕಂಡರು.

ಕೆಲಾಸಶೈಲ ಶಿಖರವನ್ನು ಹತ್ತಿ ನಿಂತಾಗ ಅವರಿಗೆ ಸಮಾಧಿಸ್ಥಿತಿಯೇ ಒದಗಿಬಂದಿತು. ಭಗತ್ಸಾನಿಧ್ಯದ ನೇರವಾದ ಅನುಭವದಲ್ಲಿ ಹಲವಾರು ಗಂಟೆಗಳನ್ನು ಧ್ಯಾನಮಗ್ನರಾಗಿ ಕಳೆದರು. ಶಿಖರವು ಸಮುದ್ರಮಟ್ಟದಿಂದ ಸುಮಾರು ಇಪ್ಪತ್ತೊಂದು ಸಾವಿರ ಅಡಿಗಳಷ್ಟು ಎತ್ತರವಿದೆ; ಆ ಮಟ್ಟದಲ್ಲಿ ಸರಿಯಾಗಿ ಉಸಿರಾಡುವುದು ಕಷ್ಟವೇ. ಮನಸ್ಸು ನೆಮ್ಮದಿಯಾಗಿರುವುದಿಲ್ಲ; ಭ್ರಾಂತಿಯ ನೋಟಗಳು ಕಾಣುತ್ತಲೇ ಇರುತ್ತವೆ. ಗುಂಡಿಗೆ ಗಟ್ಟಿಯಾಗಿಲ್ಲದವರಿಗೆ ಕಳವಳವಾಗುವ ಸಂದರ್ಭಗಳು ಬಹಳ. ದೇಹಕ್ಕೂ ತುಂಬಾ ದಣಿವು. ಮನಸ್ಸಿಗೂ ಕ್ಲೇಶ. ಸ್ವಾಮಿಗಳ ಅಡುಗೆಯವನು ಬೆಟ್ಟವನ್ನು ಹತ್ತುವಾಗಲೇ ಹಲವು ಬಾರಿ ಅರಿವು ತಪ್ಪಿ, ಬಸವಳಿದು ಕಂಗಾಲಾಗಿ ತೊಂದರೆಪಟ್ಟ; ಕೆಮ್ಮಿದರೆ ರಕ್ತವೇ ಹೊರಗೆ ಬರುತ್ತಿತ್ತು; ತಡೆಯಲಾರದ ನಡುಕ. ಇನ್ನು ಮುಂದಕ್ಕೆ ಬರಲಾರನೆಂದು ಅಳತೊಡಗಿದ. ತನ್ನನ್ನು ಕೊಲ್ಲಲೆಂದೇ ಇಲ್ಲಿಗೆ ಕರೆತಂದಿರೆಂದು ಸ್ವಾಮಿಗಳನ್ನು ದೂರಿದ. ಸ್ವಾಮಿಗಳು ಅವನನ್ನು ಸಮಾಧಾನಪಡಿಸಿ ಭರವಸೆ ನೀಡಿ ಮೇಲೊಯ್ಯಬೇಕಾಯಿತು.

ಆದರೆ ಸ್ವಾಮಿಗಳಿಗೆ ಏನೊಂದು ತೊಂದರೆಯೂ ಆಗಲಿಲ್ಲ. ಬದಲಿಗೆ, ಬೆಟ್ಟದ ತುದಿಯಲ್ಲಿ ನಿಂತಾಗ ಉತ್ಸಾಹವೇ ಉಮ್ಮಡಿಸಿತು. ಕೈಲಾಸ ಶಿಖರದ ರಹಸ್ಯಗಳೆಲ್ಲ ಅವರೆದುರು ಒಂದೊಂದಾಗಿ ಬಯಲಾದುವು. ತಂತ್ರಶಾಸ್ತ್ರಗ್ರಂಥಗಳಲ್ಲಿ ಹೇಳುವ

'ಊರ್ಧ್ವಾಮ್ನಾಯ'ವು ಇದೇ ಎಂಬುದು ಅವರಿಗೆ ಸ್ಪಷ್ಟವಾಯಿತು. ಚತುರಾಮ್ನಾಯಗಳು ದೇಶದಲ್ಲಿವೆ; ಭೂಮಟ್ಟದಲ್ಲೇ ವ್ಯವಸ್ಥೆಗೊಂಡಿವೆ. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯಪೀಠಗಳು. ಐದನೆಯ ಊರ್ಧ್ವಾಮ್ನಾಯ ಗೂಢವಾದುದೆಂದು ಕಲ್ಪನೆ. ಅದು ಎಲ್ಲಿದೆಯೆಂಬುದು ಗ್ರಂಥಗಳ ಒಕ್ಕಣೆಯಿಂದ ಸ್ಪಷ್ಟವಾಗುವುದಿಲ್ಲ. ಸ್ವಾಮಿಗಳಿಗೆ ಅವ್ಯಕ್ತಳಾದ ಅವ್ಯಾಕೃತಳಾದ ದೇವಿಯ ಸನ್ನಿಧಾನವೇ ಈ ಕೈಲಾಸಶಿಖರ, ಅದೇ ದಿಟವಾಗಿ ಊರ್ಧ್ವಾಮ್ನಾಯ ಎಂಬುದು ತಿಳಿದುಬಂದಿತು.

ಅಲ್ಲಿಯೇ ತಮ್ಮ ಇಷ್ಟದೈವರೂಪವಾದ ರಾಜರಾಜೇಶ್ವರಿಯ ದರ್ಶನವೂ ಆಯಿತು. ಶಿಖರದಲ್ಲಿ ಸಿಂಹಾಸನಾರೂಢೆಯಾದ, ವೈಭವದಿಂದ ಮೆರೆಯುವ ಈ ರೂಪ ಕಣ್ಣೆದುರು ತೋರಿಕೊಂಡಾಗ ತಾವು ಹುಡುಗತನದಲ್ಲಿ ಮಾಡಿಟ್ಟು ಪೂಜಿಸುತ್ತಿದ್ದ ಮಣ್ಣಿನ ಮೂರ್ತಿಯ ನೆನಪೇ ಬಂದಿತು. ಇದನ್ನೇ ಶ್ರೀಲಂಕದ ಶಿವನಡಿಪಾದದಲ್ಲಿ ಸಂನ್ಯಾಸಿಯು ತನ್ನ ಕಮಂಡಲುವಿನಿಂದ ಹೊರತೆಗೆದು ತೋರಿಸದಳಷ್ಟೆ? ಅದೇ ರೂಪ ಇಲ್ಲಿ ಈಗ ಕಂಗೊಳಿಸಿತು. ಕಾಲಾಪಾನಿ ಮತ್ತು ಗರ್ಬೆ ಎಂದೆರಡು ಸ್ಥಳಗಳ ನಡುವೆ ಬಂಡೆಯೊಂದರ ಮೇಲೆ ಇವರು ಕುಳಿತಿದ್ದಾಗ ಕಾಣಿಸಿದ ಈ ಭವ್ಯ ದರ್ಶನದಲ್ಲಿ ದೇವಿಯ ಎಡಬಲಪಕ್ಕಗಳಲ್ಲಿ ಲಕ್ಷ್ಮೀಸರಸ್ವತಿಯರೂ ವಿರಾಜಮಾನರಾಗಿದ್ದರು. ಮುಂದೆ ಸ್ವಾಮಿಗಳು ತಾವು ಕಂಡುದನ್ನು ಚಿತ್ರಕಾರನೊಬ್ಬನಿಗೆ ವಿವರಿಸಿ ಒಂದು ವರ್ಣಚಿತ್ರವನ್ನೂ ಮೂಡಿಸಿದರು. ಈ ಚಿತ್ರವು ದರ್ಶನದ ಮೂರ್ತರೂಪವಾಗಿದೆ.

ಇದರಲ್ಲಿ ಕಾಣುವುದು ಸ್ವಾಮಿಗಳ ಆಗಿನ ಇರವು. ಇಲ್ಲಿಯೂ ಅವರು ತಮ್ಮ ಎಂದಿನ ಬಿಳಿಬಣ್ಣದ ಉಡುಗೆಯನ್ನೆ ತೊಟ್ಟಿದ್ದಾರೆ. ಬೆಚ್ಚನೆಯ ಉಣ್ಣೆಯ ಬಟ್ಟೆಯನ್ನೇನು ಅವರು ಧರಿಸಲಿಲ್ಲ. ಆ ಮಟ್ಟದಲ್ಲಿ ಚಳಿ-ಗಾಳಿ ವಿಪರೀತ; ಸಾಮಾನ್ಯಜನ ಬೆಚ್ಚನೆಯ ಬಟ್ಟೆಗಳನ್ನು ಹಲವು ಪದರಗಳಲ್ಲಿ ಉಟ್ಟರೂ ತಡೆಯುವುದಿಲ್ಲ. ಸ್ವಾಮಿಗಳು ಹೆಚ್ಚು ಬಟ್ಟೆಯನ್ನೇನು ತೊಡದೆ ಇದ್ದರೂ ತೊಂದರೆಯಾಗಲಿಲ್ಲ. ನಡೆಯುವಾಗ ಮಂಜಿನ ಕೊರೆತವನ್ನು ಮರೆಮಾಡಲು ಕಾಲಿಗೆ ಹತ್ತಿಬಟ್ಟೆಯನ್ನೆ ಸುತ್ತಿಕೊಳ್ಳುತ್ತಿದ್ದರಂತೆ.

ತನ್ನ ಪೂರ್ವಜನ್ಮದ ಪುಣ್ಯಪರಿಪಾಕದಿಂದಲೇ ತಮಗೆ ಈ ಯಾತ್ರೆ ಸಾಧ್ಯವಾಯಿತೆಂದು ಸ್ವಾಮಿಗಳ ನಂಬಿಕೆ. ಇಲ್ಲವಾದರೆ ಇಷ್ಟು ಸುಸೂತ್ರವಾಗಿ, ಸುಲಭವಾಗಿ, ಅನಾಯಾಸವಾಗಿ ಇಂಥ ಕಷ್ಟಕರವಾದ ಯಾತ್ರೆ ಕೈಗೂಡುವದು ಹೇಗೆ? ಗುರುವನ್ನು ಕಾಣಲು ತಾನು ಪರಿತಾಪಪಟ್ಟಿದ್ದುಂಟು, ಬಯಸಿ ಬಯಸಿ ಬಿಸುಸುಯ್ದುದ್ದುಂಟು; ಗುರುಯಾತ್ರೆಯು ಕ್ಲೇಶದಾಯಕವೇ ಆಗಿದ್ದಿತು. ಆದರೆ ಕೈಲಾಸಯಾತ್ರೆಯಲ್ಲಿ ಏನೊಂದು ಕಷ್ಟವೂ ಕಾಣಲಿಲ್ಲ. ಮತ್ತೆ, ಅವರ ಮನಸ್ಸಿನಲ್ಲಿ ಸಮಾಧಾನ, ಕೃತಾರ್ಥತೆ, ಉತ್ಸಾಹಗಳು ತುಂಬಿದ್ದುವು. ಕರ್ತವ್ಯವಾಗಿದ್ದ ತೀರ್ಥಯಾತ್ರೆ, ದೇವಯಾತ್ರೆ, ಗುರುಯಾತ್ರೆಗಳು ಮೂರು ಯಶಸ್ವಿಯಾಗಿ ಮುಗಿದಿದ್ದುವು. ಜ್ಞಾನದೀಕ್ಷೆಯು ಒದಗಿದ್ದಿತು; ಈಗ ತನ್ನ ಇಷ್ಟದೈವ ರಾಜರಾಜೇಶ್ವರಿಯ ದರ್ಶನವೂ ಲಭಿಸಿತು.

ರಾಜರಾಜೇಶ್ವರಿಯ ರೂಪವು ಶ್ರೀವಿದ್ಯಾ ಉಪಾಸಕರಿಗೆ ವಿಶಿಷ್ಟವಾದುದು. ಸ್ವಾಮಿಗಳು ತಿರುವಣ್ಣಾಮಲೆಯ ಈಶಾನ್ಯ ಮಠದಲ್ಲಿರುವಾಗಲೆ ಶ್ರೀವಿದ್ಯೆಯ ಸ್ವಾರಸ್ಯವನ್ನೂ, ರಹಸ್ಯವನ್ನೂ, ಕಲ್ಪವನ್ನೂ ಗ್ರಹಿಸಿದ್ದರು. ಆಗಿನಿಂದ ಶ್ರೀ ಚಕ್ರದ ಉಪಾಸನೆಯನ್ನು ತಪ್ಪದೆ ಮಾಡುವ ಕ್ರಮವನ್ನಿರಿಸಿಕೊಂಡಿದ್ದರು. ಅವರ ಬಳಿ ಶ್ರೀ ಚಕ್ರದ ಭೂಪ್ರಸ್ತಾರಮೇರುವಿನ ಮೂರ್ತಿಯೂ ಇದ್ದಿತು. ಅವರ ಉತ್ತರಭಾರತದ ಯಾತ್ರೆಯಲ್ಲಿ ಇದು ದಿನವೂ ವಿಧಿವತ್ತಾಗಿ ಪೂಜೆಗೊಳ್ಳುತ್ತಿತ್ತು. ಆದರೆ ಖಾಟ್ಮಂಡುವಿನಲ್ಲಿ ಜ್ಞಾನದೀಕ್ಷೆ ಒದಗಿದಮೇಲೆ ಈ ಬಾಹ್ಯಪೂಜೆಯ ಅಗತ್ಯವಿರಲಿಲ್ಲ.

ಪೂಜೆಯಲ್ಲಿ ಬಹಿರ್ಯಾಗ, ಅಂತರ್ಯಾಗಗಳೆಂದು ಎರಡು ಬಗೆ. ಪುತ್ಥಳಿಗಳನ್ನಿರಿಸಿಕೊಂಡು ಷೋಡಶೋಪಚಾರದಿಂದಲೋ ಪಂಚೋಪಚಾರದಿಂದಲೋ ಕ್ರಮವಾಗಿ ದ್ರವ್ಯಗಳಿಂದಲೋ ಪೂಜೆಮಾಡುವುದು ಬಹಿರಂಗಪೂಜೆ, ಬಹಿರ್ಯಾಗ. ಸಾಮಾನ್ಯರಿಗೆ ಇದೇ ಅನುಕೂಲವಾದುದು; ಮನಸ್ಸನ್ನು ಏಕಾಗ್ರವಾಗಿ ನಿಲ್ಲಿಸುವುದು ಇದರಿಂದ ಸಾಧ್ಯವಾಗುತ್ತದೆ. ಉತ್ತಮ ಸಂಸ್ಕಾರವುಳ್ಳ ಪ್ರೌಢಸಾಧಕರಿಗೆ ಇದರ ಅಗತ್ಯವಿರದು; ಅವರ ಮನಸ್ಸು ತಾನಾಗಿಯೇ ನೆಲೆಗೊಳ್ಳುತ್ತದೆ. ಅಂಥವರು ಹೊರಗಣ

ಯಾವ ದ್ರವ್ಯವನ್ನೂ ಬಳಸದೆ, ಮೂರ್ತಿಗಳನ್ನು ಇರಿಸಿಕೊಳ್ಳದೆ ಮನಸ್ಸಿನಲ್ಲೆಯೇ ಭಾವಿಸಿಕೊಂಡು ಪೂಜೆ ಸಲ್ಲಿಸುತ್ತಾರೆ. ಇದು ಮಾನಸಪೂಜೆಯೆನಿಸಿಕೊಳ್ಳುತ್ತದೆ. ಇದನ್ನೇ ಅಂತರ್ಯಾಗವೆನ್ನುತ್ತಾರೆ.

ಸ್ವಾಮಿಗಳು ಈಗ ಜ್ಞಾನಸಂನ್ಯಾಸದೀಕ್ಷೆ ಪಡೆದಮೇಲೆ ಅಂತರ್ಯಾಗಕ್ಕೆ ಅಧಿಕಾರಿಗಳಾದುದರಿಂದ, ಶ್ರೀಚಕ್ರದ ಸ್ಥೂಲಬಿಂಬದ ಅಗತ್ಯವಿರಲಿಲ್ಲ. ಖಾಟ್ಮಂಡುವಿನಿಂದ ಹೊರಟಮೇಲೆ ದಾರಿಯಲ್ಲಿ ಗೌರೀನದಿ ಮತ್ತು ಕಾಳಿನದಿ ಸೇರುವ ಸಮೀಪದೆಡೆ ತಾವು ಆವರೆಗೆ ಪೂಜೆಮಾಡುತ್ತಿದ್ದ ಶ್ರೀಚಕ್ರಮೇರುವನ್ನು ವಿಸರ್ಜನೆಮಾಡಿಬಿಟ್ಟರು. ಅಲ್ಲಿಂದ ಮುಂದೆ ಅವರು ಮಾನಸಪೂಜೆಯನ್ನೇ ಅಳವಡಿಸಿಕೊಂಡರು. ತಮ್ಮ ಕೈಲಾಸಯಾತ್ರೆಯಲ್ಲಿಯೂ ಅವರು ಇದನ್ನೇ ಮಾಡುತ್ತಿದ್ದುದು. ಆದರೆ ಇಷ್ಟು ದೀರ್ಘಕಾಲ ಸಂಯಮದಿಂದ, ಶ್ರದ್ಧೆಯಿಂದ, ತದೇಕಚಿತ್ತದಿಂದ ಶ್ರೀಚಕ್ರದ ಪೂಜೆಮಾಡಿದ ಫಲವಾಗಿ ಶ್ರೀಚಕ್ರದ ಆರಾಧ್ಯದೇವಿಯಾದ ರಾಜರಾಜೇಶ್ವರಿಯು (ಇವಳೇ ಲಲಿತಾಪರಮೇಶ್ವರಿ, ತ್ರಿಪುರಸುಂದರಿ, ಪರಾಭಟ್ಟಾರಿಕೆ) ಮೂರ್ತಿರೂಪದಲ್ಲೇ ಕಾಣಿಸಿಕೊಂಡುದು ಆಶ್ಚರ್ಯವಲ್ಲ.

ಕೈಲಾಸಪರ್ವತದಲ್ಲಿ ಸ್ವಾಮಿಗಳು

ಕೈಲಾಸ ಆಶ್ರಮ ಮಹಾಸಂಸ್ಥಾನ



ಕೈಲಾಸಾಶ್ರಮಸ್ಥಾನ

ಸ್ವಾಮಿಗಳು ಹೀಗೆ ಗುರುಯಾತ್ರೆಯನ್ನೂ ಕೈಲಾಸಯಾತ್ರೆಯನ್ನೂ ಮುಗಿಸಿ ಕೃತಕೃತ್ಯರಾಗಿ ದಕ್ಷಿಣದೇಶಕ್ಕೆ ಹಿಂದಿರುಗಿದರು. ಮುಂಬಯಿನಗರಕ್ಕೆ ಮೊದಲು ಬಂದು ಅನಂತರ ನೇರವಾಗಿ ಬೆಂಗಳೂರಿಗೆ ಹೊರಟರು. ಇಲ್ಲೂ ಒಂದು ಸೋಜಿಗ. ಕನ್ನಡನಾಡು ಅವರ ಕಾರ್ಯಕ್ಷೇತ್ರವೆಂಬುದು ಅವರಿಗೆ ಮೊದಲೇ ತಿಳಿದಿದ್ದಿತಷ್ಟೆ? ಶ್ರೀಲಂಕದ ಶಿವನಡಿಪಾದದಲ್ಲಿ ಸಂನ್ಯಾಸಿನಿಯು ಇದರ ಸುಳಿವನ್ನು ನೀಡಿದ್ದಳು. ಖಾಟ್ಮಂಡುವಿನಲ್ಲಿ ಸಂನ್ಯಾಸದೀಕ್ಷೆ ಪಡೆದುಕೊಂಡನಂತರ ಶಿವಪುರಿಬಾಬಾ ಅವರು ಸ್ಪಷ್ಟವಾಗಿಯೇ ಅಪ್ಪಣೆಮಾಡಿದ್ದರು. ಆದರೆ ಮುಂಬಯಿಗೆ ಬಂದಾಗ ಮುಂದೆ ಎಲ್ಲಿಗೆ ಹೋಗುವುದೆಂಬ ಕಲ್ಪನೆ ಅವರಿಗೆ ಇರಲಿಲ್ಲ. ಕನ್ನಡನಾಡಿಗೆ ಒಡನೆಯೇ ಹೋಗಬೇಕೆಂಬ ಕಾತರವೂ ಅವರಿಗೇನು ಇರಲಿಲ್ಲ. ಈ ವಿಚಾರ ಯಾರೊಂದಿಗೂ ಅವರು ಚರ್ಚಿಸಿಯೂ ಇರಲಿಲ್ಲ. ಆದರೆ ಅವರು ಮುಂಬಯಿಯನ್ನು ಬಿಡಬೇಕೆಂದುಕೊಂಡಾಗ ಅವರ ಭಕ್ತರು ಅವರನ್ನು ಬೆಂಗಳೂರಿಗೇ ಕರೆತಂದರು! ಕನ್ನಡನಾಡಿನ ರಾಜಧಾನಿ ಬೆಂಗಳೂರೇ ಆಯಿತಲ್ಲ! ಇಲ್ಲಿಯೇ ನೆಲೆಸಿದರಾಯಿತು ಎಂದು ಸ್ವಾಮಿಗಳೂ ಭಾವಿಸಿದರು.

ಕನ್ನಡನಾಡನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳಬೇಕೆಂದು ಪ್ರೇರಣೆಯಾದಾಗ ಅವರಿಗೆ ಈ ನಾಡಿನ ವಿಶೇಷಪರಿಚಯವೇನು ಇರಲಿಲ್ಲ. ತಮಿಳುನಾಡಿನ ನೆರೆಯಲ್ಲಿರುವ ನಾಡೆಂಬ ಅರಿವಿದ್ದಿತು ಅಷ್ಟೆ. ಆದರೆ ಇಲ್ಲಿಗೆ ಬಂದಮೇಲೆ ನಾಡಿನ ಹೆಗ್ಗಳಿಕೆಯನ್ನು ಅವರು ಅರಿತುಕೊಂಡು ದೈವಪ್ರೇರಣೆಯ ಔಚಿತ್ಯವನ್ನು ಅರ್ಥಮಾಡಿಕೊಂಡರು. ಮೊದಲಿಂದ ಈ ನಾಡು ಧರ್ಮದ ನೆಲೆ.

ಮೂವರು ಮಹಾಪುರುಷರಾದ ಆಚಾರ್ಯರ ಸಂಪರ್ಕವನ್ನೂ ಪಡೆದ ಪ್ರದೇಶ ಇದು. ಶಂಕರಾಚಾರ್ಯರು ಕೇರಳದಿಂದ ಶೃಂಗೇರಿಗೆ ಬಂದು ಅಲ್ಲಿ ಮಠವೊಂದನ್ನು ಏರ್ಪಡಿಸಿದರು. ರಾಮಾನುಜಚಾರ್ಯರು ತಮಿಳುನಾಡಿನಿಂದ ಮೇಲುಕೋಟೆಗೆ ಬಂದು ಅಲ್ಲಿ ತಿರುನಾರಾಯಣಸ್ವಾಮಿಗೆ ಆಲಯವೊಂದನ್ನು ಕಟ್ಟಿಸಿದರು. ಮಾಧವಾಚಾರ್ಯರಂತೂ ಈ ನಾಡಿನವರೇ; ಉಡುಪಿಯ ಕೃಷ್ಣಮಠ ಅವರ ವ್ಯವಸ್ಥೆಯೇ. ವೈದಿಕ ಸಂಸ್ಕೃತಿಯ ಈ ಮೂವರು ಆಚಾರ್ಯರಲ್ಲದೆ, ವೀರಶೈವ ಸಂಪ್ರದಾಯದ ರೇಣುಕಾಚಾರ್ಯರು ಬಾಳೆಹೊನ್ನೂರಿನಲ್ಲಿ ತಮ್ಮ ಮಠವನ್ನು ಕಟ್ಟಿಕೊಂಡರು.

ದಕ್ಷಿಣದ ಗಂಗೆಯೆಂದು ಕೀರ್ತಿವೆತ್ತ ಕಾವೇರಿನದಿಯು ಮೊದಲು ತೋರಿಕೊಳ್ಳುವುದು ಕನ್ನಡ ನಾಡಿನಲ್ಲಿಯೇ; ಕೊಡಗಿನ ತಲಕಾವೇರಿಯೆಂಬಲ್ಲಿ. ಮತ್ತೆ ಪ್ರಕೃತಿಯೂ ಈ ನಾಡಿಗೆ ಸಂಪತ್ತನ್ನು ಸೌಂದರ್ಯವನ್ನು ಧಾರಾಳವಾಗಿ ನೀಡಿದೆ. ಚಿನ್ನದ ನಾಡಿದು, ಗಂಧದ ಗುಡಿಯಿದು, ವೀಣೆಯ ಬೆಡಗಿದು. ಎಲ್ಲಕ್ಕಿಂತ ಮುಖ್ಯವಾಗಿ ಈ ನಾಡಿನಲ್ಲಿ ಹಲವಾರು ಶಕ್ತಿಪೀಠಗಳಿವೆ-ಕೊಲ್ಲೂರು ಮೂಕಾಂಬಿಕೆ, ಪೊಳಲಿ ರಾಜರಾಜೇಶ್ವರಿ, ಶೃಂಗೇರಿ ಶಾರದೆ, ಮೈಸೂರು ಚಾಮುಂಡೇಶ್ವರಿ, ಬಾದಾಮಿ ಬನಶಂಕರಿ, ಸವದತ್ತಿ ಯಲ್ಲಮ್ಮ, ಗೌಹತ್ತಿ ಗಂಗಮ್ಮ, ಮಂಗಳೂರು ಮಂಗಳಾಂಬಿಕೆ, ಸಿರಸಿ ಮಾರಿಕಾಂಬಿಕೆ ಮೊದಲಾಗಿ. ತಿರುಚಿಸ್ವಾಮಿಗಳು ದೇವಿಯ ಉಪಾಸಕರು. ಕನ್ನಡನಾಡಿನ ಈ ವಿವರ ಅವರನ್ನು ವಿಶೇಷವಾಗಿ ಆಕರ್ಷಿಸಿತು.

ಬೆಂಗಳೂರಿಗೆ ಬಂದಮೇಲೂ ಇಲ್ಲಿಯೇ ನೆಲೆಸುವ ಕಲ್ಪನೆಯೇನು ಸ್ವಾಮಿಗಳಿಗೆ ದೃಢವಾಗಿರಲಿಲ್ಲ. ಬೆಂಗಳೂರಾದರೂ ಆಯಿತು, ಮೈಸೂರು ಆಗಬಹುದು, ಮತ್ತಾವ ಊರಾದರೂ ಆದೀತು. ಆದರೆ ಬೆಂಗಳೂರಿನಿಂದ ಅವರ ಭಕ್ತರೊಬ್ಬರು ಅವರನ್ನು ಕಾರಿನಲ್ಲಿ ಮೈಸೂರಿಗೆ ಕರೆದುಕೊಂಡು ಹೋಗುತ್ತಿರುವಾಗ, ಬೆಂಗಳೂರನ್ನು ಬಿಟ್ಟೊಡನೆ ಹೆದ್ದಾರಿಯ ಬದಿಯಲ್ಲಿದ್ದ ಪ್ರದೇಶವೊಂದು ಸ್ವಾಮಿಗಳ ಗಮನವನ್ನು ಸೆಳೆಯಿತು. ಒಡನೆಯೆ ಭಕ್ತರು ಕಾರನ್ನು ನಿಲ್ಲಿಸಿ, ಆ ಪ್ರದೇಶದೊಳಗೆ ಹೋಗಿ ವಿಚಾರಮಾಡಿದರು. ಕೆಂಚನಹಳ್ಳಿ ಎಂಬುದು ಆ ಜಾಗದ ಹೆಸರು; ನಿರ್ಜನ ಪ್ರದೇಶ. ಪಾಳುಬಿದ್ದ ತೋಟ;

ಗಿಡಗೆಂಟೆ ಬೆಳೆದು ಒಳಗೆ ಹೋಗುವುದು ಕಷ್ಟವಾಗಿದ್ದಿತು. ತೋಟದೊಳಗೊಂದು ಸಣ್ಣಮನೆ; ನೋಡಿಕೊಳ್ಳುವವರಿಗೆ ಅನುಕೂಲವಿಲ್ಲದೆ ಹರಕು-ಮುರಕಲಾಗಿದ್ದಿತು.

ಸ್ಥಳಕ್ಕೆ ವಿಶೇಷವಾದ ಆಕರ್ಷಣೆಯೇನು ಇರದಿದ್ದರೂ ಅದು ಸ್ವಾಮಿಗಳಿಗೆ ಒಪ್ಪಿಗೆಯಾಯಿತು; ಇಲ್ಲಿ ತಮ್ಮ ಆಶ್ರಮವನ್ನು ಕಟ್ಟಿಕೊಳ್ಳಬಹುದೆನಿಸಿತು. ಜೊತೆಗೆ ಬಂದಿದ್ದ ಭಕ್ತರು ಆ ಜಾಗದ ಒಡೆಯರು ಯಾರೆಂಬುದನ್ನು ಪತ್ತೆಮಾಡಿ, ಅವರನ್ನು ಕಂಡು ವಿಚಾರಿಸಿದಾಗ ಅವರು ಪ್ರದೇಶವನ್ನು ಸ್ವಾಮಿಗಳಿಗೆ ಮಾರಲೊಪ್ಪಿದರು. ಈ ಪ್ರಸಂಗ ನಡೆದದ್ದು 1960ರಲ್ಲಿ; ಆಗ ಸ್ವಾಮಿಗಳ ವಯಸ್ಸು ಮೂವತ್ತೆರಡು ವರ್ಷ.

ಕೆಂಚನಹಳ್ಳಿಯ ಈ ಪ್ರದೇಶದ ಒಡೆಯರಾಗಿದ್ದವರು ಶ್ರೀನಿವಾಸರಾವ್ ಎಂಬ ವೈಷ್ಣವಬ್ರಾಹ್ಮಣರು; ವೃತ್ತಿಯಲ್ಲಿ ಎಂಜಿನಿಯರ್, ಪ್ರವೃತ್ತಿಯಲ್ಲಿ ಧಾರ್ಮಿಕರು. ಸ್ಥಳದ ಒಂದು ಮೂಲೆಯಲ್ಲಿ ತಮಗಾಗಿಯೇ ಸಣ್ಣದೊಂದು ಮನೆಯನ್ನು ಕಟ್ಟಿಕೊಂಡಿದ್ದರು. ಮನೆಯ ಮುಂದೊಂದು ನೆಲ್ಲಿಮರವೂ ಇದ್ದಿತು; ಈ ಮರಕ್ಕೆ ಪೂಜೆಯೂ ಸಲ್ಲುತ್ತಿದ್ದಿತು. ಈ ಗೃಹಸ್ಥರು ದಿನವೂ ವಿಷ್ಣುಸಹಸ್ರನಾಮ ಪಾರಾಯಣ ಮಾಡುತ್ತಿದ್ದರು. ತಮ್ಮ ಜಮೀನನ್ನು ಮಾರಬೇಕೆಂದು ಅವರು ಹವಣಿಸುತ್ತಿದ್ದರಾದರೂ, ಯಾರೆಂದರೆ ಅವರಿಗೆ ಕೊಡಲು ಅವರು ಸಿದ್ಧರಿರಲಿಲ್ಲ. ಧರ್ಮಕಾರ್ಯಗಳಲ್ಲಿ ಆಸಕ್ತರಾದವರಿಗೆ ಮಾತ್ರ ತಾವು ಮಾರುವುದೆಂದು ನಿಶ್ಚಯಿಸಿಕೊಂಡಿದ್ದರು. ತಿರುಚಿಸ್ವಾಮಿಗಳಿಗೆ ಎಂದು ತಿಳಿದಾಗ ಅವರು ಒಡನೆಯೇ ಒಪ್ಪಿದರು.

ಜಮೀನು ಬಂಜರುಭೂಮಿ; ಪಾಳುಬಿದ್ದಿದ್ದಿತು. ಅಲ್ಲಿ ಯಾವ ಬೆಳೆಯನ್ನು ತೆಗೆಯದೆ ಅನೇಕ ವರ್ಷಗಳಾಗಿದ್ದುವು. ಜನಸಂಚಾರವಿರಲಿಲ್ಲ. ಆಗಾಗ ತೋಳಗಳು ನರಿಗಳೂ ಕಾಣಿಸಿಕೊಳ್ಳುತ್ತಿದ್ದುವಂತೆ. ಹಿಂದಿನ ಒಡೆಯರೊಬ್ಬರು ಚಿರತೆಯೊಂದನ್ನೂ ಒಮ್ಮೆ ಕಂಡಿದ್ದರಂತೆ. ಕೆಲವೇ ವರ್ಷಗಳಲ್ಲಿ ಆ ಭೂಮಿ ನಾಲ್ವರು ಒಡೆಯರ ಕೈದಾಟಿ ಶ್ರೀನಿವಾಸರಾಯರಿಗೆ ಬಂದಿದ್ದಿತು; ಅವರು ಐದನೆಯವರು. ಹಿಂದಿನವರ ಕತೆಗಳನ್ನು ಕೇಳಿದರೇ ಉತ್ಸಾಹ ಬರುತ್ತಿರಲಿಲ್ಲ. ಭೂಮಿಯ ನಡುವೆ ಸಣ್ಣದೊಂದು

ಸ್ವಾಮಿಯ ಕುಟೀರ

ಹೊಂದವಿದ್ದಿತು. ಅದರ ದಂಡೆಯ ಮೇಲೆ ಆತಂಕಕಾರಿ ನೋಟಗಳನ್ನು ಕಾಣುತ್ತಿದ್ದರಂತೆ. ಹಾವುಗಳು ಹಗಲಲ್ಲೇ ಹರಿದಾಡುತ್ತಿದ್ದುವು. ಹಿಂದೆ ಜಮೀನನ್ನು ಪಡೆದುಕೊಂಡಿದ್ದವರೊಬ್ಬರು ಅಲ್ಲಿದ್ದ ಮಾವಿನಮರವೊಂದನ್ನು ಒಬ್ಬ ಮುಸಲ್ಮಾನನಿಗೆ ಭೋಗ್ಯವಾಗಿ ಬಿಟ್ಟುಕೊಟ್ಟಿದ್ದರಂತೆ. ಆ ಮುಸಲ್ಮಾನ ಮರದ ರೆಂಬೆಯೊಂದನ್ನು ಕಡಿಯಲು ಕೊಡಲಿಯೆತ್ತಿದ್ದಾಗ ಮರದಿಂದ ಕಿರುಚಾಟ ಹೊರಹೊಮ್ಮಿ ಬಹು ಹೊತ್ತು ಎಡೆಬಿಡದೆ ನಡೆಯಿತಂತೆ. ಮುಸಲ್ಮಾನ ಹೇಳದೆ ಕೇಳದೆ ಓಡಿಬಿಟ್ಟ; ಮತ್ತೆ ಮರದ ಕಡೆ ಬರಲಿಲ್ಲ. ಹೀಗೆ ಜಮೀನಿನ ವಿಚಾರವಾಗಿ ಒಂದು ಬಗೆಯ ಭಯವೇ ಬೆಳೆದಿದ್ದಿತು.

ಶ್ರೀನಿವಾಸರಾಯರೂ ಅದನ್ನು ಮಾರಲೆಂದೇ ನಿಶ್ಚಯಿಸಿದ್ದರು. ಆದರೆ ಒಳ್ಳೆಯ ಕೆಲಸಕ್ಕೆ ಮಾತ್ರವೇ ಅದನ್ನು ಮಾರುವುದೆಂಬ ಹಟ ಇದ್ದುದರಿಂದ ಅದು ಹಾಗೆಯೇ ಉಳಿದಿದ್ದಿತು. ತಿರುಚಿಸ್ವಾಮಿಗಳ ಭಕ್ತರು ಈ ಭೂಮಿಯನ್ನು ಅವರಿಂದ ಕೊಂಡನಂತರ ಅಲ್ಲಿದ್ದ ಮನೆಯನ್ನೇ ಸ್ವಾಮಿಗಳ ನಿವಾಸಕ್ಕೆ ಸಜ್ಜುಗೊಳಿಸಲಾಯಿತು. ಈ ಮನೆಗೆ ನಾಲ್ಕು ಕೋಣೆಗಳಿದ್ದುವುದೆ. ನಡುವಣ ಕೋಣೆಯನ್ನು ಸ್ವಾಮಿಗಳಿಗೆ ಅಣಿಮಾಡಿದರು. ಉಳಿದ ಮೂರು ಕೋಣೆಗಳಲ್ಲಿ ಒಂದು ಅಡುಗೆಮನೆಯಾಯಿತು, ಇನ್ನೊಂದು ಉಗ್ರಾಣವಾಯಿತು; ಮೂರನೆಯ ಕೋಣೆಯನ್ನು ಅದು ಸ್ವಲ್ಪ ವಿಶಾಲವಾಗಿದ್ದುದರಿಂದ.

ಸ್ವಾಮಿಗಳಿಗೆಂದು ಗೊತ್ತಾದ ಕೋಣೆಯ ಅಡಿಯಲ್ಲಿ ಹಿಂದೆ ಎಂದೋ ಮೂವರು ಸಂತರ ದೇಹಗಳನ್ನು ಸಮಾಧಿಮಾಡಿದ್ದುದು ಅನಂತರ ತಿಳಿಯಿತು. ಮನೆಯ ಮುಂಭಾಗದಲ್ಲೊಂದು ತುಳಸೀಕಟ್ಟೆಯಿದ್ದಿತು. ಸ್ವಾಮಿಗಳ ಕೋಣೆಯ ಒಂದು ಮೂಲೆಯಲ್ಲಿ ಸ್ವಾಮಿಗಳ ತ್ರಿಶೂಲವನ್ನು ಇರಿಸಲಾಯಿತು. ಈ ತ್ರಿಶೂಲದ ಪಕ್ಕದಲ್ಲಿ ಊರವರು ಸ್ವಾಮಿಗಳಿಗೆ ಕೊಟ್ಟಿದ್ದ ಗಣಪತಿಯ ಮಣ್ಣಿನ ಮೂರ್ತಿಯನ್ನು ಪ್ರತಿಷ್ಠಿಸಿದರು. ಆನಂತರ ಈ ಮೂರ್ತಿ ಭಗ್ನವಾದುದರಿಂದ, ಬಂಗಾರುಪೇಟೆಯ ಭಕ್ತರು ಕಲ್ಲಿನ ಗಣಪತಿಯನ್ನು ಮಾಡಿಸಿಕೊಟ್ಟರು. ಇದು ಇಂದಿಗೂ ಪೂಜೆಯಲ್ಲಿದೆ. ಶ್ರೀವಿದ್ಯಾ ಉಪಾಸಕರಿಗೆ ಗಣಪತಿ ಪ್ರಮುಖದೈವ; ಶ್ರೀಚಕ್ರಪೂಜೆಗೆ ಮೊದಲು ಗಣಪತಿಪೂಜೆ ನಡೆಯಬೇಕು.

ಶ್ರೀ ಜ್ಞಾನಾಕ್ಷಿ ರಾಜರಾಜೇಶ್ವರಿ

ನಾಗರಾಜ ಮತ್ತು ಶ್ರೀ ತಿರುಚಿಸ್ವಾಮಿ

ಶ್ರೀ ಜ್ಞಾನಾಕ್ಷಿ ರಾಜರಾಜೇಶ್ವರೀ ದೇವಿ

ಅವರದ್ದು ಸಂಯಮಜೀವನ; ಶೀಲಶುದ್ಧಿಗೆ ಅಗ್ರಪಟ್ಟ. ಹೀಗಾಗಿ ಆಶ್ರಮದಲ್ಲಿ ಗುಡಿಸುವ ಕೆಲಸಕ್ಕೂ ಹೆಂಗಸರನ್ನು ಸೇರಿಸಿಕೊಳ್ಳುವಂತಿರಲಿಲ್ಲ. ಬ್ರಹ್ಮಚಾರಿಗಳೂ, ಸಂನ್ಯಾಸಿಶಿಷ್ಯರು ಆಶ್ರಮದ ಎಲ್ಲ ಕೆಲಸವನ್ನೂ ನಿರ್ವಹಿಸುತ್ತಿದ್ದರು. ಕಟ್ಟಡಗಳೂ ಕಾಲಕ್ರಮದಲ್ಲಿ ಕಾಣಿಸಿಕೊಂಡುವು. ಅವುಗಳನ್ನು ನೋಡಿಕೊಳ್ಳುವುದು, ಅಡುಗೆ ಮಾಡುವುದು, ಪೂಜೆಗೆ ಅಣಿಮಾಡುವುದು ಸ್ವಾಮಿಗಳ ಕುಟೀರದ ಸುತ್ತ ಹೂದೋಟವನ್ನು ಬೆಳೆಸುವುದು ಎಲ್ಲವೂ ಶಿಷ್ಯರ ಕೆಲಸಗಳೇ ಆದುವು. ಸ್ವಾಮಿಗಳ ಪ್ರಸಿದ್ಧಿಯಾಗತೊಡಗಿತು, ಊರೂರುಗಳಿಂದ ಸ್ವಾಮಿಗಳ ಸಂದರ್ಶನಕ್ಕೆಂದು ಭಕ್ತರು ಬರತೊಡಗಿದರು. ಹೀಗೆ ಬರುವ ಭಕ್ತರು ತಮ್ಮ ಮನೆಯ ಹೆಂಗಸರನ್ನು ಕರೆತರುವ ಅವಕಾಶವಿದ್ದಿತು; ಹೆಂಗಸರು ಒಂಟಿಯಾಗಿ ದರ್ಶನಕ್ಕೆ ಬರುವಂತಿರಲ್ಲಿಲ್ಲ. ವಿರಕ್ತರಿಗೆ ಸ್ತ್ರೀಸಂಪರ್ಕ ಎಷ್ಟು ಮಾತ್ರಕ್ಕೂ ಇರಬಾರದೆಂಬುದು ಇವರ ನಿಲವು; ಉರಿಯುವ ಬೆಂಕಿಗೆ ಕಟ್ಟಿಗೆಯನ್ನು ಈಡುಮಾಡಿದಂತೆ ಅದು ಎಂದು ಹೇಳುತ್ತಾರೆ.

ಇಲ್ಲಿಗೆ ಬಂದ ಹೊಸದರಲ್ಲಿ ಜಾಗದಲ್ಲೆಲ್ಲೂ ಹಾವುಗಳ ಓಡಿಯಾಟವಿದ್ದಿತು. ಆದರೆ ಈ ಹಾವುಗಳು ಸ್ವಾಮಿಗಳಿಗೇನೂ ತೊಂದರೆ ಮಾಡುತ್ತಿರಲಿಲ್ಲ. ಒಮ್ಮೆ ಯಾರೋ ಶಿಷ್ಯರು ಆಶ್ರಮದಲ್ಲಿದ್ದ ಸೀಬೇಮರದ ಹಣ್ಣೊಂದನ್ನು ಕಿತ್ತು ದೇವರ ನೈವೇದ್ಯಕ್ಕೆಂದು ಸ್ವಾಮಿಗಳ ಕುಟೀರದೊಳಗೆ ತಂದರು. ಅವರ ಹಿಂದೆಯೇ ಹಾವೊಂದು ಬಂದುದನ್ನು ಅವರು ಕಾಣಲಿಲ್ಲ. ಸ್ವಾಮಿಗಳ ಕೋಣೆಯೊಳಗೆ ಈತ ಬಂದೊಡನೆಯೆ ಹಾವು ಬುಸುಗುಟ್ಟಿತು. ಅದೇ ಸಮಯಕ್ಕೆ ಸ್ವಾಮಿಗಳು ಇನ್ನೊಂದು ಬಾಗಿಲಿನಿಂದ ಈ ಕೋಣೆಯನ್ನು ಹೊಕ್ಕರು. ಅವರನ್ನು ಕಂಡು ಹಾವು ದೂರದ ಗೋಡೆಯ ಬಳಿ ಸರಿದು, ಗೋಡೆಯಲ್ಲಿದ್ದ ಬಿರುಕೊಂದರಲ್ಲಿ ಅಡಗಿಕೊಂಡುಬಿಟ್ಟಿತು. ಸ್ವಾಮಿಗಳು ಹಾವನ್ನು ಗಾಬರಿಪಡಿಸಬಾರದೆಂದು ಹೇಳಿ, ಅದು ತನ್ನಷ್ಟಕ್ಕೆ ತಾನೇ ಎಲ್ಲಿ ಹೋಗಬೇಕೋ ಹೋಗಲಿ ಎಂದು ಸುಮ್ಮನಾದರು.

ಇನ್ನೊಮ್ಮೆ, ಸಂಜೆ ಎಂದಿನಂತೆ ಸ್ನಾನಕ್ಕೆಂದು ಬಚ್ಚಲಮನೆಗೆ ಹೋದರು. ಸಂಜೆಯಾದುದರಿಂದ ಬೆಳಕು ಅಷ್ಟಾಗಿ ಇರಲಿಲ್ಲ. ಸ್ನಾನಕ್ಕೆ ಇಳಿಯಬೇಕೆಂದುಕೊಳ್ಳುತ್ತಿರುವಷ್ಟರಲ್ಲಿ ಕಾಲಿಗೆ ಏನೋ ಸುತ್ತಿಕೊಂಡಂತಾಯಿತು. ಆಗ

ಅವರು ದೀಪವೊಂದನ್ನು ತರಹೇಳಿದರು. ದೀಪದ ಬೆಳಕಿನಲ್ಲಿ ಹಾವೊಂದು ಅವರ ಕಾಲಿಗೆ ಸುತ್ತಿಕೊಂಡಿರುವುದು ಕಂಡಿತು. ಒಡನೆಯೆ ಅವರು ಕಾಲನ್ನು ಝಾಡಿಸಿದರು. ಹಾವು ನೆಲದ ಮೇಲೆ ಬಿದ್ದಿತು. ಹೆಡೆಯೆತ್ತಿಕೊಂಡು ಅವರನ್ನೇ ಕೊಂಚ ಹೊತ್ತು ನೋಡುತ್ತಿದ್ದು ಅನಂತರ ಬಚ್ಚಲಮೋರಿಯಲ್ಲಿ ಮರೆಯಾಯಿತು.

ಈ ಆಶ್ರಮದಲ್ಲಿ ಸ್ವಾಮಿಗಳು ತಮ್ಮ ಇಷ್ಟದೈವವಾದ ರಾಜರಾಜೇಶ್ವರಿಗೆ ವಿಧ್ಯುಕ್ತವಾಗಿ ಆರಾಧನೆ ನಡೆಸಲಾರಂಭಿಸಿದರು. ಮೊದಲಿಗೆ ದೇವಿಯ ವಿಗ್ರಹವಿರಲಿಲ್ಲ. ಕಲಶಗಳನ್ನೇ ಇರಿಸಿಕೊಂಡು ಅದರಲ್ಲಿ ದೇವಿಯನ್ನು ಆವಾಹನೆಮಾಡಿ ಪೂಜೆ ಸಲ್ಲಿಸುತ್ತಿದ್ದರು. ಕಲಶಕ್ಕೇ ದೇವಿಯ ಮುಖದಂತೆ ಕಾಣುವ ಅಲಂಕಾರವನ್ನು ಮಾಡುತ್ತಿದ್ದರು. ಅನಂತರ ಮಧುರೆಯಲ್ಲಿ ರಾಜರಾಜೇಶ್ವರಿ ಚಿತ್ರಪಟವೊಂದನ್ನು ತಂಜಾವೂರು ಶೈಲಿಯಲ್ಲಿ ಬರೆಯಿಸಿ ತರಿಸಿಕೊಂಡರು. ಚೆಟ್ಟಿನಾಡಿನಲ್ಲಿ ಕಾರೈಕ್ಕುಡಿಯಲ್ಲಿ ಲೋಹದಿಂದ ತಯಾರಿಸಿದ ಒಂದು ದೇವೀಮೂರ್ತಿಯನ್ನು ಹಿಂದೆ ಅವರು ತಮ್ಮ ಪ್ರವಾಸಕಾಲದಲ್ಲಿ ತಮ್ಮೊಂದಿಗೆ ಒಯ್ಯುತ್ತಿದ್ದರು. ಅದನ್ನು ಬೆಂಗಳೂರಿಗೆ ತಂದಿದ್ದರಾದರೂ ಅದು ಪೆಟ್ಟಿಗೆಯೊಂದರಲ್ಲಿದ್ದು, ಆಶ್ರಮದ ಸಂಪಿಗೆಮರವೊಂದರ ಅಡಿಯಲ್ಲಿ ಈ ಪೆಟ್ಟಿಗೆಯನ್ನು ಇರಿಸಿದರು. ಮಳೆಗಾಲದಲ್ಲೊಂದು ದಿನ ಘಟಸರ್ಪವೊಂದು ಈ ಪೆಟ್ಟಿಗೆಯನ್ನು ಸುತ್ತಿಕೊಂಡಿರುವುದು ಕಂಡಿತು. ಅನಂತರ ಸ್ವಾಮಿಗಳು ಈ ವಿಗ್ರಹವನ್ನು ಪೆಟ್ಟಿಗೆಯಿಂದ ತೆಗಿಯಿಸಿ ತಮ್ಮ ಕೋಣೆಯಲ್ಲೇ ಇರಿಸಿಕೊಂಡರು.

ಸ್ವಲ್ಪ ಸಮಯದನಂತರ ಸ್ವಾಮಿಗಳ ಕುಟೀರದ ಹತ್ತಿರವೇ ಆಶ್ರಮದ ಕಟ್ಟಡವನ್ನು ಕಟ್ಟಿಸಿದಮೇಲೆ, ಅಲ್ಲಿ ನಡುಮನೆಯಲ್ಲಿ ಈ ವಿಗ್ರಹವನ್ನೂ, ಮೇಲೆ ಹೇಳಿದ ಚಿತ್ರಪಟವನ್ನೂ ಇರಿಸಿ, ಅಲ್ಲಿ ನಿತ್ಯಾರ್ಚನೆಗೆ ವ್ಯವಸ್ಥೆಮಾಡಲಾಯಿತು. ಈಗ ಗುಡಿಯಲ್ಲಿ ಈ ವಿಗ್ರಹವನ್ನು ಉತ್ಸವಮೂರ್ತಿಯಾಗಿ ಬಳಸುತ್ತಾರೆ.

ಹೊಸದಾಗಿ ಕಟ್ಟಿಸಿದ ಕಟ್ಟಡವು ಕೈಲಾಸಾಶ್ರಮದ ಕೇಂದ್ರವಾಯಿತು. ಸ್ವಾಮಿಗಳು ತಮ್ಮ ಹಳೆಯ ಮನೆಯಲ್ಲೇ (ಕುಟೀರದಲ್ಲೇ) ಇರುತ್ತಿದ್ದರು. ಹೊಸಕಟ್ಟಡದಲ್ಲಿ



ಮುನೀಶ್ವರ



ಗಣಪತಿ

ಬಂದುಹೋಗುವ ಭಕ್ತಾದಿಗಳಿಗೆ, ಆಶ್ರಮಕ್ಕೆ ಬರುವ ಪ್ರವಾಸಿಗಳಿಗೆ ವಸತಿಯಾಗಿ ಕೆಲವು ಕೋಣೆಗಳಿದ್ದುವು. ಕಟ್ಟಡದ ನಡುಮನೆ ದೊಡ್ಡದಾಗಿದ್ದು ಅಲ್ಲಿಯೇ ಪೂಜಾಮಂದಿರವನ್ನು ವ್ಯವಸ್ಥೆಮಾಡಲಾಯಿತು. ಹಿಂದೆ ಹೇಳಿದಂತೆ ರಾಜರಾಜೇಶ್ವರಿಯ ಚಿತ್ರಪಟ, ಪಂಚಲೋಹದ ವಿಗ್ರಹ ಎರಡಕ್ಕೂ ನಿತ್ಯಪೂಜೆ ನಡೆಯುವ ಏರ್ಪಾಡಾಯಿತು. ಪೆನ್ನಾಡು ಕಂದಸ್ವಾಮಿ ಗುರುಗಳೆಂಬುವ ಆಗಮಿಕರೊಬ್ಬರನ್ನು ತ್ರಿಕಾಲ ಪೂಜೆ ಮಾಡುವ ಸಲುವಾಗಿ ಕರೆಯಿಸಿಕೊಂಡರು. ಅವರು ಶೈವಾಗಮದ ಪಂಡಿತರು.

ಸ್ವಾಮಿಗಳ ಹಿರಿಮೆ ಜನರಿಗೆ ತಿಳಿಯುತ್ತ ಬಂದಂತೆ ಆಶ್ರಮಕ್ಕೆ ಬರುವ ಜನ ಸಂದಣಿಯೂ ಹೆಚ್ಚಿತು. ಸ್ವಾಮಿಗಳೆಂದರೆ ಆಧ್ಯಾತ್ಮಿಕ ಚೇತನದ ಅಭಿವ್ಯಕ್ತಿ. ಆಶ್ರಮದಲ್ಲಿ ಅವರಿರುತ್ತಿದ್ದುದೂ ಮತ್ತು ದೇವಿಗೆ ಆಗಮೋಕ್ತವಾಗಿ ಪೂಜೆ ಸಲ್ಲುತ್ತಿದ್ದುದೂ ಸ್ಥಳದ ಆಕರ್ಷಣೆಗೆ ಕಾರಣವಾದುವು. ಹಬ್ಬ ಹರಿದಿನಗಳಲ್ಲಂತೂ ಸ್ವಾಮಿಗಳ ಸಂದರ್ಶನಕ್ಕಾಗಿ ಬಹುಮಂದಿ ಬರುತ್ತಿದ್ದರು. ಸ್ವಾಮಿಗಳ ಜನ್ಮದಿನದಂದು (ಇದು ಶ್ರೀರಾಮನವಮಿಯಂದೇ ಬೀಳುತ್ತದೆ) ಭಕ್ತರೂ ಅಭಿಮಾನಿಗಳೂ ಉತ್ಸುಕರೂ ಬಹುಸಂಖ್ಯೆಯಲ್ಲಿ ನೆರೆಯುತ್ತಿದ್ದರು. ಅವರಿಗೆ ಅನ್ನದಾನವೂ ನಿಜೃಂಭಣೆಯಿಂದ ನಡೆಯುತ್ತಿದ್ದಿತು. ಆಶ್ರಮದ ಕಟ್ಟಡ ಇದಕ್ಕೆ ಸಾಕಾಗದೆ, ಕಟ್ಟಡದ ಹೊರಗೆ ದೊಡ್ಡ ಪಂದಲವನ್ನು ಕಟ್ಟುತ್ತಿದ್ದರು.

ಮಳೆಗಾಲದಲ್ಲಿ ಇದು ತೊಂದರೆಗೆ, ಗೊಂದಲಕ್ಕೆ ಕಾರಣವಾಗುತ್ತಿದ್ದುದರಿಂದ ಭೋಜನಕ್ಕೆಂದೇ ಬೇರೆ ಕಟ್ಟಡವನ್ನು ಕಟ್ಟುವ ಆಲೋಚನೆಯನ್ನು ಮಾಡಲಾಯಿತು. ಉತ್ತರಭಾರತ ಯಾತ್ರೆಯ ಸಂದರ್ಭದಲ್ಲಿ ಸ್ವಾಮಿಗಳು ವಾರಣಾಸಿಯಲ್ಲಿದ್ದಾಗ ಅಲ್ಲಿನ ಪ್ರಧಾನದೇವಿಯಾದ, ಕಾಶೀಪುರಾಧೀಶ್ವರಿಯಾದ ಅನ್ನಪೂರ್ಣೆಯನ್ನು ತಮ್ಮೊಂದಿಗೆ ಎಂದೂ ಇರುವಂತೆ ಪ್ರಾರ್ಥಿಸಿಕೊಂಡಿದ್ದರಂತೆ. ಈಗ ಹೊಸ ಭೋಜನ ಶಾಲೆಯು ನಿರ್ಮಿತವಾಗಲು ಅದಕ್ಕೆ ಅನ್ನಪೂರ್ಣೆಯ ಹೆಸರನ್ನೇ ಇಟ್ಟರು. ಈಗ ಆಶ್ರಮಕ್ಕೆ ಬಂದವರೆಲ್ಲರೂ ಊಟಮಾಡುವುದು ಇಲ್ಲಿಯೇ; ಮಧ್ಯಾಹ್ನದ ಊಟದ ಸಮಯದಲ್ಲಿ ಸ್ವಾಮಿಗಳೂ ಇಲ್ಲಿಗೇ ಬಂದು ಉಳಿದವರ ಜೊತೆಯಲ್ಲಿಯೇ ಊಟಮಾಡುತ್ತಾರೆ.

ಶ್ರೀ ಅನ್ನಪೂರ್ಣೇಶ್ವರೀ

ಈಗ ಭೋಜನಶಾಲೆ ಇರುವ ಸ್ಥಳದಲ್ಲಿ ಹಿಂದೆ ಈಚಲಮರವೊಂದಿದ್ದಿತು. ಈ ಮರದಲ್ಲಿ ಜಾನಪದನೆಲೆಯ ದೈವವಾದ ಮುನೀಶ್ವರನು ನೆಲೆಸಿದ್ದು ಅಲ್ಲಿನ ಜನರಿಂದ ಪೂಜೆಗೊಳ್ಳುತ್ತಿದ್ದನು. ಭೋಜನಶಾಲೆಯನ್ನು ಕಟ್ಟುವ ಸಮಯದಲ್ಲಿ ಈ ಮರವನ್ನು ಕಡಿಯಬೇಕಾಗಿ ಬಂದಿತು. ಆಗ ಸ್ಥಳದಲ್ಲಿ ಭೂತಚೇಷ್ಟೆ ಶುರುವಾಯಿತಂತೆ; ಹೆಂಗಸರ ಮೇಲೆ ಆವೇಶ ಬರುವುದು, ಮಕ್ಕಳಿಗೆ ಭೀತಿ, ಗಂಡಸರಿಗೆ ಉಪದ್ರವ. ಒಂದು ರಾತ್ರಿ ಸ್ವಾಮಿಗಳ ಕನಸಿನಲ್ಲಿ ಮುನೀಶ್ವರದೈವವು ಕಾಣಿಸಿಕೊಂಡು"ನನಗೆಲ್ಲಿ ಜಾಗ ಮಾಡಿಕೊಡುತ್ತೀಯೆ?" ಎಂದು ಕೇಳಿದನಂತೆ. ಮರುದಿನವೇ ಸ್ವಾಮಿಗಳು ಮುನೀಶ್ವರನಿಗೆಂದೇ ಪ್ರತ್ಯೇಕ ಆಶ್ರಮದ ಮುಖ್ಯ ಕಟ್ಟಡದೆದುರು ಒಂದು ಆವರಣವನ್ನು ಮುನೀಶ್ವರನ ಗುಡಿಗೆ ಗೊತ್ತುಮಾಡಿದರು. ಮುಂದೆ ಅಲ್ಲೊಂದು ಸೊಗಸಾದ ಸಣ್ಣಮಂದಿರವು ಮೈದಳೆಯಿತು. ಮುನೀಶ್ವರನು ಆಶ್ರಮಕ್ಕೆ ಕ್ಷೇತ್ರಪಾಲನಾಗಿ ನಿಂತಿದ್ದಾನೆ.

ಈ ನಡುವೆ ಇನ್ನೊಂದು ಪ್ರಸಂಗ ಮುಖ್ಯಕಟ್ಟಡದಲ್ಲಿ ಮಹಡಿಯನ್ನು ಕಟ್ಟಿಸಲು ಕಾರಣವಾಯಿತು. ಸ್ವಾಮಿಗಳು ತಮ್ಮ ಕುಟೀರದಲ್ಲೇ ಇರುತ್ತಿದ್ದರು; ಆಶ್ರಮದ ಮುಖ್ಯಕಟ್ಟಡಕ್ಕೆ ಆಗಾಗ ಬಂದು ಹೋಗುತ್ತಿದ್ದರು. ಸ್ವಾಮಿಗಳು ತಮ್ಮ ಕುಟೀರದಲ್ಲೇ ಇರುತ್ತಿದ್ದರು; ಆಶ್ರಮದ ಮುಖ್ಯಕಟ್ಟಡಕ್ಕೆ ಆಗಾಗ ಬಂದು ಹೋಗುತ್ತಿದ್ದರು ಅಷ್ಟೆ. ಸ್ವಾಮಿಗಳನ್ನು ಸಂದರ್ಶಿಸಲು ಬರುವವರು ಅವರನ್ನು ಕುಟೀರದಲ್ಲಿಯೇ ಕಾಣುತ್ತಿದ್ದರು; ಸ್ವಾಮಿಗಳ ಮಲಗುವುದು ಅಲ್ಲಿಯೇ. ಕುಟೀರವು ಹಳೆಯ ಕಟ್ಟಡ; ಗೋಡೆಗಳೆಲ್ಲ ಬಿರುಕು ಬಿಟ್ಟಿದ್ದುವು; ಹೆಂಚಿನ ಸೂರು ಸೋರುತ್ತಿದ್ದಿತು. ಆದರೂ ಸ್ವಾಮಿಗಳು ಅಲ್ಲಿಯೇ ವಾಸಮಾಡುತ್ತಿದ್ದರು. ಇಲ್ಲಿಗೆ ಬಂದಾಗಿನಿಂದಲೂ ಅಲ್ಲಿಯೇ ಇದ್ದವರು. ಅದನ್ನು ಬಿಡುವ ಮನಸ್ಸು ಅವರಿಗಿರಲಿಲ್ಲ. ಮುಖ್ಯಕಟ್ಟಡದಲ್ಲೇ ಇರಬಹುದೆಂದು ಯಾರು ಎಷ್ಟು ಹೇಳಿದರೂ ಕೇಳುತ್ತಿರಲಿಲ್ಲ.

ಒಂದು ದಿನ ಸ್ವಾಮಿಗಳ ಕೋಣೆಯಲ್ಲೊಂದು ಹಾವು ಕಾಣಿಸಿಕೊಂಡಿತು. ಜನರ ಗದ್ದಲಕ್ಕೆ ಬೆಚ್ಚಿ ಗೋಡೆಯೊಳಗಿನ ಸಂದಿಯಲ್ಲಿ ಸೇರಿಕೊಂಡುಬಿಟ್ಟಿತು. ಈ ಸಂದರ್ಭದಲ್ಲಿ ಆಶ್ರಮದವರೆಲ್ಲ ಸ್ವಾಮಿಗಳು ಇಲ್ಲಿರುವುದು ಅಪಾಯವೆಂದು ಒತ್ತಾಯಪಡಿಸಿದ ಮೇಲೆ ಆಶ್ರಮದ ಮುಖ್ಯಕಟ್ಟಡದ ಮೇಲೆ ಅವರಿಗಾಗಿ ಮಹಡಿಯನ್ನು ಕಟ್ಟಿಸಲು ಒಪ್ಪಿಕೊಂಡರು. ಈ ಮಹಡಿಯನ್ನು ಕಟ್ಟಿಸಲು ಮುಂದೆ



ಗ್ರಂಥಾಗಾರದ ಒಂದು ನೋಟ

ಬಂದವರು ನಂಜುಂಡ ಮುದಲಿಯಾರ್ ಎಂಬ ಭಕ್ತರು. ಇದು ಕಟ್ಟಿ ಮುಗಿದದ್ದು 1965-1966ರಲ್ಲಿ.

ಮಹಡಿ ಕಟ್ಟಿಯಾದಮೇಲೂ ಒಂದು ವರ್ಷಕಾಲ ಸ್ವಾಮಿಗಳು ತಮ್ಮ ಹಳೆಯ ಕುಟೀರದಲ್ಲೇ ಇರುತ್ತಿದ್ದರು. ಮತ್ತೆ ಭಕ್ತಾದಿಗಳ ಒತ್ತಡ ಹೆಚ್ಚಿದ ಮೇಲೆ ಮಹಡಿಯಲ್ಲಿ ಮಲಗಲು ಒಪ್ಪಿದರು. ಈಗಲೂ ಸ್ವಾಮಿಗಳು ದಿನದ ಬಹುಭಾಗವನ್ನು ಕಳೆಯುವುದು ಕುಟೀರದಲ್ಲೇ; ಬಂದವರು ಸ್ವಾಮಿಗಳನ್ನು ಕಾಣುವುದು ಇಲ್ಲಿಯೇ. ರಾತ್ರಿ ಮಲಗಲು ಮಾತ್ರ ಆಶ್ರಮದ ಮುಖ್ಯಕಟ್ಟಡಕ್ಕೆ ಬರುತ್ತಾರೆ. ಈಚೆಗೆ ಕುಟೀರವನ್ನು ದುರಸ್ತಿಮಾಡಿಸಿದ್ದಾರೆನ್ನಿ.



ಪಲ್ಲಕ್ಕಿಯಲ್ಲಿ ಶ್ರೀ ಜ್ಞಾನಾಕ್ಷಿ ರಾಜರಾಜೇಶ್ವರೀ

ಆಶ್ರಮದಲ್ಲಿ ಗಣಪತಿಯ ಗುಡಿಯೊಂದನ್ನು ಕಾಲಕ್ರಮದಲ್ಲಿ ಕಟ್ಟಿಸಿದರು. ಈ ಗುಡಿಯು ಕಟ್ಟಲ್ಪಟ್ಟಾಗಲೂ ವಿಶೇಷವೊಂದು ಜರುಗಿತು. ಈಗ ಗುಡಿಯಿರುವ ಎಡೆಯಲ್ಲಿ ದೊಡ್ಡದೊಂದು ಅರಳಿಮರವಿದ್ದಿತು. ಅದನ್ನು ಕಡಿದಲ್ಲದೆ ಗುಡಿ ಬರಲಾರದು. ಆದರೆ ಅರಳಿಮರವನ್ನು ಕಡಿಯಬೇಕೆಂದರೆ ಮನಸ್ಸುಬಾರದು. ವ್ಯವಹಾರ ಅಗತ್ಯದಿಂದ ಹಬ್ಬಿಕೊಂಡಿದ್ದ ಮರದ ಕೊಂಬೆಗಳನ್ನು ಕಡಿದರು, ಅದರ ಉಪಯೋಗವೇನೋ ಇತ್ತೆನ್ನಿ. ಹೋಮಕ್ಕೆ ಸಮಿತ್ತುಬೇಕಾಗಿದ್ದಿತು. ನೆಲದವರೆಗೆ ಮರದ ಕಾಂಡವನ್ನು ಸವರಿದರು. ಸ್ವಾಮಿಗಳು ನೋಡಲು ಬಂದರು. ಅಲ್ಲಿದ್ದವರಿಗೆ, ಈ ಕಾಂಡದ ನಡುವೆ ಸುಳಿಯನ್ನು ತೋಡಿ ಅದರೊಳಗೆ ಅರಳಿಮರದ ಸಸಿಯೊಂದನ್ನು ನೆಡಲು ಹೇಳಿದರು. ಇದೇನು ವಿಚಿತ್ರವಾದ ಪ್ರಯೋಗವೆಂದು ಎಲ್ಲರೂ ಆಶ್ಚರ್ಯಪಟ್ಟರು; ಹೀಗೆ ಮಾಡುವುದು ಏಕೆಂದು ಕೆಲವರು ಚರ್ಚಿಸಿದರು. ಸ್ವಾಮಿಗಳು ಏನನ್ನೂ ಹೇಳಲಿಲ್ಲ. ಗಣಪತಿಯ ಗುಡಿಯು ಕಾಣಿಸಿಕೊಂಡಿತು; ಮುನೀಶ್ವರನ ಗುಡಿಗೆ ಸರಿಯಾಗಿ ಈಚೆ ಕಡೆ. ಅದರೆದುರು ಹಳೆಯ ಅರಳಿಮರದ ಕಾಂಡದಲ್ಲಿ ನೆಟ್ಟಿದ್ದ ಅರಳಿಸಸಿಯೂ ಚಿಗುರಿಕೊಂಡಿತು; ಮುಂದೆ ಅದೇ ಹೆಮ್ಮರನಾಗಿ ಬೆಳೆಯಿತು. ಈಗಲೂ ಅದನ್ನು ಕಾಣಬಹುದು.

ಗಣಪತಿಗುಡಿಯ ಬದಿಯಲ್ಲಿ ಮಕ್ಕಳಿಗೆ ಸಂಪ್ರದಾಯ ಶಿಕ್ಷಣಕ್ಕೆಂದು ಶಾಲೆಯೊಂದನ್ನು ಏರ್ಪಡಿಸಲಾಯಿತು. ಮುಂದೆ ಅದನ್ನು ತೋಟದ ನಡುವೆ ಕುಟೀರದ ಪಕ್ಕಕ್ಕೆ ವರ್ಗಾಯಿಸಲಾಯಿತು. ಶಾಲೆಗೆಂದು ಕಟ್ಟಿದ ಕೋಣೆಗಳಲ್ಲಿ ಈಗ ಪುಸ್ತಕಭಂಡಾರವಿದೆ.

ಹೀಗೆ ಕೈಲಾಸಾಶ್ರಮ ಹಂತಹಂತವಾಗಿ ಬೆಳೆದುಬಂದಿತು. ಸ್ವಾಮಿಗಳು ಜ್ಞಾನ ಪಕ್ಷಪಾತಿಗಳು. ಅವರ ಆರಾಧ್ಯದೈವ ಜ್ಞಾನಾಕ್ಷಿರಾಜರಾಜೇಶ್ವರಿ. ಜ್ಞಾನದ ಬಲವಿದ್ದರೇ ಭಕ್ತಿ ಬೇರೂರಿಕೊಳ್ಳುವುದು. ಅವರಿಗೆ ವೇದಾಗಮಗಳ ಅಧ್ಯಯನ ಅಗತ್ಯವು ಮನದಟ್ಟಾಗಿದೆ. ಪೂಜೆಯಾದರೂ ಶಾಸ್ತ್ರಶುದ್ಧವಾಗಿ, ಆಗಮೋಕ್ತವಾಗಿಯೇ ನಡೆಯಬೇಕು ಎಂಬ ಕಳಕಳಿ ಅವರದ್ದು. ಅದೂ ಸಾತ್ವಿಕಪೂಜೆಯ ಮೇಲೇ ಅವರ ಒಲವು; ವೈದಿಕವಾದ ಪ್ರಕ್ರಿಯೆಗಳನ್ನೆ ಬಳಸಿಕೊಂಡು ತಂತ್ರ ಊರ್ಜಿತವಾಗಬೇಕೆಂದು ಅವರ ಆಶಯ. ಈ ಎಲ್ಲ ಕಲ್ಪನೆಗಳನ್ನೊಳಗೊಂಡ ದೇವಾಲಯವನ್ನು ಕಟ್ಟಿಸಬೇಕೆಂಬ ಅವರ ಕನಸೂ ಕೈಗೂಡಿತು.



ದೇವಸ್ಥಾನದ ಗೋಪುರ

ಜ್ಞಾನಾಕ್ಷಿರಾಜರಾಜೇಶ್ವರೀ ಆಲಯ

ಕೈಲಾಸಾಶ್ರಮವು ಈಗ ಮಹಾಸಂಸ್ಥಾನದ ಸ್ವರೂಪವನ್ನು ತಳೆದಿದೆ. ಅದರ ವಿವರಗಳಲ್ಲಿ ತುಂಬ ಮುಖ್ಯವಾದುದು, ವಿಶಿಷ್ಟವಾದುದು ಜನಪ್ರಿಯವಾದುದು ರಾಜರಾಜೇಶ್ವರೀದೇವಿಯ ಆಲಯ. ಇಂಥ ಭವ್ಯವಾದ ದೇವಾಲಯ ಬೆಂಗಳೂರು ನಗರದಲ್ಲೇ ಅಪೂರ್ವವಾದುದು; ನಗರದ ದೇವಾಲಯ ಸಂಸ್ಕೃತಿಗೆ ಕೈಲಾಸಾಶ್ರಮದ ಸೊಗಸಾದ ಕೊಡುಗೆ ಇದು. ಮತ್ತು ಆಗಮಗಳ ನಿರ್ದೇಶನಕ್ಕೆ ಅನುಗುಣವಾಗಿಯೇ ಕಟ್ಟಿದ ಆಲಯ. ಶೈವಾಗಮ ಸಂಪ್ರದಾಯದ ಆಲಯ ನಿರ್ಮಾಣವಿಧಿಯನ್ನು ಚಾಚೂ ತಪ್ಪದೆ ಇಲ್ಲಿ ಅದನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿರುವುದೊಂದು ವೈಶಿಷ್ಟ್ಯ.

ತಿರುಚಿಸ್ವಾಮಿಗಳಿಗೆ ಈ ದೇವಾಲಯವನ್ನು ಕಟ್ಟಿಸುವ ಆಲೋಚನೆ ಹೊಳೆದದ್ದು 1967-68ರಲ್ಲಿ. ಅದಕ್ಕೆ ಮೊದಲು ಕೈಲಾಸಾಶ್ರಮದ ಮುಖ್ಯಕಟ್ಟಡದ ನಡುವಣ ಅಂಕಣದಲ್ಲಿ ಪೂಜೆ ನಡೆಯುತ್ತಿದ್ದಿತು. ಅಲ್ಲಿ ರಾಜರಾಜೇಶ್ವರಿಯ ಚಿತ್ರಪಟ (ಮಧುರೈಯಲ್ಲಿ ರಚಿತವಾದುದು) ಮತ್ತು ಪಂಚಲೋಹ ವಿಗ್ರಹ (ಕಾರೈಕ್ಕುಡಿಯಲ್ಲಿ ಸಿದ್ಧವಾದುದು) ಇವು ಪೂಜೆಗೊಳ್ಳುತ್ತಿದ್ದುವು. ಪೂಜೆಯೇನೋ ಶೈವಾಗಮಪಂಡಿತರಿಂದಲೇ ಆಗಮೋಕ್ತ ವಿಧಾನದಲ್ಲಿಯೇ ನಡೆಯುತ್ತಿದ್ದಿತಾದರೂ ಬಹುಮಟ್ಟಿಗೆ ಅದು ಆತ್ಮಾರ್ಥವಾದ ಪೂಜೆ. ಕಟ್ಟಡದಲ್ಲಿ ಲೌಕಿಕವ್ಯವಹಾರಗಳೂ ನಡೆಯುತ್ತಿದ್ದುವಾಗಿ, ವಸತಿಯೂ ಇದ್ದಿತಾಗಿ, ಪೂಜಾಮೂರ್ತಿಗಳಿರುವ ಅಂಕಣದಲ್ಲಿ ಯಾವಬಗೆಯ ಪ್ರವೇಶನಿರ್ಬಂಧವೂ ಇರಲಿಲ್ಲವಾಗಿ ಅದನ್ನು ದೇವಾಲಯವೆಂದು ಪರಿಗಣಿಸುವಂತಿರಲಿಲ್ಲ.



ದೇವಸ್ಥಾನದ ವಿಹಂಗಮ ನೋಟ



ಗರ್ಭಗುಡಿ ಮತ್ತು ಮುಖಮಂಟಪ

ದೇವಾಲಯವೆಂದರೆ ಪರಾರ್ಥಪೂಜೆಗಾಗಿ ಏರ್ಪಟ್ಟ ಸ್ವತಂತ್ರಸ್ಥಳ. ಭಕ್ತಾದಿಗಳು ನೆರೆಯುವುದಕ್ಕೂ, ಪೂಜೆಯ ವಿವಿಧ ವಿವರಗಳು ವಿಧ್ಯುಕ್ತವಾಗಿ ನಡೆಯುವುದಕ್ಕೂ, ಉತ್ಸವಾದಿಗಳು ಜರುಗುವುದಕ್ಕೂ ಅನುಕೂಲವಾದ ವಿಭಾಗಗಳಿರಬೇಕು. ಪ್ರದಕ್ಷಿಣಾಪಥ, ರಂಗಮಂಪಟ, ಯಾಗಶಾಲೆ, ಧ್ವಜಸ್ತಂಭಮಂಟಪ, ಬಲಿಪೀಠ, ಅಡುಗೆಶಾಲೆ, ಸ್ನಪನಮಂಟಪ, ವಾಹನಮಂಟಪ ಇತ್ಯಾದಿ. ಕೈಲಾಸಾಶ್ರಮದ ಕಟ್ಟಡದಲ್ಲಿ ಇವು ಯಾವುವೂ ಇರಲಿಲ್ಲ; ಪರಾರ್ಥಪೂಜೆ ಸಾಂಗವಾಗಿ ನೆರವೇರುವ ಸಾಧ್ಯತೆಯೇ ಇರಲಿಲ್ಲ.

ಸ್ವಾಮಿಗಳಿಗೆ ಮೊದಲಿಂದಲೂ ದೇವಾಲಯಗಳಲ್ಲಿ ಆಸಕ್ತಿ. ಚೆಟ್ಟಿನಾಡಿನಲ್ಲಿರುವಾಗಲಂತೂ ಹತ್ತಾರು ದೇವಾಲಯಗಳ ಜೀರ್ಣೋದ್ಧಾರ, ಕುಂಭಾಭಿಷೇಕ, ದುರಸ್ತಿ ಮೊದಲಾದವನ್ನು ಮಾಡಿಸಿದ್ದರು; ವಿಗ್ರಹಪ್ರತಿಷ್ಠೆಗಳನ್ನೂ ಮಾಡಿಸಿದ್ದರು. ದೇವಾಲಯನಿರ್ಮಾಣದ ವಿಚಾರವಾಗಿಯೂ ಮೂರ್ತಿಪ್ರತಿಷ್ಠೆಯ ವಿಚಾರವಾಗಿಯೂ ಅವರ ತಿಳಿವಳಿಕೆ ಅಗಾಧವಾಗಿದ್ದಿತು. ಪ್ರವಾಸಕಾಲದಲ್ಲಿ ಹೋದಕಡೆಯಲ್ಲೆಲ್ಲ ದೇವಾಲಯಗಳನ್ನು ನೋಡಿಬರುತ್ತಿದ್ದರು. ಮತ್ತು ದೇವಾಲಯಗಳಿಂದಲೇ ಧರ್ಮಪ್ರಸಾರವಾಗುವುದೆಂಬ ವಿಶ್ವಾಸವೂ ಅವರಿಗಿದ್ದಿತು. ಅವರು ಜನರ ಗಮನವನ್ನು ಧರ್ಮದ ಕಡೆ ತಿರುಗಿಸುವುದೇ ತಮ್ಮ ಬಾಳಿನ ಉದ್ದೇಶವೆಂಬುದನ್ನು ಮನಗಂಡಿದ್ದರು. ಕೈಲಾಸಾಶ್ರಮವನ್ನು ಬೆಂಗಳೂರಿನಲ್ಲಿ ಆರಂಭಿಸಿದುದೇ ಈ ಉದ್ದೇಶದಿಂದ.

ಹೀಗಿರುವಾಗ ಕೈಲಾಸಾಶ್ರಮದಲ್ಲಿ ಒಂದು ದೇವಾಲಯವಿರಬೇಡವೆ? ದೇವರಿಗೇನೋ ವಾಸ್ತವವಾಗಿ ಕಣ್ಣಿಗೆ ಕಾಣುವ ರೂಪವಿಲ್ಲ. ದೇವರು ಸರ್ವವ್ಯಾಪಿ, ಅಚಿಂತ್ಯ, ಅಮೂರ್ತ, ಅಗ್ರಾಹ್ಯ, ಅನಿರ್ದೇಶ್ಯ. ಆದರೆ ಸಾಧನೆಯಲ್ಲಿ ಪ್ರೌಢಿಮೆಯಿಲ್ಲದವರು, ನಿರ್ಗುಣೋಪಾಸನೆಗೆ ಅಧಿಕಾರಿಗಳಲ್ಲದವರು, ಸಂಸ್ಕಾರದ ಸಾಮರ್ಥ್ಯ ಸಾಲದವರು ಮೂರ್ತಿಪೂಜೆಯನ್ನು ಮಾಡಲೇಬೇಕು; ದೇವಾಲಯಗಳು ಇರುವುದು ಈ ಕೊರತೆಯನ್ನು ನೀಗಿಸಲೆಂದೇ. ಸಗುಣೋಪಾಸನೆಯು

ನಿರ್ಗುಣೋಪಾಸನೆಗೆ ಅಗತ್ಯವಾದ ಒಂದು ಸಾಧನ. ಬ್ರಹ್ಮಾನುಸಂಧಾನಮಾಡುವವರಿಗೂ ಬಿಂಬಾರಾಧನೆಯು ನೆರವಾಗುವುದೆಂದ ಮೇಲೆ ಸಾಮಾನ್ಯರಿಗೆ ಹೇಳುವುದೇನು?

ಸ್ವಾಮಿಗಳು ಜ್ಞಾನದೀಕ್ಷೆಯನ್ನು ಪಡೆದುಕೊಂಡ ಪರಮಹಂಸ ಸಂನ್ಯಾಸಿಗಳು. ಅವರಿಗೆ ಬಹಿರಂಗ ಪೂಜೆ, ಸಗುಣಾರಾಧನೆ, ಆಲಯಾರ್ಚನೆ ಇದರ ಅಗತ್ಯವೇನಿರದು. ಅವರು ಶ್ರೀಚಕ್ರಪೂಜೆಯನ್ನೇ ಪರಿತ್ಯಾಗಮಾಡಿದ್ದರು. ಆದರೆ ಆಶ್ರಮದ ಪ್ರಯೋಜನ ಎಲ್ಲ ರೀತಿಯ ಜನರಿಗೂ—ಉತ್ತಮಾಧಿಕಾರಿಗಳಿಗೂ ಮಧ್ಯಮಾಧಿಕಾರಿಗಳಿಗೂ ಅಧಮಾಧಿಕಾರಿಗಳೂ ಒದಗಿಬರಬೇಕಲ್ಲವೆ? ಉತ್ತಮಾಧಿಕಾರಿಗಳಿಗೆ ಜ್ಞಾನಬೋಧೆ, ಮಧ್ಯಮಾಧಿಕಾರಿಗಳಿಗೆ ಅಂತರ್ಯಾಗ, ಅಧಮಾಧಿಕಾರಿಗಳಿಗೆ ಬಾಹ್ಯಪೂಜೆ-ಉತ್ಸವಾದಿಗಳು. ಇಷ್ಟಾಗಿ ಆಶ್ರಮ ಇರುವುದು—ಸ್ವಾಮಿಗಳಿಗಲ್ಲ, ಭಕ್ತರಿಗೆ. ಭಕ್ತರ ಅಗತ್ಯವನ್ನು ಪೂರೈಸುವುದು ಆಶ್ರಮದ ಕರ್ತವ್ಯ. ಸ್ವಾಮಿಗಳು ತಾವೇ ಮಾಡದುದನ್ನು ಭಕ್ತರು ಮಾಡಲಾರರು. ಭಕ್ತರಿಗೆ ಪ್ರೇರಣೆ ಒದಗಿಸಲೆಂದು ಸ್ವಾಮಿಗಳು ದೇವಾಲಯ, ಮೂರ್ತಿಪೂಜೆ, ಉತ್ಸವ, ಹೋಮ ಇವುಗಳಲ್ಲಿ ಆಸಕ್ತಿವಹಿಸಬೇಕು. ಗೀತೆಯಲ್ಲಿ ಹೇಳಿದೆಯಲ್ಲವೆ-

'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ'

ಎಂದು. ದೊಡ್ಡವರು ಮಾಡಿದಂತೆಯೆ ಸಣ್ಣವರು ಮಾಡತೊಡಗುವುದು ವಾಡಿಕೆ.

ತಿರುಚಿಸ್ವಾಮಿಗಳು ದೇವಾಲಯವನ್ನು ಕಟ್ಟಿಸತೊಡಗಿದ್ದು 1972ರ ಸುಮಾರಿಗೆ; ಸಂಕಲ್ಪ ಮಾಡಿದ ನಾಲ್ಕೈದು ವರ್ಷಗಳು ಕಳೆದಮೇಲೇ. ಯಾವ ದೇವತಾರೂಪಕ್ಕೆ ಆಲಯವನ್ನು ನಿರ್ಮಿಸಬೇಕೆಂಬ ವಿಚಾರದಲ್ಲಿ ಅವರಿಗೇನು ಸಂಶಯವಿರಲಿಲ್ಲ. ಅವರ ಇಷ್ಟದೈವ ರಾಜರಾಜೇಶ್ವರಿಯ ರೂಪದ್ದು. ಹುಡುಗನಾಗಿರುವಾಗಲೇ ಮಣ್ಣಿನ ಈ ರೂಪವನ್ನು ಮಾಡಿ ಆಟದ ಪೂಜೆ ನಡೆಸುತ್ತಿದ್ದುದು, ಈ ರೂಪವನ್ನೇ ಶ್ರೀಲಂಕದ ಶಿವನಡಿಪಾದದಲ್ಲಿ ಸಂನ್ಯಾಸಿನಿಯು ತನ್ನ ಕಮಂಡಲುವಿನಿಂದ ಹೊರತೆಗೆದು ತಾನೇ ಆ

ರೂಪವೆಂದು ಹೇಳಿದ್ದು, ತಿರುವಣ್ಣಾಮಲೆಯ ಈಶಾನ್ಯಮಠದಲ್ಲಿ ರಾಜರಾಜೇಶ್ವರಿಯ ಯಂತ್ರರೂಪವಾದ ಶ್ರೀಚಕ್ರದ ಪೂಜೆಯನ್ನು ಕೈಗೊಂಡದ್ದು, ಕೈಲಾಸಶಿಖರದಲ್ಲಿ ರಾಜರಾಜೇಶ್ವರಿಯ ದರ್ಶನವಾದದ್ದು ಇವೆಲ್ಲ ವಿವರಗಳನ್ನೂ ಮೊದಲೇ ಅರಿತಿದ್ದೇವಲ್ಲವೆ?

ರಾಜರಾಜೇಶ್ವರಿಯು ಶ್ರೀವಿದ್ಯೆಗೆ ವಿಶಿಷ್ಟವಾದ ದೇವೀರೂಪ. ದಶಮಹಾವಿದ್ಯೆಯಲ್ಲಿ ಷೋಡಶೀ ಎನಿಸಿಕೊಳ್ಳುವ ವಿದ್ಯೆಯಿದು. ಇದನ್ನೇ ಲಲಿತ, ಭಟ್ಟಾರಿಕೆ, ತ್ರಿಪುರಸುಂದರಿ, ಬಾಲಾ, ಷೋಡಶಿ ಎಂದು ಮುಂದಾಗಿ ಕರೆಯುತ್ತಾರೆ. ಶ್ರೀವಿದ್ಯೆಯ ಉಪಾಸಕರಾದ ತಿರುಚಿಸ್ವಾಮಿಗಳು ಈ ರೂಪವನ್ನು ದೇವಾಲಯದಲ್ಲಿ ಆರಾಧನೆಗೆ ತಕ್ಕುದೆಂದು ಆರಿಸಿಕೊಂಡದ್ದು ಆಶ್ಚರ್ಯವೇನಲ್ಲ. ಮೇಲಾಗಿ ಅವರು ಚೆಟ್ಟಿನಾಡಿನ ಪ್ರವಾಸಕಾಲದಲ್ಲೇ ವಿಗ್ರಹವನ್ನು ರಾಜರಾಜೇಶ್ವರಿಯ ಚಿತ್ರಪಟವನ್ನೂ ಕಾರೈಕ್ಕುಡಿಯಲ್ಲಿ ರಾಜರಾಜೇಶ್ವರಿಯ ಪಂಚಲೋಹದ ವಿಗ್ರಹವನ್ನು ಮಾಡಿಸಿ ಬೆಂಗಳೂರಿಗೆ ತರಿಸಿಕೊಂಡಿದ್ದರು; ಇವಕ್ಕೆ ಕೈಲಾಸಾಶ್ರಮದ ಮುಖ್ಯಕಟ್ಟಡದಲ್ಲಿ ಪೂಜೆಯೂ ನಡೆಯುತ್ತಿದ್ದಿತು.

ಇನ್ನೂ ಒಂದು ವಿವರವನ್ನು ಇಲ್ಲಿ ಹೇಳಬೇಕು. ದೇವಾಲಯವನ್ನು ಕಟ್ಟಲೆಂದು ಭೂಶೋಧನೆಯನ್ನು ಮಾಡುತ್ತಿರುವಾಗ ಈಗ ಗರ್ಭಗುಡಿಯಿರುವ ಸ್ಥಳದಲ್ಲೇ ಭೂಮಿಯೊಳಗೆ ಒಂದು ಪ್ರಾಚೀನವಾದ ಲೋಹದ ವಿಗ್ರಹ ದೊರಕಿತು. ಇಲ್ಲಿ ಮೊದಲೇ ಒಂದು ದೇವಾಲಯವಿದ್ದು, ಅದು ಮರೆಯಾಗಿರುವ ಸಂಭವವನ್ನು ಇದು ಸೂಚಿಸುತ್ತದೆ. ಮತ್ತು, ಭೂಗತವಾಗಿದ್ದ ವಿಗ್ರಹವನ್ನು ನೋಡಲಾಗಿ ಅದು ರಾಜರಾಜೇಶ್ವರಿಯ ರೂಪವೇ! ಎಂದರೆ ಇಲ್ಲಿ ಯಾವುದೋ ಕಾಲದಲ್ಲಿ ರಾಜರಾಜೇಶ್ವರಿಯ ಆಲಯವೇ ಇದ್ದಿತೆಂದು ತೋರುತ್ತದೆ. ಸುಮಾರು ಹದಿನೈದು ಅಡಿ ಆಳದಲ್ಲಿ ದೊರೆತ ಈ ಪಂಚಲೋಹ ವಿಗ್ರಹವು ಒಂದು ಅಡಿ ಎತ್ತರವಿದ್ದಿತು. ಸ್ವಾಮಿಗಳು ಅದನ್ನು ಇದ್ದಲ್ಲಿಯೇ ಬಿಡಬೇಕೆಂದೂ ಮರಳು-ಮಣ್ಣು-ಕಲ್ಲುಗಳಿಂದ ಮುಚ್ಚಿಬಿಡಬೇಕೆಂದೂ ಸೂಚಿಸಿದರು.

ಮತ್ತು ಆ ವಿಗ್ರಹವು ಕಾಣಿಸಿಕೊಂಡ ಸ್ಥಳದಲ್ಲಿಯೇ ದೇವಾಲಯದ ಗರ್ಭಗುಡಿಯನ್ನು ಕಟ್ಟಬೇಕೆಂದು ಸ್ವಾಮಿಗಳು ನಿರ್ಧರಿಸಿದರು; ಮೇಲೆ ಪ್ರತಿಷ್ಠಿತವಾಗುವ ವಿಗ್ರಹವು ಈ ಪ್ರಾಚೀನವಿಗ್ರಹ ಭೂಗತವಾಗಿ ಇರುವ ನೇರದಲ್ಲೇ ಇರಬೇಕೆಂದು ಅವರ ಅಪ್ಪಣೆಯಾಯಿತು. ಅಷ್ಟಲ್ಲದೆ, ಈ ವಿಗ್ರಹದ ಮೂರ್ತಿ ಲಕ್ಷಣಕ್ಕೆ ಅನುಸಾರವಾಗಿಯೇ ಹೊಸದಾಗಿ ಒಂದು ಕರೀಕಲ್ಲಿನ ವಿಗ್ರಹವನ್ನು ಮಾಡುವಂತೆ ಇಳುವನ್‌ಕೋಟ್ಟೈ ಗಣಪತಿ ಸ್ಥಪತಿಗೆ ತಿಳಿಸಿದರು. ಈ ಸ್ಥಪತಿಯು ಅವರಿಗೆ ಪೂರ್ವಪರಿಚಿತ; ಚೆಟ್ಟಿನಾಡಿನಲ್ಲಿ ದೇವಾಲಯಗಳ ಜೀರ್ಣೋದ್ಧಾರ ಸಂದರ್ಭಗಳಲ್ಲಿ ಇವರ ನೆರವನ್ನು ಪಡೆದುಕೊಂಡಿದ್ದರು.

ವಾಸ್ತವವಾಗಿ, ಕೈಲಾಸಾಶ್ರಮವು ದುರ್ವಾಸರು ಏರ್ಪಡಿಸಿದ ಕೈಲಾಸಪೀಠದ ಮೂರ್ತರೂಪವೇ ಎಂಬ ಕಲ್ಪನೆಯಿದೆ. ಶ್ರೀವಿದ್ಯಾಸಂಪ್ರದಾಯ ಪ್ರವರ್ತಕರಾದ ದೂರ್ವಾಸರು ಈ ಪೀಠವನ್ನು ಸ್ಥಾಪಿಸಿದ ಉದ್ದೇಶವು ಮಾನಸಪೂಜೆಯ ಅಗತ್ಯವನ್ನು ವಿವರಿಸಲೆಂದೇ ಎಂಬ ಮಾತು ಶ್ರೀ ವಿದ್ಯಾರ್ಣವ ತಂತ್ರದಲ್ಲಿ ಕಾಣಬರುತ್ತದೆ.-

ಬಿಂದುಹೀನಾ ನಾದಹೀನಾ ದೂರ್ವಾಸಃ ಪೂಜಿತಾ ಭವೇತ್।
ದೂರ್ವಾಸಸಾ ಪುರಾ ದೇವಿ ನಿಷ್ಕಲಾ ಪೂಜಿತಾ ಪರಾ॥

ತಿರುಚಿಸ್ವಾಮಿಗಳೂ ಜ್ಞಾನದೀಕ್ಷೆಯನ್ನು ಕಳೆದಮೇಲೆ ಶ್ರೀಚಕ್ರಮೇರುವಿನ ಬಿಂಬವನ್ನು ವಿಸರ್ಜಿಸಿ, ಬಾಹ್ಯಪೂಜೆಯ ಕ್ರಮವನ್ನು ಕೈಬಿಟ್ಟರೆಂಬುದನ್ನು ನೆನಪಿಗೆ ತಂದುಕೊಳ್ಳಬೇಕು. ಹಿಂದಿನ ಋಷಿಮುನಿಗಳು ವ್ಯವಸ್ಥೆಮಾಡಿದ ಅರವತ್ತನಾಲ್ಕು ಶಕ್ತಿಪೀಠಗಳಲ್ಲಿ ದೂರ್ವಾಸರ ಕೈಲಾಸಪೀಠವೂ ಒಂದು; ಅದರ ಪೂರ್ವಸ್ಥಾನವು ಈಗಿನ ಕೈಲಾಸಾಶ್ರಮವಿರುವಲ್ಲಿಯೇ ಇದ್ದಿತೆಂದು ತಿರುಚಿಸ್ವಾಮಿಗಳ ಕಾಣ್ಕೆ. ದೂರ್ವಾಸರ ತಂದೆತಾಯಿಯರಾದ ಅತ್ರಿ-ಅನಸೂಯೆಯರು ಇಲ್ಲಿ ತಪಸ್ಸುಮಾಡಿದುದೂ ಈ ಕಾರಣದಿಂದಲೇ ಎಂದು ಅವರ ವಿವರಣೆ.

ತಾಂತ್ರಿಕ ಗ್ರಂಥಗಳಲ್ಲಿ ಕೈಲಾಸಪೀಠವನ್ನು ಊರ್ಧ್ವಾಮ್ನಾಯವೆಂದು ಎಣಿಸಲಾಗಿದೆ. ರುದ್ರಯಾಮಳದಲ್ಲಿ ಕೈಲಾಸಶಿಖರದೊಂದಿಗೆ ಶ್ರೀಚಕ್ರನ್ಯಾಸ-ಕವಚಗಳ ನಂಟನ್ನು ಹೀಗೆ ಸೂಚಿಸಿದೆ

ಶ್ರೀ ಜ್ಞಾನಾಕ್ಷೀ ರಾಜರಾಜೇಶ್ವರೀ ದೇವಿ

'ಕೈಲಾಸಶಿಖರಾಸೀನಂ ಶಿವಂ ಪಪ್ರಚ್ಛ ಪಾರ್ವತೀ।
ಶ್ರೀನ್ಯಾಸಕವಚಂ ಬ್ರೂಹಿ ಮೇ ದೇವ ಶಂಕರ॥'

ತಿರುಚಿಸ್ವಾಮಿಗಳಿಗೂ ದೂರ್ವಾಸಪ್ರೋಕ್ತ ಶ್ರೀವಿದ್ಯೆಗೂ ಒದಗಿದ ಸಂಬಂಧ ಆಕಸ್ಮಿಕವೆನ್ನಲಾಗದು. ತಿರುಚಿಸ್ವಾಮಿಗಳ ಹಿರಿಯರು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ನಾಯಕಮನೆತನದವರು. ವಿಜಯನಗರವು ಶ್ರೀಚಕ್ರದ ಆಕಾರದಲ್ಲಿಯೇ ರಚಿತವಾಗಿ ವಿದ್ಯಾರಣ್ಯಮುನಿಗಳಿಂದ ಪ್ರವರ್ತಿತವಾದುದು ಶ್ರೀವಿದ್ಯಾನಗರವೆಂದೇ ಎಂದು ಶ್ರೀವಿದ್ಯಾರ್ಣವತಂತ್ರ ಹೇಳುತ್ತದೆ-

'ಶ್ರೀವಿದ್ಯಾನಗರಂ ನಾಮ್ನಾ ಶ್ರೀಚಕ್ರಾಕಾರಮುಜ್ವಲಂ।
ನಿರ್ಮಾಯ ಪ್ರೌಢದೇವರಾಯಸ್ಯ ಪುತ್ರೇ ರಾಜ್ಯಾರ್ಹತಾಂ ಗತೇ॥'

ಕರ್ನಾಟಕ ರಾಜ್ಯದ ಕೇಂದ್ರವಾಗಿದ್ದುದು ವಿಜಯನಗರ; ಅದು ಶ್ರೀವಿದ್ಯೆಯ ಸ್ಥಾನವೂ ಆಗಿದ್ದಿತು. ಈಗ ಕರ್ನಾಟಕ ರಾಜ್ಯದ ಕೇಂದ್ರ ಬೆಂಗಳೂರು. ಇಲ್ಲಿಯೂ ಶ್ರೀವಿದ್ಯೆಗೊಂದು ಸ್ಥಾನವಿರುವುದು ಸಮಂಜಸವಲ್ಲವೆ? ವಿಜಯನಗರ ಸಾಮ್ರಾಜ್ಯದ ನಂಟನ್ನು ಮನೆತನದಲ್ಲಿ ಪಡೆದಿರುವ ತಿರುಚಿಸ್ವಾಮಿಗಳು ಬೆಂಗಳೂರನ್ನು ತಮ್ಮ ಕಾರ್ಯಕ್ಷೇತ್ರದ ಕೇಂದ್ರವನ್ನಾಗಿ ಆರಿಸಿಕೊಂಡುದು ದೈವನಿಯಾಮಕವೇ.

ಇಲ್ಲಿ ರಾಜರಾಜೇಶ್ವರಿಯ ಸನ್ನಿಧಾನವಾಗಿ ಗುಡಿಯನ್ನು 1972ರಲ್ಲಿ ಕಟ್ಟತೊಡಗಿದ ಮೇಲೆ ಏಳುವರ್ಷಗಳ ಅವಧಿಯಲ್ಲಿ ಕಟ್ಟಡ ಮುಗಿಯಿತು. ಆಗಮದ ವಿಧಿಗಳನ್ನನುಸರಿಸಿ ಭೂಪರೀಕ್ಷೆ, ಭೂಶೋಧ, ಶಂಕುಸ್ಥಾಪನ, ಆಧಾರಶಿಲಾನ್ಯಾಸ, ಮೇರುಪ್ರತಿಷ್ಠೆ, ನವರತ್ನನ್ಯಾಸ, ನವಧಾನ್ಯನಿಕ್ಷೇಪ ಮೊದಲಾದುವೆಲ್ಲ ಜರುಗಿದುವು. ಪ್ರತಿಷ್ಠೆಗೆ ಮೊದಲು ಭೂಪ್ರಸ್ತಾರ, ಕೈಲಾಸಪ್ರಸ್ತಾರ, ಮೇರುಪ್ರಸ್ತಾರವೆಂಬ ಮೂರು ವಿಧವಾದ ಶ್ರೀಚಕ್ರಮೇರುಗಳನ್ನು ಭೂಗತಮಾಡಲಾಯಿತು. ದೇಶದ ಪ್ರಮುಖ ತೀರ್ಥಗಳಿಂದ ನೀರನ್ನು ಕಳಶಗಳಲ್ಲಿ ತುಂಬಿ ಇವನ್ನೂ ಮೂಲಮೂರ್ತಿಯ ಅಧಿಷ್ಠಾನದಡಿಯಲ್ಲಿ ಸ್ಥಾಪಿಸಲಾಯಿತು.

ಗರ್ಭಗುಡಿಯಲ್ಲಿ ಪ್ರತಿಷ್ಠೆಗೆಂದು ಗಣಪತಿಸ್ಥಪತಿ ಕಡೆದ ರಾಜರಾಜೇಶ್ವರಿಯ ಮೂರ್ತಿ ಕೃಷ್ಣಶಿಲೆಯದು; ಸುಮಾರು ಆರು ಅಡಿ ಎತ್ತರವಿದೆ. ದೇವಿಯು ವೀರಾಸನದಲ್ಲಿ ಕುಳಿತಂತೆ ಕಾಣಿಸಲಾಗಿದೆ. ನಾಲ್ಕು ಕೈಗಳು; ನಿಜಹಸ್ತಗಳಲ್ಲಿ ಧನುರ್ಬಾಣಗಳು; ಪರ ಹಸ್ತಗಳಲ್ಲಿ ಪಾಶಾಂಕುಶಗಳು. ಇದು ರಾಜರಾಜೇಶ್ವರಿಯ ಮೂರ್ತಿಲಕ್ಷಣವೇ. ದೇವಿಯ ಮುಂದಣ ಎಡಗೈಯಲ್ಲಿ ಹಿಡಿದಿರುವುದು ಕಬ್ಬಿನ ಜಲ್ಲೆ (ಇಕ್ಷುದಂಡ), ಅದೇ ಬಿಲ್ಲು. ಅದಕ್ಕೆ ಸಮನಾದ ಬಲಗೈಯಲ್ಲಿ ಐದು ಬಾಣಗಳು (ಪಂಚಬಾಣ). ಇವೆರಡೂ ಮನ್ಮಥನ ಕೈಯಲ್ಲೂ ಇರುತ್ತವೆ. ಕಬ್ಬಿನ ಜಲ್ಲೆಯನ್ನು ಮನಸ್ಸೆಂಬ ಬಿಲ್ಲಾಗಿ ಮಾಡಿಕೊಂಡು ಅರವಿಂದ, ಅಶೋಕ, ಚೂತ, ನವಮಲ್ಲಿಕೆ, ನೀಲೋತ್ಪಲಗಳೆಂಬ ಐದು ಹೂಗಳನ್ನೇ ಬಾಣಗಳನ್ನಾಗಿ ಪ್ರಯೋಗಿಸುತ್ತಾನೆ. ಈ ಪುಷ್ಪಬಾಣಗಳಿಗೆ ಸಮ್ಮೋಹತೆ, ಉನ್ಮಾದನ, ಶೋಷಣ, ತಾಪನ, ಸ್ತಂಭನಗಳೆಂಬ ಹೆಸರುಗಳೂ ಇವೆ. ಇವು ಮನಸ್ಸಿನ ವಿಕಾರಗಳು. ಭಾವನೋಪನಿಷತ್ತಿನಲ್ಲಿ ಈ ಆಯುಧಗಳ ವಿವರಣೆಯಿದೆ-

> 'ತನ್ಮಾತ್ರಃ ಪಂಚ ಪುಷ್ಪಬಾಣಾಃ। ಮನ ಇಕ್ಷುಧನುಃ।
> ರಾಗಃ ಪಾಶಃ। ದ್ವೇಷೋಽಂಕುಶಃ ಕುಶಃ॥

ಲಲಿತಾಸಹಸ್ರನಾಮ ಸ್ತೋತ್ರದಲ್ಲೂ

> ಉದ್ಯದ್ಭಾನುಸಹಸ್ರಾಭಾ ಚತುರ್ಬಾಹುವು ಸಮನ್ವಿತಾ।
> ರಾಗಸ್ವರೂಪ ಪಾಶಾಢ್ಯಾ ಕ್ರೋಧಾಕಾರಾಂಕುಶೋಜ್ವಲಾ।
> ಮನೋರೂಪೇಕ್ಷುಕೋದಂಡಾ ಪಂಚತನ್ಮಾತ್ರಸಾಯಕಾ।

ಎಂದಿದೆ. ಇಲ್ಲಿ ಐದು ಪುಷ್ಪಬಾಣಗಳನ್ನು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ತನ್ಮಾತ್ರಗಳೆಂದು ಹೇಳಿದೆ.

ರಾಜರಾಜೇಶ್ವರಿಯ ರೂಪಕಲ್ಪನೆಯಲ್ಲೂ ತತ್ವನಿರ್ಣಯದಲ್ಲೂ ಮನ್ಮಥನ ಮೂರ್ತಿಲಕ್ಷಣ ಅಂತರ್ಗತವಾಗಿದೆ. ಶ್ರೀವಿದ್ಯಾಪ್ರವರ್ತಕರಲ್ಲಿ ಮನ್ಮಥನೂ ಒಬ್ಬ. ಅವನನ್ನು ಕಾಮರಾಜನೆಂದು ಕರೆಯುವುದೂ ಉಂಟು; ರಾಜರಾಜೇಶ್ವರಿಯ

ಮಂತ್ರಗಳಲ್ಲಿ ಕಾಮರಾಜಮಂತ್ರವೂ ಒಂದು. ದೇವಿಯನ್ನು ಕಾಮೇಶಿ, ಕಾಮೇಶ್ವರಿಯೆಂದು ಕರೆಯುವುದೂ ಆಕೆಯ ಪುಂಭಾವವನ್ನು ಕಾಮೇಶ, ಕಾಮೇಶ್ವರ ಎಂದು ಕರೆಯುವುದೂ ಇದೆ. ದೇವಿಯ ಜಾಗ್ರತಪೀಠ, ಕಾಮಕೋಷ್ಠ, ಕಾಮಕೋಟಿವಿದೆ, ಎನಿಸಿಕೊಳ್ಳುತ್ತದೆ. ದೇವಿಯ ರೂಪಗಳಲ್ಲಿ ಕಾಮಾಕ್ಷಿಯೂ ಒಂದು. ಇದರಲ್ಲಿಯೂ ಕಾಮದ ಅಂಶವಿದೆ ಎಂದರೆ ಮನ್ಮಥನ ಪಾತ್ರವಿದೆ. ಗೌಡಪಾದರ ಸುಭಗೋದಯಸ್ತುತಿಯಲ್ಲಿ ಸ್ಮರ, ಮಾರ ಮದನ ಎಂಬ ಮನ್ಮಥನ ಮೂರು ಹೆಸರುಗಳನ್ನು ದೇವಿಯ ತ್ರಿಖಂಡಕ್ಕೆ ಅನ್ವಯಿಸಿರುವುದು ಕಾಣುತ್ತದೆ.

'ಸ್ಮರೋ ಮಾರೋ ಮಾರಃ ಸ್ಮರ ಇತಿ ಸ್ಮರೋ ಮಾರಮದನ-
ಸ್ಮರಾಸಂಗಸ್ಸ್ವೇತಿ ಸ್ಮರಮದನಮಾರಾಃ ಸ್ವರ ಇತಿ ತ್ರಿಖಂಡಃ'

ಕೈಲಾಸಾಶ್ರಮದಲ್ಲಿ ರಾಜರಾಜೇಶ್ವರೀ ರೂಪವನ್ನು ಜ್ಞಾನಾಕ್ಷಿಯೆಂದು ವಿಶ್ಲೇಷಿಸಿದ್ದಾರೆ. ದೇವೀರೂಪಗಳಲ್ಲಿ ಕಾಮಾಕ್ಷಿ (ಕಂಚಿ), ಮೀನಾಕ್ಷಿ (ಮಧುರ), ವಿಶಾಲಾಕ್ಷಿ (ಕಾಶಿ) ಇವು ಪ್ರಸಿದ್ಧವಾಗಿವೆಯಷ್ಟೆ. ನಾಲ್ಕನೆಯದು ಇಲ್ಲಿನ ಜ್ಞಾನಾಕ್ಷಿ. 'ಅಕ್ಷಿ' ಎನ್ನುವ ಸಂಸ್ಕೃತ ಮಾತಿಗೆ ಕಣ್ಣು ಎಂಬ ಸಾಮಾನ್ಯ ಅರ್ಥವಿದ್ದರೂ ಈ ಸಂದರ್ಭದಲ್ಲಿ ಅದನ್ನು ವ್ಯಾಪ್ತಿ ('ಅಕ್ಷೂ ವ್ಯಾಪ್ತೌ)' ಎಂಬರ್ಥದಲ್ಲಿ ಬಳಸಲಾಗಿದೆ. ಕಾಮಾಕ್ಷಿಯಲ್ಲಿ ಕಾಮನ (ಎಂದರೆ ಮನ್ಮಥನ) ಅಂಶ ಹೆಚ್ಚು; ವಿಶಾಲಾಕ್ಷಿ ಎಂಬ ಹೆಸರಿನಲ್ಲಿ ವಿಶಾಲಾ ಎಂಬ ಶಕ್ತಿಪೀಠದ ಧ್ವನಿಯಿದೆ; ಮೀನಾಕ್ಷಿಯಲ್ಲಿ ಮತ್ಸ್ಯಲಾಂಛನರಾದ ಪಾಂಡ್ಯರಾಜರ ಪ್ರಭಾವವಿಧೆ.

ಹಾಗೆಯೇ ಜ್ಞಾನಾಕ್ಷಿ ಎಂಬ ವಿಶೇಷಣದಲ್ಲಿ ಜ್ಞಾನದ ಪಾತ್ರ ವಿಶಿಷ್ಟವಾದುದು. ತಿರುಚಿಸ್ವಾಮಿಗಳು ಜ್ಞಾನದೀಕ್ಷೆಯನ್ನು ಪಡೆದುಕೊಂಡ ತರುವಾಯಿ ಕೈಲಾಸಶಿಖರದಲ್ಲಿ ಕಾಣಿಸಿಕೊಂಡ ರಾಜರಾಜೇಶ್ವರಿಯ ರೂಪವು ಜ್ಞಾನಪ್ರಧಾನವಾಗಿರುವುದು ಸಹಜವೇ. ಅಷ್ಟು ಮಾತ್ರವಲ್ಲದೆ, ಕೈಲಾಸಪೀಠದ ಮೂಲಪುರುಷರಾದ ದೂರ್ವಾಸರೂ ಜ್ಞಾನಕ್ಕೆ ಪ್ರಸಿದ್ಧರಾಗಿದ್ದರು. ಅವರ ಶಕ್ತಿಮಹಿಮ್ನಃ ಸ್ತೋತ್ರದಲ್ಲಿ ಇದನ್ನು ಸ್ಪಷ್ಟವಾಗಿ ಕಾಣಿಸಿದ್ದಾರೆ-

'ದೂರ್ವಾಸಸಾ ವಿದಿತತ್ವ ಮುನೀಶ್ವರೇಣ
ವಿದ್ಯಾಕಲಾಯುವತಿ ಮನ್ಮಥಮೂರ್ತಿನೈತತ್।

'ವಿದಿ'ಯೆಂದರೆ ತಿಳಿವಳಿಕೆ, ಜ್ಞಾನ; ಅದನ್ನೇ ತತ್ವವಾಗಿ (ಎಂದರೆ ಸಾರಸರ್ವಸ್ವವಾಗಿ) ಉಳ್ಳಮುನಿ ದೂರ್ವಾಸರು, ಅವರು ಆರಾಧಿಸಿದ ದೇವಿಯು 'ವಿದ್ಯಾಕಲಾಯುವತಿ' ಹೀಗಿರುವುದರಿಂದ ತಿರುಚಿಸ್ವಾಮಿಗಳು ತಮಗೆ ಒಲಿದ ರಾಜರಾಜೇಶ್ವರೀ ರೂಪವನ್ನು 'ಜ್ಞಾನಾಕ್ಷಿ ರಾಜರಾಜೇಶ್ವರಿ'ಯೆಂದು ನಿರ್ದೇಶಿಸಿದರು. ಲಲಿತಾಸಹಸ್ರನಾಮದಲ್ಲಿ ಬರುವ 'ಜ್ಞಾನದಾ', 'ಜ್ಞಾನವಿಗ್ರಹಾ', 'ಜ್ಞಾನಮುದ್ರಾ', 'ಜ್ಞಾನಗಮ್ಯಾ', 'ಜ್ಞಾನಜ್ಞೇಯಸ್ವರೂಪಿಣೀ ಎಂಬ ಹೆಸರುಗಳನ್ನು ಗಮನಿಸಿದರೆ, ಮತ್ತು ದೇವಿಯು ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಸ್ವರೂಪಳೆಂದು ಬಣ್ಣಿಸುವಾಗ ಜ್ಞಾನಶಕ್ತಿಗಿರುವ ಮೇಲ್ಮೆಯನ್ನು ಪರಿಗಣಿಸಿದರೆ 'ಜ್ಞಾನಾಕ್ಷಿ'ಯೆನ್ನುವ ಮಾತಿನ ಸ್ವಾರಸ್ಯ ತಿಳಿದೀತು.

ಶ್ರೀಚಕ್ರದ ಮಾನಸಪೂಜೆಯಲ್ಲಿಯೂ ಜ್ಞಾನತ್ರಿಪುಟಿಯ ಮೂರು ಘಟಕಗಳಲ್ಲಿ ಜ್ಞಾನವೇ ಅರ್ಘ್ಯ, ಜ್ಞೇಯವಾದುದು ಹವಿಸ್ಸು, ಜ್ಞಾತೃವು ಹೋತೃ. ಭಾವನೋಪನಿಷತ್ತಿನ ಮಾತಿನಲ್ಲಿ ಈ ಮೂರು ಬೇರೆಬೇರೆಯಲ್ಲವೆಂಬ ತಿಳಿವಳಿಕೆಯೇ ಪೂಜೆ-

'ಜ್ಞಾನಮರ್ಘ್ಯಂ ಜ್ಞೇಯಂ ಹವಿಃ ಜ್ಞಾತಾ ಹೋತಾ।
ಜ್ಞಾತೃಜ್ಞಾನಜ್ಞೇಯಾನಾಮಭೇದನಭಾವನಂ ಶ್ರೀಚಕ್ರಪೂಜನಂ॥'

ಬೆಂಗಳೂರು ಕೈಲಾಸಾಶ್ರಮದಲ್ಲಿ ಜ್ಞಾನಾಕ್ಷಿರಾಜರಾಜೇಶ್ವರಿಯ ಆಲಯದಲ್ಲಿ ನಡೆಯುವ ಪೂಜೆ ವೈದಿಕಪುರಸ್ಸರತವಾದ ಶೈವಾಗಮದ ವಿಧಿಯಂತೆ ನಡೆಯುತ್ತದೆ. ದೂರ್ವಾಸ ಪದ್ಧತಿಯಲ್ಲಿ ದೇವಿಯು'ವೇದಾದಿಸ್ತುತಿಗೀಯಮಾನಚರಿತೆ', 'ವೇದಾಂತತಾತ್ಪರ್ಯತಿಕೆ'; ಶ್ರೀಚಕ್ರವು 'ಶ್ರುತಿಮೂಲಕೋಶ'; ಪೂಜೆಯಲ್ಲಿ

'ಯದ್ವೇದೇಷು ಚ ಗೀಯತೇ ಶ್ರುತಿಮುಖಂ
ಮಾತ್ರಾತ್ರಯಾಣಾಮೋಮಿತಿ।
ಶ್ರೀವಿದ್ಯೇ ತವ ರಾಜವಶಕ್ಯ
ತ್ತತ್ ಕಾಮರಾಜಂ ಭಜೇ॥'

ಎಂಬುದು ಕಲ್ಪನೆ. ಇಲ್ಲಿ ತಾಂತ್ರಿಕ ಪ್ರಕ್ರಿಯೆಗಳನ್ನು ಹೆಚ್ಚಾಗಿ ಅವಲಂಬಿಸುವುದಿಲ್ಲ.

ಸ್ವಾಮಿಗಳು 1975ರಲ್ಲಿ ಎರಡು ವಿಭಿನ್ನ ವಿಶ್ವಸ್ತ ಸಮಿತಿಗಳನ್ನು (ಟ್ರಸ್ಟ್) ನಿಯೋಜಿಸಿದರು. ಒಂದು ಕೈಲಾಸಾಶ್ರಮದ ಆಡಳಿತವನ್ನು ನೋಡಿಕೊಳ್ಳಲೆಂದು, ಇನ್ನೊಂದು ಜ್ಞಾನಾಕ್ಷಿರಾಜರಾಜೇಶ್ವರೀ ಆಲಯದ ನಿರ್ವಹಣೆಗೆಂದು. ಮೊದಲನೆಯದು ಆಶ್ರಮದ ವ್ಯವಹಾರಗಳನ್ನು ನೋಡಿಕೊಳ್ಳುತ್ತದೆ; 1960ರಲ್ಲಿ ಏರ್ಪಟ್ಟ ವೇದಪಾಠಶಾಲೆಯೂ, ವಿದ್ಯಾರ್ಥಿನಿಲಯವೂ 1965ರಲ್ಲಿ ಆರಂಭವಾದ ಪ್ರಾಥಮಿಕಶಾಲೆಯೂ 1968ರಲ್ಲಿ ಮೈದಳೆದ ಪ್ರೌಢಶಾಲೆಯೂ, ಸಿಂಹವನವೆಂಬ ವ್ಯವಸಾಯಕ್ಷೇತ್ರವೂ ಇದರ ಆಡಳಿತದಲ್ಲೇ ಇವೆ. ದೇವಾಲಯವು ಸಾರ್ವಜನಿಕರ ಪ್ರಯೋಜನಕ್ಕಾಗಿ; ಅದೇ ಸ್ವತಂತ್ರವಾದ ಸಂಸ್ಥೆ. ಆಶ್ರಮದ ಭಕ್ತರೂ ಭಕ್ತರಲ್ಲದವರೂ ಅಲ್ಲಿ ಸೇವಾದಿಗಳನ್ನೂ ನಡೆಸುವ ಅವಕಾಶವಿದೆ; ಕೈಲಾಸಾಶ್ರಮದ ಅಂಕೆ-ಆಡಳಿತಕ್ಕೆ ಸಂಬಂಧಪಟ್ಟುದಲ್ಲ.

ದೇವಾಲಯದಲ್ಲಿ ಪಂಚಕಾಲಪೂಜೆ ನಡೆಯುತ್ತದೆ. ನಿತ್ಯ ಪೂಜೆಯೊಂದಿಗೆ ನೈಮಿತ್ತಿಕಪೂಜೆಗಳೂ ಕಾಮ್ಯಪೂಜೆಗಳೂ ನಡೆಯುತ್ತವೆ. ಮುಂಜಾನೆ ಆರುಗಂಟೆಗೆ ಮಂಗಳವಾದ್ಯ ಸುಪ್ರಭಾತದೊಂದಿಗೆ ದೇವಾಲಯದ ಮಹಾದ್ವಾರಗಳು ತೆರೆದು, ಕ್ಷೇತ್ರಪಾಲ ಭೈರವನ ಸನ್ನಿಧಿಯಿಂದ ಕುಂಚಿಕೆಗಳನ್ನು (ಕೀಲಿಕೈಗಳನ್ನು) ಪರಿಗ್ರಹಿಸಿ ಗೋಪೂಜೆ, ದ್ವಾರಪೂಜೆಗಳು, ಅಸ್ತ್ರಮಂತ್ರದಿಂದ ದೇವೀಪ್ರಬೋಧ, ಅಭ್ಯುಕ್ಷಣ, ದಂತಧಾವನ, ಜಿಹ್ವಾಶೋಧನ, ಪ್ರಾತರ್ನೈವೇದ್ಯಸಮರ್ಪಣ, ಆರತಿ, ವಿಶ್ವರೂಪದರ್ಶನ, ಅಭಿಷೇಕ, ಅಲಂಕರಣ, ಅರ್ಚನ, ಉಪಚಾರ ಸಮರ್ಪಣ ಮೊದಲಾದ ಪೂಜಾಂಗಗಳು ವಿಧಿವತ್ತಾಗಿ ದಿನವೂ ಜರುಗುತ್ತವೆ.

ಇಲ್ಲಿ ನವರಾತ್ರಿಯು ವಿಶೇಷವಾದ, ಸಂಭ್ರಮಯುಕ್ತವಾದ, ವೈಭವೋಪೇತವಾದ ಸಂದರ್ಭ. ದಿನವೂ ಚಂಡೀಹೋಮ; ವಾಹನೋತ್ಸವಗಳು; ವಿಭಿನ್ನ ಅಲಂಕಾರಗಳು. ಸ್ವಾಮಿಗಳ ಜನ್ಮದಿನ, ಗುರುಪೂರ್ಣಿಮೆ, ಮಕರಸಂಕ್ರಮಣ ಮೊದಲಾದ ವಿಶೇಷದಿನಗಳಲ್ಲೂ ದೇವಿಗೆ ವಿಶೇಷ ಆರಾಧನೆ ಸಲ್ಲುತ್ತದೆ.



ಶ್ರೀ ತಿರುಚಿಸ್ವಾಮಿ

ಪಾದುಕೆಗಳು



SRI KAILASH ASHRAMA MAHA SAMSTHANA
SRI RAJESWARI NAGARA BANGALORE-98
SRI SHIVARATHNA PURI BHAVANA



ಸಂಪ್ರದಾಯದ ಪರಿರಕ್ಷಣೆ

ಭಾರತೀಯ ಸಂಸ್ಕೃತಿಯಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಂಪ್ರದಾಯದ ನೆಲೆ ಶಿಥಿಲವಾಗುತ್ತಿರುವ ಈ ಕಾಲದಲ್ಲಿ ಸಂಪ್ರದಾಯದ ಮೌಲ್ಯಗಳನ್ನು ಸಂರಕ್ಷಿಸಿಕೊಂಡು ಯುಗಧರ್ಮಕ್ಕೆ ಅಳವಡಿಸಿಕೊಳ್ಳುವ ಕರ್ತವ್ಯವಿದೆ. ಜನರಿಗೆ ಮನದಟ್ಟು ಮಾಡಿಕೊಡುವ ಹೊಣೆಯನ್ನು ತಿರುಚಿಸ್ವಾಮಿಗಳು ವಹಿಸಿಕೊಂಡಿದ್ದಾರೆ. ಶ್ರೀಲಂಕದ ಶಿವನಡಿಪಾದದಲ್ಲಿರುವಾಗಲೇ ಅವರ ಬದುಕಿಗೆ ಈ ತಿರುವು ಒದಗಿಬಂದಿತು. ಜನರ ಗಮನವನ್ನು ಧರ್ಮದ ಕಡೆ ತಿರುಗಿಸುವ ಕೆಲಸದಲ್ಲಿ ತೊಡಗಬೇಕೆಂದು ದೇವಿಯೇ ಸಂನ್ಯಾಸಿಯ ರೂಪದಲ್ಲಿ ಬಂದು ಹೇಳಿದಳಷ್ಟೇ? ಈ ಉದ್ದೇಶವನ್ನು ಕೈಗೂಡಿಸಲೆಂದೇ, ಅದಕ್ಕೆ ಸಾಮರ್ಥ್ಯವನ್ನೂ ಅಧಿಕಾರವನ್ನೂ ಪಡೆದುಕೊಳ್ಳಲೆಂದೇ ಅವರು ತೀರ್ಥಯಾತ್ರೆ, ದೇವಯಾತ್ರೆ, ಗುರುಯಾತ್ರೆ, ಕೈಲಾಸಯಾತ್ರೆಗಳನ್ನು ಮಾಡಿದುದು. ಬೆಂಗಳೂರಿಗೆ ಅವರು 1960ರಲ್ಲಿ ಬಂದು, ಇಲ್ಲಿಯೇ ನೆಲೆಸಿ, ತಮ್ಮ ಕಾರ್ಯವನ್ನು ಆರಂಭಿಸಬೇಕೆಂದು ನಿಶ್ಚಯಿಸಿದಾಗ ಸಂಪ್ರದಾಯದ ಸಂರಕ್ಷಣೆಯೇ ಅವರ ಮನಸ್ಸಿನಲ್ಲಿದ್ದುದು.

ಇದಕ್ಕಾಗಿಯೇ ಅವರು ಕೈಲಾಸಾಶ್ರಮವನ್ನು ಸ್ಥಾಪಿಸಿದರು. ನಿತ್ಯಜೀವನದಲ್ಲಿ ಸಾಂಪ್ರದಾಯಿಕ ಮೌಲ್ಯಗಳ ಅರಿವು, ಬಳಕೆ ಹೇಗೆ ಆದೀತೆಂಬುದು ಆಶ್ರಮದ ಮುಂದಿದ್ದ ಸಮಸ್ಯೆ. ತಿರುಚಿಸ್ವಾಮಿಗಳ ಬದುಕೇ ಮಾರ್ಗದರ್ಶಕವಾಗಬಲ್ಲುದು, ಪ್ರೇರಕವಾಗಬಲ್ಲುದು ಎಂಬುದು ದಿಟ. ಆಶ್ರಮದ ಕೇಂದ್ರ ಬಿಂದುವೆ ಅವರು; ಆಶ್ರಮ ಅವರ ಬಾಹ್ಯರೂಪ ಅಷ್ಟೆ. ಅವರ ಇರವು, ಮಾತು, ಉಪದೇಶ, ಚರ್ಯೆ ಇವೆಲ್ಲ

ಕೈಲಾಸಾಶ್ರಮದ ಜೀವಾಳ. ಸ್ವಾಮಿಗಳ ಬದುಕಿನ ಮುಖ್ಯವಿವರಗಳೆಂದರೆ ವೈರಾಗ್ಯ ಮತ್ತು ಸಂಯಮ; ನೀತಿ ಮತ್ತು ಸರಳತೆ; ಜ್ಞಾನ ಮತ್ತು ಭಕ್ತಿ. ಇವೇ ಸಾಂಪ್ರದಾಯಿಕ ಮೌಲ್ಯಗಳು. ಇವನ್ನು ಪ್ರಸಾರಮಾಡುವುದೋ ಆಶ್ರಮದ ಕರ್ತವ್ಯ. ಸಂಸ್ಕಾರಕ್ಕೆ ಒತ್ತಾಸೆಯಾಗಿ ವಿದ್ಯೆ ಇರಬೇಕಲ್ಲವೆ? ಸ್ವಾಮಿಗಳು ವಿದ್ಯಾಪಕ್ಷಪಾತಿಗಳು. ಕಿರಿಯರಿಗೆ ವೇದಾಗಮಗಳಲ್ಲಿ ಶಿಕ್ಷಣವನ್ನು ಒದಗಿಸಲು ಪಾಠಶಾಲೆ, ಗುರುಕುಲಪದ್ಧತಿಯ ಅನ್ವಯ ಆಶ್ರಮದಿಂದ ಸಾಗುತ್ತಲಿವೆ.

ಬರುವ ಯಾತ್ರಿಕರಿಗೆ, ಭಕ್ತರಿಗೆ, ಉತ್ಸುಕರಿಗೆ ಅನ್ನದಾನ, ಉಪಚಾರವ್ಯವಸ್ಥೆ ಇವೂ ಆಶ್ರಮದಲ್ಲಿ ಸಮರ್ಪಕವಾಗಿವೆ. ಈ ವಿವರಗಳನ್ನು ಯೋಗ್ಯ ರೀತಿಯಲ್ಲಿ ಉಚಿತವಾಗಿ ನಿರ್ವಹಿಸಲು ಗೋಶಾಲೆ, ಭೂಮಿ, ಭಂಡಾರ, ಸಿಬ್ಬಂದಿ, ಕಟ್ಟಡ ಇವೂ ಆಶ್ರಮದ ಹೊಣೆಯೇ. ಆಶ್ರಮಕ್ಕೆ ಬಂದವರು ಆಧ್ಯಾತ್ಮಿಕವಾಗಿ ನೆಮ್ಮದಿಯನ್ನೂ ಧರ್ಮಶ್ರದ್ಧೆಯನ್ನು ಗಳಿಸಿಕೊಂಡು ಹೋಗಲು ಏನೆಲ್ಲ ಅಗತ್ಯವೋ ಅದನ್ನೆಲ್ಲ ಮಾಡಬೇಕೆಂದು ಸ್ವಾಮಿಗಳು ಹೇಳುತ್ತಲೆ ಇರುತ್ತಾರೆ.

ಎರಡನೆಯ ಅಂಶವೆಂದರೆ ಭಗವದ್ಭಕ್ತಿ, ಆಲಯಾರ್ಚನೆ, ಸಮಾಯಾಚಾರಗಳು. ಜನರಲ್ಲಿ ಭಕ್ತಿ ಬೆಳೆಯಬೇಕೆಂಬ ಕಾತರ ಸ್ವಾಮಿಗಳಿಗೆ ಮೊದಲಿನಿಂದ ಇದ್ದದ್ದೆ. ಅವರು ಚೆಟ್ಟಿನಾಡಿನಲ್ಲಿ ಪ್ರವಾಸಮಾಡುವಾಗಲೇ ನಮ್ಮ ಸಂಪ್ರದಾಯದಲ್ಲಿ ದೇವಾಲಯಗಳಿರುವ ಮಹತ್ವದ ಪಾತ್ರವನ್ನು ಅರಿತುಕೊಂಡಿದ್ದರು. ಆಲಯ ಸಂಸ್ಕೃತಿಯು ಶುದ್ಧವಾಗಿದ್ದರೆ ಭಾರತೀಯ ಸಂಸ್ಕೃತಿಯು ಉಜ್ವಲವಾದೀತು ಎಂಬುದು ಅವರ ಕಲ್ಪನೆ. ಇದಕ್ಕೆ ನಮ್ಮ ಪ್ರಾಚೀನ ಆಗಮಗಳ ಅರಿವು, ಅನ್ವಯ ನೆರವಾಗುತ್ತವೆ. ಈ ದೃಷ್ಟಿಯಿಂದ ಸ್ವಾಮಿಗಳು ಬೆಂಗಳೂರಿಗೆ ಬಂದಾಗಿನಿಂದಲೂ ಆಲಯ ನಿರ್ಮಾಣದ ಬಯಕೆಯನ್ನು ಹೊಂದಿದ್ದರು. ಭಗವದ್ಭಕ್ತಿಯೇ ಮುಖ್ಯ ತತ್ವ; ಇದನ್ನು ರೂಢಿಸುವುದು ಸಗುಣೋಪಾಸನೆ, ಆಲಯಾರ್ಚನೆ.

ಕೈಲಾಸಾಶ್ರಮದಲ್ಲಿ ಭಗವದಾರಾಧನೆಯು ನಿತ್ಯವೂ ಮೂರು ಕಡೆ ನಡೆಯುತ್ತದೆ. ಸ್ವಾಮಿಗಳ ಕುಟೀರದಲ್ಲೇ, ಸ್ವಾಮಿಗಳು ಭಕ್ತಾದಿಗಳಿಗೆ ದರ್ಶನ ಕೊಡಲು ಕೂಡುವ

ಎಡೆಯಲ್ಲಿಯೇ, ಒಂದು ಪೂಜಾಸ್ಥಾನವಿದೆ. ಸಣ್ಣದೊಂದು ವೇದಿ; ಅದರ ಮೇಲೆ ಪಂಚಾಯತನ, ಎಂದರೆ ಗಣಪತಿ, ಸೂರ್ಯ, ದೇವಿ, ಶಿವ, ವಿಷ್ಣು ಬಿಂಬಗಳು. ಈ ಪಂಚಾಯತನವು ಗಣಪತಿ ಪಂಚಾಯತನ; ಎಂದರೆ ಗಣಪತಿಯೇ ಪ್ರಧಾನ ದೇವತೆ. ಇದು ಆಶ್ರಮದ ಆರಂಭ ದಿನಗಳಿಂದಲೂ ಬಂದ ಪದ್ಧತಿ. 1960ರಲ್ಲಿ ಸ್ವಾಮಿಗಳು ಇಲ್ಲಿಗೆ ಬಂದು, ಆಗ ಅಲ್ಲಿದ್ದ ಸಣ್ಣಮನೆಯನ್ನೇ ತಮ್ಮ ನಿವಾಸ ಸ್ಥಾನವನ್ನಾಗಿ ಮಾಡಿಕೊಂಡಂದಿನಿಂದ ಇಲ್ಲಿ ಪೂಜೆ ನಡೆಯುತ್ತಾ ಬಂದಿದೆ. ಮೊದಲು ಸ್ವಾಮಿಗಳೇ ಪೂಜೆ ಸಲ್ಲಿಸುತ್ತಿದ್ದರು. ಈಗ ಬ್ರಹ್ಮಚಾರಿ ಶಿಷ್ಯರು ಇಲ್ಲಿ ವಾಡಿಕೆಯ ನಿತ್ಯಪೂಜೆಯನ್ನು ನೋಡಿಕೊಳ್ಳುತ್ತಾರೆ.

ಇದು ಮೊದಲನೆಯ ಪೂಜಾಸ್ಥಾನವಾದರೆ ಎರಡನೆಯದು ಕೈಲಾಸಾಶ್ರಮದ ಮುಖ್ಯಕಟ್ಟಡದ ನಡುಮನೆಯಲ್ಲಿರುವ ದೇವ ಸನ್ನಿಧಿ. ಆ ಕೋಣೆಯ ಒಂದು ಭಾಗವನ್ನು ಪೂಜಾಸ್ಥಳವನ್ನಾಗಿ ಮಾಡಿಕೊಂಡಿದ್ದಾರೆ. ಇಲ್ಲಿ ರಾಜರಾಜೇಶ್ವರಿಯ ಚಿತ್ರಪಟ (ಮಧುರೆಯಲ್ಲಿ ಆದುದು) ರಾಜರಾಜೇಶ್ವರಿಯ ಪಂಚಲೋಹ ವಿಗ್ರಹ (ಕಾರೈಕ್ಕುಡಿಯಲ್ಲಿ ಮಾಡಿಸಿದ್ದು) ಎರಡನ್ನೂ ಇರಿಸಿ ನಿತ್ಯಪೂಜೆಯನ್ನು ಅರ್ಚಕರು ನಿರ್ವಹಿಸುತ್ತಾರೆ. ಇದು ಆಶ್ರಮ ವ್ಯವಸ್ಥೆಯಲ್ಲಿ ಎರಡನೆಯದಾಗಿ ತೋರಿಕೊಂಡ ಆರಾಧನಾ ಸ್ಥಾನ; ಕೈಲಾಸಾಶ್ರಮದ ಕಟ್ಟಡ ಕಟ್ಟಿ ಮುಗಿದ ಮೇಲೆ ಇದರ ವ್ಯವಸ್ಥೆಯಾಯಿತು. ಆಗಿನ್ನೂ ದೇವಾಲಯವಿರಲಿಲ್ಲ. ದೇವಾಲಯ ಮಾಡಿಕೊಂಡಮೇಲೂ ಇಲ್ಲಿನ ಪೂಜೆ ಮುಂದುವರಿದಿದೆ. ಈಗಲೂ ನಡೆಯುತ್ತಿದೆ.

ಇದೇ ಕಟ್ಟಡದಲ್ಲಿ ಮತ್ತೊಂದು ಕೋಣೆಯಲ್ಲಿ ಶ್ರೀಚಕ್ರ ಮೇರುವಿನ ಪ್ರತಿಷ್ಠೆ ಆಗಿದೆ. ಇದರ ಪೂಜೆಯನ್ನು ಸ್ವಾಮಿಗಳ ಸಂನ್ಯಾಸಿ ಶಿಷ್ಯರೊಬ್ಬರು ನೋಡಿಕೊಳ್ಳುತ್ತಾರೆ. ಇವರು ದಿನವೂ ಬೆಳಿಗ್ಗೆ ಇಲ್ಲಿ ವಿಧ್ಯುಕ್ತವಾಗಿ, ಸಾಂಗವಾಗಿ ಶ್ರೀಚಕ್ರಪೂಜೆಯನ್ನು ಮಾಡಿ ತೀರ್ಥವನ್ನು ಸ್ವಾಮಿಗಳಿದ್ದಲ್ಲಿಗೆ (ಬಹುಮಟ್ಟಿಗೆ ಅವರ ಕುಟೀರದಲ್ಲಿ) ತೆಗೆದುಕೊಂಡು ಹೋಗಿ ಸಮರ್ಪಿಸುತ್ತಾರೆ.

ಮೂರನೆಯದು ಜ್ಞಾನಾಕ್ಷಿರಾಜರಾಜೇಶ್ವರಿಯ ದೇವಸ್ಥಾನವೇ; 1978ರ ಫೆಬ್ರುವರಿಯಿಂದ ಇಲ್ಲಿನ ಪೂಜೆ ಆರಂಭವಾಗಿದೆ. ಇಲ್ಲಿ ನಿತ್ಯವೂ

ಪಂಚಕಾಲಪೂಜೆಯಲ್ಲದೆ, ಕಾಲಕಾಲಕ್ಕೆ ಉತ್ಸವಗಳು, ಹೋಮ, ಯಾಗ ಮೊದಲಾದ ವಿಧಿಗಳೂ ನಡೆಯುತ್ತವೆ. ವೇದಾಗಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿದ ಈ ಪೂಜೆಯನ್ನು ಪರಿಣತರಾದ ಶೈವಾಗಮ ಅರ್ಚಕರೇ ನಿರ್ವಹಿಸುತ್ತಾರೆ.

ಆಗಮ ಪಂಡಿತರಾದ, ನಿಷ್ಠರಾದ ಅರ್ಚಕರು ವಿರಳವಾಗುತ್ತಿರುವ ಈ ಕಾಲದಲ್ಲಿ ಇವರನ್ನು ಪುರಸ್ಕರಿಸಲು ಸ್ವಾಮಿಗಳು ಎಂದೂ ಸಿದ್ಧರು. ಇಂಥ ಅರ್ಚಕರನ್ನು ತಯಾರುಮಾಡುವ ಹೊಣೆಯನ್ನು ಸ್ವಾಮಿಗಳು 1978ರಿಂದ ಹೊತ್ತುಕೊಂಡಿದ್ದಾರೆ. ಕೈಲಾಸಾಶ್ರಮದಲ್ಲಿ ಶೈವಾಗಮ, ವೈಷ್ಣವಾಗಮ (ಪಾಂಚರಾತ್ರ) ಮತ್ತು ಶಾಕ್ತಾಗಮ ಮೂರು ವಿಭಾಗಗಳಲ್ಲಿ ಬ್ರಹ್ಮಚಾರಿಗಳಿಗೆ ಸೂಕ್ತ ಶಿಕ್ಷಣವನ್ನು ಒದಗಿಸುವ ಶಾಲೆಯಿದೆ. ಅವರಿಗೆ ಪಾಠ ಮಾತ್ರವಲ್ಲದೆ, ದೇವಾಲಯದಲ್ಲಿ ಪ್ರಯೋಗ ಅನುಭವವೂ ದೊರೆಯುವ ಏರ್ಪಾಡಿದೆ. ಇಲ್ಲಿಂದ ತರಬೇತಿ ಪಡೆದ ಅನೇಕ ಅರ್ಚಕರು ದೇಶದ ಬೇರೆ ಬೇರೆ ಕಡೆ ಕೆಲಸಮಾಡುತ್ತಿದ್ದಾರೆ. ಅರ್ಚಕರ ಅಗತ್ಯವನ್ನು ಮನಗಂಡ ಸ್ವಾಮಿಗಳು ಆಗಮ ರಕ್ಷಣೆಯ ಕಡೆ ವಿಶೇಷವಾದ ಗಮನವನ್ನು ಹರಿಸಿದ್ದಾರೆ.

ದೇಶದಲ್ಲಿಯೂ ವಿದೇಶಗಳಲ್ಲಿಯೂ ಹೊಸಗುಡಿಗಳನ್ನು ಕಟ್ಟುವ ಕೆಲಸ ನಡೆಯುತ್ತಲೇ ಇದೆ. ಆಯಾ ಪ್ರದೇಶದ ಜನರಿಗೆ ಇದರ ಅವಶ್ಯಕತೆಯೂ ಇದೆಯೆನ್ನಿ. ಆದರೆ ಗುಡಿಗೂ ಅವುಗಳಿಗೆ ಬರುವ ಭಕ್ತರಿಗೂ ನಡುವೆ ಇರುವ ಸಂಬಂಧ ತೀರಾ ಸ್ಥೂಲವಾದುದ್ದು. ಇದಕ್ಕೆ ಕಾರಣ ಗುಡಿಯ ಅರ್ಚಕರಿಗೆ ಸಂಪ್ರದಾಯದ, ಆಗಮದ ಅರಿವು ಬರುಬರುತ್ತಾ ಕಡಿಮೆಯಾಗುತ್ತಿರುವುದು. ಅರ್ಚನೆಯ ರಹಸ್ಯ, ಕ್ರಮ, ಪ್ರಯೋಜನ ಇವುಗಳ ಬಗ್ಗೆ ಸ್ಪಷ್ಟಮಾಹಿತಿಗಳನ್ನು ನೀಡಬಲ್ಲ ಅರ್ಚಕರಿದ್ದರೆ ಆಲಯ ಸಂಸ್ಕೃತಿ ಸಾರ್ಥವಾಗುತ್ತದೆ. ಕೈಲಾಸಾಶ್ರಮದಲ್ಲಿ ಈ ಕೊರತೆಯನ್ನು ನೀಗಿಸುವ ಪ್ರಯತ್ನ ನಡೆಯುತ್ತಿದೆ.

ವಿದ್ಯಾರ್ಥಿಗಳಾಗಿ ಬರುವ ಬ್ರಹ್ಮಚಾರಿಗಳಿಗೆ ಗುರುಕುಲವನ್ನು ಸ್ವಾಮಿಗಳು ಏರ್ಪಡಿಸಿದ್ದಾರೆ. ಎಳೆಯ ವಯಸ್ಸಿನ ನೂರಾರು ಮಂದಿ ಬ್ರಹ್ಮಚಾರಿಗಳು ಇಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾರೆ. ಸ್ವಾಮಿಗಳು ಇವರಿಗೆಲ್ಲ ಉಚಿತವಾಗಿ ಊಟ, ಬಟ್ಟೆ,

ಶ್ರೀ ಕೈಲಾಸ ಆಶ್ರಮ ಮಹಾಸಂಸ್ಥಾನದ ಶಿಷ್ಯವರ್ಗಕ್ಕೆ ಸೇರಿದ
ಜಗದ್ಗುರು ಶ್ರೀ ಶ್ರೀ ಶ್ರೀ ದಯಾನಂದ ಪುರಿ ಮಹಾಸ್ವಾಮಿಗಳವರು,
ಶ್ರೀ ಹೇಮಕೂಟ ಗಾಯತ್ರಿ ಪೀಠ, ಹಂಪಿ
ಇವರು ಮಹಾಸ್ವಾಮಿಗಳನ್ನು ಬರಮಾಡಿಕೊಳ್ಳುತ್ತಿರುವುದು.

ವಸತಿ, ಶಿಕ್ಷಣ, ಮಾರ್ಗದರ್ಶನಗಳನ್ನು ಒದಗಿಸುವ ಏರ್ಪಾಟು ಮಾಡಿದ್ದಾರೆ. ಹಾಗೆಯೇ ತಮ್ಮಲ್ಲಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದವರಿಗೆ ಯತ್ಯಾಶ್ರಮವನ್ನು ಸಮರ್ಪಕವಾಗಿ ನಿಷ್ಠೆಯಿಂದ ಪಾಲಿಸಲು ಅಗತ್ಯವಾದ ಶಿಕ್ಷಣವನ್ನೂ, ಮಾರ್ಗದರ್ಶನವನ್ನೂ ಸ್ವಾಮಿಗಳು ನೀಡುತ್ತಾರೆ. ಇವರಿಂದ ತಯಾರಾದ ಸಂನ್ಯಾಸಿಗಳು ಕೆಲವರು ಮಠಾಧಿಪತಿಗಳೂ ಆಗಿದ್ದಾರೆ. ಕೋವಿಲೂರು ಮಠದ ರಾಮನಾಥ ಜ್ಞಾನದೇಶಿಕರು, ಏರ್ಪೇಡಿನ ವಿಮಲಾನಂದಸ್ವಾಮಿಗಳು, ಬಾಗಲಕೋಟೆಯ ರಮಾರೂಢಸ್ವಾಮಿಗಳು, ಆದಿಚುಂಚನಗಿರಿ ಮಠದ ಬಾಲಗಂಗಾಧರ ಸ್ವಾಮಿಗಳು, ಗಾಯತ್ರೀ ಪೀಠದ ದಯಾನಂದಪುರಿಗಳು, ಕಾಗಿನೆಲೆ ಪೀಠದ ತಾರಕಾನಂದ ಸ್ವಾಮಿಗಳು ಇವರೆಲ್ಲರೂ ತಿರುಚಿಸ್ವಾಮಿಗಳ ಕರಕಮಲ ಸಂಜಾತರೇ.

ತಮ್ಮ ಧರ್ಮಪ್ರಸಾರಕಾರ್ಯವನ್ನು ನಾಡಿನ ಅನೇಕ ಕಡೆ ಹರಡುವ ಉದ್ದೇಶದಿಂದ ಶಾಖಾಮಠಗಳನ್ನು ಏರ್ಪಡಿಸಿದ್ದಾರೆ; ಈ ಶಾಖಾಮಠಗಳನ್ನೊಳಗೊಂಡು ಕೈಲಾಸಾಶ್ರಮ ಮಹಾಸಂಸ್ಥಾನವಾಗಿದೆ. ಬೆಂಗಳೂರು ನಗರದಲ್ಲೇ ಬ್ರಹ್ಮಾನಂದಾಶ್ರಮವೆಂಬ ಶಾಖಾಮಠವಿದೆ; ಮೈಸೂರಿನಲ್ಲಿ ಶಾಂತಾಶ್ರಮ, ಕೊಡಗಿನಲ್ಲಿ ಶಿವಪುರಿ ಆಶ್ರಮ, ಕಾರೈಕ್ಕುಡಿಯಲ್ಲಿ ತಿರುಚಿಸ್ವಾಮಿ ಸತ್ಸಂಘ, ಕಾವೇರಿ ಪಟ್ಟಣದಲ್ಲಿ ತಪೋವನ, ತಿರುಕುಟ್ರಾಲಂನಲ್ಲಿ ತೋತಾಪುರಿ ಆಶ್ರಮ, ಗದಗಿನ ಹುಲಕೋಟೆಯಲ್ಲಿ ಕೈಲಾಸಾಶ್ರಮ ಇವು ಶಾಖಾಮಠಗಳು; ಉದಕಮಂಡಲ ಮತ್ತು ತಲಕಾವೇರಿಯಲ್ಲೂ ಕೈಲಾಸಾಶ್ರಮದ ಮಠಗಳಿವೆ. ಜ್ಞಾನ ಮತ್ತು ಭಕ್ತಿ ಎರಡನ್ನೂ ಜನರಲ್ಲಿ ಬಿತ್ತರಿಸುವುದು ಈ ಶಾಖಾಮಠಗಳ ಉದ್ದೇಶ.

ಪ್ರಾಚೀನಕಾಲದ ಋಷಿಪರಂಪರೆಯ ಅಗತ್ಯ ನಾಡಿನ ಜನರಿಗುಂಟೆಂಬುದನ್ನು ಗ್ರಹಿಸಿ ಸ್ವಾಮಿಗಳು ಆಗಾಗ ಧಾರ್ಮಿಕ ಮುಖಂಡರನ್ನೆಲ್ಲ ಸೇರಿಸುವುದುಂಟು. ಇಂಥದೊಂದು ಮಹಾಮಂಡಲೇಶ್ವರರ ಸಮ್ಮೇಳನ ಕೈಲಾಸಾಶ್ರಮದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಪಾಲ್ಗೊಂಡ ಮಂಡಲೇಶ್ವರರು ತಿರುಚಿಸ್ವಾಮಿಗಳನ್ನು ಜಗದ್ಗುರುವೆಂದು ಕರೆದು ಗೌರವಿಸಿದರು. ಇದೇ ದೃಷ್ಟಿಯಿಂದ ಅವರು ವಿದೇಶ ಪ್ರವಾಸವನ್ನೂ ಕೈಗೊಂಡಿದ್ದಾರೆ. ಮಲೇಷಿಯಾ, ಸಿಂಗಾಪುರ, ಲಂಡನ್, ರೋಮ್,

ಡೆಟ್ರಾಯ್ಟ್, ಮಿಶಿಗನ್, ಕಾನಡ, ಪಿಟ್ಸ್‌ಬರ್ಗ್, ವಾಶಿಂಗ್ಟನ್, ಶಿಕಾಗೋ, ನ್ಯೂಯಾರ್ಕ್, ಸಾನ್‌ಫ್ರಾನ್ಸಿಸ್ಕೋ, ಲಾಸ್ ಎಂಜಲೀಸ್, ಹವಾಇ, ಒಸಾಕಾ, ಮಿಲಾನ್, ವೆನಿಸ್, ಸ್ವಿಟ್ಸರ್‌ಲ್ಯಾಂಡ್, ಫ್ರಾಂಕ್‌ಫರ್ಟ್, ಹಾಲೆಂಡ್ ಇಲ್ಲೆಲ್ಲ ಸ್ವಾಮಿಗಳು ಸುತ್ತಾಡಿ ಬಂದಿದ್ದಾರೆ. ಹೋದೆಡೆಯಲ್ಲೆಲ್ಲ ಧರ್ಮದ ಮಾತೇ; ಜ್ಞಾನ-ಭಕ್ತಿಗಳ ಅಗತ್ಯವನ್ನೇ ಒತ್ತಿಹೇಳುತ್ತಾರೆ.

ಸ್ವಾಮಿಗಳ ಈ ಬಗೆಯ ಧಮಪ್ರಸಾರಕಾರ್ಯವನ್ನು ನಮ್ಮವರೂ, ಹೊರಗಿನವರೂ ಮೆಚ್ಚಿಕೊಂಡಿದ್ದಾರೆ. ಅವರು ಲಂಡನ್ನಿಗೆ ಹೋಗಿದ್ದಾಗ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ ಇವರನ್ನು ಗೌರವಿಸಿದರು. ವಾಟಿಕಾನ್‌ನಗರದಲ್ಲಿ ಪೋಪ್ ಪಾಲ್ ತಾವೇ ಸ್ವಾಮಿಗಳನ್ನು ಎದುರ್ಗೊಂಡು ಬಹುಕಾಲ ಅವರೊಂದಿಗೆ ಮಾತನಾಡಿದರು. ಧರ್ಮಗಳ ಅಂತರ್ರಾಷ್ಟ್ರೀಯ ಸಮ್ಮೇಳನಗಳಲ್ಲಿಯೂ ಪಾಲ್ಗೊಳ್ಳಲು ಸ್ವಾಮಿಗಳಿಗೆ ಕರೆಬಂದದ್ದಿದೆ. 'ಮತಧರ್ಮಗಳು ಮತ್ತು ಜನರು' ಎಂಬ ಅಂತರ್ರಾಷ್ಟ್ರೀಯ ಸಮ್ಮೇಳನವು 1993ರ ಸೆಪ್ಟೆಂಬರ್‌ನಲ್ಲಿ ಮಿಲಾನ್‌ನಗರದಲ್ಲಿ ಜರುಗಿದಾಗ ಸ್ವಾಮಿಗಳು ಭಾಗವಹಿಸಿ ಜ್ಞಾನ, ಭಕ್ತಿ, ಶ್ರದ್ಧೆಗಳ ವಿಚಾರ ತಿಳಿಯಹೇಳಿದರು.

ಸ್ವಾಮಿಗಳ ಶಿಷ್ಯಕೋಟಿಯಲ್ಲಿ ಮೈಸೂರು, ರಾಮನಾಥಪುರ, ಗೊಂಡಾಲ್, ವಡವಾನ್ (ಗುಜರಾತ್) ಈ ರಾಜ್ಯಗಳ ಅರಸೊತ್ತಿಗೆಯವರು ಸೇರಿದ್ದಾರೆ. ರಾಜಮಹಾರಾಜರೂ ಕೈಲಾಸಾಶ್ರಮಕ್ಕೆ ಬಂದು ಸ್ವಾಮಿಗಳನ್ನು ಸಂದರ್ಶಿಸಿ ಅವರ ಆಶೀರ್ವಾದವನ್ನು ಪಡೆದುಕೊಂಡು ಹೋಗಿರುವುದುಂಟು.

ಸ್ವಾಮಿಗಳನ್ನು ಹತ್ತಿರದಿಂದ ಬಲ್ಲವರಿಗೆ ಅವರು 'ವಿಗ್ರಹವಾನ್ ಧರ್ಮಃ'; ಧರ್ಮವೇ ಮೈವೆತ್ತಿ ಬಂದಂತೆ ಇರುವವರು. ಅವರ ನಡೆ, ನುಡಿ ಎರಡೂ ಧರ್ಮದ ಸ್ವಾರಸ್ಯವನ್ನು ಸ್ಪಷ್ಟವಾಗಿ ತಿಳಿಸಿಕೊಡುತ್ತವೆ. ಆಶ್ರಮದಲ್ಲಿ ಅವರು ತಮ್ಮ ಕುಟೀರದಲ್ಲಿಯೇ ಬಂದವರಿಗೆ ದರ್ಶನ ಕೊಡುತ್ತಾರೆ; ಎತ್ತರವಲ್ಲದ ಕೃಶವೂ ಅಲ್ಲದ ಮೈಕಟ್ಟು. ನರೆಕೂದಲಿನ ಗಡ್ಡ; ಕಟ್ಟದೇ ಇಳಿಬಿಟ್ಟ ತಲೆಗೂದಲು, ದುಂಡುಮುಖ; ಯಾವಾಗಲೂ ಹಸನ್ಮುಖ, ಹಣೆಯಮೇಲೆ ಕುಂಕುಮದ ಲಾಂಛನ, ಉಡುಪು ಸರಳ; ಹತ್ತಿಬಟ್ಟೆಯದು, ಬಿಳಿಬಣ್ಣದ್ದು; ಹೊಲಿಯದೇ ಇರುವ ಅಂತರೀಯ, ಉತ್ತರೀಯ.



ಶ್ರೀ ಕೈಲಾಸ ಆಶ್ರಮ ಮಹಾಸಂಸ್ಥಾನದ ಶಿಷ್ಯವರ್ಗಕ್ಕೆ
ಸೇರಿದ ಜಗದ್ಗುರು ಶ್ರೀ ಶ್ರೀ ಶ್ರೀ ಬೀರೇಂದ್ರ ಕೇಶವ ತಾರಕಾನಂದಪುರಿ
ಮಹಾಸ್ವಾಮಿಗಳು, ಕನಕಪೀಠ, ಕಾಗಿನೆಲೆ

ಬಂದವರನ್ನು ನಸುನಕ್ಕು ಆದರದಿಂದ ಬರಮಾಡಿಕೊಳ್ಳುತ್ತಾರೆ. ನಗುಮೊಗಕ್ಕೆ ಸರಿಯಾಗಿ ಬಲಗೈಯಿಂದ 'ಬಂದು ಕೂಡಿ'ರೆಂದು ಹೇಳುವ ವಿನ್ಯಾಸ. ಬಂದವರು ಕೂತಮೇಲೆ ಕುಶಲಪ್ರಶ್ನೆ. ಮಾತನಾಡುವುದು ಮೆಲ್ಲಗೆ; ದನಿಯೇರಿಸುವುದಿಲ್ಲ. ಮಾತು ಹಿತ, ಮಿತ. ಎಷ್ಟುಬೇಕೋ ಅಷ್ಟೇ. ಮಾತಿನ ವಿಷಯ ಧರ್ಮ, ಆಧ್ಯಾತ್ಮ, ನೀತಿ, ನಡತೆ, ಭಕ್ತಿ, ಆಚಾರ. ರಾಜಕಾರಣದ, ಲೌಕಿಕವಿಷಯಗಳ ಪ್ರಸ್ತಾಪವಿರದು. ಬಂದವರ ತೊಂದರೆಗಳನ್ನು ತಿಳಿದುಕೊಳ್ಳುವ ಕುತೂಹಲವುಂಟು; ಅದಕ್ಕೆ ಪರಿಹಾರವನ್ನು ಸೂಚಿಸುವ ಕಾತರವೂ ಉಂಟು. ಬಯಸಿ ಬಂದವರಿಗೆ ಅವರ ಕೊಡುಗೈ ಸಿದ್ಧವಾದುದೆ. ಮಾತುಕತೆ ಮುಗಿದ ಮೇಲೆ 'ದೇವಾಲಯಕ್ಕೆ ಹೋಗಿಬನ್ನಿ. ಸ್ವಲ್ಪ ಉಪಹಾರವನ್ನು ಹಾಲನ್ನೂ ತೆಗೆದುಕೊಂಡು ಹೋಗಿ' ಎಂದು ತಪ್ಪದೇ ತಿಳಿಸುವರು. ಅವರ ಆಶೀರ್ವಾದ 'ದೇವರು ಒಳ್ಳೆಯದನ್ನು ಮಾಡಲಿ' ಎಂದಷ್ಟೆ.

ಬಂದವರು ಎಷ್ಟೇ ದುಗುಡದಲ್ಲಿರಲಿ, ಸ್ವಾಮಿಗಳನ್ನು ನೋಡಿದೊಡನೆ ನೆಮ್ಮದಿ ಒದಗುತ್ತದೆ. ಯಾವುಯಾವುದೋ ಸಮಸ್ಯೆಗಳು ಬಂದೆರಗಿದವರು ಇವರ ಬಳಿ ಓಡಿಬರುತ್ತಾರೆ; ಇವರ ಮಾತನ್ನು ಕೇಳಿ ಶಾಂತಚಿತ್ತರಾಗಿ ಹಿಂದಿರುಗುತ್ತಾರೆ. ಬಂದವರನ್ನು ಧರ್ಮದೆಡೆಗೆ, ಆಧ್ಯಾತ್ಮದ ಕಡೆಗೆ ತಿರುಗಿಸುವುದೇ ಇವರು ಹಿಡಿದಿರುವ ವ್ರತ. ಭೌತಿಕವಾದ ಸುಖ, ಪ್ರಾಪಂಚಿಕ ಭೋಗ ಇವನ್ನು ನಂಬಿ ಕೆಡಬಾರದೆಂದು ಇವರು ಮತ್ತೆ ಮತ್ತೆ ಮಾಡುವ ಬೋಧೆ. ತಾವು ಆಧ್ಯಾತ್ಮದಲ್ಲಿ ಬೇರೂರಿ ನಿಂತಿರುವುದರಿಂದ ಬಂದವರಿಗೆ ಆಧ್ಯಾತ್ಮದ ರುಚಿ ಹತ್ತಿಸುವುದು ತುಂಬ ಸಹಜವಾದ, ಸುಲಭವಾದ ಕೆಲಸ ಇವರಿಗೆ; ಪ್ರಿಯವಾದುದೂ ಹೌದು.

ಅವರದ್ದೇ ಮತ, ಕಟ್ಟು, ಕಟ್ಟಳೆ, ಪಂಗಡ ಎಂಬುದೇನು ಇರದು. ಬಂದವರು ಯಾವ ಮತದವರು, ಯಾವ ಪಂಗಡದವರು ಎಂಬ ಪರಿವೆಯೂ ಇರದು. ಅವರ ದೃಷ್ಟಿ ಶಾಸ್ತ್ರದೃಷ್ಟಿ, ದರ್ಶನ ಆರ್ಷದರ್ಶನ. ಅವರನ್ನು ನೋಡಿದರೆ ಪ್ರಾಚೀನಕಾಲದಲ್ಲಿದ್ದ ಋಷಿಗಳ ಕಲ್ಪನೆ ಕಣ್ಣಿಗೆ ಕಟ್ಟುತ್ತದೆ, ಮನಸ್ಸಿಗೆ ಮುಟ್ಟುತ್ತದೆ; ಲೋಕ ಹಿತಕ್ಕಾಗಿಯೇ ಬದುಕುತ್ತಿರುವ ದೊಡ್ಡ ಜೀವವೆಂದು ಯಾರಿಗಾದರೂ ಮನದಟ್ಟಾದೀತು. ಅವರ ಉಪದೇಶ ಎಲ್ಲರಿಗೂ ಅಗತ್ಯವಾದುದೇ- ನೀತಿಯನ್ನು

ಬಿಡಬೇಡಿ; ಶೀಲಶುದ್ಧಿಯಿರದೆ ಯಾವ ಸಿದ್ಧಿಯೂ ಆಗದು; ಭಗವದ್ಭಕ್ತಿಯಿಂದಲೇ ಭಗವದನುಗ್ರಹ; ಸಾಧ್ಯವಾದಷ್ಟು ಪರೋಪಕಾರಮಾಡಿ.

ತಾವು ಜ್ಞಾನಮಾರ್ಗವನ್ನೇ ಹಿಡಿದವರಾದರೂ ಭಕ್ತಿಗೆ ತುಂಬಾ ಬೆಲೆಕೊಡುತ್ತಾರೆ. ತಾವು ಮಾನಸಪೂಜೆಯನ್ನು ಮಾಡುವವರಾದರೂ ಆಲಯಾರ್ಚನೆ, ಬಾಹ್ಯಪೂಜೆ ಇವುಗಳ ಪ್ರಯೋಜನವನ್ನು ಒತ್ತಿ ಹೇಳುತ್ತಾರೆ. ಅದ್ವೈತಸಿದ್ಧಿಯನ್ನೆ ಪಡೆದವರಾದರೂ ಶಾಸ್ತ್ರವಿಹಿತವಾದ ಕರ್ಮಗಳ ಆಚರಣೆ ತುಂಬ ಅಗತ್ಯವಾದುದೆನ್ನುತ್ತಾರೆ. ವೈರಾಗ್ಯವೆಂಬುದು ಅವರಿಗೆ ಮೆಚ್ಚುಗೆಯ ವಿಚಾರ; ಅದರ ಪ್ರಸ್ತಾಪವಂತೂ ಪದೇ ಪದೇ ಬರುತ್ತದೆ.

ಇವರು ಮಾಡುವ ಉಪದೇಶವೆಲ್ಲ ಸರಳವಾದ, ನೇರವಾದ ಮಾತುಕತೆಯಲ್ಲೇ. ಇವರು ವೇದಿಕೆಯ ಮೇಲೆ ಪ್ರವಚನಮಾಡುವುದಿಲ್ಲ; ವಾಕ್ಯಾರ್ಥದಲ್ಲಿ ಪಾಲ್ಗೊಳ್ಳುವುದಿಲ್ಲ; ವಾದವಿವಾದಗಳಲ್ಲೆಂದೂ ತೊಡಗುವುದಿಲ್ಲ. ತಮ್ಮ ಅನುಭವವನ್ನು ಹೇಳುತ್ತಾರೆ ಅಷ್ಟೆ. ತಾನಿರುವಂತೆ ಬೇರೆಯವರಿದ್ದರೆ ಸಾಕು ಎಂದು ಅವರ ಎಣಿಕೆ. ಅವರು ಹೇಳುವ ಒಂದೊಂದು ಮಾತು ಪ್ರಾಮಾಣಿಕವಾದುದು, ಅನುಭವಸಿದ್ಧವಾದುದು ಮಾತಿನಲ್ಲಾಗಲಿ, ನಡತೆಯಲ್ಲಾಗಲಿ, ಅವರು ಆಡಂಬರವನ್ನು ಸಹಿಸರು. ಸತ್ಯವಾದುದು ಸರಳವೂ ಹೌದು ಎಂಬುದಕ್ಕೆ ಅವರೇ ಜೀವಂತನಿದರ್ಶನ. ಅವರ ವ್ಯವಹಾರದಲ್ಲಿ ಔದಾರ್ಯ, ಸಹನೆ, ಪ್ರಾಮಾಣಿಕತೆ, ಸರಳತೆ ಇವು ಮೇಲೆದ್ದು ಕಾಣುವ ಗುಣಗಳು.

ಕೈಲಾಸಾಶ್ರಮವು ಈಗ ಮಹಾಸಂಸ್ಥಾನವಾಗಿದೆ; ಆರ್ಥಿಕವಾಗಿ ತುಂಬ ಉನ್ನತಮಟ್ಟದಲ್ಲಿದೆ; ಮಹಾಜನರ ಆದರಕ್ಕೆ ಗೌರವಕ್ಕೆ ಪಾತ್ರವಾಗಿದೆ, ಸಂಪದ್ಭರಿತವಾಗಿದೆ. ಅನೇಕ ಉತ್ತಮ ಕಾರ್ಯಗಳನ್ನು ಹಮ್ಮಿಕೊಂಡಿದೆ; ಹಲವಾರು ಶಾಖಾಮಠಗಳೂ ಉಂಟು. ಜನಜೀವನದಲ್ಲಿ ಈ ಆಶ್ರಮವೂ ಆಲಯವೂ ಪ್ರಸಿದ್ಧವಾಗಿವೆ. ನೂರಾರು ಮಂದಿ ಅಧಿಕಾರಿಗಳು, ಪರಿಚಾರಕರು, ವಿದ್ಯಾರ್ಥಿಗಳು ಆಶ್ರಯದಲ್ಲಿದ್ದಾರೆ. ಇಷ್ಟಾದರೂ ಸ್ವಾಮಿಗಳು ಮಾತ್ರ ನಿರ್ಲಿಪ್ತರಾಗಿದ್ದಾರೆ;

ತಮ್ಮದೆಂಬುದು ಏನೂ ಇರದು ಎಂಬಂತಿದ್ದಾರೆ. ವರ್ಷಕ್ಕೆರಡು ಜೊತೆ ಬಿಳಿಪಂಚೆ, ಅಂಚಿಲ್ಲದ್ದು. ಇಷ್ಟೇ ಅವರ ಸ್ವತ್ತು. ಆಶ್ರಮದ ಅಥವಾ ಆಲಯದ ಯಾವೊಂದು ವಿವರದಲ್ಲೂ ಇವರಿಗೆ ಮಮಕಾರವಿರದು. ತಮ್ಮನ್ನು ಕೇಳಿದಾಗ ತಮಗೆ ತೋಚಿದುದನ್ನು ಹೇಳುತ್ತಾರೆ, ಉಳಿದಂತೆ ಯಾವ ವಿಚಾರಕ್ಕೂ ತಲೆ ಹಾಕಿಕೊಂಡು ಹೋಗುವುದಿಲ್ಲ.

ವೈರಾಗ್ಯವೆಂಬುದು ಬರಿಯ ಬಾಯಿಮಾತಿಗಲ್ಲ; ಆಚರಣೆಗೆ, ಅನುಷ್ಠಾನಕ್ಕೆ ಎಂಬುದನ್ನು ಅವರು ತೋರಿಸಿಕೊಡುತ್ತಿದ್ದಾರೆ. ಊಟದಲ್ಲೂ ತುಂಬ ಮಿತ, ಸಾತ್ವಿಕಾಹಾರ; ಒಪ್ಪೊತ್ತು ಮಾತ್ರ. ಕಾಫಿ, ಚಹಾ ಮುಂತಾದುವನ್ನು ಅವರು ಎಂದೂ ಕುಡಿದೇ ಇಲ್ಲ. ಮಧ್ಯಾಹ್ನವೇಳೆ ಅವರು ಅನ್ನಪೂರ್ಣೆಯ ಹೆಸರನ್ನು ತಳೆದ ಭೋಜನ ಶಾಲೆಗೆ ಹೋಗಿ ಎಲ್ಲರೊಡನೆ ಕೂತು ಊಟಮಾಡುತ್ತಾರೆ. ತಮಗಾಗಿ ಪ್ರತ್ಯೇಕವಾದ ಅಡುಗೆಯನ್ನೇನೂ ಮಾಡಿಸಿಕೊಳ್ಳುವುದಿಲ್ಲ. ಯಾರು ಏನನ್ನು ಕೊಟ್ಟರೂ ಮುಟ್ಟುವುದಿಲ್ಲ. ಹಣಕಾಸಿನ ವ್ಯವಹಾರವಂತೂ ಅವರಿಗೆ ತುಂಬಾ ದೂರವೇ. ಯಾವ ಕೀಲಿ ಕೈಯ್ಯಿಯೂ ಅವರಕೈಯಲ್ಲಿರುವುದಿಲ್ಲ. ಆಶ್ರಮವನ್ನು ನೋಡಿಕೊಳ್ಳುವ ವ್ಯವಸ್ಥೆಯನ್ನು ಮಾಡಿಬಿಟ್ಟಿದ್ದಾರೆ; ಅದರಂತೆ ನಡೆಯುತ್ತದೆ; ತಮ್ಮದೇನೂ ಪಾತ್ರ ಅದರಲ್ಲಿರದು.

ಆದರೆ ಆಶ್ರಮದಲ್ಲಾಗಲೀ ಆಲಯದಲ್ಲಾಗಲೀ ಎಲ್ಲ ನಡೆಯುವುದು ಅವರ ಸುತ್ತಲೇ! ಅವರೇ ಕೇಂದ್ರ ಬಿಂದು. ಅವರಿರುವುದರಿಂದಲೇ ಆಶ್ರಮದ ಕೆಲಸವೆಲ್ಲ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿದೆ. ಆಶ್ರಮದ ಚೈತನ್ಯವೂ ಅವರೇ, ಆಲಯದ ಜಂಗಮ ಮೂರ್ತಿಯೂ ಅವರೇ. ಭಕ್ತರು ಅವರನ್ನು ಸಾಕ್ಷಾತ್ ರಾಜರಾಜೇಶ್ವರಿಯೆಂದೇ ಬಗೆಯುತ್ತಾರೆ. ಆಶ್ರಮದ ಪ್ರಸಿದ್ಧಿಯು ಸಿದ್ಧಿಗಳು ಅವರಿಂದಲೇ. ಸ್ವಾಮಿಗಳಿಗಾದರೋ ಈ ಅರಿವಿರದು; ಎಲ್ಲ ದೇವಿಯ ಸಂಕಲ್ಪ ಎಂದುಬಿಡುತ್ತಾರೆ. ವಾಲ್ಮೀಕಿಗಳು ರಾಮನ ವಿಚಾರವಾಗಿ ಹೇಳಿದ ಮಾತು ಇವರಿಗೆ ಅನ್ವಯಿಸುತ್ತದೆ.

'ವೀರ್ಯವಾನ್, ನ ಚ ಸ್ವೇನ ವೀರ್ಯೇಣ ವಿಸ್ಮಿತಃ।'

ರಾಮನು ವೀರ್ಯವಂತ; ಅವನ ಪರಾಕ್ರಮವನ್ನು ಯಾರರಿಯರು? ಆದರೆ ತಾನು ವೀರ್ಯವಂತನೆಂಬುದು ಅವನಿಗೆ ತಿಳಿದಿಲ್ಲ, ಆದರಿಂದ ಅವನ ತಲೆ ತಿರುಗಿಲ್ಲ. ತಾನು ದೊಡ್ಡವನೆಂದು ಬೀಗುವವನು ದಿಟವಾಗಿ ದೊಡ್ಡವನೆ?

ಕೈಲಾಸಾಶ್ರಮವು ಸ್ವಾಮಿಗಳ ಅಂತರಂಗದ ಅಭಿವ್ಯಕ್ತಿ. ಅವರ ಆಧ್ಯಾತ್ಮಿಕ ಸಾಧನೆಯ ಫಲವಾಗಿ ತೋರಿಕೊಂಡಿರುವ ಸಂಸ್ಥೆ. ಅವರ ಆಶಯಗಳನ್ನು ಒಳಗೊಂಡು ಲೋಕ ಸಂಗ್ರಹಕ್ಕಾಗಿ ಮೈದಳೆದದ್ದು. ಸ್ವಾಮಿಗಳು ಅದರ ಚೇತನವೇ; ಅದರ ಸರ್ವಸ್ವವೂ ಹೌದು. ಆದರೆ ಸ್ವಾಮಿಗಳು ಅದರಲ್ಲಿ ಇದ್ದೂ ಇರದಂತಿದ್ದಾರೆ. ಪುರಂದರದಾಸರ

'ಇರಬೇಕು, ಇರದಿರಬೇಕು'

ಎಂಬ ನುಡಿಗೆ ಇವರು ನಿದರ್ಶನ, ಆದರ್ಶ.

ಶ್ರೀ ತಿರುಚಿಸ್ವಾಮಿ ಸ್ತೋತ್ರಂ

ಶ್ರೀ ಕೈಲಾಸಮಠಾಧೀಶಂ ತಿರುಚಿಸ್ವಾಮಿಯತೀಶ್ವರಂ ।
ಭಾವಾತೀತಂ ಭವಹರಂ ವಂದೇಽಹಂ ಪರಮಂ ಗುರುಂ ॥

ಸಾಧುಪ್ರಿಯಂ ಕೃಪಾಬ್ಧಿಂ ಚ ಶಾಂತಮೂರ್ತಿಂ ತಪೋನಿಧಿಂ ।
ಶಿಷ್ಯಪ್ರಶಿಷ್ಯರೂಪೇಣ ಬೋಧಕಂ ಗುರುಮಾಶ್ರಯೇ ॥

ಸದ್ಗುರುಂ ಸದಯಂ ಸಾಕ್ಷಾತ್ ಸಾನಂದಂ ಸುಂದರಂ ಸದಾ ।
ಸ್ಮರಾಮ್ಯಹಂ ಸುವದನಂ ಸುವಕ್ತಾರಂ ಸುಲೋಚನಂ ॥

ಓಂಕಾರರೂಪಂ ವಂದೇಽಹಂ ಸರ್ವೇಷಾಂ ಸುಖದಾಯಿನಂ ।
ಸಚ್ಚಿದಾನಂದ ಭಾಸ್ವಂತಂ ಸುಶ್ರೀ ತಿರುಚಿಸ್ವಾಮಿನಂ ॥

ಪರಿಪೂರ್ಣಘನಾನಂದಂ ಕರುಣಾರಸಸ್ಯಂದಿನಂ ।
ಸುಪ್ರಸನ್ನಾನನಂ ಧ್ಯಾಯೇ ಕೈಲಾಸಾಶ್ರಮವಾಸಿನಂ ॥

ಸರ್ವಧರ್ಮಾದಿಸ್ಥಿರಾಕಾರಂ ಶ್ವೇತವಸ್ತ್ರಯತೀಶ್ವರಂ ।
ಧ್ಯಾನಯೋಗಸಮಾಧಿಸ್ಥಂ ರಾಜರಾಜೇಶ್ವರೀಪ್ರಭುಂ ॥

ವೇದಧರ್ಮಾದಿ ಪಾಲಂತು ಭವಬಂಧಮಯೌಷಧಂ ।
ಚೋದಯಂತಂ ಸದಾ ಲೋಕಾನ್ ಸರ್ವಭೂತಹಿತಾಯ ವೈ ॥

ಮಹಾದೇವೀಸ್ವರೂಪಾಯಾನಂತಚಿನ್ಮಾತ್ರಮೂರ್ತಯೆ ।
ಸಮದೃಷ್ಟಿಪ್ರಬುದ್ಧಾಯ ಸತ್ಯಭಾವಪ್ರಕಾಶಿನೇ ॥

ಶಿವರತ್ನಪುರೀಶಾಯ ಬ್ರಹ್ಮಾನಂದಸ್ವರೂಪಿಣೇ ।
ನಮೋ ನಮೋ ನಮಸ್ತಸ್ಮೈ ಭಕ್ತಾನುಗ್ರಹಕಾರಿಣೇ ॥

ಅನಾಥಾನ್ ಪರಿಪೃಚ್ಛಂತಿ ಚರಿತಂ ಕುಶಲಂ ಔರಸಾನ್ನಿವ ।
ಚಿತ್ರಮದ್ವೈತರೂಪಸ್ಯ ಚರಿತಂ ಲೋಕಮುಕ್ತಿದಂ ॥

ವಟುಸನ್ಯಾಸದಾತಾರಂ ಸಿದ್ಧವಿದ್ಯಾ ಪ್ರಬೋಧಕಂ ।
ಸ್ತುವೇ ಸುವಿಜ್ಞಾನಚಿನ್ಮುದ್ರಂ ಸುಶ್ರೀ ತಿರುಚಿಸ್ವಾಮಿನಂ ॥

ಪಠತಿ ಇದಮಷ್ಟಕಂ ಯೋ ಶ್ರದ್ಧಯಾ ಭಕ್ತಿಮಾನ್ನರಃ ।
ಆಯುರಾರೋಗ್ಯಮೈಶ್ವರ್ಯಂ ಸಶಾಂತಿಮಧಿಗಚ್ಛತಿ ॥



ಮೈಸೂರಿನ ಕೈಲಾಸಾಶ್ರಮ

ಗೋಣಿಕೊಪ್ಪಲ್‌ನಲ್ಲಿ ಶಿವಪುರಿ ಆಶ್ರಮ



ಹುಲಿಕೋಟೆಯಲ್ಲಿ (ಗದಗ್) ಆಶ್ರಮ



ಕಾರೈಕುಡಿಯಲ್ಲಿ ಆಶ್ರಮ



ತಲಕಾವೇರಿಯಲ್ಲಿ ಆಶ್ರಮ

ಕಾವೇರಿಪಟ್ಟಣಂನಲ್ಲಿ ಆಶ್ರಮ



ಊಟಿಯಲ್ಲಿ ಆಶ್ರಮ

ಕುತ್ರಾಲಂನಲ್ಲಿ ಆಶ್ರಮ

ಪಂಚಮ ಪುಷ್ಪ

ಶ್ರೀ ತಿರುಚಿಸ್ವಾಮಿಗಳು
ಮತ್ತಿತರ ಸ್ವಾಮಿಗಳು ಮತ್ತು ಮಹಿಮಾನ್ವಿತರು

ಕುಟೀರದಲ್ಲಿ ಸ್ವಾಮಿ



ಮಹಾಮಂಡಲೇಶ್ವರರೊಡನೆ ಸ್ವಾಮಿ

ಹೊಳೆನರಸೀಪುರದ ಸಚ್ಚಿದಾನಂದ ಸ್ವಾಮಿಯವರೊಡನೆ ಸ್ವಾಮಿ

ಪೂಜ್ಯ ಶ್ರೀ ಪೋಪ್ ಪಾಲ್‌ರವರೊಂದಿಗೆ ಸ್ವಾಮಿ

ಪೂಜ್ಯ ಶ್ರೀ ಕ್ಯಾಂಟರ್‌ಬರಿ ಆರ್ಚ್‌ಬಿಷಪ್‌ರವರೊಂದಿಗೆ ಸ್ವಾಮಿ

ಪೂಜ್ಯ ಶ್ರೀ ಸ್ವಾಮಿ ಚಿನ್ಮಯಾನಂದರವರೊಡನೆ ಸ್ವಾಮಿ

ಬೆಂಗಳೂರಿನ ಶ್ರೀ ಮಡಿಕೆಸ್ವಾಮಿಯವರೊಂದಿಗೆ ಸ್ವಾಮಿ

ತುಮಕೂರಿನ ಸಿದ್ಧಗಂಗಾ ಮಠಾಧೀಶ್ವರ ಪೂಜ್ಯ ಶ್ರೀ ಶಿವಕುಮಾರ
ಸ್ವಾಮಿಯವರೊಡನೆ ಸ್ವಾಮಿ



ಪೂಜ್ಯ ಶ್ರೀ ದ್ವಾರಕಾ ಶಂಕರಚಾರ್ಯಸ್ವಾಮಿಯವರೊಡನೆ ವೇದಾಂತ ವಿಷಯ
ಮಾತನಾಡುತ್ತಿರುವ ಸ್ವಾಮಿ



ಪೂಜ್ಯ ಶ್ರೀ ಪರಕಾಲಮಠಾಧೀಶ ರಾಜಗುರುರವರೊಡನೆ ದಿವ್ಯಪ್ರಬಂಧದ ಬಗ್ಗೆ
ವಿಚಾರವಿನಿಮಯ ಮಾಡುತ್ತಿರುವ ಸ್ವಾಮಿ

ಟೀ. ನರಸೀಪುರದ ಕುಂಭಮೇಳದಲ್ಲಿ ಸುತ್ತೂರು ಮಠಾಧೀಶ್ವರರೊಡನೆ ಮತ್ತು
ಆದಿಚುಂಚನಗಿರಿಯ ಮಠಾಧೀಶ್ವರರೊಡನೆ ಸ್ವಾಮಿ



ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರೊಡನೆ ಸ್ವಾಮಿ



ಡಾ. ಸುಬ್ಬಲಕ್ಷ್ಮಿಯವರೊಡನೆ ಸ್ವಾಮಿ

ಸತ್ಸಂಗ ಭವನ

ಷಷ್ಠ ಪುಷ್ಪ

ಶ್ರೀ ತಿರುಚಿಸ್ವಾಮಿಗಳ ಶಾಂತಿಯ ಸಂದೇಶ

ಶಾಂತಿಯ ಸಂದೇಶ

1. ಭಾರತದೇಶವು ತನ್ನ ಇತಿಹಾಸದುದ್ದಕ್ಕೂ ಶಾಂತಿಯ ಅಗತ್ಯವನ್ನೂ ಮೌಲ್ಯವನ್ನೂ ಎತ್ತಿ ಹಿಡಿದಿದೆ. ಮಾನವ ಸಂಕುಲದ ವ್ಯವಹಾರದಲ್ಲಿ ಶಾಂತಿಯೇ ಮುಖ್ಯವಾದುದೆಂದು ಎಲ್ಲ ದಾರ್ಶನಿಕರೂ, ಎಲ್ಲ ಸಂತರೂ, ಎಲ್ಲ ಕವಿಗಳೂ, ಒಕ್ಕೊರಲಿನಿಂದ ಸಾರಿದ್ದಾರೆ. ಭಾರತದಲ್ಲೇ ಏನು, ಜಗತ್ತಿನ ಎಲ್ಲೆಡೆಗಳಲ್ಲೂ ಮತಧರ್ಮಗಳು ಶಾಂತಿಯನ್ನೇ ಬೋಧಿಸಿವೆಯಲ್ಲವೆ ? ತತ್ತ್ವವಿಚಾರಕ್ಕೆ, ಆಚಾರಕ್ಕೆ ಸಂಬಂಧಪಟ್ಟಂತೆ ವೈವಿಧ್ಯಗಳು, ವ್ಯತ್ಯಾಸಗಳು, ವಿರೋಧಗಳು ಏನೇ ಇರಲಿ, ಮನುಷ್ಯನಿಗೆ ಅಗತ್ಯವಾಗಿ ಬೇಕಾದುದು ಶಾಂತಿಯೆಂಬುದರಲ್ಲಿ ಯಾವೊಂದು ಭಿನ್ನಾಭಿಪ್ರಾಯವೂ ಇರದು.

2. ಹೀಗಿರುವಾಗ, ಎಲ್ಲ ಮತಧರ್ಮಗಳೂ ಶಾಂತಿಯನ್ನೇ ಮುಖ್ಯವೆಂದು ಸಾರುತ್ತಿರುವಾಗ, ಮನುಷ್ಯರು ಭೂಮಿಯ ಮೇಲೆ ಬಾಳುವಾಗ ಇಷ್ಟೊಂದು ಗೊಂದಲ, ಸಮರ, ಸೆಣಸಾಟಗಳು ಏಕಿವೆಯೆಂದು ಯಾರಾದರೂ ಸಹಜವಾಗಿಯೇ ಅಚ್ಚರಿಪಡಬಹುದು. ಶಾಂತಿಯನ್ನು ಕೆಡಿಸಿ, ಸಣ್ಣ ಪ್ರಮಾಣದಲ್ಲಿಯೋ ದೊಡ್ಡ ಪ್ರಮಾಣದಲ್ಲಿಯೋ ಹಗರಣದಲ್ಲಿ ತೊಡಗದೆ ಇರುವ ರಾಷ್ಟ್ರ ಯಾವುದಾದರೂ ಇದೆಯೆ ? ಸಂತರು, ಧರ್ಮಪ್ರಚಾರಕರು ಕಾಣಿಸಿಕೊಂಡಿದ್ದಾರೆ, ಕಣ್ಮರೆಯಾಗಿದ್ದಾರೆ. ಎಲ್ಲರೂ ಶಾಂತಿಯ ಮಂತ್ರವನ್ನೇ ಜಪಿಸಿದ್ದಾರೆ. ಆದರೆ ಅದರಿಂದ ಏನು ಲಾಭವಾಗಿದೆ ? ಶಾಂತಿಯನ್ನು ಅಚ್ಚಳಿಯದಂತೆ ಉಳಿಸಿಕೊಳ್ಳುವುದಾಗಿದೆಯೆ ?

3. ಭಾರತೀಯ ದರ್ಶನಗಳಲ್ಲೊಂದಾದ ಮೀಮಾಂಸವು - 'ನ ಹಿ ಕದಾಚಿದನೀದೃಶಂ ಜಗತ್' ಎಂದು ಹೇಳಿದೆ. ಈ ಮಾತಿನ ಅರ್ಥ, ನಾವು ಈಗ ಕಾಣುವಂತೆ ಇರುವ

ಜಗತ್ತು ಎಲ್ಲ ಕಾಲದಲ್ಲೂ ಹೀಗೆಯೇ ಇದ್ದಿತು; ಬೇರೆ ಬಗೆಯಾಗಿ ಎಂದೂ ಇರಲಿಲ್ಲ. ಯಾವುದೋ ಕಾಲದಲ್ಲಿ ಜಗತ್ತು ಶಾಂತವಾಗಿ, ಸಮೃದ್ಧವಾಗಿ, ಅಧ್ಯಾತ್ಮಪರವಾಗಿ ಇದ್ದಿತು, ಆದರೆ ಈಗ ಕೆಟ್ಟಿದೆ, ಅಶಾಂತವಾಗಿದೆ, ಕಷ್ಟ ಹೆಚ್ಚಿದೆ, ವಿಷಯ ಸುಖದಲ್ಲೇ ತೊಡಗಿದೆ ಎನ್ನುವುದು ಸರಿಯಲ್ಲ. ಇತಿಹಾಸಕ್ರಮದಲ್ಲಿ ಪುನರಾವರ್ತನೆಯೆನ್ನುವುದು ಇದ್ದದ್ದೇ. ಯಾವ ಕಾಲದಲ್ಲಿ ಯುದ್ಧಗಳು ಇರಲಿಲ್ಲ? ಮನುಷ್ಯನ ಬಾಳುವೆಯಲ್ಲಿ ಹಿಂಸೆ, ದುರಾಸೆ, ಅಸಹನೆ, ಕೋಪ, ಹೆಮ್ಮೆ, ಮತ್ಸರ ಇವೆಲ್ಲ ಎಂದಿಗೂ ಇರುವವೇ. ಕಲಿಯುಗದಲ್ಲೇ ಇವೆಲ್ಲವೂ ಎನ್ನುವಂತಿಲ್ಲ. ರಾಮಾಯಣದ ಕಾಲದಲ್ಲೂ ಇವೆಲ್ಲ ಇದ್ದುವು, ಮಹಾಭಾರತದ ಕಾಲದಲ್ಲೂ ಇದ್ದುವು.

4. ಹೀಗೆಂದ ಮಾತ್ರಕ್ಕೆ ಶಾಂತಿಗಾಗಿ, ಸಮೃದ್ಧಿಗಾಗಿ ಶ್ರಮಿಸುವುದೇ ನಿರರ್ಥಕ ಎಂದರ್ಥವಲ್ಲ. ನಿರಾಶಾವಾದಕ್ಕೆ ಇಲ್ಲಿ ಎಡೆಯಿರದು. ಪ್ರಕೃತಿಯಲ್ಲೇ ನೋಡಿ, ಯಾವುದಾದರೂ ಸಂದರ್ಭ ಕೆಟ್ಟಿತೆಂದರೆ, ಒಡನೆಯೆ ಅದನ್ನು ಸರಿಪಡಿಸುವ ಪ್ರವೃತ್ತಿ ಮೂಡಿಕೊಳ್ಳುತ್ತದೆ; ಸಹಜಸ್ಥಿತಿಯನ್ನು ಮೀರಿ ದೂರ ಸರಿದರೆ, ಮತ್ತೆ ಸಹಜಸ್ಥಿತಿಗೆ ಹಿಂದಿರುಗುವ ಪ್ರಯತ್ನ ಕಾಣಿಸುತ್ತದೆ. ಯುದ್ಧಗಳು ಜರುಗುತ್ತವೆ; ಆದರೆ ಶಾಂತಿಯ ಪ್ರಯತ್ನವಿದ್ದೇ ಇರುತ್ತದೆ. ಕೋಲಾಹಲವಿರುವ ಕಾಲ ಒದಗುತ್ತದೆ; ಕಷ್ಟಗಳು ಬಂದರಡುತ್ತವೆ. ಆದರೆ ನೆಮ್ಮದಿಯ ಕಾಲವೂ ಅದರ ಹಿಂದೆಯೇ ಬರುತ್ತದೆ; ಸುಖವು ಕಷ್ಟವನ್ನನುಸರಿಸಿ ಬರುತ್ತದೆ. ದುರಾಲೋಚನೆ, ಹಿಂಸೆ, ದೌರ್ಜನ್ಯವಿರುತ್ತದೆ; ಸದ್ಬುದ್ಧಿ, ಸಜ್ಜನಿಕೆಗಳೂ ಅಲ್ಲಿಯೇ ಒದಗಿಬರುತ್ತವೆ.

ಆದರೆ ನಾವು ಗಮನಿಸಬೇಕಾದ ಅಂಶವೆಂದರೆ, ದಾರಿ ತಪ್ಪಿದಾಗ, ಸರಿಯಾದ ದಾರಿಯನ್ನು ಹಿಡಿಯಬೇಕೆನ್ನುವ ಬುದ್ಧಿಯಾಗಲಿ ಸಂಕಲ್ಪವಾಗಲಿ ತಾನಾಗಿಯೇ ತಲೆದೋರುವುದಿಲ್ಲ. ಕೆಲವು ವ್ಯಕ್ತಿಗಳ ಶ್ರಮವಿದ್ದೇ ಇರುತ್ತದೆ. ಈಗ ಹಿಡಿದ ದಾರಿ ತಪ್ಪು, ಅದರಿಂದಲೇ ಕಷ್ಟವೊದಗಿದೆ ಎಂದು ತಿಳಿಯಪಡಿಸುವ ಮಹಾತ್ಮನಿರಬೇಕು; ಎಷ್ಟೇ ಎಡರುತೊಡರುಗಳಿದ್ದರೂ ತನ್ನ ಸಂದೇಶವನ್ನು

ಜನರಿಗೆ ಮುಟ್ಟಿಸುವ ಧೈರ್ಯವೂ ಸಾಹಸವೂ ಅವನಿಗಿರಬೇಕು. ಅವನನ್ನು ಅನುಸರಿಸುವ ಸಜ್ಜನರೂ ಶ್ರಮವಹಿಸಬೇಕು. ಹಾಗಾದರೆ ಮಾತ್ರ ಪರಿವರ್ತನೆಯಾದೀತು, ಸುಧಾರಣೆಯಾದೀತು, ಅಭ್ಯುದಯವಾದೀತು. ಅಧರ್ಮ ಹೆಚ್ಚಿದಾಗ, ಸಾಧುಗಳಿಗೆ ತೊಂದರೆಯಾದಾಗ ತಾನು ಕಾಣಿಸಿಕೊಂಡು, ಧರ್ಮವನ್ನು ಕಾಪಾಡಿ, ಸಾಧುಗಳ ಕಷ್ಟವನ್ನು ನೀಗಿಸುವೆನೆಂದು ಭಗವಂತನ ಆಶ್ವಾಸನೆಯೇ ಇದೆಯಲ್ಲವೆ ?

5. ವೈದಿಕಋುಷಿಯು ಕಂಡ ಕನಸಿನಲ್ಲಿ ಎಲ್ಲ ಜೀವಿಗಳೂ ನೆಮ್ಮದಿಯಿಂದಿರುವುದಲ್ಲದೆ, ನಿಸರ್ಗದ ಎಲ್ಲ ಪ್ರವೃತ್ತಿಗಳೂ ಪರಸ್ಪರ ಸಹಕರಿಸಿ ಭಗವತ್ಸಂಕಲ್ಪವನ್ನು ಆಗ ಮಾಡಿಸುವುದಿದೆ. ಶಾಂತಿಯ ಸಂದೇಶದಲ್ಲಿ ಚೇತನ, ಜಡ, ಗಿಡಮರಗಳು, ಪಶುಪಕ್ಷಿಗಳು, ಮನುಷ್ಯರು, ಮೃಗಗಳು ಎಂಬ ಭೇದವೇನಿರದು. ಎಲ್ಲರಿಗೂ, ಎಲ್ಲಕ್ಕೂ ಶಾಂತಿಯ ಅಗತ್ಯವಿದೆ, ನೆಮ್ಮದಿಯ ಪ್ರಯೋಜನವಿದೆ, ಸುಖದ ಅಧಿಕಾರವಿದೆ. ಮನುಷ್ಯನ ಬಾಳುವೆಯಲ್ಲಿ ಚೇತನಾಚೇತನ ಪರಿಸರವೆಲ್ಲ ಸೇರಿಬರುತ್ತದೆ. ಮನುಷ್ಯನು ಇವುಗಳನ್ನು ಕುರಿತಂತೆ ಯಾವ ನಿಲುವನ್ನು ತಳೆಯತ್ತಾನೆಂಬುದು ಕಾರಣವಾಗಿ ಇವನ ಶಾಂತಿಯೋ ಅಶಾಂತಿಯೋ ಸಿದ್ಧವಾಗುತ್ತದೆ.

6. ಭಾರತೀಯ ವಾಙ್ಮಯದ ಪಾರಿಭಾಷಿಕ ಪದಗಳಲ್ಲಿ ಶಾಂತಿಯೆನ್ನುವುದು ವ್ಯಾಪಕವಾದ ಅರ್ಥವುಳ್ಳ ಮಾತು. ಅದರಲ್ಲಿರುವ ಪದಶಕ್ತಿಯೂ ವಿಶಿಷ್ಟವಾದುದು. ವೇದದ ಕಾಲದಿಂದ ಇಂದಿನವರೆಗೂ ನಮ್ಮ ಜನ 'ಶಾಂತಿ'ಯೆನ್ನುವ ಜಪವನ್ನು ಮಾಡುತ್ತಲೆ ಬಂದಿದ್ದಾರೆ. 'ಓಂ ಶಾಂತಿಃ ಶಾಂತಿಃ ಶಾಂತಿಃ' ಎನ್ನುವ ಮಾತುಗಳನ್ನು ಮತ್ತೆ ಮತ್ತೆ ಕೇಳುತ್ತಲೆ ಇರುತ್ತೇವೆ. ಶಾಂತಿಯೆಂದರೆ ಸುಖ, ನೆಮ್ಮದಿ, ಸಂತೋಷದ ಪರಿಸ್ಥಿತಿ. ಅದೊಂದು ನೆಲೆ, ಅದೇನು ದ್ರವ್ಯವಲ್ಲ; ಎಲ್ಲಿಯೋ ಒಂದೆಡೆ ಅಡಗಿಕೊಂಡಿರುವುದಲ್ಲ. ಅದನ್ನು ಪಡೆದುಕೊಳ್ಳುವಾಗ ವಸ್ತುವಿನಿಯಮವೆಂಬುದೂ ಇರದು.

7. ಮೂರು ಬಾರಿ ಶಾಂತಿಯನ್ನು ಪಠಿಸುವುದರ ಉದ್ದೇಶವೇನು ? ತಾತ್ಪರ್ಯವೇನು ? 'ಓಂ ಶಾಂತಿಃ ಶಾಂತಿಃ ಶಾಂತಿಃ' ಎನ್ನುವಾಗ ಮೊದಲು ಬರುವ ಓಂಕಾರವು ಇಡೀ ವೇದವನ್ನು ಸೂಚಿಸುತ್ತದೆ. ಓಂ ಎನ್ನುವುದು ಬ್ರಹ್ಮನಿಗೆ ಇನ್ನೊಂದು ಮಾತು. ಅದರಲ್ಲಿರುವ ಮೂರು ಘಟಕಗಳು ಅಕಾರ ಉಕಾರ ಮಕಾರಗಳು ಋಗ್ವೇದ ಯಜುರ್ವೇದ ಸಾಮವೇದಗಳನ್ನೂ, ಭಗವಂತನ ಸೃಷ್ಟಿ, ಸ್ಥಿತಿ, ಲಯಗಳೆಂಬ ಕೃತ್ಯಗಳನ್ನೂ, ಜಗತ್ತಿನ ಭೂಮಿ, ಅಂತರಿಕ್ಷ, ಆಕಾಶಗಳೆಂಬ ಮೂರು ನೆಲೆಗಳನ್ನೂ ಜಾಗ್ರತ್ ಸ್ವಪ್ನ ಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನೂ, ಬ್ರಹ್ಮನ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳನ್ನೂ ಒಳಗೊಳ್ಳುತ್ತವೆ. ಓಂಕಾರಪೂರ್ವಕವಾಗಿ ಹೇಳುವ ಮಂತ್ರವೇ ಸಾರ್ಥಕವಾಗುತ್ತದೆ, ಬಲವನ್ನು ಹೊಂದಿರುತ್ತದೆ.

ಇನ್ನು ಮೂರು ಶಾಂತಿಗಳಲ್ಲಿ ಮೊದಲನೆಯದು ವ್ಯಕ್ತಿಗತವಾದ ಶಾಂತಿಯನ್ನು ಹೇಳುತ್ತದೆ. ಅದನ್ನು ಆಧ್ಯಾತ್ಮಿಕವೆನ್ನುತ್ತಾರೆ; ಮನುಷ್ಯನ ದೇಹ, ಮನಸ್ಸು ಇವುಗಳಲ್ಲಿರಬೇಕಾದ ಸುಸ್ಥಿತಿ ಇದರ ತಾತ್ಪರ್ಯ. ಎರಡನೆಯದು ಪರಿಸರದಲ್ಲೆಲ್ಲ ಸೇರಿಬರಬೇಕಾದ ನೆಮ್ಮದಿ, ಅನುಕೂಲ ಸ್ಥಿತಿ. ಇದನ್ನು ಆಧಿಭೌತಿಕವೆಂದು ಕರೆಯುತ್ತಾರೆ. ಮೂರನೆಯದು ದೈವಾನುಕೂಲವನ್ನು ಅಪೇಕ್ಷಿಸುವ ನೆಮ್ಮದಿ, ಅದು ಆಧಿದೈವಿಕ. ಅದರ ಮೇಲೆ ಮನುಷ್ಯನ ಹಿಡಿತವೇನಿರದು.

ಈ ಮೂರು ಶಾಂತಿಗಳನ್ನು ಮನುಷ್ಯನು ಅಪೇಕ್ಷಿಸುವುದೇತಕ್ಕೆ ? ಎಂದರೆ ಮನುಷ್ಯನ ತೊಂದರೆಗಳೂ ಈ ಮೂರು ಮೂಲಗಳಿಂದಲೇ ಒದಗಿ ಬರುತ್ತವೆ. ದೇಹದಲ್ಲಿ ರೋಗರುಜಿನಗಳು, ಮನಸ್ಸಿನಲ್ಲಿ ಉದ್ವೇಗ, ವಿಷಾದ, ದುಗುಡ, ಕ್ಷೋಭೆ ಇವುಗಳನ್ನು ನೀಗಿಸಿಕೊಳ್ಳಲು ನಮಗೆ ಬೇಕಾದುದು ಆಧ್ಯಾತ್ಮಿಕ ಶಾಂತಿ. ಪರಿಸರದಿಂದ, ನೆರೆಯವರಿಂದ, ಕ್ರೂರಪ್ರಾಣಿಗಳಿಂದ ಆಗುವ ಕಷ್ಟವನ್ನು ತಡೆಗಟ್ಟಲು ಆಧಿಭೌತಿಕ ಶಾಂತಿ. ಪ್ರಾಕೃತಿಕ ಪ್ರಕೋಪ (ಬಿರುಗಾಳಿ, ಪ್ರವಾಹ, ಸುರಿಮಳೆ, ಭೂಕಂಪ, ಕಾಡುಗಿಚ್ಚು) ದಿಂದಪಾರಾಗಲು ಆಧಿದೈವಿಕ ಶಾಂತಿ.

ಮೊದಲನೆಯದು ವ್ಯಕ್ತಿ ಜೀವನಕ್ಕೆ ಸಂಬಂಧಿಸಿದ್ದು, ಎರಡನೆಯದು ಸಮಾಜದಲ್ಲಿ ಸಹಜವಾದ ತೊಂದರೆಗಳಿಗೆ ಸಂಬಂಧಿಸಿದ್ದು. ಮೂರನೆಯದು ಪರಿಸರಕ್ಕೆ ಪ್ರಕೃತಿಗೆ ಸೇರಿದ್ದು. ಈ ಮೂರು ಬಗೆಯ ಶಾಂತಿಗಳು ಮನುಷ್ಯನಿಗೆ ಎಲ್ಲ ಕಾಲದಲ್ಲೂ ಅಗತ್ಯವಾದುವು.

8. ಮತ್ತೆ ಭಾರತೀಯ ಚಿಂತನೆಯಲ್ಲಿ ಮನುಷ್ಯನಿಗೆ ಬರುವ ಕಷ್ಟಗಳಲ್ಲಿ ಬಹುಮಟ್ಟಿಗೆ ಪ್ರಜ್ಞಾಪರಾಧವೆಂಬುದೇ ಕಾರಣವೆಂದು ಹೇಳಲಾಗುತ್ತದೆ. ನಮಗೆ ತಿಳಿವಳಿಕೆ ಇಲ್ಲದೆ, ವಿಚಾರಮಾಡದೆ, ಯಾವುದೋ ಮೋಹಕ್ಕೊಳಗಾಗಿ ಒಂದು ಕೆಲಸವನ್ನು ಮಾಡಲು ನಿರ್ಧರಿಸುವುದು ಇದು. ನಮ್ಮ ಆರೋಗ್ಯ ಕೆಡುವುದು ಹೇಗೆ ? ನಾವು ಏನನ್ನು ತಿನ್ನಬೇಕು, ಯಾವಾಗ ತಿನ್ನಬೇಕು, ಹೇಗೆ ತಿನ್ನಬೇಕು ಅನ್ನುವ ಅರಿವಿಲ್ಲದೆ ಏನೆಂದರೆ ಅದನ್ನು, ಯಾವಾಗೆಂದರೆ ಆವಾಗ, ಹೇಗೆಂದರೆ ಹಾಗೆ ತಿನ್ನುವುದು ಕಾರಣವಾಗುತ್ತದೆ. ಹೀಗೆಯೇ ನಮ್ಮ ಆಚಾರ, ವ್ಯವಹಾರಗಳಲ್ಲಿಯೂ ಎಚ್ಚರವಿಲ್ಲದೆ, ವಿಚಾರಮಾಡದೆ ಇದ್ದರೆ ತೊಂದರೆಗಳು ಬಂದೊದಗುತ್ತವೆ. ನೆರೆಯವರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬ ತಿಳಿವಳಿಕೆಯಿರದೆ ಜಗಳಗಳು ತೋರಿಕೊಳ್ಳುತ್ತವೆ. ಪ್ರಕೃತಿಯನ್ನು ನಮ್ಮ ದುರಾಸೆಯಿಂದಲೋ ಅಜ್ಞಾನದಿಂದಲೋ ಹಾಳುಮಾಡಿ ಈಗ ಪರಿಸರದ ನೆರವನ್ನು ಕಳೆದುಕೊಳ್ಳುತ್ತಿದ್ದೇವೆ. ನಮ್ಮ ಸಾಮಾಜಿಕ ಗೊಂದಲಗಳೆಲ್ಲ ಈ ಬಗೆಯ ಪ್ರಜ್ಞಾಪರಾಧದಿಂದಲೇ ಹೊರಬಂದಿವೆ.

9. ನಮ್ಮಲ್ಲಿ ವಾಡಿಕೆಯಾಗಿ ಹೇಳಿಕೆಯೊಂದಿದೆ - ಮನುಷ್ಯನಿಗೆ ಸುಖ ಬೇಕು, ಆದರೆ ಸುಖವನ್ನು ಸಾಧಿಸಿಕೊಳ್ಳುವುದರ ಶ್ರಮ ಬೇಡ; ದುಃಖ ಬೇಡ, ಆದರೆ ದುಃಖಕ್ಕೆ ಕಾರಣವಾಗುವುದನ್ನು ಕೈಬಿಡಲಾರ, ಇದು ಮನುಷ್ಯನ ಸಮಸ್ಯೆ. ಧರ್ಮವೇನೆಂಬುದು ತಿಳಿದಿದೆ, ಆದರೆ ಧರ್ಮದಂತೆ ನಡೆಯುವ ಮನಸ್ಸಿಲ್ಲ. ಅಧರ್ಮವೇನೆಂಬುದೂ ತಿಳಿದಿದೆ, ಆದರೆ ಅಧರ್ಮವನ್ನು ಬಿಡುವ ಧೈರ್ಯವಿಲ್ಲ. ತನಗೆ ಇಷ್ಟವಿಲ್ಲದುದನ್ನೇ ಪಡೆದುಕೊಳ್ಳುತ್ತಾನೆ; ತನ್ನಲ್ಲಿರುವುದಕ್ಕೆ, ಅಥವಾ ತಾನು ಪಡೆದುಕೊಂಡಷ್ಟಕ್ಕೆ ತೃಪ್ತಿಯಿಲ್ಲ. ಹೀಗಾಗಿ

ಅವನಿಗೆ ಬಯಕೆಯೂ ತಪ್ಪುವುದಿಲ್ಲ, ಪಡೆದುಕೊಂಡದ್ದರಲ್ಲಿ ಸುಖವೂ ಇಲ್ಲ. ಇದರಿಂದಾಗಿ ಅವನಿಗೆ ದುಗುಡ, ಅಶಾಂತಿ, ಬೇಸರ. ಮನಸ್ಸಿನಲ್ಲಿ ನಿರಾಸೆ, ಕೆಲಸದಲ್ಲಿ ಆತುರ, ಪ್ರವೃತ್ತಿಯಲ್ಲಿ ಹಿಂಸೆ, ಮಾತಿನಲ್ಲಿ ಜೋರು. ಇಂಥ ಮನುಷ್ಯರೇ ಹೆಚ್ಚು ಸಂಖ್ಯೆಯಲ್ಲಿ ಇರುವಾಗ ತಿಕ್ಕಾಟ, ಜಗಳ, ಯುದ್ಧ, ದ್ವೇಷ, ಹಿಂಸೆ ಇವೆಲ್ಲ ಇರದಿರುವುದು ಹೇಗೆ ?

10. ನಮ್ಮ ಭಾವಗಳನ್ನು ನಾವು ನಿಯಂತ್ರಿಸಿಕೊಳ್ಳದಿದ್ದರೆ ಆರಿಸದೆ ಬಿಟ್ಟ ಕಾಡುಕಿಚ್ಚಿನಂತೆ, ಬೇಗನೆ ಹರಡಿಕೊಂಡು ಎಲ್ಲೆಲ್ಲೂ ಉರಿಯುತ್ತದೆ. ವ್ಯಕ್ತಿಗತವಾದ ಭಾವನೆಗಳೇ ಗುಂಪಿನಲ್ಲಿ ಕಾಣಿಸಿಕೊಳ್ಳುವುವು. ಆದ್ದರಿಂದ ನಮ್ಮ ಸಂಸ್ಕೃತಿಯಲ್ಲಿ ವ್ಯಕ್ತಿಗೆ ಒತ್ತು ಹೆಚ್ಚು. ವ್ಯಕ್ತಿಯ ಜೀವನ ನೆಮ್ಮದಿಯಿಂದಿದ್ದರೆ ಸಮುದಾಯದಲ್ಲೂ ಶಾಂತಿ. ವ್ಯಕ್ತಿಯ ಬಾಳು ನೆಲೆಗೆಟ್ಟರೆ ಗುಂಪು ಸರಿಯಾಗಿರುವುದು ಹೇಗೆ ? ಸಮುದಾಯ ಅಥವಾ ಸಮಾಜ ಎನ್ನುವುದು ಹಲವಾರು ವ್ಯಕ್ತಿಗಳು ಕಲೆತ ಸ್ಥಿತಿ. ಅಲ್ಲಿ ಕಲೆಯುವ ವ್ಯಕ್ತಿಗಳು ಒಬ್ಬೊಬ್ಬರೂ ಸರಿಯಾಗಿರದಿದ್ದರೆ, ಸಮಾಜ ಸರಿಯಾಗಿದ್ದೀತೆಂದು ನಿರೀಕ್ಷಿಸಲಾಗದು. ಸಮಾಜದ ಹಗರಣಗಳೆಲ್ಲ ವ್ಯಕ್ತಿಜೀವನದಲ್ಲಿರುವ ಕ್ಲೇಶ, ಒತ್ತಡಗಳ ಮರುಧ್ವನಿಗಳೇ. ತಾನು ನೆಮ್ಮದಿಯಿಂದಿರುವ ವ್ಯಕ್ತಿಯು ಇತರರ ನೆಮ್ಮದಿಯನ್ನೆಂದೂ ಕೆಡಿಸಲಾರ, ಇತರರಿಗೆ ತೊಂದರೆ ಕೊಡುವ ಆಲೋಚನೆಯನ್ನೆಂದೂ ಮಾಡಲಾರ. ತಾನು ದಿಟನಾಗಿ ಸುಖವಾಗಿದ್ದಾಗ ಬೇರೆಯವರೂ ಸುಖವಾಗಿರಲೆಂಬ ಬಯಕೆ ಅವನಿಗೆ ಸಹಜವಾಗಿಯೇ ಬರುತ್ತದೆ.

11. ಆದುದರಿಂದಲೇ ನಮ್ಮ ಸಂತರು, ಸಾಧುಗಳು, ಸತ್ಪುರುಷರು ಅರಿಷಡ್ವರ್ಗಗಳನ್ನು ಗೆದ್ದುಕೊಳ್ಳುವ ಅಗತ್ಯವನ್ನು ನಮಗೆ ತಿಳಿಯಪಡಿಸಿದರು. ನಮ್ಮೊಳಗೇ ನಮ್ಮ ಶತ್ರುಗಳಿದ್ದಾರೆ, ಆರು ಮಂದಿ. ಮಿತಿಮೀರಿದ ಬಯಕೆ (ಕಾಮ), ಸಿಟ್ಟು (ಕ್ರೋಧ), ದುರಾಸೆ (ಲೋಭ); ತಿಳಿವಳಿಕೆಯಿಲ್ಲದಿರುವುದು (ಮೋಹ), ಜೋರು ಜಂಭ (ಮದ) ಮತ್ತು ಬೇರೆಯವರ ಏಳಿಗೆಯನ್ನು

ಸಹಿಸದಿರುವುದು (ಮಾತ್ಸರ್ಯ). ಈ ಆರು ಶತ್ರುಗಳನ್ನು ನಾವು ಗೆದ್ದುಕೊಂಡರೆ ಉಳಿದ ಯಾವುದೇ ಹಗೆಯನ್ನು ಗಣನೆಗೆ ತಂದುಕೊಳ್ಳಬೇಕಾಗಿಲ್ಲ. ಇವನ್ನು ಗೆದ್ದವನೇ ವೀರ, ಜಿನ. ಯೋಗವಿಚಾರವಾಗಿ ನಮ್ಮ ಹಿರಿಯರು ನಡೆಸಿರುವ ಸಂಶೋಧನೆಗಳಿಂದ ಗೊತ್ತಾಗುವುದೇನೆಂದರೆ ನಮ್ಮೆಲ್ಲ ದುಃಖಗಳಿಗೂ ಮೂಲಭೂತವಾಗಿ ಕೆಲವು ಕ್ಲೇಶಗಳಿವೆಯೆಂಬುದು. ಅವಿದ್ಯೆ (ಎಂದರೆ ತಿಳಿವಳಿಕೆಯಿಲ್ಲದಿರುವುದು) ಮೊದಲ ಕ್ಲೇಶ-ತತ್ತ್ವವೆಂದರೇನು, ದಿಟವಾಗಿರುವುದು ಏನು ಎಂಬ ತಿಳಿವಳಿಕೆಯಿಲ್ಲದಿರುವುದು. ಇದರಿಂದ 'ನಾನು', 'ನನ್ನದು' ಎಂಬ ಮಮತೆ ತೋರಿಕೊಳ್ಳುತ್ತದೆ. ಇದನ್ನು 'ಅಸ್ಮಿತಾ' ಎನ್ನುತ್ತಾರೆ. ಮತ್ತೆ ಇದರಿಂದಾಗಿ ವಸ್ತುಗಳ ವಿಚಾರವಾಗಿ ಬಯಕೆ ಬೆಳೆಯುತ್ತದೆ; 'ರಾಗ'. ಬಯಕೆ ಕೈಗೂಡದಿದ್ದಾಗ, ಬಯಸಿದ ವಸ್ತು ದೊರೆಯದಿದ್ದಾಗ ಸಿಟ್ಟು; 'ದ್ವೇಷ'. ಈ ಮೇಲ್ಕಂಡ ಜೀವನದ ವಿವರಗಳ ಮೇಲೆ ಮಿತಿಮೀರಿದ ಅಭಿಮಾನ, ಗೀಳು; 'ಅಭಿನಿವೇಶ'

ಈ ಕ್ಲೇಶಗಳನ್ನು ಕ್ರಮವರಿತು ಕಡಿಮೆ ಮಾಡಿಕೊಂಡು ಸಂಪೂರ್ಣವಾಗಿ ತೊಲಗಿಸುವುದೇ ಸಾಧನೆ. ಮನುಷ್ಯನ ಮೊದಲ ಕರ್ತವ್ಯ ತನ್ನ ಒಳಗಡೆಯಿರುವ ಭಾವನೆಗಳನ್ನು, ಬಯಕೆಗಳನ್ನು, ಚಿಂತನೆಗಳನ್ನು ಶುದ್ಧಿಮಾಡಿಕೊಳ್ಳುವುದು, ಅನಂತರ ಪ್ರಪಂಚದ ಬಗ್ಗೆ ತಾನು ತಳೆಯುವ ಧೋರಣೆಯನ್ನು ಸರಿಪಡಿಸಿಕೊಳ್ಳುವುದು.

12. ದಿಟವಾದ ವೀರನೆಂದರೆ ತನ್ನ ಮೇಲೆ ತಾನು ವಿಜಯವನ್ನು ಸಾಧಿಸಿಕೊಂಡಿರುವಾತನೆ. ಅವನು ಇತರರ ಮೇಲೆ ಒಡೆತನ ಮಾಡುವುದಿಲ್ಲ, ತನ್ನ ಮೇಲೆ ಇತರರು ಒಡೆತನ ಮಾಡುವುದನ್ನು ಸಹಿಸುವುದಿಲ್ಲ. ಪ್ರಪಂಚವನ್ನೆಲ್ಲಾ ಗೆದ್ದು ತನ್ನ ಮೇಲೇ ತನ್ನ ಹಿಡಿತವಿಲ್ಲದಿದ್ದರೆ ಏನು ಪ್ರಯೋಜನ ? ಭೂಮಿಯ ಮೇಲೆ ಮನುಷ್ಯನ ಕಷ್ಟವನ್ನು ನೀಗಿಸುವುದಕ್ಕೆ ಸಂಪತ್ತಾಗಲಿ, ಸೈನ್ಯವಾಗಲಿ, ಅಧಿಕಾರವಾಗಲಿ ನೆರವಾಗಲಾರದು.

ಸಂಯಮವೊಂದೇ ಅದಕ್ಕೆ ದಾರಿ. ಸಂಯಮದಿಂದಲೇ ಶಾಂತಿ ಕಾಣಿಸಿಕೊಳ್ಳುವುದು.

13. ಎಂದ ಮೇಲೆ, ಶಾಂತಿಯೆಂಬ ವಿವರ ನಮ್ಮಲ್ಲಿ ಒಬ್ಬೊಬ್ಬರಲ್ಲೂ ಇರಬೇಕಾದುದು. ಪ್ರತಿಯೊಬ್ಬ ಮನುಷ್ಯನೂ ಅದಕ್ಕಾಗಿ ಶ್ರಮಿಸಬೇಕಾದ ಅಗತ್ಯವಿದೆ. ಸಮಾಜದಲ್ಲಿ, ಸಮುದಾಯದಲ್ಲಿ ಶಾಂತಿ, ಮನೆಯಲ್ಲಿ ಶಾಂತಿ, ನೆರೆಹೊರೆಯಲ್ಲಿ ಶಾಂತಿ, ರಾಷ್ಟ್ರದಲ್ಲಿ ಶಾಂತಿ ಇವೆಲ್ಲ ವ್ಯಕ್ತಿಯನ್ನೇ ಅವಲಂಬಿಸಿವೆ. ವ್ಯಕ್ತಿಯಲ್ಲಿ ಶಾಂತಿಯಿದ್ದರೆ ಇವೆಲ್ಲ ಶಾಂತಿಗಳೂ ಕೈಗೂಡಿಯಾವು. ಸಮಾಜದ ಕಾರ್ಯಕ್ರಮವಾಗಿ ಶಾಂತಿಸ್ಥಾಪನೆ ಎನ್ನುವ ಮಾತಿಗೆ ಅರ್ಥವಿಲ್ಲ. ಮನುಷ್ಯನ ಬಯಕೆ, ಪ್ರಾಮಾಣಿಕತೆ, ಸಂಯಮ, ನೆಮ್ಮದಿ ಇವು ಅಗತ್ಯವಾದ ಪೂರ್ವಸಿದ್ಧತೆಯಾಗಿದ್ದರೇ ಸಮಾಜದ ಕಾರ್ಯಕ್ರಮ ಯಶಸ್ವಿಯಾದೀತು. ಅದಕ್ಕಾಗಿಯೇ ನಮ್ಮ ಹಿರಿಯರು 'ಅಂತರಂಗಶುದ್ಧಿ' ಎಂಬುದರ ಕಡೆಗೇ ಹೆಚ್ಚು ಗಮನಕೊಟ್ಟರು. ಮನಸ್ಸು, ಹೃದಯ ಇವು ಪರಿಶುದ್ಧವಾಗಿದ್ದರೆ ಅದೇ ಅಂತರಂಗಶುದ್ಧಿ, ಸತ್ವಶುದ್ಧಿ. ಅದರ ಪ್ರಭಾವ ಮನುಷ್ಯನ ವ್ಯವಹಾರದ ಮೇಲೂ ಸಮಾಜದ ಪ್ರವೃತ್ತಿಗಳ ಮೇಲೂ ಬಿದ್ದೇ ಬೀಳುತ್ತದೆ.

14. ಪ್ರಪಂಚದ ಮೇಲೆ ಎಲ್ಲರೂ ಎಂದೆಂದಿಗೂ ಎಲ್ಲ ವಿಧಗಳಲ್ಲೂ ಸುಖವಾಗಿರುವ ಸಾಧ್ಯತೆಯಿದೆಯೆ? ಪ್ರಪಂಚ ಆ ರೀತಿಯಾಗಿ ಎಂದಾದರೂ ಕಂಡುಕೊಂಡಿದೆಯೆ? ಬಡತನ, ಆಕ್ರಮಣ, ಹಿಂಸೆ, ದರೋಡೆ, ಲಂಚಕೋರತನ, ಭ್ರಷ್ಟಾಚಾರ, ಅತ್ಯಾಚಾರ ಇವು ಎಂದಾದರೂ ಜಗತ್ತಿನಿಂದ ಮರೆಯಾಗಿವೆಯೇ? ಇವು ಯಾವ ಕಾಲಕ್ಕೂ ಇರುವಂಥವೇ. ಮನುಷ್ಯ ಮಾಡಬೇಕಾದುದೇನು? ಬಡತನ, ಆಕ್ರಮಣ, ಹಿಂಸೆ ಮೊದಲಾದುವನ್ನೆಲ್ಲ ತೊಡೆದುಹಾಕಲು ಹೊರಡುವುದೆ? ಅದಕ್ಕಿಂತ ಅಗತ್ಯವಾಗಿ, ಸಾರ್ಥಕವಾಗಿ ಅವನು ಮಾಡಬಹುದಾದುದು, ಮಾಡಬೇಕಾದುದು ತನ್ನಿಂದ ಈ ದೋಷಗಳನ್ನೆಲ್ಲ ಹೊರದೂಡುವುದು; ಅವುಗಳು ತನ್ನೊಳಗೆ ಬಾರದೆ ಇರುವಂತೆ ತಡೆಗಟ್ಟುವುದು. ನಡೆಯುವಾಗ

ದಾರಿಯಲ್ಲಿ ಕಲ್ಲುಮುಳ್ಳುಗಳಿರುತ್ತವೆ, ಕಸಕಡ್ಡಿ ಇರುತ್ತದೆ, ಹೇಸಿಗೆ ಇರುತ್ತದೆ. ದಾರಿಯನ್ನೆಲ್ಲ ಶುದ್ಧಿಮಾಡಿ, ಅದರ ಮೇಲೆ ಜಮಖಾನೆಯನ್ನು ಹರಡಿ ಅನಂತರ ನಡೆಯುತ್ತೇನೆ ಎನ್ನಬಹುದೆ? ಅದು ಸಾಧ್ಯವಾದೀತೋ? ನಡೆಯುವವನು ತನ್ನ ಕಾಲಿಗೆ ಮಾತ್ರ ಚಪ್ಪಲಿಯನ್ನು ತೊಟ್ಟರೆ ಸಾಕಲ್ಲವೆ? ಕಲ್ಲುಮುಳ್ಳು, ಕಸಕಡ್ಡಿ, ಹೇಸಿಗೆ ಅವನನ್ನೇನು ಮುಟ್ಟಲಾರವು, ಅಲ್ಲವೆ?

ಯೂನೆಸ್ಕೋ ಮಂಡಿಸಿದ "ಯುದ್ಧಗಳೆಲ್ಲ ಮನುಷ್ಯರ ಮನಸ್ಸಿನಲ್ಲಿಯೇ ಮೊದಲಾಗುವುವು; ಶಾಂತಿಯ ಸನ್ನಾಹವೂ ಮನುಷ್ಯರ ಮನಸ್ಸಿನಲ್ಲೇ ಮೂಡಿಬರಬೇಕು" ಎಂಬ ನಿರ್ಣಯ ಸರಿಯಾದುದೇ.

15. ಇದು ಸಾಧ್ಯವಾಗುವುದು ನಾವು ನಮ್ಮ ಗಮನವನ್ನು ನಮ್ಮೊಳಗೆ ಹರಿಸಿದಾಗಲೇ. ಕಠೋಪನಿಷತ್ತಿನಲ್ಲಿ ಮಾತೊಂದು ಬರುತ್ತದೆ. 'ನಮ್ಮ ಇಂದ್ರಿಯಗಳಿರುವುದು ಹೊರಗಣ ವಿಷಯಗಳನ್ನು ನಮಗೆ ತಿಳಿಸಲೆಂದು. ಮನೆಗೆ ಕಿಟಕಿ-ಬಾಗಿಲುಗಳಿದ್ದಂತೆ ಅವು. ಆದುದರಿಂದ ಮನುಷ್ಯ ಹೊರಗೇ ನೋಡುವುದು ಸಹಜವೇ. ಒಳಗೆ ನೋಡುವುದು ಇಂದ್ರಿಯಗಳಿಂದ ಸಾಧ್ಯವಿಲ್ಲವಷ್ಟೆ? ಆದರೆ ಅಲ್ಲೊಬ್ಬ ಇಲ್ಲೊಬ್ಬ ಧೀರನಾದವನು ಹೊರಗಡೆ ನೋಡುವುದನ್ನು ಬಿಟ್ಟು ತನ್ನೊಳಗೇ ನೋಡಿಕೊಳ್ಳುತ್ತಾನೆ. ಆಗ ಅವನು ಅಮೃತತ್ವವನ್ನು ಪಡೆಯುತ್ತಾನೆ" ಬುದ್ಧಿವಂತರಾದವರು ಮಾಡಬೇಕಾದ ಕೆಲಸ ಇದು. ಇಂದ್ರಿಯಗಳನ್ನು ವಿಷಯಗಳಿಂದ ಬಿಡಿಸಿ, ಅವುಗಳ ವೃತ್ತಿಗಳನ್ನು ತಡೆಹಿಡಿದು, ಒಳಗಡೆ ಗಮನವನ್ನು ಹರಿಸುವುದು; ಅಂತಃ ಪ್ರಾವಣ್ಯ. ಹೀಗೆ ಒಳನೋಟದಿಂದ ನಮಗೆ ಕಾಣಿಸಿಕೊಳ್ಳುವ ಆತ್ಮ ನಮ್ಮದಿಯಲ್ಲೇ ಇರುವನು. 'ಶಾಂತೋಽಯಮಾತ್ಮ', ಆತ್ಮನ ಸ್ವಭಾವವೇ ಶಾಂತಿಯದು. ಶಾಂತಿಯೆನ್ನುವುದು ನಮ್ಮ ಬದುಕಿನ ಒಂದು ಬಗೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಅದು ಹೊರಗಣ ವಿವರವಲ್ಲ.

16. ನಮಗೆ ಬಂದೊದಗುವ ತೊಂದರೆಗಳೆಲ್ಲ ಬಹುಮಟ್ಟಿಗೆ ದೇಹ, ಮನಸ್ಸು ಎರಡನ್ನೂ ಕೂಡಿಸಿಕೊಂಡೇ ಇರುತ್ತವೆ. ಆದರೆ ತೊಂದರೆಗೆ ಮೂಲದಲ್ಲಿ, ಮತ್ತು ಸುಲಭವಾಗಿ ಪಕ್ಕಾಗುವುದು ಮನಸ್ಸೇ — ಎಲ್ಲ ತೊಂದರೆಗಳಿಗೂ, ಕಷ್ಟಗಳಿಗೂ ಮನಸ್ಸೇ ಮೂಲ, ಸ್ವರ್ಗವಾಗಲಿ ನರಕವಾಗಲಿ ಮನಸ್ಸಿನಲ್ಲೇ ಇರುವುದು. ನರಕದಲ್ಲಿದ್ದರೂ ಅದನ್ನೆ ಸ್ವರ್ಗವಾಗಿಸಿಕೊಳ್ಳುವುದು ಮನಸ್ಸಿನಿಂದ ಸಾಧ್ಯ; ಸ್ವರ್ಗದಲ್ಲಿದ್ದರೂ ಅದನ್ನು ನರಕವಾಗಿ ಮಾರ್ಪಡಿಸುವುದೂ ಮನಸ್ಸೇ. ಶಾಂತಿಯನ್ನು ಬಯಸುವವರು ಮುಖ್ಯವಾಗಿ ಪರಿಗಣನೆಮಾಡಬೇಕಾದದ್ದು ಮನಸ್ಸನ್ನೇ.

17. ನಮ್ಮ ದೃಢವಾದ ವಿಶ್ವಾಸವೇನೆಂದರೆ, ಜಗತ್ತಿನಲ್ಲಿ ಶಾಂತಿಯು ಸುಭದ್ರವಾಗಿ ಸಮೃದ್ಧವಾಗಿ ನೆಲೆಗೊಳ್ಳಬೇಕೆಂದರೆ ಹೆಚ್ಚು ಸಂಖ್ಯೆಯಲ್ಲಿ ವ್ಯಕ್ತಿಗಳು ಉಪಾಸನೆಯ ಮಾರ್ಗವನ್ನು ಹಿಡಿಯಬೇಕು. ಧರ್ಮದ ದಿಟವಾದ ಆಶಯವನ್ನು ಅರಿತುಕೊಂಡು ಅದರಂತೆ ತಂತಮ್ಮ ಬದುಕನ್ನು ರೂಪಿಸಿಕೊಳ್ಳಬೇಕು. ಧರ್ಮವೆಂದರೆ ಕೇವಲ ಮತಾಚರಣೆ, ಕುರುಡುನಂಬಿಕೆ, ಛಲವಲ್ಲ; ಮತಧರ್ಮಕ್ಕೂ ಧರ್ಮಕ್ಕೂ ವ್ಯತ್ಯಾಸವಿದೆ. ದಿಟವಾದ ಧರ್ಮದಲ್ಲಿ ಜಾತಿ, ಮತ, ಕುಲ, ಗೋತ್ರ ಎಂಬ ಯಾವ ಎಣಿಕೆಯೂ ಇರದು. ಬದುಕುವ ಒಂದು ಬಗೆ ಧರ್ಮ; ನಮ್ಮ ಭಾವನೆಗಳನ್ನೂ ಆಲೋಚನೆಗಳನ್ನೂ ಬಯಕೆಗಳನ್ನೂ ಕ್ರಮವಾಗಿ ಶುದ್ಧಿಮಾಡಿಕೊಳ್ಳುತ್ತ, ಅವನ್ನೆಲ್ಲ ನಮ್ಮೊಳಗೆ ಇರುವ ಭಗವತ್ತತ್ತ್ವದ ಕಡೆಗೆ ಒಯ್ಯುವುದೇ ಧರ್ಮದ ಆಶಯ.

ದೇವಾಲಯ, ಸದಾಚಾರ, ಭಜನೆ, ಉಪಾಸನೆ, ಯಜ್ಞ ಯಾಗ, ವ್ರತ, ನಿಯಮ ಎಲ್ಲದರ ಉದ್ದೇಶವೂ ಇದೇ. ದಿಟವಾಗಿ ಧರ್ಮಿಷ್ಠನಾದವನ ದೇಹವೇ ದೇವಾಲಯ, ಅವನ ಜೀವವೇ ದೇವಾಲಯದಲ್ಲಿ ಪ್ರತಿಷ್ಠೆಗೊಂಡಿರುವ ಪರಮಾತ್ಮ. ಈಗ ಜಗತ್ತಿನಲ್ಲೆಲ್ಲ ಅತ್ಯಗತ್ಯವಾದುದು ಸಾಮಾಜಿಕ ಕ್ರಾಂತಿಯಲ್ಲ, ಆರ್ಥಿಕ ಸುಧಾರಣೆಯಲ್ಲ, ರಾಜಕೀಯ ಸಮನ್ವಯವಲ್ಲ; ಆಧ್ಯಾತ್ಮಿಕವಾದ ಜಾಗೃತಿ, ಧರ್ಮದ ಪುನರುಜ್ಜೀವನ.

18. ಪ್ರತಿಯೊಬ್ಬ ಮನುಷ್ಯನೂ ಜೀವನವೆಂದರೇನು, ಜೀವನದ ಉದ್ದೇಶವೇನು, ಜೀವನದ ಕ್ರಮ ಹೇಗಿರಬೇಕು ಎಂಬದನ್ನು ಅರಿತುಕೊಳ್ಳಬೇಕು. ಇವನ್ನು ತಿಳಿಯದಿದ್ದರೆ ಜೀವನ ಅರ್ಥಪೂರ್ಣವಾಗಲಾರದು; ವ್ಯಕ್ತಿಯು ಸರಿಯಾಗಿ, ಸಾರ್ಥಕವಾಗಿ ಬದುಕುವುದೂ ಸಾಧ್ಯವಾಗದು. ಸರಿಯಾದ ಜೀವನವೆಂದರೆ ಮೂರು ವಿವರಗಳು ಕೂಡಿರಬೇಕು: ನೈತಿಕ, ಭೌತಿಕ ಮತ್ತು ಆಧ್ಯಾತ್ಮಿಕ. ಇವುಗಳನ್ನು ಸಮನಾಗಿ ಕೂಡಿಸಿಕೊಂಡು ಒಂದೊಂದರಲ್ಲೂ ಸಂಯಮ, ಪರಿಶ್ರಮ, ಸಾಧನೆಗಳನ್ನು ಅಳವಡಿಸಿಕೊಂಡರೆ ಜೀವನ ಸಮಗ್ರವೂ ಆದೀತು; ಸಾರ್ಥಕವೂ ಆದೀತು.

ಆದರೆ ಮನುಷ್ಯನ ದೌರ್ಬಲ್ಯವೆಂದರೆ ಸ್ಪಷ್ಟವಾಗಿರುವುದನ್ನು ಬಿಟ್ಟು ಗೂಢವಾದುದನ್ನು ಅರಸುವುದು, ಸತ್ಯದ ಬೆಳಕನ್ನು ಬಿಟ್ಟು ಭ್ರಮೆಯ ನಸುಗತ್ತಲೆಯನ್ನು ಹಿಡಿಯುವುದು. ಜೀವನದಲ್ಲಿ ಯಾವುದಾದರೊಂದು ನಿರ್ದಿಷ್ಟವಾದ ಗುರಿಯಿರಬೇಕು; ಧ್ಯೇಯವಿರಬೇಕು. ಅದನ್ನು ವ್ಯವಸ್ಥಿತವಾಗಿ ಕಟ್ಟುನಿಟ್ಟಾಗಿ ಅಭ್ಯಾಸಮಾಡಿ, ಕರ್ತವ್ಯಗಳನ್ನೆಲ್ಲ ನಿರ್ವಹಿಸಬೇಕು. ಕರ್ತವ್ಯಗಳನ್ನು ಪಾಲಿಸುವುದು ಸಾಧನೆಯಲ್ಲಿ ತುಂಬ ಅವಶ್ಯಕ.

19. ನಮ್ಮ ಇಷ್ಟದೇವತೆಯಾದ ತಾಯಿ, ಜ್ಞಾನಾಕ್ಷಿ ಶ್ರೀ ರಾಜರಾಜೇಶ್ವರಿಯು ನಮ್ಮೆಲ್ಲರ ಹೃದಯದಲ್ಲಿ ಸದ್ಬುದ್ಧಿಯನ್ನೂ ವಿವೇಕವನ್ನೂ ಸತ್ಸಂಕಲ್ಪವನ್ನೂ ಒಡಮೂಡಿಸಿ ನಮ್ಮಲ್ಲಿ ಒಬ್ಬೊಬ್ಬರ ಬದುಕಿನಲ್ಲಿಯೂ ಶಾಂತಿಯು ಒದಗುವಂತೆ ಕರುಣಿಸಲಿ. ಆಗ ಒಬ್ಬೊಬ್ಬರೂ ಸಣ್ಣದೀಪಗಳಾಗಿ ಬೆಳಗುತ್ತ ಇಡೀ ಜಗತ್ತಿನ ಬೆಳಕಾಗಿ ಪರಿಣಮಿಸಿ, ಭೂಮಿಯ ಮೇಲೆ ಶಾಂತಿಯು ಶಾಶ್ವತವಾಗಿ ನೆಲಸುವಂತೆ ಮೂಡುವಂತಾಗಲಿ.

'ಓಂ ಶಾಂತಿಃ ಶಾಂತಿಃ ಶಾಂತಿಃ'

ಸಪ್ತಮ ಪುಷ್ಪ

ಭಾರತದಲ್ಲಿ ಧರ್ಮಸಮನ್ವಯ

ಅಂಬಾ ಶಾಂಭವಿ ಚಂದ್ರಮೌಳಿ

ರಮಲಾ ಅಪರ್ಣಾ ಉಮಾ ಪಾರ್ವತೀ।

ಕಾಳೀ ಹೈಮವತೀ ಶಿವಾ ತ್ರಿನಯನೀ

ಕಾತ್ಯಾಯನೀ ಭೈರವೀ।

ಸಾವಿತ್ರೀ ನವಯೌವನಾ ಶುಭಕರೀ

ಸಾಮ್ರಾಜ್ಯ ಲಕ್ಷ್ಮೀಪ್ರದಾ

ಚಿದ್ರೂಪಾ ಪರದೇವತಾ ಭಗವತೀ

ಶ್ರೀ ರಾಜರಾಜೇಶ್ವರೀ॥

ಅನುಬಂಧ ಎರಡು

ಭಾರತದೇಶದಲ್ಲಿ ಧರ್ಮಸಮನ್ವಯ

ಓಂ ಸಹ ನಾವವತು। ಸಹ ನೌ ಭುನಕ್ತು।
ಸಹ ವೀರ್ಯಂ ಕರವಾವಹೈ।
ತೇಜಸ್ವಿ ನಾವಧೀತಮಸ್ತು। ಮಾ ವಿದ್ವಿಷಾವಹೈ॥
ಓಂ ಶಾಂತಿಃ ಶಾಂತಿಃ ಶಾಂತಿಃ॥

"ಓಂ ನಮ್ಮಿಬ್ಬರನ್ನೂ (ಗುರು, ಶಿಷ್ಯರನ್ನು) (ದೈವವು) ಒಟ್ಟಿಗೆ ಕಾಪಾಡಲಿ; ನಾವಿಬ್ಬರೂ ಒಟ್ಟಿಗೆ ಊಟಮಾಡೋಣ; ನಾವಿಬ್ಬರೂ ಜೊತೆಯಾಗಿಯೇ ಶ್ರಮಿಸೋಣ; ನಾವು ಕಲಿತದ್ದರಿಂದ(ನಾವಿಬ್ಬರೂ) ತೇಜಸ್ಸನ್ನು ಪಡೆಯೋಣ; ನಮ್ಮಿಬ್ಬರ ನಡುವೆ ಹಗೆತನ ಇರುವುದು ಬೇಡ. ಓಂ ಶಾಂತಿ, ಶಾಂತಿ, ಶಾಂತಿ"

ಧರ್ಮವೆನ್ನುವುದು ಮನುಷ್ಯನು ಭಗವಂತನನ್ನು ಸೇರುವ ಒಂದು ಬಗೆ; ಭಗವಂತನಾದರೋ ನಮ್ಮ ಒಡಲಲ್ಲೇ ಇರುವವನು. ಸಂಸಾರದ ಜಂಜಾಟದಿಂದ ಮನುಷ್ಯನನ್ನು ಮೇಲೆತ್ತಿ, ಮನಸ್ಸು ಮತ್ತು ಹೃದಯಗಳ ವ್ಯಾಪಾರದ ಮೇಲು ಹಂತಗಳಲ್ಲಿ ಮನುಷ್ಯನಿಗೆ ಮಾರ್ಗದರ್ಶನ ನೀಡುವುದು ಧರ್ಮದ ಕೆಲಸ. ದಿನನಿತ್ಯದ ಬದುಕು ಮತ್ತು ಪರತತ್ವ ಇವೆರಡನ್ನು ಕೂಡಿಸುವುದು ಧರ್ಮ; ಮನುಷ್ಯನಿಗೆ ಸಹಜವಾಗಿರುವ ದೈವೀಪ್ರಕೃತಿಯು ಚೆನ್ನಾಗಿ ಅಭಿವ್ಯಕ್ತಿಗೊಳ್ಳಲು ಧರ್ಮನೆರವಾಗುತ್ತದೆ.

ಭೂಮಿಯೊಳಗೆ ಬೀಜವೊಂದನ್ನು ಬಿತ್ತುವೆವಲ್ಲವೆ? ಬಿತ್ತಿದ ಬೀಜಕ್ಕೆ ನೀರೆರೆದರೆ ಭೂಮಿ ಮೃದುವಾಗಿ ಸಡಿಲಗೊಳ್ಳುತ್ತದೆ; ಆಗ ಬೀಜ ಮೊಳಕೆಯೊಡೆದು ಮೇಲೆ ಬರುತ್ತದೆ. ಹಾಗೆಯೇ ಧರ್ಮವೂ ಮನುಷ್ಯನಲ್ಲಿ ಸಹಜವಾಗಿರುವ ದೈವೀಸಂಪತ್ತಿನ ಬೀಜವನ್ನು ಬೆಳೆಯಗೊಳಿಸುತ್ತದೆ. ನೀರು ಭೂಮಿಯನ್ನು ಸಡಿಲಗೊಳಿಸುವಂತೆ ಧರ್ಮವೂ ನಮ್ಮ ಪ್ರಾಪಂಚಿಕಪ್ರಸಕ್ತಿಗಳನ್ನು ಸಡಿಲಗೊಳಿಸಿ, ಸಂಸಾರದ ಪಾತಿಯಲ್ಲಿಯೇ ದೈವದ ಕಡೆ ಗಮನವನ್ನು ಹರಿಸುತ್ತದೆ.

ಮನುಷ್ಯನ ಎಲ್ಲ ಪ್ರವೃತ್ತಿಗಳೂ ಪ್ರೌಢವಾದರೆ ಅವನದು ದೈವೀಪ್ರಕೃತಿಯೇ. ಅದು ಸ್ವಭಾವಸಿದ್ಧವಾದುದು. ಆದರೆ ಪ್ರಪಂಚದಲ್ಲಿನ ವ್ಯವಹಾರ ಇದರ ಅಭಿವ್ಯಕ್ತಿಗೆ ಅಡ್ಡಬರುತ್ತದೆ; ಸ್ವರೂಪದ ಮೇಲೆ ಅಜ್ಞಾನ, ರಾಗ, ದ್ವೇಷ, ಮೋಹಗಳ ತೆರೆ ತೋರಿಕೊಳ್ಳುತ್ತದೆ. ಅವನು ತನ್ನ ಮೂಲಸ್ವರೂಪದ ಯೋಗ್ಯತೆಗೆ ತಕ್ಕಂತೆ ಬೆಳೆಯುವುದು ಕುಂಠಿತವಾಗುತ್ತದೆ. ಧರ್ಮವಾದರೋ ಈ ತೆರೆಯನ್ನು ತೆಗೆದುಹಾಕಿ ಮನುಷ್ಯನಲ್ಲಿ ದೈವಿಶಕ್ತಿಯ ಅರಿವು ಮೂಡುವಂತೆ ಮಾಡುತ್ತದೆ; ಅವನು ಭೌತಿಕತೆಯಿಂದ ಆಧ್ಯಾತ್ಮಿಕತೆಗೆ ಬೆಳೆಯಲು ನೆರವಾಗುತ್ತದೆ.

ನಮ್ಮನ್ನು ಹೀಗೆ ಮೇಲಕ್ಕೆ ಒಯ್ಯುವ ಧರ್ಮವೆಂಬ ಪಕ್ಷಿಗೆ ಇರುವ ಎರಡು ರೆಕ್ಕೆಗಳು-ಶ್ರದ್ಧೆ ಮತ್ತು ಪ್ರಾರ್ಥನೆ. ನಮ್ಮ ಪ್ರಾಚೀನ ಮುನಿಗಳು, ಋಷಿಗಳು ತೋರಿಸಿದ ದಾರಿಯಲ್ಲಿ ದೃಢವಾದ ಮತ್ತು ಪ್ರಾಮಾಣಿಕವಾದ ವಿಶ್ವಾಸವೇ ಶ್ರದ್ಧೆ; ಶಾಸ್ತ್ರಗಳು ನಮ್ಮ ಅಭ್ಯುದಯ, ನಿಃಶ್ರೇಯಸ ಎರಡಕ್ಕೂ ನೆರವಾಗುವುವೆಂಬ ಸಂಪೂರ್ಣವಾದ ನಂಬಿಕೆ ಶ್ರದ್ಧೆ. ನಮ್ಮ ತರ್ಕ ನಿರರ್ಥಕವಾದಾಗ, ಯುಕ್ತಿ ಕಾಲುಜಾರಿದಾಗ, ಬುದ್ಧಿಶಕ್ತಿ ಕೆಲಸಕ್ಕೆ ಬಾರದಾದಾಗ ಶ್ರದ್ಧೆ ನೆರವಿಗೆ ಬರುತ್ತದೆ. ನಮ್ಮ ಸಂಶಯಗಳು, ಅಪನಂಬಿಕೆಗಳು, ಬಯಕೆಗಳು ನಮ್ಮನ್ನು ಮುತ್ತಿಕೊಂಡಾಗ, ಹೊರಗೆ ಹೋಗುವ ಬಾಗಿಲು ಈ ಶ್ರದ್ಧೆ. ಈ ಬಾಗಿಲು ತೆರೆದುಕೊಳ್ಳುವುದು ಸಂಶಯಗಳು, ಬಯಕೆಗಳು ದುರ್ಬಲವಾದಾಗಲೇ. ಈಗ ಕಾಣುವುದಕ್ಕಿಂತ ಮಿಗಿಲಾದುದು ಇನ್ನೊಂದು ಇದೆ ಎಂಬ ಅನಿಸಿಕೆ ಮೂಡಿಕೊಂಡಾಗ ಶ್ರದ್ಧೆಯ ಕದ ತೆರೆಯುತ್ತದೆ. ನಿತ್ಯಜೀವನದ ಸತ್ಯವೇ ಸತ್ಯ, ಉಳಿದುದೆಲ್ಲ ಭ್ರಮೆಯೆಂದುಕೊಂಡರೆ ಶ್ರದ್ಧೆ ನೆರವನ್ನು ನೀಡಲಾರದು.

ಧರ್ಮದ ಪಕ್ಷಿಯ ಶ್ರದ್ಧೆಯೆಂಬ ರೆಕ್ಕೆ ತೆರೆದುಕೊಂಡಿತೆಂದರೆ ಪ್ರಾರ್ಥನೆಯೆಂಬ ಇನ್ನೊಂದು ರೆಕ್ಕೆಯೂ ಬಿಡಿದುಕೊಳ್ಳಲಾರಂಭಿಸುತ್ತದೆ. ಹಾರುವಾಗ ಎರಡೂ ರೆಕ್ಕೆಗಳಿರಬೇಕಲ್ಲವೆ? ಪ್ರಾರ್ಥನೆಯಿಂದ ನಾವು ಕಾಣದ ಆದರೆ ಮಿಗಿಲಾದ ನೆಲೆಯತ್ತ ಹಾರಲುಪಕ್ರಮಿಸುತ್ತೇವೆ. ಮೇಲೆ ಹಾರುವುದು ಎಂಬುದು ಕವಿ ಸಮಯದಂತೆ. ದಿಟವಾಗಿ ನಾವು ನಮ್ಮೊಳಗೇ ಆಳಕ್ಕೆ ಇಳಿಯುವೆವು. ಎಲ್ಲೆಲ್ಲೂ ಇರುವ ದೈವ ನಮ್ಮೊಳಗೂ ಇದೆ, ನಮ್ಮ ಹೊರಗೂ ಇದೆ. ನಮ್ಮ ಒಳಗಣ ನೆಲೆಗೆ ಸರಿದು ಅಲ್ಲಿರುವ ದೈವದೊಂದಿಗೆ ನಂಟನ್ನು ಪಡೆದುಕೊಳ್ಳುವ ಅತ್ಯುತ್ತಮ, ಅತಿಸಮರ್ಥ ಉಪಾಯವೆಂದರೆ ಪ್ರಾರ್ಥನೆಯೇ.

ಶ್ರದ್ಧೆ ಮತ್ತು ಪ್ರಾರ್ಥನೆ ಇವೆರಡೂ ಪರಸ್ಪರ ಸಹಕಾರಿ ವಿವರಗಳು. ಹಕ್ಕಿಯ ಎರಡು ರೆಕ್ಕೆಗಳಿದ್ದಂತೆ ಅವೂ ಉಪಕಾರ್ಯೋಪಕಾರಕ ಸಂಬಂಧದಲ್ಲಿರುತ್ತವೆ; ಒಂದಕ್ಕೆ ಇನ್ನೊಂದು ನೆರವಾಗುತ್ತದೆ, ಪೂರಕವಾಗುತ್ತದೆ, ಪ್ರೇರಕವಾಗುತ್ತದೆ. ಶ್ರದ್ಧೆ, ಪ್ರಾರ್ಥನೆಗಳೆರಡೂ ಒಟ್ಟಿಗೆ ಕೆಲಸಮಾಡತೊಡಗಿದರೆ ಅದನ್ನೆ ನಾವು ಧರ್ಮವೆನ್ನುವುದು. ನಮ್ಮನ್ನು ಬೀಳದಂತೆ ಎತ್ತಿ ಹಿಡಿಯುವುದು ಧರ್ಮದ ಮೂಲಾರ್ಥ(ಧಾರಣೆ). ನಮಗೆ ಆಸರೆಯನ್ನು, ಊರುಗೋಲನ್ನು ಒದಗಿಸಿಕೊಟ್ಟು ಬದುಕನ್ನು ಸಾರ್ಥಕವನ್ನಾಗಿ ಮಾಡುತ್ತದೆ ಅದು. ಇಲ್ಲಿ ನೆಮ್ಮದಿ, ಇಲ್ಲಿಂದ ಮುಂದೆ ಸಾಗುವಾಗ ಭರವಸೆ ಎರಡನ್ನೂ ಧರ್ಮ ನೀಡಬಲ್ಲುದು. ಕಾಲು ದುರ್ಬಲವಾಗಿರುವಾಗ, ನೆಲ ಜಾರಿಕೆಯಾದಾಗ ಊರುಗೋಲು ಬೇಕಷ್ಟೆ; ನಿಲ್ಲಲೂ ನಡೆಯಲೂ ಅದೇ ಆಸರೆ. ಧರ್ಮವೆನ್ನುವುದು ಈ ಬಗೆಯ ಊರುಗೋಲು. ನಾವೆಲ್ಲರೂ ದಿಟವಾದ ಅರ್ಥದಲ್ಲಿ ನಮ್ಮ ಕಾಲ ಮೇಲೆ ನಾವು ನಿಲ್ಲಲಾರೆವು; ಮುಂದಕ್ಕೆ ನಾವೇ ಅಡಿಯಿಡಲಾರೆವು. ಧರ್ಮದ ಆಗತ್ಯ ನಮಗಿದೆ. ಆದರಿಂದ ನಾವು ಬಲಗೊಳ್ಳುತ್ತೇವೆ; ನಮ್ಮ ಪ್ರಯತ್ನಗಳು ಸಫಲವಾಗುತ್ತವೆ.

ಮನುಷ್ಯನಿಗೆ ಧರ್ಮ ಬೇಕಾಗಿರುವದು ಹೀಗೆ. ಮನುಷ್ಯನಾದರೋ ದೇಶ, ಭಾಷೆ, ಜನಾಂಗ, ಜಾತಿ, ಸಂಸ್ಕೃತಿ, ಮತ ಮುಂತಾದ ಹಲವು ವಿವರಗಳಿಂದ ಬದ್ಧನಾಗಿದ್ದಾನೆ. ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲೂ ವ್ಯವಹಾರದಲ್ಲೂ ಈ ಕಟ್ಟುಪಾಡು ಇರುತ್ತದೆ;

ಧರ್ಮದ ಪಕ್ಷಿಯ ಶ್ರದ್ಧೆಯೆಂಬ ರೆಕ್ಕೆ ತೆರೆದುಕೊಂಡಿತೆಂದರೆ ಪ್ರಾರ್ಥನೆಯೆಂಬ ಇನ್ನೊಂದು ರೆಕ್ಕೆಯೂ ಬಿಡಿದುಕೊಳ್ಳಲಾರಂಭಿಸುತ್ತದೆ. ಹಾರುವಾಗ ಎರಡೂ ರೆಕ್ಕೆಗಳಿರಬೇಕಲ್ಲವೆ? ಪ್ರಾರ್ಥನೆಯಿಂದ ನಾವು ಕಾಣದ ಆದರೆ ಮಿಗಿಲಾದ ನೆಲೆಯತ್ತ ಹಾರಲುಪಕ್ರಮಿಸುತ್ತೇವೆ. ಮೇಲೆ ಹಾರುವುದು ಎಂಬುದು ಕವಿ ಸಮಯದಂತೆ. ದಿಟವಾಗಿ ನಾವು ನಮ್ಮೊಳಗೇ ಆಳಕ್ಕೆ ಇಳಿಯುವೆವು. ಎಲ್ಲೆಲ್ಲೂ ಇರುವ ದೈವ ನಮ್ಮೊಳಗೂ ಇದೆ, ನಮ್ಮ ಹೊರಗೂ ಇದೆ. ನಮ್ಮ ಒಳಗಣ ನೆಲೆಗೆ ಸರಿದು ಅಲ್ಲಿರುವ ದೈವದೊಂದಿಗೆ ನಂಟನ್ನು ಪಡೆದುಕೊಳ್ಳುವ ಅತ್ಯುತ್ತಮ, ಅತಿಸಮರ್ಥ ಉಪಾಯವೆಂದರೆ ಪ್ರಾರ್ಥನೆಯೇ.

ಶ್ರದ್ಧೆ ಮತ್ತು ಪ್ರಾರ್ಥನೆ ಇವೆರಡೂ ಪರಸ್ಪರ ಸಹಕಾರಿ ವಿವರಗಳು. ಹಕ್ಕಿಯ ಎರಡು ರೆಕ್ಕೆಗಳಿದ್ದಂತೆ ಅವೂ ಉಪಕಾರ್ಯೋಪಕಾರಕ ಸಂಬಂಧದಲ್ಲಿರುತ್ತವೆ; ಒಂದಕ್ಕೆ ಇನ್ನೊಂದು ನೆರವಾಗುತ್ತದೆ, ಪೂರಕವಾಗುತ್ತದೆ, ಪ್ರೇರಕವಾಗುತ್ತದೆ. ಶ್ರದ್ಧೆ, ಪ್ರಾರ್ಥನೆಗಳೆರಡೂ ಒಟ್ಟಿಗೆ ಕೆಲಸಮಾಡತೊಡಗಿದರೆ ಅದನ್ನೆ ನಾವು ಧರ್ಮವೆನ್ನುವುದು. ನಮ್ಮನ್ನು ಬೀಳದಂತೆ ಎತ್ತಿ ಹಿಡಿಯುವುದು ಧರ್ಮದ ಮೂಲಾರ್ಥ(ಧಾರಣೆ). ನಮಗೆ ಆಸರೆಯನ್ನು, ಊರುಗೋಲನ್ನು ಒದಗಿಸಿಕೊಟ್ಟು ಬದುಕನ್ನು ಸಾರ್ಥಕವನ್ನಾಗಿ ಮಾಡುತ್ತದೆ ಅದು. ಇಲ್ಲಿ ನೆಮ್ಮದಿ, ಇಲ್ಲಿಂದ ಮುಂದೆ ಸಾಗುವಾಗ ಭರವಸೆ ಎರಡನ್ನೂ ಧರ್ಮ ನೀಡಬಲ್ಲುದು. ಕಾಲು ದುರ್ಬಲವಾಗಿರುವಾಗ, ನೆಲ ಜಾರಿಕೆಯಾದಾಗ ಊರುಗೋಲು ಬೇಕಷ್ಟೆ; ನಿಲ್ಲಲೂ ನಡೆಯಲೂ ಅದೇ ಆಸರೆ. ಧರ್ಮವೆನ್ನುವುದು ಈ ಬಗೆಯ ಊರುಗೋಲು. ನಾವೆಲ್ಲರೂ ದಿಟವಾದ ಅರ್ಥದಲ್ಲಿ ನಮ್ಮ ಕಾಲ ಮೇಲೆ ನಾವು ನಿಲ್ಲಲಾರೆವು; ಮುಂದಕ್ಕೆ ನಾವೇ ಅಡಿಯಿಡಲಾರೆವು. ಧರ್ಮದ ಆಗತ್ಯ ನಮಗಿದೆ. ಅದರಿಂದ ನಾವು ಬಲಗೊಳ್ಳುತ್ತೇವೆ; ನಮ್ಮ ಪ್ರಯತ್ನಗಳು ಸಫಲವಾಗುತ್ತವೆ.

ಮನುಷ್ಯನಿಗೆ ಧರ್ಮ ಬೇಕಾಗಿರುವದು ಹೀಗೆ. ಮನುಷ್ಯನಾದರೋ ದೇಶ, ಭಾಷೆ, ಜನಾಂಗ, ಜಾತಿ, ಸಂಸ್ಕೃತಿ, ಮತ ಮುಂತಾದ ಹಲವು ವಿವರಗಳಿಂದ ಬದ್ಧನಾಗಿದ್ದಾನೆ. ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲೂ ವ್ಯವಹಾರದಲ್ಲೂ ಈ ಕಟ್ಟುಪಾಡು ಇರುತ್ತದೆ;

ಆದರ ವಿವರಗಳಿಗೆ ಅನುಸಾರವಾಗಿ ಅವನ ಬದುಕು ಸಾಗಬೇಕು. ಹೀಗಾದುದರಿಂದ ಧರ್ಮವೆನ್ನುವುದು ಹಲವು ಬಗೆಗಳಾಗಿ ಕಾಣಿಸಿಕೊಳ್ಳುವುದು ಸಹಜವೇ. ಜಾತಿ, ಮತ, ದೇಶ, ಭಾಷೆ, ಇತಿಹಾಸ, ಸಂಸ್ಕೃತಿ ಇವೆಲ್ಲ ಬದಲಾದಂತೆ ಧರ್ಮವೂ ಬದಲಾಗುತ್ತದೆ. ಈ ವೈವಿಧ್ಯ ಅನಿವಾರ್ಯವಾದುದು. ಧರ್ಮಕ್ಕೆ ಒಂದು ಸಾಮಾಜಿಕ, ಸಾಮುದಾಯಿಕ ಚೌಕಟ್ಟು ಇರಲೇ ಬೇಕಷ್ಟೆ?

ಆದರೆ ಈ ವೈವಿಧ್ಯದಿಂದಾಗಿ ಧರ್ಮದ ಸ್ವಭಾವವೇ ವಿವಿಧವಾಗುತ್ತದೆ ಎನ್ನುವುದು ಸರಿಯಲ್ಲ. ಎಲ್ಲ ಧರ್ಮದ ಬಗೆಗಳಲ್ಲೂ ಮೂಲಭೂತವಾದ ನೆಲೆ ಒಂದೇ ಆಗಿರುತ್ತದೆ. ಹಸುಗಳ ಮೈಬಣ್ಣ ಬೇರೆ ಬೇರೆಯಾದರೂ, ಅವು ಕೊಡುವ ಹಾಲೆಲ್ಲ ಬಿಳಿಬಣ್ಣವೇ ತಾನೆ? ಮೇಲ್ನೋಟಕ್ಕೆ ಹೊರಗಣ ವಿಧಿ-ವಿಧಾನಗಳಿಗೆ ಧರ್ಮ-ಧರ್ಮಗಳಲ್ಲಿ ಅಂತರ ಕಂಡುಕೊಳ್ಳುತ್ತದೆ; ಕೆಲವೊಮ್ಮೆ ಧರ್ಮಗಳ ನಡುವೆ ವಿರೋಧವೂ ಇರುವುದುಂಟು. ಆದರೆ ಈ ಅಂತರವಾಗಲಿ ವಿರೋಧವಾಗಲಿ ಆಳಕ್ಕೆ ಇಳಿಯಲಾರದು. ಧರ್ಮದ ಹೊರಪದರವನ್ನು ದಾಟಿ ಒಳಗೆ ಸರಿದಂತೆಲ್ಲ ಏಕತಾನತೆಯೇ ತೋರಿಕೊಳ್ಳುತ್ತದೆ. ಅಂತರದಿಂದ ಕ್ಲೇಶ, ವಿರೋಧದಿಂದಂತೂ ವಿರಸವೇ; ಪರಸ್ಪರ ಸಂಶಯ, ದ್ವೇಷಗಳು. ಇವೆಲ್ಲ ಧರ್ಮದ ಸ್ವಭಾವಕ್ಕೆ ಹೊರತಾದುವು ಎಂಬುದನ್ನು ಜನರಿಗೆ ಮನವರಿಕೆಮಾಡಿಕೊಡಲು ಇಂಥ ಸಮ್ಮೇಳನಗಳು ಜರುಗಬೇಕು. ಜಗತ್ತಿನ ಧರ್ಮಗಳೆಲ್ಲವೂ ಪರಸ್ಪರ ಪ್ರೀತಿಯಿಂದ, ಸೌಹಾರ್ದದಿಂದ, ಬಾಳಬಲ್ಲುವು, ಬಾಳಬೇಕು ಎಂಬುದನ್ನು ತಿಳಿಸಿಕೊಡುವುದು, ಬೇರೆಬೇರೆ ಧರ್ಮಗಳೆಲ್ಲವೂ ಒಂದಕ್ಕೊಂದು ನೆರವಾಗಿ ಮನುಷ್ಯನ ಬದುಕನ್ನು ಸುಖಮಯವಾಗಿ ಶಾಂತಿಯುತವಾಗಿ ಮಾಡಬಲ್ಲುವು ಎಂಬುದನ್ನು ಮನದಟ್ಟುಮಾಡಿಕೊಡುವುದು ಈ ಸಮ್ಮೇಳನದಿಂದ ನಾವು ನಿರೀಕ್ಷಿಸಬಹುದಾದ ಫಲಗಳು.

ಜಗತ್ತಿನ ಎಲ್ಲ ಧರ್ಮಗಳಿಗೂ ನಮ್ಮ ದೇಶದಲ್ಲಿ ನೆಲೆಯನ್ನು ನಮ್ಮವರು ಒದಗಿಸಿಕೊಟ್ಟಿದ್ದಾರೆನ್ನುವುದನ್ನು ಎಲ್ಲರೂ ಬಲ್ಲರು. ಇದೊಂದು ದೊಡ್ಡ ಉದ್ಯಾನ; ಇದರಲ್ಲಿ ಬಗೆಬಗೆಯ ಬಣ್ಣಗಳ, ಆಕಾರಗಳ, ಕಂಪುಗಳ, ಗಾತ್ರಗಳ ಹೂಗಳು ಬೆಳೆದಿವೆ;

ಎಲ್ಲವೂ ಕೂಡಿಕೊಂಡು ಉದ್ಯಾನಕ್ಕೆ ಮೆರುಗನ್ನೂ ಸ್ವಾರಸ್ಯವನ್ನೂ ತಂದುಕೊಟ್ಟಿವೆ. ಜಗತ್ತಿನ ಯಾವುದೇ ಧಾರ್ಮಿಕ ಕಲ್ಪನೆಯಾಗಲಿ ನಮ್ಮ ದೇಶದಲ್ಲಿ ಪ್ರಯೋಗಕ್ಕೆಬಾರದೆ ಇಲ್ಲ, ಯಾವುದೇ ಧರ್ಮಿಕ ನಂಬಿಕೆಯಾಗಲಿ ಆಚಾರವಾಗಲಿ ಇಲ್ಲಿ ಬೇರೂರದೆ ಬಿಟ್ಟಿಲ್ಲ. ಅಷ್ಟು ಮಾತ್ರವಲ್ಲ, ನಮ್ಮ ಪ್ರಾಚೀನ ಧಾರ್ಮಿಕಕಲ್ಪನೆಗಳಿಂದ ಸ್ಫೂರ್ತಿಯನ್ನು ಪಡೆದುಕೊಳ್ಳದ ಧರ್ಮವೇ ಜಗತ್ತಿನಲ್ಲಿಲ್ಲ. ಕೆಲವು ಧರ್ಮಗಳು ನೇರವಾಗಿಯೇ ಪ್ರಭಾವಿತವಾಗಿವೆ; ಮತ್ತೆ ಕೆಲವು ಬಳಸಾಗಿ ಪ್ರಭಾವವನ್ನು ತಳೆದುಕೊಂಡಿವೆ.

ಮತ್ತೆ ಜಗತ್ತಿನ ಎಲ್ಲ ಧರ್ಮಗಳೂ ನೆಲೆಗೊಂಡಿರುವ ದೇಶವಾಗಲಿ ನಮ್ಮ ದೇಶವನ್ನು ಬಿಟ್ಟರೆ ಬೇರೊಂದಿಲ್ಲ. ಇಲ್ಲಿ ಅವು ನೆಲೆಗೊಂಡಿರುವುದು ಮಾತ್ರವಲ್ಲ, ಅವನ್ನು ನಾವು ಅಳವಡಿಸಿಕೊಂಡಿದ್ದೇವೆ. ಧರ್ಮಗಳ ಸಮನ್ವಯ ಇಲ್ಲಿ ಆಗಿರುವಂತೆ ಬೇರೆಲ್ಲಿಯೂ ಆಗಿಲ್ಲ. ದೇಶದ ಧಾರ್ಮಿಕಜಾಲದಲ್ಲಿ ಇವೆಲ್ಲ ಪ್ರಕಾರಗಳೂ ಹಾಸುಹೊಕ್ಕಾಗಿ ಸೇರಿಕೊಂಡುಬಿಟ್ಟಿವೆ. ಒಂದೊಂದು ಧರ್ಮಪ್ರಕಾರವೂ ದೇಶದ ಸಾಂಸ್ಕೃತಿಕ, ಸಾಮಾಜಿಕ, ಆಧ್ಯಾತ್ಮಿಕ ನೆಲೆಗಟ್ಟಿಗೆ ನೆರವಾಗಿದೆ. ಜಗತ್ತಿನ ಬೇರೆ ಬೇರೆ ಧರ್ಮಪ್ರಕಾರಗಳು ನಮ್ಮ ದೇಶಕ್ಕೆ ಬಂದು ಇಲ್ಲಿ ಹಲವಾರು ಕಾಲದಿಂದ ನೆಲೆಸಿರುವುದು; ದೇಶದ ಧಾರ್ಮಿಕ ವಾತಾವರಣದಲ್ಲಿ ಅವಿಭಾಜ್ಯವಾಗಿ ಸೇರಿಹೋಗಿವೆ.

ಹಲವು ನದಿಗಳು ಸಮುದ್ರದತ್ತ ಹರಿದು, ಸಮುದ್ರವನ್ನು ಸೇರಿ ಸಮುದ್ರದ ನೀರಿನೊಂದಿಗೆ ಬೆರೆತುಕೊಳ್ಳುವುದು ನಮ್ಮ ಗ್ರಂಥಗಳಲ್ಲಿ ಮತ್ತೆ ಮತ್ತೆ ಕಂಡುಬರುವ ಉಪಮೆ. ಸಮುದ್ರದ ನೀರಿನಲ್ಲಿ ಒಂದಾದಮೇಲೆ ನದಿಗಳ ಬೇರೆಬೇರೆ ಹೆಸರುಗಳು, ಆಕಾರಗಳು, ಗುಣಧರ್ಮಗಳು ಯಾವುವೂ ಉಳಿದುಕೊಳ್ಳುವುದಿಲ್ಲವಷ್ಟೆ. ಒಂದು ವಾದ್ಯಗೋಷ್ಠಿಯಲ್ಲಿ ಹತ್ತಾರು ವಾದ್ಯಗಳು ಕೂಡಿಕೊಳ್ಳುತ್ತವೆ: ಸಂಗೀತ ಒಂದೇ, ವಾದ್ಯಗಳ ಬೇರೆಬೇರೆ ನಾದಗಳು ಇದರಲ್ಲಿ ಮೇಳವಿಸಿ ಮರೆಯಾಗುತ್ತವೆ. ಹಾಗೆಯೇ ಧರ್ಮಗಳೂ ನಮ್ಮ ಧರ್ಮದಲ್ಲಿ ಸಮನ್ವಿತವಾಗಿವೆ. ಹಲವು ಸಂಸ್ಕೃತಿಗಳ ಸಂಪರ್ಕವನ್ನು ಇತಿಹಾಸದ ಮೊದಲಕಾಲದಿಂದ ನಮ್ಮ ದೇಶ ಪಡೆದುಕೊಂಡಿದೆ; ಸಂಪರ್ಕಕ್ಕೆ ಬಂದ ಎಲ್ಲ ಸಂಸ್ಕೃತಿಗಳ ಮುಖ್ಯವಿವರಗಳನ್ನು ನಮ್ಮದಾಗಿ

ಮಾಡಿಕೊಳ್ಳುವುದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯ. ನಮ್ಮ ಇತಿಹಾಸದುದ್ದಕ್ಕೂ ಇದನ್ನು ನಾವು ಕಾಣುತ್ತೇವೆ.

ನಮ್ಮ ದೇಶವನ್ನು ಹಿಂದೂಸ್ಥಾನ ಎಂದು ಕರೆಯುವುದು ವಾಡಿಕೆ. ನಮ್ಮ ದೇಶದ ಜನಸಂಖ್ಯೆಯಲ್ಲಿ ಹಿಂದುಗಳೇ ಬಹುಸಂಖ್ಯಾಕರು; ಅವರದ್ದೇ ಪ್ರಮುಖವಾದ ಧರ್ಮ. ಪ್ರಾಚೀನಕಾಲದ ಹಿಂದೂಗಳು ಸೂರ್ಯಾರಾಧಕರು. ನಮ್ಮಲ್ಲಿ ಪ್ರಸಿದ್ಧವಾದ ಗಾಯತ್ರಿಮಂತ್ರವು ಸೂರ್ಯದೇವತೆಯ ಪರವಾದುದೇ. ಆದರೆ ಹಿಂದುಗಳೆಂದರೆ ಯಾವೊಂದು ವಿಶಿಷ್ಟ ದೇವತೆಯ ಆರಾಧಕರೆಂದಾಗಲಿ, ಯಾವೊಂದು ನಿರ್ದಿಷ್ಟ ತತ್ವವನ್ನು ಒಪ್ಪಿಕೊಂಡವರೆಂದಾಗಲಿ ಹೇಳುವಂತಿಲ್ಲ. ಹಾಗೆ ನೋಡಿದರೆ ಹಿಂದೂ ಧರ್ಮವೆಂಬುದು ಬೇರೆ ಧರ್ಮಗಳಂತೆ ನಿರ್ದಿಷ್ಟವಾದ ಒಂದು ಧರ್ಮವೇ ಅಲ್ಲ. ಆ ಧರ್ಮದ ಹರವಿನಲ್ಲಿ ಬೇರೆ ಬೇರೆ ನಂಬಿಕೆಗಳು, ಬಗೆಬಗೆಯ ಆಚಾರಗಳು ಒಳಗೊಂಡಿವೆ. ಅದೊಂದು ವಿಶಾಲವಾದ ವೇದಿಕೆ. ಹೀಗಿರುವುದರಿಂದ ನಮ್ಮ ಜನರಿಗೆ ಸಹನೆಯ ಮನೋಧರ್ಮ ಸಹಜವಾಗಿಯೆ ಒಲಿದುಬಂದಿದೆ. ವಿವಿಧವಾದ ವಿಭಿನ್ನವಾದ ಮತೀಯ ಕಟ್ಟಳೆಗಳು, ಆಚಾರದ ವಿಧಿ ನಿಷೇಧಗಳು, ಸಮಾಜದಲ್ಲಿ ಧರ್ಮದ ಅನ್ವಯ, ಪದ್ಧತಿಗಳು, ಹಬ್ಬಗಳು ಇವೆಲ್ಲವನ್ನೂ ನಾವು ತಾಳ್ಮೆಯಿಂದ, ಗೌರವದಿಂದ ಕಂಡುಕೊಂಡಿದ್ದೇವೆ. ಎಲ್ಲ ಧರ್ಮಗಳೂ ಇಲ್ಲಿದ್ದರೂ ಧರ್ಮಗಳ ನಡುವೆ ವಿರಸವೆಂಬುದನ್ನು ನಾವು ಒಪ್ಪುವುದಿಲ್ಲ. ಯಾವ ಧರ್ಮವೂ ಹೆಚ್ಚು, ಕಡಿಮೆ, ಹೀನ, ಮಾನ್ಯ ಎಂಬುದು ನಮ್ಮ ಎಣಿಕೆಯಲ್ಲಿಲ್ಲ. ಭಾಷೆ, ಕುಟುಂಬ ವ್ಯವಸ್ಥೆ, ವ್ರತ, ಹಬ್ಬ ಇವೆಲ್ಲ ಆಯಾ ಧರ್ಮಕ್ಕೆ ಸೀಮಿತವಾದುವು; ಎಲ್ಲ ಧರ್ಮಗಳ ನೆಲೆ ಒಂದೇ ಎಂದು ನಮ್ಮ ಭಾವನೆ.

ಹಿಂದೂ ಎಂಬ ಧರ್ಮದ ಹರವಿನಲ್ಲಿ ಸೇರಿರುವ ಜನರೆಲ್ಲರ ಅನುಸಂಧಾನದಲ್ಲಿ ಒಂದು ವಿವರ ಸಾಮಾನ್ಯವಾಗಿದೆ. ಸದಾಚಾರ ಮತ್ತು ಸಂಯಮ, ಸಾಧನೆಗಳಿಂದ ಮೋಕ್ಷವನ್ನು ಪಡೆದುಕೊಳ್ಳಬೇಕೆಂಬ ಬಯಕೆ. ನೀರಗುಳ್ಳೆಯಂತೆ ತೋರಿಯಡಗುವ ಈ ಪ್ರಪಂಚವನ್ನು ನಾವು ದಿಟವಾದುದೆಂದಾಗಲಿ, ಶಾಶ್ವತವೆಂದಾಗಲಿ ನಾವು ನಂಬುವುದಿಲ್ಲ; ವ್ಯವಹಾರವೇ ಪರಮಾರ್ಥವಲ್ಲ. ಭೌತಿಕವಾದ ಬದುಕೇ ಬದುಕು, ವಿಷಯಸುಖವೇ

ಸುಖ ಎಂಬುದು ನಮ್ಮ ಕಲ್ಪನೆಯಲ್ಲ. ಕಣ್ಣಿಗೆ ಕಾಣುವುದಕ್ಕಿಂತ ದೂರ ಇರುವುದನ್ನು, ಪ್ರಪಂಚದ ವಿವರಗಳ ಆಚೆ ಇರುವುದನ್ನು ಕಂಡುಕೊಳ್ಳುವ ಕಾತರ ನಮ್ಮದು. ಅದೇ ಸತ್ಯವಾದುದು; ಅದರ ನೆರಳು ನಮ್ಮ ಕಣ್ಣ ಮುಂದೆ ಇರುವುದು. ಪರಮಾರ್ಥವೇ ಮೂಲಭೂತವಾದುದು. ಈ ದೃಷ್ಟಿಯು ಜಗತ್ತಿನ ಎಲ್ಲ ಧರ್ಮಗಳಲ್ಲೂ ಇರುವುದೆಂದು ನಮ್ಮ ವಿಶ್ವಾಸ.

ಈ ಉದಾರವಾದ ಹೃದಯ, ಸಹಿಷ್ಣುವಾದ ಮನಸ್ಸು ನಮ್ಮಲ್ಲಿ ಮೌಲ್ಯಗಳು. ದಿಟವಾಗಿ ಧರ್ಮಿಷ್ಠನೆಂದರೆ ಅವನು ಯಾವ ಧರ್ಮವನ್ನೂ ದೂಷಿಸುವುದಿಲ್ಲ; ಪ್ರಾಪಂಚಿಕ ಭೇದಗಳನ್ನು ಎಣಿಸುವುದಿಲ್ಲ, ಇಲ್ಲಿನ ವೈವಿಧ್ಯವನ್ನು ಅವನು ಗಮನಿಸುವುದಿಲ್ಲ. ಹೊರಗಣ ವಿಭಿನ್ನ ವಿವರಗಳಿಗಿಂತ ಮುಖ್ಯವಾದುದು ಮೂಲಭೂತವಾದ ಏಕತಾನತೆ. ಈ ದೃಷ್ಟಿ ನಮಗೆ ವೇದ ಕಾಲದಿಂದ ಬಂದ ಬಳುವಳಿ. ವೇದವೆಂದರೆ ಯಾವುದೋ ಧಾರ್ಮಿಕ ಗ್ರಂಥ ಎಂದು ನಮ್ಮ ಕಲ್ಪನೆಯಲ್ಲ. ಎಲ್ಲ ಕಾಲದಲ್ಲೂ, ಎಲ್ಲ ಮನುಷ್ಯರಿಗೂ ಅಗತ್ಯವಾದ ಮಾರ್ಗದರ್ಶನ ಅದರಲ್ಲಿರುವುದರಿಂದ ಅದು ನಮಗೆ ಮಾನ್ಯ. ಕಾಲದೇಶಗಳ ಚೌಕಟ್ಟನ್ನು ಮೀರಿ ಮಾನವನ ಚೇತನಕ್ಕೆ ನೇರವಾಗಿ ನೆರವಾಗುವ ಸಾಮರ್ಥ್ಯ ವೇದಕ್ಕಿದೆ.

ವೈದಿಕ ಋಷಿಗಳೇ ಮನುಷ್ಯರ ಅನೇಕ ಪ್ರವೃತ್ತಿಗಳನ್ನೂ, ಧೋರಣೆಗಳನ್ನೂ, ಶ್ರದ್ಧೆಗಳನ್ನೂ ವಿಚಾರಗಳನ್ನೂ ಪರಿಶೀಲಿಸಿದ್ದರು; ಇವೆಲ್ಲ ಸಹಜವಾದುವೇ ಎಂದು ಹೇಳಿ ಅಂಗೀಕರಿಸಿಯೂ ಇದ್ದರು. ಈ ಅನೇಕದ ನಡುವೆ ಇರುವ ಏಕವೇ ಮುಖ್ಯವಾದುದೆಂದು ತಿಳಿಯಹೇಳಿದರು. ಧರ್ಮವನ್ನು ಬಳಸಿಕೊಳ್ಳುವ ಜನ ತತ್ತ್ವವನ್ನು ಅನೇಕ ವಿಧವಾಗಿ ಗುರುತಿಸುತ್ತಾರೆ; ಅನೇಕ ಹೆಸರುಗಳಿಂದ ಕರೆಯುತ್ತಾರೆ. ಆದರೆ ಇರುವ ತತ್ತ್ವ ಒಂದೇ; 'ಏಕಂ ಸದ್ವಿಪ್ರಾ ಬಹುಧಾ ವದಂತಿ'. ದೇವನೊಬ್ಬ, ನಾಮ ಹಲವು . ಆ ಒಂದು ತತ್ತ್ವವನ್ನು ಅನುಸಂಧಾನ ಮಾಡುವಾಗ ವ್ರತ, ಜಪ, ಯಜ್ಞ, ಬಲಿ, ಪ್ರಾರ್ಥನೆ, ಉತ್ಸವ, ಧ್ಯಾನ, ಯಾತ್ರೆ ಎಂದು ಅನೇಕ ಮಾರ್ಗಗಳಿವೆ. ಇಲ್ಲಿಯೂ ಇವೆಲ್ಲದರ ಹಿಂದಿರುವ ಶ್ರದ್ಧೆ, ಪ್ರಾಮಾಣಿಕತೆ, ಪ್ರಾರ್ಥನೆ ಇವು ಮುಖ್ಯವೇ ವಿನಾ ಹೊರಗಣವಿವರಗಳಲ್ಲ.

ವೈದಿಕ ಋಷಿಯು ವೈವಿಧ್ಯವನ್ನು ಮರೆತು ಸಮನ್ವಯದ ಕಡೆ ಹೊರಡಬೇಕೆಂಬ ಕರೆಯನ್ನು ಕೊಟ್ಟಿದ್ದು ಕಾಣುತ್ತದೆ. ನಾವೆಲ್ಲರೂ ಭೇದವನ್ನು ಮರೆತು ಒಡನಾಡುವ ಬುದ್ಧಿಯನ್ನು ಬೆಳೆಸಿಕೊಳ್ಳುವ ಅಗತ್ಯ ಈ ಮಂತ್ರ ಭಾಗದಲ್ಲಿ ಕಾಣುತ್ತದೆ -

'ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ ಜಾನತಾಂ।'

'ಒಟ್ಟಿಗೆ ಮುಂದೆ ಸಾಗೋಣ, ಪರಸ್ಪರ ಪ್ರಿಯವಾಗಿ ಮಾತನಾಡಿಕೊಳ್ಳೋಣ; ನಮ್ಮ ಮನಸ್ಸಿನ ಬಯಕೆಗಳನ್ನು ಪರಸ್ಪರ ಅರಿತುಕೊಳ್ಳೋಣ' ಎಂಬುದು ಈ ಮಂತ್ರಭಾಗದ ತಾತ್ಪರ್ಯ. ಇನ್ನೊಂದು ಮಂತ್ರ -

' ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ।

ಸಮಾನಮಸ್ತು ವೋ ಮನೋ ಯಥಾ ವಸ್ಸುಸಹಾ ಸತಿ॥'

'ನಮ್ಮ ಸಂಕಲ್ಪಗಳು ಸಮಾನವಾಗಿರಲಿ;ನಮ್ಮ ಹೃದಯಗಳು ಒಡಂಬಡಲಿ; ನಮ್ಮ ಮನಸ್ಸುಗಳು ಒಂದುಗೂಡಲಿ. ನಾವೆಲ್ಲರೂ ಒಟ್ಟಿಗೆ ಸುಖವಾಗಿ ಬಾಳುವಂತೆ ಆಗಲಿ'

ವೇದಮಂತ್ರಗಳಲ್ಲಿ ಮನುಷ್ಯರ ನಡುವೆ ಭೇದಗಳನ್ನು ಗಮನಿಸಿರುವುದಿದೆ;ಬಯಕೆಗಳಲ್ಲಿ, ಧೋರಣೆಗಳಲ್ಲಿ, ಉದ್ಯಮಗಳಲ್ಲಿ, ಸಾಮರ್ಥ್ಯಗಳಲ್ಲಿ, ಒಲವುಗಳಲ್ಲಿ, ಆಚಾರಗಳಲ್ಲಿ ಮನುಷ್ಯರು ಬೇರೆಬೇರೆಯೇ. ಆದರೆ ಇವೆಲ್ಲ ವೈವಿಧ್ಯದ ನಡುವೆ ಗಟ್ಟಿಯಾಗಿ ಉಳಿದುಕೊಳ್ಳುವುದು ಆಧ್ಯಾತ್ಮಿಕವಾದ ಏಕತಾನತೆ. ಇದನ್ನು ಪರಿಗಣಿಸಿದಾಗ ಭೇದಗಳು ದೊಡ್ಡದಾಗಿ ಕಾಣುವುದಿಲ್ಲ. ಮೇಲಣ ವೈವಿಧ್ಯ ಮೇಲೆ ಮಾತ್ರ ಇರುವಂಥದು; ಆಳಕ್ಕೆ ಇಳಿದು ನೋಡಿದರೆ ಕಾಣುವುದು ಏಕತೆಯೆ. ಆದುದರಿಂದ ವೇದ ಸೂಚಿಸುವುದು ಸಮನ್ವಯವನ್ನು, ಸಹನೆಯನ್ನು. ನಮ್ಮಲ್ಲಿ 'ಸೂತ್ರೇ ಮಣಿಗಣಾ ಇವ' ಎಂಬ ಮಾತೂ ಆಡಿಗಡಿಗೆ ಕೇಳಿಬರುತ್ತಿದೆ. ಒಂದು ಮಾಲೆಯಲ್ಲಿ ಬಗೆಬಗೆಯ ಮಣಿಗಳನ್ನು ಪೋಣಿಸಿರುವಂತೆ, ನಮ್ಮ ಧರ್ಮವೂ ವೈವಿಧ್ಯವನ್ನು ಒಪ್ಪಿಕೊಳ್ಳುತ್ತದೆ. ಒಂದೇ ಮಣಿಯಿಂದ ಮಾಲೆಯಾದೀತೆ!

ಮಾಲೆಯೆಂದರೆ ಅನೇಕ ಮಣಿಗಳಿರಲೇ ಬೇಕು. ಆದರೆ ಅವೆಲ್ಲವನ್ನೂ ಒಂದು ದಾರದಲ್ಲಿ ಸೇರಿಸಿದಾಗಲೇ ಮಾಲೆ. ಧರ್ಮಗಳು ಹಲವಾರು; ಅವೆಲ್ಲವನ್ನೂ ಕೂಡಿಸುವ ದಾರ ಅಧ್ಯಾತ್ಮ.

ಈ ಕಲ್ಪನೆಗಳ ಪ್ರಭಾವದಿಂದ ನಮ್ಮ ದೇಶದ ಜನರಲ್ಲಿ ಸೌಹಾರ್ದ, ಸಮನ್ವಯ, ಸಹನೆ, ಸ್ವೀಕಾರ ಎಂಬ ಗುಣಗಳು ಬೆಳೆದುಬಂದಿವೆ. ನಮ್ಮ ದೇಶದ ಇತಿಹಾಸ ಹತ್ತು ಸಾವಿರ ವರ್ಷಗಳಷ್ಟಾದರೂ ಹಿಂದೆ ಹೋಗುತ್ತದೆ. ಈ ಅವಧಿಯಲ್ಲಿ ಎಷ್ಟೋ ಸಂಸ್ಕೃತಿಗಳು ನಮ್ಮಲ್ಲಿಗೆ ಬಂದು, ನಮ್ಮ ಸಂಸ್ಕೃತಿಯಲ್ಲಿ ಸೇರಿಹೋಗಿವೆ. ಕ್ರೈಸ್ತಯುಗದ ಪೂರ್ವದಲ್ಲೂ ನಮ್ಮ ದೇಶದ ಮೇಲೆ ದಾಳಿ ಮಾಡಿದವರಿದ್ದರು. ಆಕ್ರಮಣಕ್ಕೆಂದು ಬಂದು ನಮ್ಮ ದೇಶದ ಸಂಪತ್ತನ್ನೂ ಸೌಂದರ್ಯವನ್ನೂ ನಮ್ಮ ಜನರ ಸ್ವಭಾವವನ್ನೂ ಕಂಡು ಮಾರುಹೋಗಿ ಇಲ್ಲಿಯೇ ನೆಲೆಸಿದವರೂ ಉಂಟು. ಜಗತ್ತಿನ ಎಲ್ಲ ಜನಾಂಗಗಳ ಜನರೂ ಇಲ್ಲಿಗೆ ಬಂದು ಅವರವರ ಗುರುತುಗಳನ್ನು ಬಿಟ್ಟುಹೋಗಿದ್ದಾರೆ. ಭಾರತದೇಶಕ್ಕೆ ಬಂದ ಪ್ರವಾಸಿಗಳು ಇಲ್ಲಿನ ಜನರ ಭೌತಿಕ ಚಹರೆಗಳ ವೈವಿಧ್ಯವನ್ನು ಕಂಡಾಗ ಸೋಜಿಗಪಡುತ್ತಾರೆ. ಇಲ್ಲಿ ಬುಡಕಟ್ಟುಗಳೆಲ್ಲವೂ ಕಂಡುಬರುತ್ತವೆ. ಹೀಗಾಗಿ ಸಾಂಸ್ಕೃತಿಕ ವೈವಿಧ್ಯವೂ ನಮ್ಮಲ್ಲಿ ಕಂಡುಬರುವ ವಿವರವೇ.

ಬೆಕ್ಟ್ರಿಚನ್, ಅಯೋನಿಯನ್, ಗ್ರೀಕ್,ರೋಮನ್, ಪರ್ಶಿಯನ್ ದೇಶೀಯರು ನಮ್ಮ ದೇಶಕ್ಕೆ ತುಂಬ ಹಿಂದೆಯೇ ಬಂದು ಇಲ್ಲಿ ನೆಲೆಸಿದರು. ಬಂದವರಲ್ಲಿ ಹಿಂದಿರುಗಿದವರು ಕಡಮೆ. ಇಲ್ಲಿಯೇ ಉಳಿದುಕೊಂಡವರು ನಮ್ಮ ಜನರೊಂದಿಗೆ ಬೆರೆತುಹೋದರು;ಅವರ ಪ್ರತ್ಯೇಕತೆ ಉಳಿಯಲಿಲ್ಲ. ನಮ್ಮ ದೇಶದ ಪ್ರಾಚೀನ ಶಾಸನಗಳನ್ನು ನೋಡಿದಾಗ ಹಲವಾರು ವಿದೇಶೀಯರು ಇಲ್ಲಿಗೆ ಬಂದು 'ಭಾಗವತ'ರಾದದ್ದೂ 'ಪರಮಭಾಗವತ'ರಾದದ್ದೂ ಕಂಡುಬರುತ್ತದೆ. ಒಂದೆರಡು ತಲೆಮಾರುಗಳಲ್ಲೇ ಆ ವಿದೇಶಿಯರೆಲ್ಲ ದೇಶೀಯರೇ ಆಗಿಬಿಟ್ಟರು! ನಮ್ಮ ಜನರಲ್ಲಿ ಬೆರೆತುಹೋದರು. ಅವರ ಆಚಾರವಿಚಾರಗಳನ್ನೂ ನಾವೂ ಅಳವಡಿಸಿಕೊಂಡೆವು. ಇಂಥ ಸೇರ್ಪಡೆಯಿಂದಲೇ ಸಿದ್ಧವಾದುದು ಹಿಂದೂ ಧರ್ಮ; ಇದರಲ್ಲಿ ಸಮನ್ವಯ ದೃಷ್ಟಿ ಇದ್ದುದು ಸೋಜಿಗವೇನಲ್ಲ. ಈಗ 'ಹಿಂದೂ' ಎಂದು ನಿರ್ದಿಷ್ಟವಾಗಿರುವ ಧರ್ಮದಲ್ಲಿ

ಮೂಲಭಾಗ, ತಿರುಳು ವೈದಿಕಧರ್ಮವೇ, ಅದರ ಮೇಲೆ ಬೆಳೆದು ಬಂದಿರುವ ಸಾಂಸ್ಕೃತಿಕ ಹಂದರದಲ್ಲಿ ಎಲ್ಲ ಧರ್ಮಗಳ ಸಾರವೂ ಸೇರಿದೆ.

ಈ ವಿಶಾಲವಾದ ತಳಹದಿಯೇ ಹಿಂದೂ ಧರ್ಮದ ಬಲ. ಎಷ್ಟೇ ಆಕ್ರಮಣಗಳು, ಘರ್ಷಣೆಗಳು, ಕ್ರಾಂತಿಗಳು ಒದಗಿಬಂದರೂ ಹಿಂದೂ ಧರ್ಮ ಇಂದಿಗೂ ಉಳಿದು ಬಂದಿರುವುದು ಈ ಕಾರಣದಿಂದಲೇ. ಬೇರೆ ದೇಶಗಳಲ್ಲಿ ಪ್ರಾಚೀನ ಸಂಸ್ಕೃತಿ ಅಷ್ಟಾಗಿ ಉಳಿದು ಬರದೆ, ಬರಿಯ ಐತಿಹಾಸಿಕ ವಿವರವಾಗಿ ನೆನಪಿನಲ್ಲಿದೆಯಷ್ಟೆ. ಆದರೆ ನಮ್ಮ ದೇಶದಲ್ಲಿ ಪ್ರಾಚೀನ ಸಂಸ್ಕೃತಿ ಇಂದಿಗೂ ವ್ಯವಹಾರದಲ್ಲೇ ಇದೆ; ಅದೇನು ಗತಕಾಲದ ವಿವರವಲ್ಲ, ಕಾರಣವೇನೆಂದರೆ ಹಿಂದೂಧರ್ಮದ ಧೋರಣೆಯಲ್ಲಿರುವ ವೈಶಾಲ್ಯ; ಯಾವುದೋ ಕಟ್ಟುಪಾಡು, ಚೌಕಟ್ಟು ಇದಕ್ಕೆ ಸೀಮಿತವಾಗಿಲ್ಲ ಅದು. ನಮ್ಮ ಧರ್ಮಕ್ಕೆ ಪ್ರವರ್ತಕರೆಂಬುವರನ್ನು ನಾವು ಗುರುತಿಸಿಲ್ಲ. ಅದು ಸನಾತನ ಧರ್ಮವೆಂದೇ ನಮ್ಮ ಎಣಿಕೆ. ಯಾವೊಂದು ಧರ್ಮಗ್ರಂಥವೂ ನಮಗೆ ಸಾರ್ವಜನೀನವಾಗಿ ಮಾನ್ಯವೆಂಬುದಿಲ್ಲ; ಧರ್ಮದ ಆಚಾರಸಂಹಿತೆ ಇಷ್ಟೇ ಎಂದು ಹೇಳಬರುವುದಿಲ್ಲ. ಹಿಂದೂ ಧರ್ಮಕ್ಕೆ ಸೇರಬಯಸುವವರಿಗೆ ದೀಕ್ಷೆ ಎಂಬಂಥ ಯಾವ ವಿಧಿಯೂ ಇರದು. ಹೀಗೆ ವಿಶ್ವ ವಿಶಾಲವಾದ ಧರ್ಮವಾದುದರಿಂದ ಎಲ್ಲ ಧರ್ಮಗಳೂ ಇದರಲ್ಲಿ ಸುಸೂತ್ರವಾಗಿ ಸೇರಬಲ್ಲವು; ಸೇರಿಬಂದಿವೆ.

ಹೊರಗಿನಿಂದ ಬಂದ ಧರ್ಮಗಳಿರಲಿ, ನಮ್ಮಲ್ಲೇ ಬೌದ್ಧ, ಜೈನ, ಶಾಕ್ತ, ಶೈವ, ವೈಷ್ಣವ ಮೊದಲಾದ ವಿಭಿನ್ನ ಧರ್ಮಗಳಿವೆ. ಇವೆಲ್ಲವನ್ನೂ ನಾವು ಬೇರೆ ಬೇರೆ ಧರ್ಮಗಳೆಂದು ಗುರುತಿಸುವುದಿಲ್ಲ. ಕಾಲಾಂತರದಲ್ಲಿ ರಾಜಕೀಯ ಪ್ರಭಾವಗಳಿಂದ ಇವುಗಳ ಪೃಥಕ್ ನಿರ್ದೇಶನ ಮೂಡಿಬಂದಿತು. ಅದು ಬೇರೆ ಮಾತು. ನಿದರ್ಶನಕ್ಕೆ ಬೌದ್ಧಮತ ಮೈದಳೆದದ್ದು ಉಪನಿಷತ್ತುಗಳ ಜ್ಞಾನಮಾರ್ಗದ ಪ್ರಭಾವದಿಂದಲೇ. ವೇದಾಂತಗಳೆನಿಸಿಕೊಂಡ ಉಪನಿಷತ್ತುಗಳಲ್ಲಿ ಕರ್ಮಕಾಂಡವನ್ನು ಕಡೆಗಣಿಸಿ ಧ್ಯಾನ, ಉಪಾಸನೆ, ಬ್ರಹ್ಮಾನುಸಂಧಾನ ಇವುಗಳ ಕಡೆ ಒಲವು ಬೆಳೆದದ್ದು ಬೌದ್ಧಮತದ ಉಗಮಕ್ಕೆ ನೆರವಾಯಿತು. ಗೌತಮಬುದ್ಧನು ಈ ಬೋಧಿಸಿದ ಚತುಃಸತ್ಯಗಳು (ದುಃಖ, ದುಃಖಸಮುದಯ, ದುಃಖನಿರೋಧ, ಮಾರ್ಗ) ಅಷ್ಟಾಂಗ ಮಾರ್ಗ (ಸಮ್ಯಕ್ ದೃಷ್ಟಿ

ಮೊದಲಾದುವು), ಕರ್ಮಫಲ ಮೊದಲಾದುವೂ, ಬುದ್ಧನು ಒತ್ತಿ ಹೇಳಿದ ತೃಷ್ಣಾಕ್ಷಯವೇ ಮೋಕ್ಷಮಾರ್ಗವೆಂಬುದೂ ಉಪನಿಷತ್ತುಗಳ ಧೋರಣೆಯ ಪರಿಣಾಮವೇ. ಧರ್ಮದ ಪ್ರಾಧಾನ್ಯವನ್ನೂ ಬುದ್ಧ ಹೇಳಿದ. ಬೌದ್ಧರ ನಿತ್ಯ ಪ್ರಾರ್ಥನೆಯಲ್ಲಿ 'ಬುದ್ಧ', 'ಧರ್ಮ', 'ಸಂಘ' ಇವುಗಳಿಗೆ ಶರಣು ಹೋಗುವ ಉಲ್ಲೇಖ ಬರುತ್ತದೆ. ಧರ್ಮದ ಅಭಿವ್ಯಕ್ತಿಯೇ ಬುದ್ಧನೆಂಬ ಕಲ್ಪನೆ ಅವರದ್ದು.

ಹಾಗೆಯೆ ಜೈನ ಧರ್ಮವೂ ವೈದಿಕಹಿನ್ನೆಲೆಯಿಂದ ಕವಲೊಡೆದದ್ದೇ. ಬುದ್ಧನ ಸಮಕಾಲಿಕನಾಗಿದ್ದ ಮಹಾವೀರನು ಇಪ್ಪತ್ತುನಾಲ್ಕು ತೀರ್ಥಂಕರರಲ್ಲಿ ಕಡೆಯವನು. ತನ್ನ ಒಳಗಣ ವೈರಿಗಳನ್ನು ಗೆದ್ದದ್ದರಿಂದ ಅವನು ಮಹಾವೀರನೆನಿಸಿಕೊಂಡ; ಅರಿಷಡ್ವರ್ಗವನ್ನು ಜಯಿಸಿದವನಾಗಿ ಜಿನ. ಮಾತು, ಮನಸ್ಸು, ಮೈ ಮೂರೂ ಕರಣಗಳಿಂದ ಅಹಿಂಸೆಯ ವ್ರತವನ್ನು ಸಾಧಿಸಬೇಕಾದ ಅಗತ್ಯವನ್ನು ಅವನು ತಿಳಿಯ ಹೇಳಿದನು. ಧರ್ಮವೆಂಬುದು ಮಂಗಳಗಳಲ್ಲಿ ಉತ್ಕೃಷ್ಟವಾದುದು. ಧರ್ಮವೆಂದರೆ ಅಹಿಂಸೆ, ಸಂಯಮ, ತಪಸ್ಸು ಮೂರೂ ಕೂಡಿದ್ದು ಎಂದು ಜೈನರ ವಿಶ್ವಾಸ. ಮತ್ತು ಒಳ್ಳೆಯ ನಡತೆ, ಒಳ್ಳೆಯ ತಿಳಿವಳಿಕೆ ಮತ್ತು ಒಳ್ಳೆಯ ನೋಟ ಇವನ್ನು ತ್ರಿರತ್ನಗಳೆಂದು ಅವರು ಗೌರವಿಸುತ್ತಾರೆ.

ಭಾರತದೇಶಕ್ಕೆ ಇರಾಣದಿಂದ ಬಂದ ಪಾರ್ಸಿಗಳ ಮೂಲಪ್ರವರ್ತಕ ಜರತೂಷ್ಟ್ರ ಕ್ರಿಸ್ತಯುಗಕ್ಕೆ ಸುಮಾರು ಆರು ಸಾವಿರ ವರ್ಷಗಳಷ್ಟು ಪೂರ್ವದಲ್ಲಿ ಇದ್ದವನು. ಅವನು ಬೋಧಿಸಿದ ಧರ್ಮ ವೈದಿಕ ಧರ್ಮಕ್ಕೆ ತುಂಬ ಹತ್ತಿರವಾದುದು. ಯಜ್ಞಪದ್ಧತಿ, ಅಗ್ನಿಪೂಜೆಗಳಂತೂ ಎರಡೂ ಧರ್ಮಗಳಲ್ಲಿ ಸಮಾನವಾಗಿಯೆ ಇವೆ. ಇರಾಣದಲ್ಲಿ ಮತೀಯ ಹಿಂಸೆಗೆ ಪಾರ್ಸಿಗಳು ಗುರಿಯಾದಾಗ ಅವರು ಭಾರತದೇಶಕ್ಕೆ ಓಡಿ ಬಂದರು;ಇಲ್ಲಿನ ರಾಜರೂ ಜನರೂ ಅವರಿಗೆ ನೆಲೆಯನ್ನೊದಗಿಸಿದರು. ಅಂದಿನಿಂದ ಇವರು ಭಾರತದೇಶೀಯರೇ ಆಗಿದ್ದಾರೆ. ಹಾಲಿನಲ್ಲಿ ಸಕ್ಕರೆ ಬೆರೆತಂತೆ, ಹೂವಿನಲ್ಲಿ ಪರಿಮಳವಿರುವಂತೆ ಈ ಜನ ನಮ್ಮ ಸಂಸ್ಕೃತಿಯಲ್ಲಿ ಸೇರಿಹೋಗಿದ್ದಾರೆ. ಪಾರ್ಸಿಗಳ ಮತಧರ್ಮದಲ್ಲಿ ಸೋಮಾರಿತನಕ್ಕೆ ಎಡೆಯಿರದು. ಎಲ್ಲರೂ ದುಡಿಯಬೇಕು, ಗಳಿಸಬೇಕು; ಭಿಕ್ಷೆ ಬೇಡುವುದು ಈ ಧರ್ಮದಲ್ಲಿ ನಿಷಿದ್ಧವಾದುದು. ಇದನ್ನು ನಾವು ಗ್ರಹಿಸಬೇಕು.

ಕ್ರೈಸ್ತಧರ್ಮವು ಭಾರತದೇಶಕ್ಕೆ ಮೊದಲಬಾರಿಗೆ ಬಂದದ್ದು ಯೇಸುಕ್ರಿಸ್ತನ ನೇರವಾದ ಶಿಷ್ಯ ಸಂತ ತಾಮಸನ ಕಾಲದಲ್ಲಿ ಎಂದು ಹೇಳುವುದುಂಟು. ಇದೇ ಸರಿಸುಮಾರಿಗೇ ಯೆಹೂದಿಗಳೂ ನಮ್ಮ ದೇಶಕ್ಕೆ ಬಂದರು; ಅವರು ನೆಲೆಗೊಂಡದ್ದು ದಕ್ಷಿಣದಲ್ಲಿ. ಆ ಕಾಲದಿಂದಲೂ ಕ್ರೈಸ್ತಮತದ ಪ್ರಚಾರಕರು ನಮ್ಮ ನಡುವೆ ಇದ್ದಾರೆ; ಕ್ರಿಸ್ತನ ಬೋಧೆಯಾದ ಪ್ರೀತಿಯನ್ನು ನಮ್ಮ ಜನ ಮೆಚ್ಚಿಕೊಂಡರು. ಕ್ರಿಸ್ತನು ಜನರನ್ನು ಪ್ರೀತಿಸಿದನಲ್ಲದೆ, ಜನರೂ ಪರಸ್ಪರ ಪ್ರೀತಿಸಬೇಕೆಂದು ಬೋಧಿಸಿದನು. ಕಡೆಯ ಗಳಿಗೆಯಲ್ಲಿ ಕೂಡ, ತನ್ನನ್ನು ಶಿಲುಬೆಗೇರಿಸಿದವರನ್ನು ದೇವರು ಕ್ಷಮಿಸಲೆಂದು ಬೇಡಿಕೊಂಡನು; ಅವರು ಏನು ಮಾಡುತ್ತಿರುವರೆಂಬುದನ್ನು ಅವರೇ ಅರಿಯರು ಎಂದು ಅವನ ಅರಿಕೆ. ಸಂತ್ರಸ್ತರಾದವರ ಸೇವೆಯನ್ನು ಮಾಡುವುದರ ಅಗತ್ಯವನ್ನು ಕ್ರೈಸ್ತಧರ್ಮ ಒತ್ತಿ ಹೇಳುತ್ತದೆ.

ಭಾರತದೇಶದಲ್ಲಿ ಮತಧರ್ಮಗಳ ಕಾರಣದಿಂದ ಜಗಳವಾಗಿರುವುದು ತೀರ ಕಡಿಮೆ. ಎಲ್ಲ ಮತಧರ್ಮಗಳನ್ನೂ ಆದರದಿಂದ ಕಾಣುವುದೇ ನಮ್ಮ ಜನರ ಮನೋಧರ್ಮ. ಹೊರದೇಶದಿಂದ ಬಂದ ಮತಧರ್ಮಗಳಲ್ಲಿ ಉದಾತ್ತವಾದ ಅಂಶಗಳಿದ್ದರೆ ನಾವು ಅವುಗಳನ್ನು ಗ್ರಹಿಸುತ್ತೇವೆ. ನಿದರ್ಶನಕ್ಕೆ ಕ್ರೈಸ್ತಧರ್ಮದಲ್ಲಿ ಪ್ರಮುಖವಾಗಿರುವ ಸೇವೆ, ವಿದ್ಯಾಭ್ಯಾಸ, ಆರೈಕೆ, ಸಮಾಜ ಕಾರ್ಯ, ಅನಾಥ ಶಿಶು ಸಂರಕ್ಷಣೆ, ರುಗ್ಣಾಲಯ ಮೊದಲಾದುವು ಹಿಂದೂಜನರ ಮೆಚ್ಚುಗೆಗೆ ಪಾತ್ರವಾಗಿವೆ;ಅವುಗಳನ್ನು ನಾವು ಅಳವಡಿಸಿಕೊಂಡಿರುವದೂ ಉಂಟು. ಕ್ರೈಸ್ತಧರ್ಮದ ಎಲ್ಲ ಪಂಥಗಳಿಗೂ ನಮ್ಮ ದೇಶದಲ್ಲಿ ಪ್ರಾತಿನಿಧ್ಯವಿದೆ.

ಇಸ್ಲಾಂ ಧರ್ಮವು ಕ್ರಿಸ್ತಾಬ್ದ 622 ರ ವೇಳೆಗೆ ಅರೇಬಿಯ ದೇಶದಲ್ಲಿ ಪ್ರಮುಖವಾದ ಮತ ಧರ್ಮವಾಗಿ ಮೈದಳೆಯಿತು. ಕ್ರಿ. 991ರ ಸುಮಾರಿಗೆ ಇದು ಭಾರತದೇಶಕ್ಕೆ ಬಂದಿತು. ತರುವಾಯ ಇಲ್ಲಿ ಪ್ರಸಿದ್ಧಿಯನ್ನು ಪಡೆಯಿತು. ದಿಲ್ಲಿಯ ಸುಲ್ತಾನರು (1206 - 1526) ಈ ಮತಧರ್ಮದವರೇ ಆಗಿದ್ದು ಇದನ್ನು ಪುರಸ್ಕರಿಸಿದಾದರೂ, ಜನರು ಇದನ್ನು ಸ್ವೀಕಾರಮಾಡಿರದಿದ್ದರೆ ಇಷ್ಟು ವ್ಯಾಪಕವಾದ ಮತಧರ್ಮವಾಗುತ್ತಿರಲಿಲ್ಲ. ಈ ಧರ್ಮದ ಎಲ್ಲ ಪಂಥಗಳ ಅನುಯಾಯಿಗಳೂ

ಇಂದು ಭಾರತದಲ್ಲಿದ್ದಾರೆ; ಯಾವ ನಿರ್ಬಂಧವೂ ಇರದೆ ತಮ್ಮ ಸಿದ್ಧಾಂತಗಳನ್ನು ನಂಬಿಕೊಂಡು ಬರುತ್ತಿದ್ದಾರೆ. ಪ್ರಪಂಚದ ಅತಿ ಸುಂದರ ಮಸೀದಿಗಳಲ್ಲಿ ಕೆಲವು ಈ ದೇಶದಲ್ಲೇ ಇವೆ. ಏಕದೇವವಾದ, ಧಾರ್ಮಿಕ ಶ್ರದ್ಧೆಯು ಹೃದಯವ್ಯಾಪಾರವೆಂಬ ಎಣಿಕೆ, ಎಲ್ಲ ಮಾನವರೂ ಸಮಾನರೆಂಬ ಕಲ್ಪನೆ, ಕುಡಿತ ಮುಂತಾದ ದುಶ್ಚಟಗಳನ್ನು ಬಿಡಬೇಕೆಂಬ ಹಟ ಇವೆಲ್ಲ ಈ ಧರ್ಮದ ನೀತಿಸಂಹಿತೆಗಳು; ನಮ್ಮಲ್ಲಿಯೂ ಇವು ಮಾನ್ಯತೆಯನ್ನು ಪಡೆದಿವೆ.

ದಿಟವಾಗಿ ಧಾರ್ಮಿಕನಾದ ಮನುಷ್ಯ ಯಾವ ಮತಧರ್ಮದ ಚೌಕಟ್ಟಿನಲ್ಲೇ ಇರಲಿ ಅವನಿಗೆ ಜನರು ಮರ್ಯಾದೆಯನ್ನು ಸಲ್ಲಿಸುತ್ತಾರೆ, ಗೌರವದಿಂದ ಅವನನ್ನು ಕಂಡುಕೊಳ್ಳುತ್ತಾರೆ. ಇದರಲ್ಲಿ ಬಹುಸಂಖ್ಯಾತರು, ಅಲ್ಪಸಂಖ್ಯಾತರು ಎಂಬ ಎಣಿಕೆಯೇನಿರದು. ಯಾವ ದೇಶದಲ್ಲಾಗಲಿ ಧರ್ಮಸಮನ್ವಯವೆಂದಾಗ ಇದು ಮುಖ್ಯವಾದ ವಿಚಾರ. ತಾರತಮ್ಯವಿದ್ದು, ಮೇಲು-ಕೀಳೆಂಬ ಗಣನೆಯಿರುವಾಗ ಸಮನ್ವಯವೆಂಬುದಿರಲಾರದು. ಅಲ್ಪಸಂಖ್ಯಾತರು ಅನುಸರಿಸುವ ಧರ್ಮ ಕೀಳೆಂಬ ಭಾವನೆ, ಬಹು ಸಂಖ್ಯಾತರ ಧರ್ಮವೇ ಮಾನ್ಯವೆಂಬ ಹಟ ಇದ್ದರೆ ಸಮನ್ವಯವೆಲ್ಲಿ ಬಂತು? ಸಮನ್ವಯದಲ್ಲಿ ಎಲ್ಲ ಧರ್ಮದವರಿಗೂ ಸಮಾನವಾದ ಅವಕಾಶ, ಆದರ ಇರಬೇಕು. ಜನರು ಪ್ರಾಮಾಣಿಕವಾಗಿ ಧರ್ಮದ ಅಗತ್ಯವನ್ನು ಕಂಡುಕೊಂಡಾಗ ಸಮಾನವಾಗಿಯೇ ಆದರ ಒದಗುತ್ತದೆ.

ಧರ್ಮದ ಸಿದ್ಧಾಂತ ಏನಿದ್ದರೂ ಅದರ ಅನ್ವಯದಲ್ಲಿ ಕೆಲವೊಂದು ದೋಷಗಳಿದ್ದೇ ಇರುತ್ತವೆ. ಅವನ್ನು ನಾವು ಗಮನಿಸಬಾರದು. ಧರ್ಮದ ಗುಣಗಳ ಕಡೆಗೆ ನಮ್ಮ ದೃಷ್ಟಿಯಿರಬೇಕು. ಪ್ರತಿಯೊಂದು ಧರ್ಮದಲ್ಲೂ ವಿಶಿಷ್ಟವಾದ ಒಂದು ಗುಣಾಂಶವಿದ್ದೇ ಇರುತ್ತದೆ. ಪರಮಾರ್ಥದೊಂದಿಗೆ ನಂಟನ್ನು ಬೆಳೆಯಿಸಿಕೊಳ್ಳುವುದು ಹಿಂದೂ ಧರ್ಮದ ವೈಶಿಷ್ಟ್ಯವಾದರೆ, ಅಹಿಂಸೆಯನ್ನು ಬೋಧಿಸುವುದು ಬೌದ್ಧ-ಜೈನ ಧರ್ಮಗಳಲ್ಲಿದೆ; ಪಾರ್ಸಿ ಧರ್ಮದಲ್ಲಿ ವ್ಯಕ್ತಿಯು ಉದ್ಯಮಿಯಾಗಿರಬೇಕೆಂಬ ತತ್ತ್ವವಿದೆ; ಇಸ್ಲಾಂ ಧರ್ಮದಲ್ಲಿ ಮಾನವರೆಲ್ಲರೂ ಸೋದರರು ಎಂಬ ಬೋಧನೆಯಿದೆ; ಕ್ರೈಸ್ತಧರ್ಮ ಪ್ರೇಮ, ಸೇವೆಗಳಿಗೆ ಆದ್ಯತೆಯನ್ನು ನೀಡುತ್ತದೆ; ಸಿಖ್ ಧರ್ಮದಲ್ಲಿ ಗುರು ಎಂಬ ತತ್ತ್ವಕ್ಕೆ ಒತ್ತು ಹೆಚ್ಚು; ಯೆಹೂದಿಗಳಲ್ಲಿ ಏಕದೇವತಾವಾದ, ದಿನನಿತ್ಯದಲ್ಲಿ ಆಚಾರದ

ಸ್ಥಾನ ಇವಕ್ಕೆ ಬೆಲೆ. ನಮ್ಮಲ್ಲಿಯೂ ಆಚಾರ್ಯತ್ರಯರಲ್ಲಿ ಶಂಕರರು ಜ್ಞಾನವನ್ನೂ ರಾಮಾನುಜರು ಭಕ್ತಿಯನ್ನೂ, ಮಧ್ವರು ಕರ್ಮವನ್ನೂ ಎತ್ತಿಹಿಡಿದರಲ್ಲವೆ? ಇವೆಲ್ಲ ವಿವರಗಳನ್ನೂ ಕೂಡಿಸಿಕೊಂಡಾಗಲೇ ಧರ್ಮಸಮನ್ವಯ ಸಾರ್ಥಕವಾಗುವುದು.

ಧರ್ಮವೆಂಬುದು ವೈಯಕ್ತಿಕ ವಿವರ; ಪ್ರತಿ ವ್ಯಕ್ತಿಗೂ ಅವನಲ್ಲಿರುವ ಪರತತ್ತ್ವಕ್ಕೂ ನಡುವೆ ಇರುವ ಅಥವಾ ಏರ್ಪಡಬೇಕಾದ, ಸಂಬಂಧದ ಮಾತು ಅದು. ಧರ್ಮವನ್ನು ಅವನು ಹೇಗೆ ಗ್ರಹಿಸುತ್ತಾನೆ, ಹೇಗೆ ಆಚರಣೆಯಲ್ಲಿ ತರುತ್ತಾನೆ ಎಂಬುದು ಅವನವನ ಸಾಮರ್ಥ್ಯ, ಸಾಧನೆ, ಮನೋವೃತ್ತಿ, ಆಸಕ್ತಿ, ಮನೆತನ, ಪರಿಸರ, ಪ್ರಭಾವ, ಅನುಭವ ಎಲ್ಲವನ್ನೂ ಆಶ್ರಯಿಸುತ್ತದೆ. ಇವೆಲ್ಲ ಎಲ್ಲರಲ್ಲಿಯೂ ಒಂದೇ ಬಗೆಯಾಗಿ, ಒಂದೇ ಪ್ರಮಾಣದಲ್ಲಿ ಇರುವುದಿಲ್ಲವಷ್ಟೆ. ಆದುದರಿಂದ ಧರ್ಮವೆಂಬುದು ಅವರವರ ಅಗತ್ಯವನನುಸರಿಸಿ ಮಾರ್ಪಡುತ್ತದೆ. ಆದರೆ ಧರ್ಮದ ಮೂಲತತ್ತ್ವವಾದ ದೇವರೇನೋ ಎಲ್ಲರಲ್ಲಿಯೂ ಏಕಪ್ರಕಾರವಾಗಿರುವ ಅಂತರ್ಯಾಮಿಯೇ.

ದೇಶಗಳಿಗೆ ಎಲ್ಲೆಕಟ್ಟುಂಟು;ರಾಜಕೀಯವಾಗಿ, ಸಾಮಾಜಿಕವಾಗಿ, ಭಾಷೆಯಿಂದಾಗಿ, ಇತಿಹಾಸದಿಂದಾಗಿ ದೇಶಗಳು ಬೇರೆಬೇರೆಯೆ. ಆದರೆ ದೇಶಗಳೆಲ್ಲವೂ ಇರುವ ಭೂಮಿ ಒಂದೇ. ಹೀಗೆಯೇ ಪ್ರಾದೇಶಿಕ ಧರ್ಮಗಳು ಬೇರೆ ಬೇರೆಯಾದರೂ ಅವುಗಳ ಮೂಲಾಧಾರ ಒಂದೇ; ಹೃದ್ಗತನಾದ ಭಗವಂತನನ್ನು ಸೇರಿಕೊಳ್ಳುವ ಬಯಕೆ. ಹೃದಯಶುದ್ಧಿ, ಸರಳ ಜೀವನ, ವ್ಯವಹಾರದಲ್ಲಿ ಪ್ರಾಮಾಣಿಕತೆ, ಸೇವಾ ಮನೋಭಾವ, ಅಹಿಂಸಾ ವ್ರತ ಇವು ಎಲ್ಲ ಧರ್ಮಗಳ ಜೀವಾಳ. ಇದಕ್ಕೆ ನಾವು ಗಮನಕೊಟ್ಟರೆ ಧರ್ಮಸಮನ್ವಯ ಬರಿಯ ಕನಸಾಗಿ ಉಳಿಯುವುದಿಲ್ಲ. ವಿಶ್ವಧರ್ಮದ ಕಡೆ ಜನರೆಲ್ಲ ತಿರುಗುವುದು ಸಾಧ್ಯವಾಗುತ್ತದೆ. ಋಗ್ವೇದದಲ್ಲಿ 'ಯತ್ರ ವಿಶ್ವಂ ಭವತ್ಯೇಕನೀಡಂ' ಎಂಬ ಮಾತಿದೆ. ಹಕ್ಕಿಗಳು ಗೂಡಿನಲ್ಲಿ ಸೇರಿಕೊಳ್ಳುವಂತೆ ಎಲ್ಲ ಮನುಷ್ಯರೂ ಧರ್ಮದಲ್ಲಿ ಸೇರಿಕೊಳ್ಳಬೇಕೆಂದು ಈ ಮಾತಿನ ತಾತ್ಪರ್ಯ.

"ಓಂ ಅಸತೋ ಮಾ ಸದ್ಗಮಯ। ತಮಸೋ ಮಾ ಜ್ಯೋತಿರ್ಗಮಯ।
ಮೃತ್ಯೋರ್ಮಾ ಅಮೃತಂ ಗಮಯ।"
'ಓಂ ಸರ್ವೇಷಾಂ ಸ್ವಸ್ತಿರ್ಭವತು । ಓಂ ಸರ್ವೇಷಾಂ ಶಾಂತಿರ್ಭವತು।
ಓಂ ಸರ್ವೇಷಾಂ ಪುಷ್ಟಿರ್ಭವತು। ಓಂ ಶಾಂತಿಃ ಶಾಂತಿಃ ಶಾಂತಿಃ।।"

ಶ್ರೀ ತಿರುಚ್ಚಿ ಸ್ವಾಮಿಗಳು